
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

01 ಜೂನ್ 2016 ಪುಟ 20 ರೂ. 15/-




ದಿಟ್ಟ ಹೋರಾಟದ ಗೌಸಿಯಾ ಖಾನ್






ಬಾಳಿಗಾ ಕೊಲೆಯಲ್ಲಿ ಕಾಳೀಮಠದ ಪಾತ್ರ!




ಜಗಳೂರು: ಬರದ ನೆಲದಲ್ಲೊಬ್ಬ 'ಭಂಡ' ಶಾಸಕ




ಮೈಸೂರು: ದೇವು ಕೊಲೆ ಹಿಂದೆ ಅಪ್ಪಾ ಮಾದೇಶ





ಸಾಂಸ್ಕೃತಿಕ ಅವನತಿಯನ್ನು ಬಿಚ್ಚಿಡುವ 'ತಿಥಿ'

ಅಂಚಿನಿಂದ....




ಡಾ.ವಾಸು ಎಚ್.ವಿ.

ಎಸ್ಸೆಸ್ಸೆಲ್ಸಿ ಫಲಿತಾಂಶಗಳು ಮತ್ತು ಶಿಕ್ಷಣದ ದುರಂ

ಮೊನ್ನೆಯಷ್ಟೇ ಎಸ್ಸೆಸ್ಸೆಲ್ಸಿ ಫಲಿತಾಂಶಗಳು ಪ್ರಕಟವಾಗಿವೆ. ಇನ್ನು ಕೆಲವೇ ದಿನಗಳಲ್ಲಿ ಪಿಯುಸಿ ಫಲಿತಾಂಶವೂ ಪ್ರಕಟವಾಗಲಿದೆ ಎಂದು ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರು ಹೇಳಿದ್ದಾರೆ. ಪ್ರತೀ ಸಾರಿಯ ಫಲಿತಾಂಶದಲ್ಲಿ ಮಾಧ್ಯಮಗಳಿಗೆ 'ಸುದ್ದಿ'ಯಾಗಿ ಕಾಣುವ ಹಲವು ಸಂಗತಿಗಳು ಇದ್ದೇ ಇರುತ್ತವೆ. ಈ ಸಾರಿ 625ಕ್ಕೆ 625 ಅಂಕಗಳನ್ನು ಪಡೆದ ಭದ್ರಾವತಿಯ ಹುಡುಗನದ್ದು ಒಂದು 'ಸ್ಟೋರಿ' ಯಾಗಿದೆ. ಇನ್ನು ಬಡತನದಲ್ಲೇ ಬದುಕುತ್ತಾ ಕಷ್ಟಪಟ್ಟು ಓದಿ ಅತ್ಯುತ್ತಮ ಅಂಕಗಳನ್ನು ಪಡೆದವರ ಬಗ್ಗೆ ಇನ್ನೂ ಮೂರ್ನಾಲ್ಕು ದಿನ ವರದಿಗಳು ಬರುತ್ತವೆ. ಉಡುಪಿ ಜಿಲ್ಲೆಯಲ್ಲಿ 620ಕ್ಕಿಂತ ಹೆಚ್ಚು ಅಂಕ ಪಡೆದ ಮೂರು ವಿದ್ಯಾರ್ಥಿಗಳಲ್ಲಿ ಒಬ್ಬ ವಿದ್ಯಾರ್ಥಿ ಸರ್ಕಾರೀ ಶಾಲೆಯಲ್ಲಿ ಓದಿದ್ದು, ಇಂತಹವೂ ವರದಿಯಾಗುತ್ತವೆ. ಈ ರೀತಿಯ 'ಕೆಲವು ಉಜ್ವಲ ಪ್ರತಿಭೆಗಳ' ಬಗ್ಗೆ ನಮಗೇನೂ ತಕರಾರಿಲ್ಲ, ಅಂತಹವರ ಬಗ್ಗೆ ವರದಿ ಮಾಡಬಾರದು ಎಂತಲೂ ಅನ್ನಿಸುವುದಿಲ್ಲ. ಆದರೆ, ಪರಿಣಾಮದಲ್ಲಿ ಇವು ಸಾಬೀತು ಮಾಡುವುದು ಒಂದು ಅಂಶವನ್ನು. ನೀವು ಎಂತಹುದೇ ಪರಿಸ್ಥಿತಿಯಲ್ಲಿ ಇದ್ದರೂ, ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ತೆಗೆದುಕೊಳ್ಳಬಹುದು. ಅದಕ್ಕೆ ಬೇಕಿರುವುದು ಕಠಿಣ ಶ್ರಮ ಅಷ್ಟೇ. ಬಹುಶಃ ಜೊತೆಗೆ ಒಂದಷ್ಟು ಪ್ರತಿಭೆ.

ಇದರ ಅರ್ಥವೂ ಸ್ಪಷ್ಟ. 'ಯಾರೆಲ್ಲಾ ಒಳ್ಳೆಯ ಅಂಕಗಳನ್ನು ಪಡೆದುಕೊಂಡಿಲ್ಲವೋ, ಅದು ಅವರದ್ದೇ ತಪ್ಪು, ಅವರ ಸಾಮಾಜಿಕ-ಆರ್ಥಿಕ ಹಿನ್ನೆಲೆಯಾಗಲೀ, ಆ ಕಾರಣದಿಂದ ಅವರು 'ಕಳಪೆ' ಶಾಲಾ-ಕಾಲೇಜಿನಲ್ಲಿ ಓದಬೇಕಾಗಿ ಬಂದದ್ದಾಗಲೀ ಕಾರಣವಲ್ಲ'. ಇದೊಂದು ಹುನ್ನಾರವಾಗಿದೆ, ಉಜ್ವಲ ಪ್ರತಿಭೆಗಳ ಕುರಿತು ಮಾಡುವ ವರದಿಗಳ ಪರಿಣಾಮ ಈ ರೀತಿಯಾಗಿ ಇಂದಿನ ಸಮಸ್ಯೆಯ ಅಸಲೀ ಮುಖವನ್ನು ಬಿಚ್ಚಿಡುವ ಬದಲು, ಬಚ್ಚಿಡುತ್ತದಾದ್ದರಿಂದ ಇದು ಹುನ್ನಾರವೇ ಆಗಿದೆ.

ವರದಿ ಮಾಡದ ಸಂಗತಿಗಳೇ ಇಲ್ಲಿ ಹೆಚ್ಚು ಮುಖ್ಯವಾಗಿವೆ. ಅವು ವರದಿಗಿಂತ ಹೆಚ್ಚಾಗಿ ಜಾಹೀರಾತುಗಳಾಗಿ ಬರುತ್ತವೆ. ಇಂತಿಂತಹ ಶಾಲಾ ಕಾಲೇಜಿನಲ್ಲಿ ಇಷ್ಟಿಷ್ಟು ವಿದ್ಯಾರ್ಥಿಗಳು ಇಷ್ಟೆಲ್ಲಾ ಅಂಕಗಳನ್ನು ಪಡೆದುಕೊಂಡರೆಂಬುದನ್ನು ಆ ಜಾಹೀರಾತುಗಳು ಸಾರುತ್ತವೆ. ಅಂತಹ ಕಾಲೇಜುಗಳಲ್ಲಿ ಈಗಾಗಲೇ ಶುಲ್ಕವು ಲಕ್ಷ ರೂ.ಗಳನ್ನು ದಾಟಿರುತ್ತದೆ ಹಾಗೂ ಈ ಸಾಲಿನಲ್ಲಿ ಅದು ಇನ್ನೂ ಹೆಚ್ಚಾಗಲು ಈ ಜಾಹೀರಾತುಗಳು ನೆರವಾಗುತ್ತವೆ. ಈ ಸಾರಿ ಆಂಧ್ರದಲ್ಲಿ ಇಂತಹ ಶಿಕ್ಷಣ ಸಂಸ್ಥೆ-ಮಾಧ್ಯಮಗಳ ಜಾಹೀರಾತು ಸಹಯೋಗ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಯಿತು. ಚೈತನ್ಯ, ನಾರಾಯಣ ಮತ್ತು ದೀಕ್ಷಾ ಎಂಬ ಟಾಪ್ 3 ಸಂಸ್ಥೆಗಳು ಅಲ್ಲಿನ ಟಾಪ್ 3 ಮಾಧ್ಯಮ ಸಂಸ್ಥೆಗಳ ಸಹಯೋಗದಲ್ಲಿ ಲೈವ್ ಶೋಗಳನ್ನು ನಡೆಸಿತು. ಈ ಮೂರೂ ಕಾರ್ಯಕ್ರಮಗಳು ಒಂದೇ ದಿನ, ಒಂದೇ ಸಮಯದಲ್ಲಿ ನಡೆದವು. ಆ ಮಟ್ಟಿಗೆ ಅವುಗಳ ಮಧ್ಯೆ ಸ್ಪರ್ಧೆ ಇದೆ. ಈ ಸ್ಪರ್ಧೆಯಲ್ಲಿ ಸಣ್ಣ ಪುಟ್ಟ ಸಂಸ್ಥೆಗಳಾಗಲೀ,



ಬೃಹತ್ ಸಂಸ್ಥೆಯಾದ ಸರ್ಕಾರೀ ಶಿಕ್ಷಣ ಇಲಾಖೆಯಾಗಲೀ ಜೋಡಿಗೇ ಇಲ್ಲ.

ಇದು ನಮಗೂ ಯಾಕೆ ಮುಖ್ಯವೆಂದರೆ, ಚೈತನ್ಯ ನಾರಾಯಣ ಮತ್ತು ದೀಕ್ಷಾ ಎಂಬ ಸದರಿ ಸಂಸ್ಥೆಗಳು ಬೆಂಗಳೂರಿನಲ್ಲಿ ತಮ್ಮ ಅಂಗಡಿ ತೆರೆದು ಬಹಳ ಕಾಲವಾಯಿತು. ಅವು ಈಗ ಕರ್ನಾಟಕದ ಉಳಿದ ನಗರ-ಪಟ್ಟಣಗಳಿಗೆ ವ್ಯಾಪಿಸುತ್ತಿವೆ, ಪುರಾತನಕಾಲದಿಂದ ರ್‍ಯಾಂಕುಗಳಲ್ಲಿ ಮೇಲುಗೈ ಸಾಧಿಸುತ್ತಿದ್ದ ಕೆಲವು ಕಾಲೇಜುಗಳು ಇಂತಹವುಗಳೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲದೇ, 3ನೇ ದರ್ಜೆಗೆ ಇಳಿದಿವೆ. ಇನ್ನು ಕೆಲವು ಕಾಲೇಜುಗಳು ತಾವೂ ಅಂಗಡಿಗೆ ಅಲಂಕಾರ ಹೆಚ್ಚು ಮಾಡಿಕೊಂಡು, ವ್ಯಾಪಾರಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಪೈಪೋಟಿಯಲ್ಲಿ ಮುಂದಿವೆ.

ಬೆಂಗಳೂರಿನಲ್ಲಿ ಬೇಸ್ ಎನ್ನುವ ಇನ್ನೊ ಇದೆ. ಅತ್ತಲಾಗಿ ಇದು ಕಾಲೇಜೂ ಅಲ್ಲ; ಅದ ಸಿಲಬಸ್ಸನ್ನೇ ಪಾಠ ಮಾಡುವ ಟ್ಯೂಷನ್ ಅಲ್ಲ, ಇದು ಮಕ್ಕಳನ್ನು ಇನ್ನೂ ಮುಂದಕ್ಕೆ ಮಾಡುವ ವಿಶೇಷವಾದ ಕೋಚಿಂಗ್ ಸೆಂಟ ಎಂಬಿಬಿಎಸ್ ಕೋರ್ಸಿನಲ್ಲಿ ಮಾತ್ರ ಬ ಸಿಲಬಸ್ಸನ್ನು ಅವರು 10ನೇ ತರಗತಿಯ ಬೋಧಿಸುತ್ತಾರೆ. ಇದೇ ಮಕ್ಕಳು ಈಗಾಗಲ ಹಣ ತೆತ್ತು ಶಿಕ್ಷಣದ ಅಂಗಡಿಗಳಿಗೆ ದಾಖಲ ಆ ಶಾಲೆಗಳಲ್ಲಿ ಬೋಧಿಸುವುದಕ್ಕಿಂತ ಹೆಚ್ಚ ಅಪ್ಪ ಅಮ್ಮಂದಿರು ಪ್ರತಿನಿತ್ಯ ಮನೆಯಲ್ಲಿ ತ್ತಿರುತ್ತಾರೆ. ಅದಕ್ಕಾಗಿ ತಮ್ಮ ಶಾಲಾ-ಕಾಲೇ ವಿದ್ಯಾಲಯಗಳ ದಿನಗಳಲ್ಲಿ ಕಷ್ಟಪಟ್ಟಿದ್ದಕ್ಕಿಂತ ಹೆ ಓದಿ, ತಮ್ಮ ಮಕ್ಕಳಿಗೆ ಹೇಳಿಕೊಟ್ಟಿರುತ್ತಾ ಸಾಲದು ಅಂತ ಈ ಥರದ ವಿಶೇಷ ಕೋಚಿ

ಎಲ್ಲಾ ಏತಕ್ಕಾಗಿ? ಇಂದಿಗೂ ಬಹುಸಂಖ್ಯಾ ಗಳು ಅಧ್ಯಯನ ಮಾಡದ ಎರಡನೇ ಪಿಯು ವಿಭಾಗದ ಪರೀಕ್ಷೆಗಾಗಿ. ಅಂದರೆ, ತಮ್ಮ ಮಕ್ಕಳ ಯರೋ, ಡಾಕ್ಟರೋ ಮಾಡಲು ತಂದೆ- ತಾ ನಡೆಸುವ ಸರ್ಕಸ್ಸಿಗಾಗಿ. ಏಕೆಂದರೆ, ಮಾರು ಅತ್ಯುತ್ತಮ ಕಾಲೇಜಿನ, ಅತ್ಯುತ್ತಮ ವಿಭಾಗದ ಯರ್ ಸೀಟನ್ನು ಕೊಳ್ಳುವುದಾಗಲೀ ಅಥವಾ ಸೀಟನ್ನಾಗಲೀ ಕೊಳ್ಳುವುದು ಮಧ್ಯಮ ವ ಕಷ್ಟ. ಅವರಿಗೆ ಬಹುಶಃ ಗೊತ್ತಿಲ್ಲದೇ ಇರುವ ಸಂಗತಿಯೂ ಇದೆ. ಅದೇನೆಂದರೆ, ಎಂಬಿಬಿಎಸ್ ಈಗ ಪಿಯುಸಿಯಂತೆ ಆಗಿ ಬಿಟ್ಟಿದೆ. ಎಂ

ಎರಡನೆ ಅಭಿಪ್ರಾಯ ಎಂಬ ಗುರಾಣಿಯು

ಕೆಲವರಿರುತ್ತಾರೆ 'ನನಗೆ ಮೋಸ ಮಾಡಿ' ಅಂತ ಅವರೇನಾದ್ರೂ ಅವರ ಮುಖದ ಮೇಲೆ ಬರೆದುಕೊಂಡಿದ್ದಾರೋ ಏನೋ. ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧುಬಳಗ ಅಂದುಕೊಂಡು ಜೀವನ ನಡೆಸುತ್ತಿರುವವರಿಗೂ ಅಂತಹವರನ್ನು ಕಂಡರೆ ಅವರ ಜೀವನಧ್ಯೇಯ ತಾತ್ಕಾಲಿಕ ರಜ ಘೋಷಿಸಿಕೊಳ್ಳುತ್ತೆ. ಮೋಸ ಮಾಡಲೇಬೇಕು ಎನ್ನುವ ಒತ್ತಾಸೆ ಒದ್ದು ಕಂಡುಬರುತ್ತೆ. ಅಂತಹ ಜಾಯಮಾನದ ವ್ಯಕ್ತಿತ್ವ ಒಬ್ಬ ಗೆಳೆಯರದ್ದು. ಅವರು ಇತ್ತೀಚೆಗೆ ಯಾವುದೋ ವ್ಯವಹಾರದಲ್ಲಿ ತಗುಲಾಕಿಕೊಂಡಿದ್ದರು. ಸಹಭಾಗಿತ್ವದ ವ್ಯವಹಾರ ಅದು. ನಂಬಿಕೆ ಅನ್ನೋ ಆಧಾರದ ಮೇಲೆ ಲಕ್ಷಾಂತರ ರೂಪಾಯಿ ಹೂಡಿದ್ದರು. ಅವರ ಸಹಭಾಗಿಗಳೂ ನಂಬಿಕೆಯ ದಾಸರೇ. ದ್ರೋಹ ಚಿಂತನೆಯೇ ವ್ಯವಹಾರ ಎಂಬ ನಂಬಿಕೆಯವರು. ನನ್ನ ಸ್ನೇಹಿತರಿಗೆ ನಂಜನಗೂಡಿನ ಮೂರ್ತಿಗೆ, ಮೇಲುಕೋಟೆ ನಾಮ ಎಲ್ಲವನ್ನೂ ಹಚ್ಚಲು ಸಕಲ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಅದು ಹ್ಯಾಗೋ ಅದರ ಸುಳಿವು ಸ್ನೇಹಿತರಿಗೆ ಸಿಕ್ಕಿತು. ಮರ್ಯಾದೆಯಿಂದ ವ್ಯವಹಾರದಿಂದ ಕಳಚಿಕೊಳ್ಳಲು ಬಯಸಿದರು. ವಕೀಲರೊಬ್ಬರ ಬಳಿಗೆ ಹೋದರು. ವಿಷಯ ತಿಳಿಸಿ ತಮ್ಮ ಬಳಿ ಇದ್ದ ದಾಖಲೆಪತ್ರಗಳನ್ನು ಅವರಿಗೆ ನೀಡಿದರು. ವಕೀಲರು ಅವುಗಳನ್ನು ಪರಿಶೀಲಿಸಿ 'ಏನೂ ಭಯಪಡಬೇಕಿಲ್ಲ, ಅವರನ್ನ ಕೋರ್ಟ್‌ಗೆ ಎಳೆದು ಬಡ್ಡಿಸಮೇತ ಹಣ ಕಕ್ಕುಸ್ತೀನಿ' ಅನ್ನೋ ಅಭಯ ನೀಡಿದರು. ಗೆಳೆಯರೂ ಖುಷಿ ಆದರು. ಆದರೂ ಯಾವ ಗ್ರಹಚಾರಕ್ಕೋ ಏನೋ ಯಾವತ್ತೂ ಬರದ ಸಂಶಯದ ಎಳೆ ಅವತ್ತು ಅವರಿಗೆ ಬಂತು. ಕೋರ್ಟ್‌ಗೆ ಹೋಗುವುದು ಇದ್ದೇ ಇದೆ. ಇನ್ನೊಬ್ಬರ ಅಭಿಪ್ರಾಯ ತಿಳಿದಿದ್ದರೆ ತಪ್ಪೇನೂ ಇಲ್ಲ ಅನ್ನಿಸಿತು. 'ಬರ್ತೀನಿ ಸಾರ್' ಎಂದು ಹೇಳಿ ಇನ್ನೊಬ್ಬ ವಕೀಲರನ್ನು ಕಂಡು ಪ್ರವರ ಒಪ್ಪಿಸಿದರು. ಅವರೂ ದಾಖಲೆಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿದರು. 'ನ್ಯಾಯ ನಿಮ್ಮ ಕಡೆ ಇದೆ. ಆದರೆ ಕಾನೂನು ಅವರ ಕಡೆ ಇದೆ. ನಿಮಗೆ ಕೋರ್ಟಿನಲ್ಲಿ ನ್ಯಾಯ ಸಿಗುವುದು ಸಾಧ್ಯವೇ ಇಲ್ಲ, ಕೋರ್ಟಿನ ಹೊರಗೆ ಪರಿಹರಿಸಿಕೊಳ್ಳುವುದು ಒಳ್ಳೆಯದು' ಎಂದರು ಲಾಯರು. ನನ್ನ ಸ್ನೇಹಿತರಿಗೆ ಅದೇ ಸರಿ ಎನಿಸಿತು, ಪ್ರಭಾವಿ ವ್ಯಕ್ತಿಗಳನ್ನು ಬಳಸಿಕೊಂಡು ವ್ಯವಹಾರ ಬಗೆಹರಿಸಿಕೊಂಡರು. ಗೆಳೆಯರ ಮಾನ, ಹಣ ಎರಡೂ ಉಳಿಯಿತು.

ಇದೊಂದೇ ಅಂತ ಅಲ್ಲ, ವಿಷಯ ಯಾವುದೇ ಇರಲಿ. ಒಬ್ಬರ ಅಭಿಪ್ರಾಯ ಪಡೆದು ತೀರ್ಮಾನಕ್ಕೆ ಬರುವುದರ ಬದಲು ಇನ್ನೊಬ್ಬರನ್ನೂ ವಿಚಾರಿಸಿ ಅಂತಿಮ ನಿರ್ಧಾರಕ್ಕೆ ಬರುವುದು ಕ್ಷೇಮಕರ. ಇದನ್ನು 'ಎರಡನೆ ಅಭಿಪ್ರಾಯ' ಎನ್ನುತ್ತಾರೆ. ಈ ಅಭಿಪ್ರಾಯವು ಮೊದಲ ಅಭಿಪ್ರಾಯದಂತೆಯೇ ಇರಬಹುದು ಅಥವಾ ಅದಕ್ಕೆ ಭಿನ್ನವಾಗಿಯೂ ಇರಬಹುದು. ಅಂತಹ ಸಂದರ್ಭಗಳಲ್ಲಿ ಯಾವ ಅಭಿಪ್ರಾಯ ಸರಿ ಎಂಬ ಗೊಂದಲ ಉಂಟಾಗುವುದು ಸಹಜ. ಇದರ ನಿವಾರಣೆಗೆ ಮೂರನೆಯವರ ಅಭಿಪ್ರಾಯ ಕೇಳಬಹುದು. ಅದರ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳಬಹುದು. ಈ ಅಭಿಪ್ರಾಯ ಮೂರನೆಯದೇ ಆದರೂ ಅದೂ 'ಎರಡನೇ ಅಭಿಪ್ರಾಯ' ಎಂದೇ ಕರೆಸಿಕೊಳ್ಳುತ್ತದೆ! ಈ ರೀತಿ ಎರಡನೆ ಅಭಿಪ್ರಾಯ ಕೇಳುವುದರಿಂದ ಒಂದು ಅನುಕೂಲ ಇದೆ. ನಮಗೆ ಯಾವುದು ಅನುಕೂಲಕರವೋ ಅದನ್ನು ಆಯ್ಕೆ ಮಾಡಿಕೊಳ್ಳಬಹುದು. ಒಳ್ಳೆಯದಾದರೆ ಸರಿ. ಯಡವಟ್ಟಾದರೆ ಅಭಿಪ್ರಾಯ ನೀಡಿದವರ ಮೇಲೆ ಗೂಬೆ ಕೂರಿಸಬಹುದು! ಅಂದರೆ 'ಎರಡನೆ ಅಭಿಪ್ರಾಯ' ಎಂಬುದನ್ನು ಗುರಾಣಿಯಾಗಿ ಬಳಸಬಹುದು ಎಂದಾಯಿತು. ಇದಕ್ಕೆ ಕೆಲವು ಉದಾಹರಣೆಗಳು ಅಂದರೆ....

ಅದೊಂದು ಸರ್ಕಾರಿ ಸಂಸ್ಥೆ.
ಹಣಕಾಸಿನ ಓಡಾಟ ಜೋರಾಗಿತ್ತು ಅಲ್ಲಿ.
ಅದರ ನಿರ್ವಹಣೆ ಯಾರಿಂದ?



ಇನ್ನಾರು, ಐಎಎಸ್ ಅಧಿಕಾರಿಗಳಿಂದ!

ಆಡಳಿತ ನಡೆಸಲೆಂದೇ ಹುಟ್ಟಿರುವ ಜೀವಿಗಳಲ್ಲವೆ, ಅವು?

ಅನೂಚಾನವಾಗಿ ಅವರ ದರ್ಬಾರು ನಡೆಯುತ್ತಾ ಬಂದಿತ್ತು ಅಲ್ಲಿ.

ಮಹಿಳಾ ಅಧಿಕಾರಿಯೊಬ್ಬರು ಆಸ್ಥಾನ ಅಲಂಕರಿಸಿದರು.

ಪುರುಷರಷ್ಟು ಮಹಿಳೆಯರು ಭ್ರಷ್ಟರಲ್ಲ ಎಂಬುದು ನಂಬಿಕೆ.

ಸಿಡಿದೆದ್ದರು ಈ ಲಿಂಗ ತಾರತಮ್ಯದ ವಿರುದ್ಧ.

ಭ್ರಷ್ಟತೆಯಲ್ಲೇ ಮುಳುಗಿದರು! ರಾಣಿಯಂತೆ ಮೆರೆದರು!

ಇದು ಪ್ರಜಾಪ್ರಭುತ್ವದ ಕಾಲ. ರಾಣಿ ಪಟ್ಟ ಶಾಶ್ವತ ಅಲ್ಲ. ಅವರಿಗೆ ವರ್ಗ ಆಯಿತು. ಮತ್ತೆ ಆಸ್ಥಾನಕ್ಕೆ ಬಂದವರೂ ಮಹಿಳೆಯೇ!

ಹಿಂದಿನ ಅಧಿಕಾರಿ ಅವಧಿಯಲ್ಲಿ ನಡೆದಿದ್ದ ಅವ್ಯವಹಾರ ಕಣ್ಣಿಗೆ ರಾಚುವಂತಿತ್ತು. ನೂರು ಕೋಟಿ ರೂಪಾಯಿಗೂ ಅಧಿಕ ಭ್ರಷ್ಟಾಚಾರ ಅಲ್ಲಿ ನಡೆದಿತ್ತು.

ಸಹೋದ್ಯೋಗಿ ತಪ್ಪನ್ನು ಎತ್ತಿ ಆಡಬಾರದು. ಭ್ರಷ್ಟಾಚಾರದ ಕೊಳೆ ಮೇಲೆ ರತ್ನಗಂಬಳಿ ಹಾಸಿ ಮುಚ್ಚಬೇಕು. ಇದು ಅಲಿಖಿತ ನಿಯಮ.

ಈ ಅಧಿಕಾರಿ ಎಲ್ರೋ ಐಎಎಸ್ ಮಂದೆಯ ಕರಿಕುರಿ ಇರಬೇಕು. ಭ್ರಷ್ಟಾಚಾರದ ವಿವರಗಳ ವರದಿ ನೀಡಿತು!

ಇಷ್ಟೇ ಆಗಿದ್ದರೆ ಚಿಂತೆ ಇರಲಿಲ್ಲ, ಅದಕ್ಕೆ ಐಎಎಸ್ ಮೋಕ್ಷ ಕಾಣಿಸುತ್ತಿದ್ದರು. ಆದರೆ ಭ್ರಷ್ಟಾಚಾರದ ಸುದ್ದಿ ಮಾಧ್ಯಮಗಳಿಗೆ ಸೋರಿಕೆಯಾಗಿತ್ತು!

ಮಾಧ್ಯಮದವರಿಗೆ ರಸಗುಲ್ಲ ಸಿಕ್ಕಿದಂತಾಯಿತು.

ಮುಖ್ಯಮಂತ್ರಿಗಳನ್ನ ಈ ಬಗ್ಗೆ ಪ್ರಶ್ನಿಸಿದರು.

'ಭ್ರಷ್ಟಾಚಾರವನ್ನು ನಾವು ಸಹಿಸೋಲ್ಲ. ಎಷ್ಟೇ ದೊಡ್ಡವರಾಗಿರಲಿ, ತಪ್ಪು ಯಾರೇ ಮಾಡಿರಲಿ ಶಿಕ್ಷೆ ಖಚಿತ.'

ಖಡಕ್ಕಾಗಿ ಹೇಳಿದರು ಮುಖ್ಯಮಂತ್ರಿ.

ಹೇಳಿದಂತೆ ನಡೆಯಬೇಕಲ್ಲ? ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕಲ್ಲ?

ಆರೋಪದ ಬಗ್ಗೆ ಸತ್ಯಾಸತ್ಯತೆ ತಿಳಿಯಬೇಕು.

ನಿಷ್ಠಾವಂತ ಅಧಿಕಾರಿ ನೇಮಕ ಆಯಿತು.

ತನಿಖೆ ನಡೆಸಿದರು ಅಧಿಕಾರಿ. ವರದಿ ಕೊಟ್ಟರು.

ಏನಿತ್ತು ವರದಿಯಲ್ಲಿ?

ಭ್ರಷ್ಟಾಚಾರ ಆರೋಪ ಸಾಬೀತಾಗಿತ್ತು!

ಹೌಹಾರಿತು ಐಎಎಸ್ ಗಣ.

ಐಎಎಸ್ ವೃಂದದ ಸ್ವಾಭಿಮಾನದ ಪ್ರಶ್ನೆ ಅದರಲ್ಲಿತ್ತು.

ಮುಖ್ಯಮಂತ್ರಿಗಳ ಕಂಡಿತು ಈ ವೃಂದ.

ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕಾದ್ದು ನ್ಯಾಯಸಮ್ಮತವೇ ಸರಿ. ಆದರೆ ಯಾರಿಗೂ ಅನ್ಯಾಯ ಆಗಬಾರದು. ವರದಿಯನ್ನು ಮತ್ತೊಮ್ಮೆ ಪರಾಮರ್ಶಿಸಲಿ ಎಂಬ ಅಹವಾಲನ್ನು ಮುಂದಿಟ್ಟರು.

ಮಹಿಳಾ ಅಧಿಕಾರಿ ಮೇಲಿನ ಆರೋಪ. ತನಿಖೆ ನಡೆಸಿದವರು ಪುರುಷ ಅಧಿಕಾರಿ. ಲಿಂಗ ತಾರತಮ್ಯ ಕೆಲಸ ಮಾಡಿರಬಹುದಲ್ಲವೆ? ಅನುಮಾನ ಪರಿಹಾರ ಆಗಬೇಕು. ನ್ಯಾಯವಾದ ಬೇಡಿಕೆ ಅನ್ನಿಸಿತು ಮುಖ್ಯಮಂತ್ರಿಗಳಿಗೆ. ಆರೋಪದ ಸತ್ಯಾಸತ್ಯತೆ ತಿಳಿಯಲು ಈ ಸಲ ಮಹಿಳಾ ಅಧಿಕಾರಿಯನ್ನೇ ನೇಮಿಸಿದರು.

ತನಿಖೆ ನಡೆಸಿದರು ಅಧಿಕಾರಿ. ವರದಿ ನೀಡಿದರು

ಏನಿತ್ತು ವರದಿಯಲ್ಲಿ?

ಆರೋಪ ಸುಳ್ಳು. ಭ್ರಷ್ಟಾಚಾರ ನಡೆದಿಲ್ಲ!

ಮುಖ್ಯಮಂತ್ರಿಗಳು ವರದಿ ಸ್ವೀಕರಿಸಿದರು.

ವರದಿಗಾರರು ಮುಖ್ಯಮಂತ್ರಿಗಳನ್ನ ಕೇಳಿದರು:

'ಭ್ರಷ್ಟಾಚಾರದ ವರದಿ ಏನಾಯ್ತು?'

'ಅದರ ಬಗ್ಗೆ ಆಯೋಗ ನೇಮಿಸಿದ್ವಿ. ಆಯೋಗ ಭ್ರಷ್ಟಾಚಾರ ನಡೆದಿಲ್ಲ ಅಂತ ವರದಿ ನೀಡಿದೆ' ಎಂದರು ಮುಖ್ಯಮಂತ್ರಿ!

ಈಗ.....

ಭ್ರಷ್ಟ ಅಧಿಕಾರಿ ನಿರಾಳ!

ಐಎಎಸ್ ವೃಂದ ನಿರಾಳ!

ಮುಖ್ಯಮಂತ್ರಿ ನಿರಾಳ!

ಎಲ್ಲರೂ ನಿರಾಳವೋ ನಿರಾಳ!

ಎಲ್ಲವೂ ಎರಡನೆ ಅಭಿಪ್ರಾಯದ ಮಹಿಮೆ!

* * * *

ಅದೊಂದು ಮಠ. ಅಂತಿಂತಹ ಮಠ ಅಲ್ಲ, ಬೃಹತ್ ಮಠ. ಅದರ ನಿರ್ವಹಣೆಗೆ ಒಂದು ಟ್ರಸ್ಟ್, ಅದರ ಅಧ್ಯಕ್ಷರು ಮಠಾಧೀಶರು.

(ಇತ್ತೀಚೆಗೆ ಪದಗಳು ಅರ್ಥ ಕಳೆದು ಅದರಲ್ಲಿ ಟ್ರಸ್ಟ್ ಎಂಬುದು ಒಂದು. ಟ್ರಸ ಮೋಸ, ಟ್ರಸ್ಟೀ ಎಂದರೆ ಮೋಸಗಾರರು ಅರ್ಥೈಸಲಾಗುತ್ತದೆ- ಇರಲಿ.)

ಈ ಟ್ರಸ್ಟ್‌ಗೆ ಆರ್ಥಿಕ ಮುಗ್ಗಟ್ಟು ಎದು ಧೈರ್ಯಗುಂದಲಿಲ್ಲ ಮಠಾಧೀಶರು.

ಭಕ್ತರು ಮಠಕ್ಕೆ ನೀಡಿದ ಭೂಮಿ ಸಾಕ ಅದಕ್ಕೆ ಈಗ ಚಿನ್ನದ ಬೆಲೆ ಬಂದಿತ್ತು.

ಇನ್ನು ಯಾತರ ಭಯ?

ಭೂಮಿ ಮಾರುವುದು. ನೆಮ್ಮದಿಯ ನಡೆಸುವುದು. ಅದಕ್ಕೆ ಮುಂದಾದರು ಮಠಾ

ಪ್ರಗತಿಪರ ಚಿಂತಕರು ಮಠಾಧೀಶರು.

ಮಠದ ಆಸ್ತಿ ಮಾರಾಟ ಆಗುತ್ತಿದೆ. ಅ ಖಾಸಗಿ ವ್ಯಕ್ತಿಗಳ ಆಸ್ತಿಯಾಗಬಾರದು.

ಇದು ಅವರ ಚಿಂತನೆ.

ಆದರೆ ಮಾರದೆ ಇರುವಂತಿಲ್ಲ, ಹಣದ ಪ್ರಶ್ನೆ ಇದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃ ಅಂತ ಇದೆ. ಅದಕ್ಕೆ ಮಾರಬಹುದಾದ ಭೂ ಮಠದ ಬಳಿ ಇದೆ. ಅದು ಕೊಳ್ಳಬೇಕಲ್ಲ?

ಭಗವಂತನ ದಯೆ. ಬೆಟ್ಟದಂತಹ ಸಮಸ್ಯೆ ಹಗುರ ಆಯಿತು.

ಮಠದ ಭಕ್ತ ಮುಖ್ಯಮಂತ್ರಿ ಆದರು!

ಮಠಾಧೀಶರು ಭಕ್ತನ ಅರಮನೆಗೆ ತೆರಳಿ

ಪುಳಕಿತನಾದ ಭಕ್ತ,

ಪಾದಪೂಜೆ ನೆರವೇರಿಸಿದ.

ಆಸ್ತಿ ಪರಭಾರೆ ವಿಷಯ ಪ್ರಸ್ತಾಪಿಸಿದರು ಮ

ಮಠದ ಋಣ ತೀರಿಸುವ ಕಾಲ ಒದಗಿಬಂದಿತ್ತು.

ಬಯಸದೆ ಬಂದ ಭಾಗ್ಯ ಅಲ್ಲವೆ? ತಕ್ಷಣ ಸೂಚನೆ ಹೋಯಿತು.

ಕೋಟ್ಯಾಂತರ ರೂಪಾಯಿ ವ್ಯವಹಾರ ಕಾನೂನು ಸಲಹೆಗಾರರ ಅಭಿಪ್ರಾಯ ಕೇಳಿತು ಪರಿಶೀಲಿಸಿದ ಸಲಹೆಗಾರ 'ಕೊಂಡುಕೊಳ್ಳಲು ಎಂದ!

ಮುಖ್ಯಮಂತ್ರಿ ಆಜ್ಞೆ, ಸಲಹೆಗಾರ ಹೇಳುತ್ತಿದ್ದಾನೆ.

ಏನು ಮಾಡಬೇಕು ನಿಗಮ?

ವಿಷಯ ಮುಖ್ಯಮಂತ್ರಿ ಕಿವಿ ಮುಟ್ಟಿತು.

ಯಾವ್ರೋನೋ ಕಾನೂನು ಸಲಹೆಗಾರ ಅಂದರೆ ಅದಕ್ಕೆ ಜೋತು ಬಿದ್ದಿರುವ ಮೂರ್ಖತನಕ್ಕೆ ಕೆಂಡಾಮಂಡಲ ಆದರು. ಅಭಿಪ್ರಾಯ ಕೇಳಿ' ಎಂದು ಖಡಕ್ಕಾಗಿ ಹೇಳಿ

ಆ ಅಭಿಪ್ರಾಯ ಏನಿತ್ತು?

ಹೇಳುವುದು ಬೇಕಿಲ್ಲ.

ಮಠಾಧೀಶರಿಗೆ ತೃಪ್ತಿ!

ಮುಖ್ಯಮಂತ್ರಿಯವರಿಗೆ ಧನ್ಯತಾಭಾವ!

ನಿಗಮಕ್ಕೆ ನಿರಾಳ!


ಎಲ್ಲ ಎರಡನೆ ಅಭಿಪ್ರಾಯದ ಮಹಿಮೆ!


ಸಂವಿಧಾನಕ್ಕಿಂತ ಮುಖ್ಯವಾದದ್ದು ಯಾವುದು?



• ಗೌರಿ ಲಂಕೇಶ್
editorlankesh@gmail.com

ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿಯಲ್ಲಿರುವ ಶ್ರೀ ಗುರುದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾದಲ್ಲಿ ನೂರಾರು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಕೋಮು ಸೌಹಾರ್ದ ಪರಂಪರೆಯನ್ನು ಉಳಿಸಲು ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಕಳೆದ 14 ವರ್ಷಗಳಿಂದ ಪ್ರಯತ್ನಿಸುತ್ತಿರುವುದು ನಿಮ್ಮೆಲ್ಲರಿಗೆ ಗೊತ್ತಿದೆ. ಬಡ ಮುಸಲ್ಮಾನರು ಮತ್ತು ಬಡ ಹಿಂದೂಗಳು ಭೇದಭಾವವಿಲ್ಲದೆ ಒಗ್ಗಟ್ಟಾಗಿ ನಡೆದುಕೊಳ್ಳುವ ಆ ದರ್ಗಾದಲ್ಲಿನ ಧಾರ್ಮಿಕ ಐಕ್ಯತೆಯನ್ನು ಕಾಪಾಡಲು ನಮ್ಮ ವೇದಿಕೆಯ ನೂರಾರು ಸದಸ್ಯರು ಜೈಲಿಗೂ ಹೋಗಿದ್ದೇವೆ, ರಾಜ್ಯಾದ್ಯಂತ ಪ್ರಚಾರಾಂದೋಲನಗಳನ್ನು ಕೈಗೆತ್ತಿಕೊಂಡಿದ್ದೇವೆ, ನ್ಯಾಯಾಲಯದ ಮೆಟ್ಟಿಲನ್ನೂ ಹತ್ತಿದ್ದೇವೆ. ಆ ದರ್ಗಾದಲ್ಲಿ ಕಾನೂನಿನಪ್ರಕಾರವೇ 1947ರ ಮುನ್ನ ಎಂತಹ ಪೂಜಾವಿಧಾನಗಳು ಇದ್ದವೋ ಅವನ್ನು ಮಾತ್ರ ಪಾಲಿಸತಕ್ಕದ್ದು ಎಂದು ವೇದಿಕೆಯ ಪರವಾಗಿ ನಾಲ್ವರು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ್ದೆವು. ಆ ನಾಲ್ವರಲ್ಲಿ ಈಗ ಮೂವರು - ಯು.ಆರ್.ಅನಂತಮೂರ್ತಿ, ಪ್ರೊ. ಹಸನ್ ಮನ್ಸೂರ್ ಮತ್ತು ಯುವರಾಜ್ - ನಮ್ಮೊಂದಿಗಿಲ್ಲ. ಉಳಿದಿರುವವಳು ನಾನೊಬ್ಬಳೆ. ಇರಲಿ, ನಮ್ಮ ಪರವಾಗಿ ದೆಹಲಿಯಲ್ಲಿ ವಾದಿಸಿದ್ದು ಸಹೋದರಿ ತೀಸ್ತಾ ಸೆಟಲ್ವಾದ್ ಅವರ ವಕೀಲರ ತಂಡ. ನಮ್ಮ ವಕೀಲರ ವಾದಗಳನ್ನು ಆಲಿಸಿದ ಸುಪ್ರೀಂಕೋರ್ಟ್ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ತನ್ನ ತೀರ್ಪನ್ನು ನೀಡಿತು. ಅದೇನೆಂದರೆ; ರಾಜ್ಯ ಸರ್ಕಾರವೇ ಎಲ್ಲರ ಅಭಿಪ್ರಾಯಗಳನ್ನು ಆಲಿಸಿ ಬಾಬಾಬುಡನ್ ದರ್ಗಾದಲ್ಲಿನ ಪೂಜಾ ವಿಧಾನಗಳನ್ನು ನಿರ್ಧರಿಸಬೇಕು ಎಂಬುದು.





ಈ ತೀರ್ಪು ಬಂದಾಗ ನಮ್ಮ ವೇದಿಕೆಯು ಇದನ್ನು ಸರ್ಕಾರದ ಗಮನಕ್ಕೆ ತಂದಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಈ ಕುರಿತು ನಿರ್ಧಾರವನ್ನು ಆದಷ್ಟು ಬೇಗ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಆದರೆ ಅದು ಅಷ್ಟು ಸುಲಭದ ಮಾತಲ್ಲ, ಇಂತಹ ವಿಷಯಗಳು ಹಲವಾರು ಇಲಾಖೆಗಳನ್ನು ದಾಟಿ ಮುಖ್ಯಮಂತ್ರಿಗಳ ಮುಂದೆ ಬರಬೇಕಾಗುತ್ತದೆ. ಯಾಕೆಂದರೆ ಸರ್ಕಾರಿ ಕಚೇರಿಗಳಲ್ಲಿ ನಾವು ನಿರೀಕ್ಷಿಸುವ ವೇಗದಲ್ಲಿ ಕೆಲಸಗಳು ಸಾಗುವುದಿಲ್ಲ. ಬದಲಾಗಿ ಅಲ್ಲಿ ಫೈಲ್‌ಗಳು ಯಾವುದೋ ಕಪಾಟನಲ್ಲಿ ಗೊರಕೆ ಹೊಡೆಯುತ್ತಾ ಕುಳಿತುಬಿಡುತ್ತವೆ. ಅವುಗಳ ಬೆನ್ನು ಹತ್ತಿದರೆ ಮಾತ್ರ ಅವು ಮಂದಗತಿಯಲ್ಲಾದರೂ ಮುಂದೆ ಸಾಗುತ್ತವೆ. ಹಾಗಾಗಿ ಕಳೆದ ವಾರ ನಮ್ಮ ವೇದಿಕೆಯ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಅಶೋಕ್, ಶಿವಸುಂದರ್, ಭೂಮಿಗೌಡ ಮತ್ತು ನಾನು ನಮ್ಮ ಮನವಿ ಯಾವ ಹಂತದಲ್ಲಿದೆ ಎಂದು ವಿಚಾರಿಸಲು ವಿಧಾನಸೌಧಕ್ಕೆ ಹೋಗಿದ್ದೆವು.

ಅವತ್ತು ಈ ವಿಷಯಕ್ಕೆ ಸಂಬಂಧಪಟ್ಟ ಹಿರಿಯ ಐಎಎಸ್ ಅಧಿಕಾರಿಣಿಯೊಬ್ಬರ ಕೊಠಡಿಗೆ ಹೋಗಿ ನಮ್ಮ ಪರಿಚಯ ಮಾಡಿಕೊಂಡು "ಬಾಬಾಬುಡನ್ ದರ್ಗಾದಲ್ಲಿನ ಪೂಜಾ ವಿಧಾನಗಳನ್ನು ಕುರಿತು ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ಜೊತೆ ಒಂದು ಮನವಿಯನ್ನು ಮುಖ್ಯಮಂತ್ರಿಗೆ ಕೊಟ್ಟಿದ್ದೆವು. ಈಗ ಆ ಮನವಿ ಯಾವ ಹಂತದಲ್ಲಿದೆ ಎಂದು ವಿಚಾರಿಸಲು ಬಂದಿದ್ದೇವೆ" ಎನ್ನುತ್ತಿದ್ದಂತೆ ಆ ಅಧಿಕಾರಿಣಿ ಕೋಪಗೊಂಡು "ನೀವೆಲ್ಲ ಯಾಕೆ ಇಂತಹ ಕೆಲಸಗಳನ್ನು ಮಾಡುತ್ತೀರಿ? ಇದಕ್ಕಿಂತ ಮುಖ್ಯವಾದ ಇತರೆ ವಿಚಾರಗಳಿವೆ. ಅಲ್ಲಿ ಅವರಿಗೆ ಬೇಕಾದಂತಹ ಪೂಜೆಗಳನ್ನು ಮಾಡಿಕೊಳ್ಳಲಿ. ನಿಮಗೇಕೆ ಅದೆಲ್ಲ?" ಎಂದರು. ನಾವೆಲ್ಲ ಕೆಲಕ್ಷಣ ದಂಗುಬಡಿದು ಹೋದೆವು. ಆದರೆ ಕೂಡಲೇ ಚೇತರಿಸಿಕೊಂಡು ಆಕೆಯೊಂದಿಗೆ ಮಾತನ್ನು ಮುಂದುವರೆಸಿದೆವು. "ಈ ಹಿಂದೆ ಬಾಬಾಬುಡನ್ ದರ್ಗಾಕ್ಕೆ ಸಂಬಂಧಿಸಿದಂತೆ ಸುಪ್ರೀಮ್ ಕೋರ್ಟ್ ತನ್ನ ಒಂದು ತೀರ್ಪಿನಲ್ಲಿ 'ನಾವೆಲ್ಲಾ ಜಾತ್ಯತೀತತೆ ಬಗ್ಗೆ ಮಾತನಾಡುತ್ತೇವೆ. ಆದರೆ ಅದು ಬಾಬಾಬುಡನ್ ದರ್ಗಾದಲ್ಲಿ ನಿಜಕ್ಕೂ ಆಚರಣೆಯಲ್ಲಿದೆ' ಎಂದು ಪ್ರಶಂಸಿಸಿತ್ತು. ಜೊತೆಗೆ ಈಗ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದೆ. ಅದನ್ನು ಪಾಲಿಸುವುದು ಸರ್ಕಾರದ ಜವಾಬ್ದಾರಿ" ಎಂದೆವು.

ಆ ಅಧಿಕಾರಿಣಿ "ನೀವೆಲ್ಲ ಯಾಕೆ ಇಂತಹ ಕೆಲಸಗಳನ್ನು ಮಾಡುತ್ತೀರಿ? ಇದಕ್ಕಿಂತ ಮುಖ್ಯವಾದ ಇತರೆ ವಿಚಾರಗಳಿವೆ" ಎಂದದ್ದು ನನ್ನ ಕೋಪ ನೆತ್ತಿಗೇರುವಂತೆ ಮಾಡಿತ್ತು. ಏನು ಆಕೆಯ ಮಾತಿನ ಅರ್ಥ? ನಮಗೆಲ್ಲ ಬೇರೆ ಕೆಲಸಗಳಿಲ್ಲದೆ ಸುಖಾಸುಮ್ಮನೆ ಇಂತಹ ತಕರಾರು ಮಾಡುತ್ತೇವೆ ಎಂದಾ? ಜಾತಿವಾದ, ಕೋಮುವಾದ, ಭ್ರಷ್ಟಾಚಾರ ಇತ್ಯಾದಿಗಳ ವಿರುದ್ಧ ದನಿ ಎತ್ತಿ ಹೋರಾಡುವುದು ಅನಗತ್ಯ ಎಂದಾ? ನಮ್ಮ ಸಂವಿಧಾನದಲ್ಲಿ ಭಾರತೀಯರು ಈ ನಾಡನ್ನು ಜಾತ್ಯತೀತ ಸಾರ್ವಭೌಮವಾಗಿ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪಿಸುತ್ತೇವೆ ಎಂದಿರುವುದು ಸುಮ್ಮನೆ ತಮಾಷೆಗಾ? ಈ ಎಲ್ಲಾ ಪ್ರಶ್ನೆಗಳು ನನ್ನ ತಲೆಯಲ್ಲಿ ಸುಳಿದಾಡುತ್ತಿದ್ದಾಗ ಶಿವಸುಂದರ್ "ಸರ್ಕಾರಕ್ಕೆ ಸಲಹೆ ನೀಡಬಲ್ಲ ಒಂದು ಸಮಿತಿಯನ್ನು ರಚಿಸಬೇಕೆಂದು ವೇದಿಕೆ ಸಲಹೆ ಮಾಡಿದೆ" ಎಂದರು. ಆಗ ಆಕೆ "ಸಮಿತಿ ಮಾಡಬೇಕಾ?" ಎಂದು ಕೇಳಿದರು. "ಹೌದು, ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಮಾಡಿದರೆ ಉತ್ತಮ" ಎಂದರು ಶಿವಸುಂದರ್. ಆಕೆ ಜೋರಾಗಿ ನಗುತ್ತಾ "ಇವತ್ತು ಅರುಣ್ ಜೇಟ್ಲಿ ಅವರು ನ್ಯಾಯಮೂರ್ತಿಗಳ ವಿರುದ್ಧ ಕೆಂಡಕಾರಿದ್ದಾರೆ ಗೊತ್ತಾ?" ಎಂದರು. ಅದಕ್ಕೆ ಶಿವಸುಂದರ್ "ಆದರೆ ಜೇಟ್ಲಿ ಈ ರಾಜ್ಯದ ಮುಖ್ಯಮಂತ್ರಿ ಅಲ್ಲ, ಈಗ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ" ಎಂದರು.

ನಾಲ್ಕು ಇಲಾಖೆಗಳ ಜವಾಬ್ದಾರಿಯನ್ನು ಹೊತ್ತಿರುವ ಆಕೆ ಬ್ಯುಸಿಯೋ ಬ್ಯುಸಿ. ಕೇವಲ ಏಳು ನಿಮಿಷಗಳ ಕಾಲ ನಮ್ಮೊಂದಿಗೆ ಮಾತನಾಡಿ "ನಿಮ್ಮ ಫೈಲ್ ನೋಡುತ್ತೇನೆ. ಈಗ ನನಗೆ ಇನ್ನೊಂದು ಮೀಟಿಂಗ್ ಇದೆ" ಎಂದು ನಮ್ಮನ್ನು ಸಾಗಹಾಕಿದಳು.

ಹೊರಬಂದನಂತರವೂ ಆಕೆಯ ಮಾತುಗಳು ನನ್ನಲ್ಲಿ ಉಕ್ಕಿಸಿದ್ದ ಕೋಪ ತಣ್ಣಗಾಗಿರಲಿಲ್ಲ. ಸಮಾಜದಲ್ಲಿ ಬದಲಾವಣೆಯನ್ನು ಬಯಸುವುದು, ಪ್ರಗತಿಗಾಗಿ ಆಶಿಸುವುದು 'ನಿರುದ್ಯೋಗಿಗಳ ಕೆಲಸ'ವೇ? ಜಾತಿ, ಧರ್ಮ, ಭಾಷೆ ಎಂಬ ಗಡಿಗಳನ್ನು ಮೀರುವುದು, ಪುರೋಹಿತಶಾಹಿ ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಡುವುದು, ನಮ್ಮ ಸಂವಿಧಾನದಲ್ಲಿ ಕೊಟ್ಟಿರುವ ಸಮಾನತೆ, ಭ್ರಾತೃತ್ವ ಮತ್ತು ನ್ಯಾಯಕ್ಕಾಗಿ ದನಿ ಎತ್ತುವುದಕ್ಕಿಂತ ಮುಖ್ಯವಾದದ್ದು ಆಕೆಯ ಪ್ರಕಾರ ಯಾವುದಿರಬಹುದು? ಮೋದಿಯಂತೆ ಪೊರಕೆ ಹಿಡಿದು ಸ್ವಚ್ಛ ಭಾರತ ಎಂದು ಪೋಸುಕೊಡುವುದಾ? ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂದು ಬೊಗಳೆ ಬಿಡುವುದಾ?

ಕಳೆದ ಭಾನುವಾರ ಬೆಂಗಳೂರಿನ ಹೊರವಲಯದ ನೆಲಮಂಗಲದಲ್ಲಿ ಒಂದು ದುರಂತ ಸಂಭವಿಸಿತು. ತಮ್ಮ 22 ಹರೆಯದ ಮಗಳು ಬೇರೆ ಜಾತಿಯವನನ್ನು ಪ್ರೀತಿಸಿ ಆತನೊಂದಿಗೆ ಓಡಿಹೋದದ್ದಕ್ಕೆ ಆಕೆಯ ತಂದೆ ಮತ್ತು ತಾಯಿ ವಿಷ ಕುಡಿದು ಸಾವನ್ನಪ್ಪಿದರು. ಅಂತಿಮ ದರ್ಶನಕ್ಕೆಂದು ಬಂದ ಮಗಳನ್ನು ಸಂಬಂಧಿಕರು ವಾಚಾಮಗೋಚರ ಉಗಿದರು. ಅಷ್ಟೇ ಅಲ್ಲ, ಕೆಲವು ಟಿವಿ ಚಾನೆಲ್‌ನವರೂ "ಹೆತ್ತವರು ಕಷ್ಟಪಟ್ಟು ಮಕ್ಕಳನ್ನು ಬೆಳೆಸುತ್ತಾರೆ, ಆದರೆ ನೋಡಿ ಅವರು ಲವ್‌ಗಿವ್ ಅಂತ ಓಡಿಹೋಗಿ ಅಪ್ಪ ಅಮ್ಮಂದಿರ ಸಾವಿಗೆ ಕಾರಣರಾಗುತ್ತಾರೆ" ಎಂದೆಲ್ಲ ಆ ಯುವತಿಯನ್ನೇ ದೂಷಿಸಿದರಂತೆ.

ಜೊತೆಗೆ ಕಳೆದವಾರ ಹಫಿಂಗ್ಟನ್ ಪೋಸ್ಟ್ ಎಂಬ ಪತ್ರಿಕೆಯ ವೆಬ್ ಪೋರ್ಟಲ್ ಕೌಶಲ್ಯ ಎಂಬ ಯುವತಿಗೆ ಆದ ದುರಂತವನ್ನು ಆಕೆಯ ಮಾತಿನಲ್ಲೇ ವರದಿ ಮಾಡಿತ್ತು. ಈ ಕೌಶಲ್ಯ ಬೇರೆ ಯಾರೂ ಅಲ್ಲ, ಇತ್ತೀಚೆಗೆ ತಮಿಳು ನಾಡಿನಲ್ಲಿ ಸಾರ್ವಜನಿಕ ಸ್ಥಳದಲ್ಲೇ ಭೀಕರವಾಗಿ ಕೊಲೆಯಾದ ಶಂಕರ್ ಎಂಬ ದಲಿತ ಯುವಕನ 'ಮೇಲುಜಾತಿ'ಯ ಪತ್ನಿ. ಆಕೆ 'ಕೆಳಜಾತಿ'ಯವನನ್ನು ಮದುವೆಯಾಗಿದ್ದಕ್ಕೆ ಕುಪಿತಗೊಂಡಿದ್ದ ಆಕೆಯ ತಂದೆ ಮತ್ತು ಕುಟುಂಬದ ಸದಸ್ಯರು ಆಕೆಗೆ ಕೊಟ್ಟ ಹಿಂಸೆ ಅಷ್ಟಿಷ್ಟಲ್ಲ. ಒಮ್ಮೆ ಕೌಶಲ್ಯಳ ತಂದೆ ಆಕೆಯನ್ನು ಬಡಿಯುತ್ತಾ "ನಿನ್ನ ಹೊಟ್ಟೆಯಲ್ಲಿ ದಲಿತನ ಕೂಸು ಬೆಳೆಯುವುದು ಅಕ್ಷಮ್ಯ ಅನ್ನೋದು ನಿನಗೆ ಗೊತ್ತಿಲ್ಲವಾ?" ಎಂದನಂತೆ.

ಮಕ್ಕಳ ಸಂತೋಷಕ್ಕಿಂತ ಜಾತಿಯೇ ಮುಖ್ಯ ಎಂದು ಭಾವಿಸುವ ತಂದೆ ತಾಯಂದಿರಿಗೆ ಇನ್ನೆಂತಹ ಹುಚ್ಚು ಹಿಡಿದಿರಬೇಕು? ತಮ್ಮ ಮಗಳ ಆಸೆ, ಅಭಿಪ್ರಾಯ, ಕನಸು ಯಾವುದೂ ಮುಖ್ಯವಲ್ಲ, ಯಾಕೆಂದರೆ ಆಕೆ ಕೇವಲ ಮಕ್ಕಳನ್ನು ಹೆರುವ ವಸ್ತು ಎಂದು ತಿಳಿದಿರುವ ಜನರಿಗೆ ಏನೆನ್ನಬೇಕು? ತಮ್ಮ ಮಗಳು ಪ್ರೀತಿಸಿರುವ ಯುವಕ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆಯೇ ಎಂಬುದು ಮುಖ್ಯವಾಗದೆ ಆತ ಯಾವ ಜಾತಿಯವನು ಎಂಬುದನ್ನೇ ಮುಖ್ಯವಾಗಿಸಿಕೊಂಡಿರುವವರನ್ನು ಮೂರ್ಖರು ಎನ್ನದೆ ಇನ್ನೇನನ್ನಬೇಕು? ಇಂತಹ ನೀಚರಿಗಿಂತ ಜಾತಿಯ ಗೋಡೆಗಳನ್ನು ದಾಟಲು ಯತ್ನಿಸಿದ ಆ ಯುವತಿಯರೇ ಉತ್ತಮರು.

ಇತ್ತೀಚೆಗೆ ಕೌಶಲ್ಯ ಆತ್ಮಹತ್ಯೆಗೆ ಯತ್ನಿಸಿ ಸ್ವಲ್ಪದರಲ್ಲೇ ಪಾರಾಗಿದ್ದಾಳೆ. ಆಕೆಯಂತೆ ನೆಲಮಂಗಲದ ದಂಪತಿಗಳ ಮಗಳೂ ತನ್ನ ಪ್ರಾಣವನ್ನೇ ತೆಗೆದುಕೊಳ್ಳಲು ಯತ್ನಿಸಿದರೆ ಅದಕ್ಕೆ ಯಾರು ಜವಾಬ್ದಾರರು? ಜಾತಿ ಎಂಬ ದುಷ್ಟ ವ್ಯವಸ್ಥೆಯನ್ನು ನಾಶಗೊಳಿಸಬೇಕೆಂದರೆ ಅಂತರಜಾತಿ ಮದುವೆಗಳು ಹೆಚ್ಚಾಗಬೇಕು ಎಂದು ಅಂಬೇಡ್ಕರ್ ಹೇಳಿದ್ದರು. ಕೌಶಲ್ಯ ಮತ್ತು ಶಂಕರ್ ಆಗಲಿ, ನೆಲಮಂಗಲದ ಯುವತಿ ಮತ್ತು ಯುವಕನಾಗಲಿ ಪ್ರಾಯಶಃ ಅಂಬೇಡ್ಕರ್ ಅವರ ಬರಹಗಳನ್ನು ಓದಿರಲಿಕ್ಕಿಲ್ಲ. ಆದರೆ ಅವರೆಲ್ಲರೂ ಅಂಬೇಡ್ಕರ್ ಅವರ ಆಶಯದತ್ತ ಹೆಜ್ಜೆ ಹಾಕಿದ್ದರು. ಅದಕ್ಕೆ ಅವರಿಗೆ ಸಿಕ್ಕ ಪ್ರತಿಫಲ ವೈಧವ್ಯ ಮತ್ತು ಸಮಾಜದ ನಿಂದನೆ. ಐಎಎಸ್ ಅಧಿಕಾರಿಣಿ ಇವರೆಲ್ಲರಿಗೂ ಹೀಗೆ ಉಪದೇಶ ನೀಡಬಹುದೇನೋ: "ನೀವೆಲ್ಲಾ ಹೀಗೆಲ್ಲ ಯಾಕೆ ಮಾಡಬೇಕಿತ್ತು? ಸುಮ್ಮನೆ ಬಾಯಿ ಮುಚ್ಚಿಕೊಂಡಿದ್ದು ನಿಮ್ಮ ಅಮ್ಮ ಮತ್ತು ಅಪ್ಪ ಸೂಕ್ತ ಜಾತಿಯ ವೀರ್ಯಾಣು ಮತ್ತು ಗರ್ಭವನ್ನು ಹೊಂದಿರುವವರನ್ನು ಹುಡುಕುತ್ತಾರೆ, ಅವರನ್ನು ಮದುವೆಯಾಗಿ ತೆಪ್ಪಗಿರಿ."

ಇವತ್ತು ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯ, ದೆಹಲಿಯ ಜೆಎನ್‌ಯು ಸೇರಿದಂತೆ ದೇಶದ ವಿವಿಧ ವಿವಿಗಳ ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದಾರೆ. ಜಾತಿಭೇದ, ಲಿಂಗಭೇದ, ಕೋಮುವಾದ ಇತ್ಯಾದಿಗಳಿಂದ 'ಆಜಾದಿ' ಬೇಕು ಎನ್ನುತ್ತಿದ್ದಾರೆ. ಆದರೆ ಆ ಐಎಎಸ್ ಅಧಿಕಾರಿಣಿಯ ಮಾನಸಿಕ ಸ್ಥಿತಿಯನ್ನೇ ಹೊಂದಿರುವ ಹಲವರು "ನೀವೆಲ್ಲ ವಿದ್ಯಾರ್ಥಿಗಳು. ಹೀಗೆಲ್ಲ ಚಿಕ್ಕಪುಟ್ಟ ಸಮಸ್ಯೆಗಳಿಂದ ಆಜಾದಿ ಬೇಕೆಂದು ಕೇಳುವ ಬದಲು ಸುಮ್ಮನೆ ನಿಮ್ಮ ಪುಸ್ತಕಗಳನ್ನು ಓದಿ. ನಮ್ಮ ಸಮಾಜದ ಅಂಕುಡೊಂಕುಗಳ ಬಗ್ಗೆ ನಿಮ್ಮ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ" ಎಂದು ಕಿಡಿಕಾರುತ್ತಿದ್ದಾರೆ.

ಮಹಿಳಾ ಹಕ್ಕುಗಳ ಹೋರಾಟಗಾರ್ತಿಯರನ್ನಂತೂ ಹಲವರು ಕೀಳಾಗಿ ಕಾಣುತ್ತಿದ್ದಾರೆ. ಇತ್ತೀಚೆಗೆ ಕವಿತಾ ಕೃಷ್ಣನ್ ಎಂಬ ಹೋರಾಟಗಾರ್ತಿಗೆ ಯಾವನೋ ದುಷ್ಟ "ನಿಮ್ಮ ಅಮ್ಮ/ಮಗಳನ್ನು ಕೇಳು ಅವರೂ ಫ್ರೀ ಸೆಕ್ಸ್‌ನಲ್ಲಿ ತೊಡಗಿದ್ದರಾ ಎಂದು" ಅಂತ ಪ್ರಶ್ನಿಸಿದ್ದ. ಅದಕ್ಕೆ ಕವಿತಾ ಅವರು ಸಖತ್ ಆದ ಉತ್ತರವನ್ನೇ ಕೊಟ್ಟರು. ಅವರು ಹೀಗೆ ಹೇಳಿದರು: "ಹೌದು, ನನ್ನ ಅಮ್ಮ ಫ್ರೀ ಸೆಕ್ಸ್‌ನಲ್ಲಿ ತೊಡಗಿದ್ದರು. ನಿಮ್ಮ ತಾಯಿಯೂ ಅಂತಹದ್ದೇ ಕಾರ್ಯದಲ್ಲಿ ತೊಡಗಿದ್ದರು ಎಂದು ಆಶಿಸುತ್ತೇನೆ. ಯಾಕೆಂದರೆ ಅವರು ಫ್ರೀ ಆಗಿ ಅದರಲ್ಲಿ ತೊಡಗಿರದಿದ್ದರೆ ಅದು ಅತ್ಯಾಚಾರವಾಗುತ್ತದೆ. ಅರ್ಥವಾಯಿತಾ?" ಕವಿತಾ ಅವರಿಗಿಂತಲೂ ಅವರ ತಾಯಿ ಲಕ್ಷ್ಮಿ ಕೃಷ್ಣನ್ ಅವರು ಕೊಟ್ಟ ತಿರುಗೇಟು ಅಂತಹ ಪ್ರಶ್ನೆಯನ್ನು ಕೇಳಿದ ದಾಸ್ ಎಂಬುವವನು ತನ್ನ ಮರ್ಮಾಂಗವನ್ನು ಮುಟ್ಟಿನೋಡಿಕೊಳ್ಳುವಂತೆ ಇತ್ತು. "ಹಾಯ್ ದಾಸ್. ನಾನು ಕವಿತಾಳ ತಾಯಿ . ಹೌದು, ನಾನೂ ಫ್ರೀ ಸೆಕ್ಸ್‌ನಲ್ಲಿ ತೊಡಗಿದವಳು. ನನಗೆ ಬೇಕೆಂದಾಗ, ಬೇಕಾದ ವ್ಯಕ್ತಿಯೊಂದಿಗೆ ಕೂಡಿದವಳು ನಾನು ಎಂದು ಮುಚ್ಚುಮರೆಯಿಲ್ಲದೆ ಹೇಳುತ್ತೇನೆ. ಪ್ರತಿ ಪುರುಷ ಮತ್ತು ಮಹಿಳೆಗೆ ತನಗೆ ಬೇಕಾದವರೊಂದಿಗೆ ಪರಸ್ಪರರ ಒಪ್ಪಿಗೆಯೊಂದಿಗೆ ಕೂಡುವ ಹಕ್ಕಿಗಾಗಿ ನಾನು ಹೋರಾಡುತ್ತೇನೆ. ಅದು ಯಾವತ್ತಿಗೂ ಮುಕ್ತವಾಗಿರಬೇಕು, ಬಲವಂತದ ಕ್ರಿಯೆ ಆಗಕೂಡದು" ಎಂದರು ಆ ತಾಯಿ.


ನಾನೂ ಇಲ್ಲಿ ನನ್ನ ಚಿಕ್ಕ ಉತ್ತರವನ್ನು ಕೊಡಲು ಇಚ್ಛಿಸುತ್ತೇನೆ. ಲೈಂಗಿಕ ಕ್ರಿಯೆ ಫ್ರೀ ಆಗಿರದಿದ್ದರೆ, ಅದು ಒಂದೋ ವೇಶ್ಯಾವಾಟಿಕೆ ಆಗಿರುತ್ತದೆ ಅಥವಾ ಅತ್ಯಾಚಾರವಾಗಿರುತ್ತದೆ. ಇದನ್ನು ದಾಸ್ ತರಹದ ಕಿರಾತಕರು ಅರ್ಥಮಾಡಿಕೊಂಡರೆ ಅವರಿಗೇ ಗೊತ್ತಾಗುತ್ತದೆ ತಾವು ಅತ್ಯಾಚಾರಕ್ಕೆ ಹುಟ್ಟಿದೆವೋ ಅಥವಾ ವೇಶ್ಯೆಯ ಗರ್ಭದಲ್ಲಿ ಜನಿಸಿದೆವೋ ಎಂದು.

ಇರಲಿ, ಇವತ್ತು ಮಹಿಳೆಯರು ಸಮಾನತೆಗಾಗಿ ಹೋರಾಡುತ್ತಿದ್ದರೆ ಅದನ್ನು ಬೆಂಬಲಿಸುವ ಬದಲು ಆರೆಸ್ಸೆಸ್ ಮತ್ತು ಅದರ ಪಾಪಪಿಂಡಗಳಂತಿರುವ ವಿವಿಧ ಸಂಘಟನೆಗಳು ಮಹಿಳೆಯರನ್ನು ತಮ್ಮ ಮನೆಯಲ್ಲಿಯೇ ಬಂಧಿಗಳನ್ನಾಗಿಸುವ ಹುನ್ನಾರ ಮಾಡುತ್ತಿವೆ. ಮಹಿಳೆಯರ ಕರ್ತವ್ಯ ತನ್ನ ಗಂಡನ ಸೇವೆ ಮತ್ತು ಮಕ್ಕಳ ಪೋಷಣೆ ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಇತ್ತೀಚೆಗೆ ಫರ್ಮಾನು ಹೊರಡಿಸಿದ್ದಾನೆ. ಇದನ್ನೂ ಐಎಎಸ್ ಅಧಿಕಾರಿಣಿ ಬೆಂಬಲಿಸುವಂತಿದ್ದರೆ, ಆಕೆ ಕೂಡಲೆ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಮನೆಗೆ ಹೋದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ.

ಇನ್ನು ಸಾಮಾಜಿಕ ಹೋರಾಟಗಾರರನ್ನು ಅಸಹ್ಯವಾಗಿ ನಿಂದಿಸುವಲ್ಲಿ ಚಡ್ಡಿಗಳದ್ದು ಎತ್ತಿದ ಕೈ. ಸದಾ ಮಾನವ ಹಕ್ಕು, ದಲಿತರ ಹಕ್ಕು, ಮಹಿಳೆಯರ ಹಕ್ಕು, ಆದಿವಾಸಿಗಳ ಹಕ್ಕು ಎಂದೆಲ್ಲ ಹೋರಾಟ ಮಾಡುವವರು ಚಡ್ಡಿಗಳ ಪ್ರಕಾರ ಹುಚ್ಚರು. ಆದ್ದರಿಂದ ಅವರನ್ನೆಲ್ಲ ಹುಚ್ಚಾಸ್ಪತ್ರೆಯಲ್ಲಿ ಕೂಡಿಹಾಕಿ ಮನುಸ್ಮೃತಿಯನ್ನು ಹೇಳಿಕೊಡಬೇಕು. ಅವರ ಮೆದುಳಿಗೆ ಶಸ್ತ್ರಚಿಕಿತ್ಸೆ ಮಾಡಿ ಗಾಂಧಿ ಸ್ಥಾನದಲ್ಲಿ ಗೊಡ್ಸೆ ಕೂರುವಂತೆ ನೋಡಿಕೊಳ್ಳಬೇಕು. ಅವರ ಮೆದುಳಿನಲ್ಲಿರುವ ಎಲ್ಲದನ್ನು ಅಳಿಸಿ ಹಾಕಿ ನಮ್ಮ ಸಂವಿಧಾನದ ಬದಲು ಭಗವದ್ಗೀತೆ ಇರುವಂತೆ ನೋಡಿಕೊಳ್ಳಬೇಕು.

ಯಾಕೆಂದರೆ ಚಡ್ಡಿಗಳ ಪ್ರಕಾರ ಭಾರತೀಯರು ತಾವು ಪ್ರೀತಿಸಿದವರನ್ನು ಮದುವೆಯಾಗುವಂತಿಲ್ಲ. ತಮಗೆ ಇಷ್ಟವಾದ ಉಡುಗೆತೊಡುಗೆಗಳನ್ನು ಹಾಕಿಕೊಳ್ಳುವಂತಿಲ್ಲ. ತಮಗೆ ಬೇಕಾದ ಆಹಾರ ತಿನ್ನುವಂತಿಲ್ಲ. ತಮಗೆ ಇಷ್ಟವಾದ ಧರ್ಮವನ್ನು ಪಾಲಿಸುವಂತಿಲ್ಲ. ನಮ್ಮ ಸಂವಿಧಾನದಲ್ಲಿರುವ ಜಾತ್ಯತೀತತೆ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವಕ್ಕಾಗಿ ಆಶಿಸುವಂತಿಲ್ಲ, ಇನ್ನು ಹೋರಾಡುವುದಂತೂ ಬೇಡವೇ ಬೇಡ.

ಅಂತಹ ಮನಸ್ಥಿತಿ ಆ ಐಎಎಸ್ ಅಧಿಕಾರಿಣಿಯದ್ದು. ಅಂತಹ ಮನಸ್ಥಿತಿಯ ಹಲವು ಅಧಿಕಾರಿಗಳೇ ಇವತ್ತು ವಿಧಾನಸೌಧವನ್ನು ಆಕ್ರಮಿಸಿಕೊಂಡಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಸಿದ್ದು ಎಷ್ಟೇ ತಿಪ್ಪರಲಾಗ ಹಾಕಿದರೂ ಕರ್ನಾಟಕ ಉದ್ಧಾರ ಆಗುವುದಿಲ್ಲ. ●



ಅವ್ವಾ ಮಾದೇಶ

ಮೈಸೂರು: ಹರಿದ ನೆತ್ತರ ಹಿಂದೆ ಅವ್ವಾ ಮಾದೇಶನ ರಣಕೇಕೆ?



ದೇವೇಂ



ರಕ್ತದ ಮಡುವಿನಲ್ಲಿ ದೇವೇಂದ್ರ ಹೆಣ

ವಾರಗಳ ಹಿಂದಷ್ಟೇ ಪಡುವಾರಹಳ್ಳಿಯಲ್ಲಿ ಬೆಳ್ಳಂಬೆಳಗ್ಗೆ ಬಿದ್ದ ಹೆಣ ನಿಜಕ್ಕೂ ಮೈಸೂರು ಪೊಲೀಸರಿಗೆ ಒಂದು ಎಚ್ಚರಿಕೆ ಗಂಟೆಯೇ ಸರಿ. ಸಾಂಸ್ಕೃತಿಕ ನಗರಿಯಲ್ಲಿ ನಟೋರಿಯಸ್ ಪಾತಕ ಜಗತ್ತು ಸಣ್ಣಗೆ ಕದಲಾಡುತ್ತಿರುವ ವೆರಿ ಡೇಂಜರಸ್ ಸೂಚನೆ ಅದು. ಪೊಲೀಸರು ಅಲರ್ಟ್ ಆಗದಿದ್ದರೆ ಮೈಸೂರಿನ ಸೆರಗೆಲ್ಲ ನೆತ್ತರುಮಯವಾಗುವ ಅಪಾಯ ತಪ್ಪಿದ್ದಲ್ಲ ಎನ್ನುವುದಕ್ಕೆ ಇದು ಮುನ್ನುಡಿಯಷ್ಟೆ. ಮೈಸೂರಿನ ಮಂದಿಯನ್ನು ಈ ಪರಿ ಆತಂಕಕ್ಕೆ ತಳ್ಳಿರುವ ಆ ಕೊಲೆ ಅಡಗಿಸಿಟ್ಟುಕೊಂಡಿರುವ ಸುಳಿಯಾದರೂ ಎಂತದ್ದು ಗೊತ್ತಾ?

ಅವನು ದೇವೇಂದ್ರ ಅಲಿಯಾಸ್ ದೇವ. ವಯಸ್ಸು ಈಗಷ್ಟೆ ಮೂವತ್ತೈದು. ಅಂದಕಾಲತ್ತಿಲ್ ಮೈಸೂರು ಪಾತಕಲೋಕದಲ್ಲಿ ತಕ್ಕಮಟ್ಟಿಗೆ ಹೆಸರು ಮಾಡಿದ್ದಂತವನು. ಅದೇ ಕಾರಣಕ್ಕೆ ಅವ್ವಾ ಮಾದೇಶನೆಂಬ ನಟೋರಿಯಸ್ ಕ್ರಿಮಿನಲ್ ಜೊತೆಗೆ ದುಶ್ಮನಿಯನ್ನೂ ಕಟ್ಟಿಕೊಂಡಿದ್ದ. ಆದರೆ ಕಳೆದ ಐದಾರು ವರ್ಷಗಳಿಂದ ರೌಡಿಸಂ ಉಸಾಬರಿ ಬಿಟ್ಟು ಸಣ್ಣಪುಟ್ಟ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ಕುದುರಿಸಿಕೊಳ್ಳುತ್ತಾ ತಣ್ಣನೆ ಜೀವನಕ್ಕೆ ಸೀಮಿತವಾಗಿದ್ದ. 2010ರಿಂದೀಚೆಗೆ ಅವನ ಮೇಲೆ ಯಾವ ಕೇಸೂ ದಾಖಲಾಗಿರಲಿಲ್ಲ. ಆದರೆ ಮಾಡಿದ ಪಾಪದ ಗಂಟುಗಳು ಬಿಡಬೇಕಲ್ಲ; ಜೀವಭಯ ಇದ್ದೇ ಇತ್ತು. ಹಾಗಾಗಿ ತನ್ನ ಸುತ್ತ ಅಶೋಕ, ಮಂಜೇಶ, ಪಲ್ಲಿ ಮೊದಲಾದ ಸಣ್ಣಸೈಜಿನ ಪುಡಿ ಹುಡುಗರನ್ನು ಸಾಕಿಕೊಂಡು ಸೇಫಾಗಿದ್ದ.

ಆದರೆ ಮೇ, 5ರಂದು ಅವನ ನಸೀಬು ಸಂಪೂರ್ಣವಾಗಿ ಕೈಕೊಟ್ಟಿತ್ತು. ಅನಾರೋಗ್ಯದಿಂದ ನರಳುತ್ತಿದ್ದ ತನ್ನ ತಂದೆ ನಾರಾಯಣಪ್ಪನನ್ನು ಆಸ್ಪತ್ರೆಗೆ ತೋರಿಸಿಕೊಂಡು ಬರುವಂತೆ ಒಂದಿಷ್ಟು ಹುಡುಗರ ಜತೆಮಾಡಿ ಕಳುಹಿಸಿದ್ದ ದೇವ ಇದ್ದೊಬ್ಬ ಹುಡುಗನನ್ನೂ ತಿಂಡಿ ತರಲಿಕ್ಕೆ ಕಳುಹಿಸಿ ಮಾರಿಗುಡಿ ಸರ್ಕಲ್‌ನಲ್ಲಿ ಏಕಾಂಗಿಯಾಗಿ ಚಹಾ ಹೀರುತ್ತಾ ಕೂತಿದ್ದ. ಆಗ ಸಮಯ ಸರಿಯಾಗಿ ಏಳು ಗಂಟೆ. ಅದು ದೇವೇಂದ್ರನ ಪಾಲಿಗೆ ಮಹೂರ್ತವಿಟ್ಟ ಪಕ್ಕಾ ಯಮಗಂಡ ಕಾಲ.

ಒಂದು ಬೊಲೆರೊ ಕಾರು ಧೂಳೆಬ್ಬಿಸಿಕೊಂಡು ಬಂದು ತನ್ನ ಮುಂದೆ ನಿಂತಿದ್ದೇ ತಡ, ದೇವೇಂದ್ರನಿಗೆ ಅಪಶಕುನದ ಅಲಾರಾಮ್ ಹೊಡೆದುಕೊಳ್ಳಲು ಶುರು ಮಾಡಿತ್ತು. ಯಾವಾಗ ಕಾರಿನ ಹಿಂದೆಯೇ ಎರಡು ಮೋಟಾರ್ ಬೈಕುಗಳು ಬಂದು ನಿಂತವೊ, ಬೈಕ್‌ನಲ್ಲಿದ್ದವರ ಕೈಗಳಲ್ಲಿ ಲಾಂಗುಗಳು ಝಳಪಿಸುತ್ತಿದ್ದವೋ ಆಗಲೇ ದೇವೇಂದ್ರನ ಜಂಘಾಬಲ ಉಡುಗಿಹೋಗಿತ್ತು. ತನ್ನ ಮೇಲೆ ಅಟ್ಯಾಕ್ ಆಗಿದೆ ಅಂತಂದು ಗೊತ್ತಾದ ತಕ್ಷಣವೇ ಕೈಲಿದ್ದ ಲೋಟ ಬಿಸಾಕಿ ಪಕ್ಕದಲ್ಲೇ ಇದ್ದ ಕಿರಿದಾದ ಗಲ್ಲಿಯೊಂದರೊಳಕ್ಕೆ ನುಸುಳಿಕೊಂಡಿದ್ದ. ಬೊಲೆರೊ ಮತ್ತು ಬೈಕುಗಳಲ್ಲಿ ಬಂದಿದ್ದ ಅಜಮಾಸು ಎಂಟತ್ತು ಹಂತಕರು ದೇವೇಂದ್ರನ ಬದುಕಿಗೊಂದು ಫುಲ್‌ಸ್ಟಾಪ್ ಇಡಲೇಬೇಕೆಂದು ನಿಶ್ಚಯಿಸಿಕೊಂಡು ಬಂದಿದ್ದರು ಅನ್ನಿಸುತ್ತೆ. ಸಂದಿಗೊಂದಿಯಲ್ಲಿ ಬೆನ್ನಟ್ಟಿ ಬಡಿಯಲಾರಂಭಿಸಿದ್ದರು.

ಅದು ಅರಿಭಯಂಕರ ದೃಶ್ಯ. ಬೆಳ್ಳಂಬೆಳಗ್ಗೆ ಕಣ್ಣುಜ್ಜಿಕೊಳ್ಳುತ್ತಾ ಹೊರಬರುತ್ತಿದ್ದ ಮಂದಿಯೆಲ್ಲ ಸಿನಿಮಾ ಶೂಟಿಂಗ್ ನಡೆಯುತ್ತಿದೆಯೇನೊ ಅಂತ ಕ್ಷಣಕಾಲ ಗೊಂದಲಕ್ಕೀಡಾಗಿದ್ದುಂಟು. ಯಾವಾಗ ದೇವೇಂದ್ರನ ಮೈಯಿಂದ ಚಿಮ್ಮುತ್ತಿದ್ದ ರಕ್ತ ಅಸಲಿ, ಇಲ್ಲಿ ನಡೆಯುತ್ತಿರೋದೂ ಪಾತಕಿಗಳ ರಣಹಿಂಸೆ ಅನ್ನೋದು ಖಾತ್ರಿಯಾಯಿತೋ ಕೂಡಲೇ ಗಾಬರಿಬಿದ್ದು ಮನೆಯೊಳಗೆ ಅವಿತುಕೊಂಡು ಬಾಗಿಲು ಭದ್ರಮಾಡಿಕೊಂಡರು. ಹಂತಕರು ಬೀಸುತ್ತಿದ್ದ ಮಚ್ಚೇಟುಗಳಿಂದ ತಪ್ಪಿಸಿಕೊಳ್ಳುತ್ತಾ ಪ್ರಾಣ ಉಳಿಸಿಕೊಳ್ಳಲು ಓಡುತ್ತಿದ್ದ ದೇವೇಂದ್ರ ಆಸರೆಗಾಗಿ ಮನೆ ಬಾಗಿಲುಗಳನ್ನು ಬಡಿದರೆ ಯಾರೊಬ್ಬರೂ ತೆರೆಯುವ ಧೈರ್ಯಸ್ಥ ಸ್ಥಿತಿಯಲ್ಲಿರಲಿಲ್ಲ. ಅಲ್ಲಿಗೆ ದೇವೇಂದ್ರನ ಸಾವು ಭಾಗಶಃ ಖಚಿತವಾಗಿತ್ತು!


ಹಂತಕರ ಕೈಲಿದ್ದ ಲಾಂಗು, ಮಚ್ಚುಗಳು ಅವನ ದೇಹವನ್ನು ಹರಿದು ಚಿಂದಿಯಾಗಿಸಿದ್ದವು. ಪಾತಕ ಜಗತ್ತಿಗೆ ಕಾಲಿಟ್ಟವರಿಗೆ ಸಿಗುವ ಫೈನಲ್ ಫಲಿತಾಂಶ ಅವನಿಗೆ ಖಾತ್ರಿಯಾಗುವುದಕ್ಕೂ, ತಾನು ಓಡುತ್ತಿದ್ದ ಓಣಿಯಲ್ಲಿ ಹೊಟ್ಟಿದ್ದ ತೆಂಗಿನ ಚಿಪ್ಪುಗಳ ಮೇಲೆ ಕಾಲಿಟ್ಟು ತನ್ನ ದಢೂತಿ ದೇಹ ನೆಲಕ್ಕುರುಳುವುದಕ್ಕೂ ಸರಿಹೋಯ್ತು. ನೆತ್ತರು ದಾಹಕ್ಕೆ ಹಪಹಪಿಸುತ್ತಿದ್ದ ಲಾಂಗುಗಳು ಕ್ಷಣ ಮಾತ್ರದಲ್ಲಿ ದೇವೇಂದ್ರನ ದೇಹವನ್ನು ಅಡ್ಡಡ್ಡ ಕೊಚ್ಚಿ ಹಾಕಿದ್ದವು. ಕೆಲವೇ ಸೆಕೆಂಡುಗಳ ಹಿಂದೆ ನಿಶ್ಚಿಂತೆಯಿಂದ ಚಹಾ ಹೀರುತ್ತಿದ್ದ ದೇಹ ಈಗ ರಕ್ತದ ಮಡುವಿನಲ್ಲಿ ಜೀವವೇ ಇಲ್ಲದ ಹೆಣವಾಗಿ ಬಿದ್ದಿತ್ತು!

ಅದು ಮಾದೇಶನ ಪ್ರತೀಕಾರ?

ಸುದ್ದಿ ತಿಳಿಯುತ್ತಿದ್ದಂತೆಯೇ ನಗರ ಪೊಲೀಸ್ ಕಮೀಷನರ್ ದಯಾನಂದ್‌ರು ಜಯಲಕ್ಷ್ಮಿ ಪೊಲೀಸ್ ಠಾಣೆಯ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ದೌಡಾಯಿಸಿದ್ದರು. ಹೀಗೆ ಭೀಕರವಾಗಿ ಹತ್ಯೆಯಾದವನು ದೇವೇಂದ್ರ ಅಲಿಯಾಸ್ ದೇವ ಅನ್ನೋದು ಖಾತ್ರಿಯಾಗುತ್ತಿದ್ದಂತೆಯೇ ಇದು ರೌಡಿಸಂ ಪ್ರತೀಕಾರದ ಹತ್ಯೆ ಅನ್ನೋದು ಪೊಲೀಸರಿಗೆ ನಿಕ್ಕಿಯಾಗಿತ್ತು. ಆಗ ಅವರ ಸಮಸ್ತ ದೃಷ್ಟಿ ನೆಟ್ಟಿದ್ದು ಹುಣಸೂರು ಜೋಡಿ ಕೊಲೆಯಲ್ಲಿ ಬಂಧಿಯಾಗಿ ಈಗ ಹಿಂಡಲಗಾ ಜೈಲಿನಲ್ಲಿ ಮುದ್ದೆ ಮುರಿಯುತ್ತಿರುವ ಕ್ರಿಮಿನಲ್ ಕಾರ್ಪೊರೇಟರ್ ಅವ್ವಾ ಮಾದೇಶನ ಮೇಲೆ.

ಅದಕ್ಕೂ ಒಂದು ಕಾರಣವಿದೆ. ಅವ್ವಾ ಮಾದೇಶ ಮತ್ತು ಹೆಣವಾದ ದೇವೇಂದ್ರನ ನಡುವಿನ ದುಶ್ಮನಿ ಇಂದು ನಿನ್ನೆಯದಲ್ಲ. ಅಜಮಾಸು ಹದಿನೈದು ವರ್ಷಗಳ ಹಿಂದಿನಿಂದಲೂ ರಿಯಲ್ ಎಸ್ಟೇಟ್ ಮತ್ತು ರೌಡಿಸಂ ಪಟ್ಟಿನ ಕಾರಣಕ್ಕೆ ಇಬ್ಬರ ನಡುವೆ ವೈಮನಸ್ಸು ಇದ್ದೇ ಇತ್ತು. ಆದರೆ ಅದು ವಿಪರೀತಕ್ಕೆ ಹೋಗಿ ತಲುಪಿದ್ದು 2008ರಲ್ಲಿ. ಇಣಕಲ್ ಸರ್ಕಲ್ ಬಳಿ ಇರುವ ಹತ್ತಾರು ಎಕರೆ ಜಮೀನಿನ ವ್ಯವಹಾರವೊಂದಕ್ಕೆ ಅವ್ವಾ ಮಾದೇಶ ತನ್ನ ಜೊತೆಗಾರರಾದ ರಾಜೇಶ್, ರಾಮು ಸಮೇತ ಕೈಯಿಟ್ಟಿದ್ದ. ಅದರಲ್ಲಿ ಕೋಟ್ಯಂತರ ಹಣ ಮಾದೇಶನ ತಿಜೋರಿ ಸೇರಿತ್ತು. ಮೊದಲೇ ಮಾಡಿಕೊಂಡಿದ್ದ ಒಪ್ಪಂದದಂತೆ ಅದರಲ್ಲಿ ರಾಜೇಶ್, ರಾಮುಗೂ ಪಾಲು ಕೊಡಬೇಕಿತ್ತು. ಆದರೆ ಗರಿಗರಿ ನೋಟಿನ ಕಂತೆಗಳನ್ನು ನೋಡಿದ್ದೇ ತಡ ಅವ್ವಾ ಮಾದೇಶ ಉಲ್ಟಾ ಹೊಡೆದ. ಅವರಿಬ್ಬರಿಗೂ ದೋಖಾ ಬಗೆದು ಎಲ್ಲಾ ಹಣ ತಾನೊಬ್ಬನೇ ಇಟ್ಟುಕೊಂಡ.

ಇದರಿಂದ ಕನಲಿಹೋದ ರಾಜೇಶ್-ರಾಮು, ಅವ್ವಾ ಮಾದೇಶನ ಮೇಲೆ ಸಿಟ್ಟಿಗೆದ್ದಿದ್ದರು. ಆಗ ಅವರಿಗೆ ಜೊತೆಯಾದವನೇ ಈ ಪಡುವಾರಹಳ್ಳಿ ದೇವೇಂದ್ರ. ಅದೊಂದು ದಿನ ರಾಜೇಶ್ ಮತ್ತು ರಾಮು ತಮ್ಮ ಇಪ್ಪತ್ತು ಮಂದಿ ಪಟಾಲಮ್ಮಿನ ಸಮೇತ ಅವ್ವಾ ಮಾದೇಶನ ಮೇಲೆ ಮುರಕೊಂಡು ಬಿದ್ದು ಅದ್ಯಾವ ಪರಿ ಕೊಚ್ಚಿ ಹಾಕಿದ್ದರೆಂದರೆ ಅವ್ವಾ ಮಾದೇಶನೆಂಬ ಅಧ್ಯಾಯವೇ ಅಲ್ಲಿಗೆ ಖತಂ ಅಂತಲೇ ಹಂತಕರು ಭಾವಿಸಿದ್ದರು. ಆದರೆ ಮಾದೇಶನ ಅದೃಷ್ಟ ನೆಟ್ಟಗಿತ್ತು ಅನ್ನಿಸುತ್ತೆ, ಹರಿದು ಚಿಂದಿಯಾಗಿ ಹರಡಿಕೊಂಡಿದ್ದ ದೇಹದಲ್ಲೂ ಜೀವ ಕೊಸರಾಡುತ್ತಲೇ ಇತ್ತು. ಮೈತುಂಬಾ ಹೊಲಿಗೆ ಬಿಗಿದು, ರಕ್ತ ಸುರಿದು ಅವ್ವಾ ಮಾದೇಶನ ಜೀವ ಉಳಿಸಲು ವೈದ್ಯರ ತಂಡವೇ ಸಾಕುಸಾಕಾಗಿಹೋಗಿತ್ತು. ಕೊನೆಗೂ ಮಾದೇಶ ಬದುಕಿ ಬಂದಿದ್ದ ಜೊತೆಗೆ ಪಾತಕ ಪ್ರತೀಕಾರವೂ ಕೂಡಾ!



ರಾಜೇಶ್-ರಾಮು

ಮಾದೇಶನ ಪ್ರತೀಕಾರಕ್ಕೆ ಹೆದರಿ ರಾಜೇಶ್, ರಾಮು ಹುಣಸೂರಿನ ತೋಟದ ಮನೆಯೊಂದರಲ್ಲಿ ಅವಿತು ಕೊಂಡಿದ್ದರು. ಪೆಟ್ಟು ತಿಂದ ಅವ್ವಾ ಮಾದ[ೇಶ] ಸುಮ್ಮನಿರಬೇಕಲ್ಲ. ಅದ್ಹೇಗೊ ಅವರ ಅಡಗುದಾಣ ಪತ್ತೆಹಚ್ಚಿ ಸರಿರಾತ್ರಿಯಲ್ಲಿ ಅಟ್ಯಾಕ್ ಮಾಡಿದ ಮಾದೇ[ಶನ] ಟೀಮು ಮಲಗಿದ್ದ ರಾಜೇಶ್ ಮತ್ತು ರಾಮನಿಗೆ ಕಿಂಚಿತ್ ಸುಳಿವು ಕೊಡದೆ ಕೊಚ್ಚಿ ಹಾಕಿತ್ತು. ಅವತ್ತು ಹುಣಸೂ[ರು] ಇನ್ಸ್‌ಪೆಕ್ಟರ್‌ಗಳಾಗಿದ್ದ ಸುಂದರ್‌ರಾಜ್ ಮತ್ತು ಮುತ್ತುರಾ[ಜ್] ಬರೋಬ್ಬರಿ 72 ಸಾಕ್ಷಿಗಳನ್ನು ಕಲೆಹಾಕಿ ಅ[ವ್ವಾ] ಮಾದೇಶನನ್ನು ಎ-1 ಆಗಿ ಫಿಟ್ ಮಾಡಿ ರಾಮನಗ[ರ] ಜೈಲಿಗೆ ತಳ್ಳಿದ್ದರು. ಆ ಎಪ್ಪತ್ತೆರಡು ಸಾಕ್ಷಿಗಳಲ್ಲಿ ಮೊ[ದಲ] ಸಾಕ್ಷಿಯೇ ಪಡುವಾರಹಳ್ಳಿಯ ದಿವಂಗತ ದೇವೇಂದ್ರ.

ಅಷ್ಟೊತ್ತಿಗಾಗಲೇ ಪೊಲಿಟಿಕಲ್ ಲಿಂಕ್ ಬೆಳೆಸಿಕೊಂ[ಡಿದ್ದ] ಮಾದೇಶ, ರಾಮನಗರ ಸಬ್‌ಜೈಲಿನಲ್ಲಿ ತು[...] ಸಮಯವನ್ನೇನೂ ಕಳೆಯಲಿಲ್ಲ. ಬೇಲ್‌ನ ಮೇಲೆ ಆರಾ[ಮಾಗಿ] ಆಚೆಬಂದ. ಹಾಗೆ ಬಂದವನು ತನ್ನ ವಿರುದ್ಧ ಯಾರ[ು] ಸಾಕ್ಷಿ ನಿಂತಿದ್ದಾರೊ ಅವರಿಗೆಲ್ಲ ಬೆದರಿಸಲು ಶುರು ಮಾ[ಡಿದ]. ಅವ್ವಾನ ನಟೋರಿಯಸ್ ನೆಟ್‌ವರ್ಕ್‌ಗಳನ್ನು ನೋ[ಡಿ] ಕಂಗಾಲಾಗಿ ಹೋದ ದೇವೇಂದ್ರನಿಗೂ ಜೀವಭ[ಯ] ಶುರುವಾಗಿದ್ದು ಆಗಲೇ. ಕೋರ್ಟ್‌ನಲ್ಲಿ ಮೊದ[ಲು] ಮಾದೇಶನ ವಿರುದ್ಧ ಸಾಕ್ಷಿ ನುಡಿದಿದ್ದ ದೇವೇಂದ್ರ ಕೊ[...] ತನಗೂ ಈ ಪ್ರಕರಣಕ್ಕೂ ಸಂಬಂಧವೇ ಇಲ್ಲ ಎ[ಂದು] ವ್ಯತಿರಿಕ್ತ ಹೇಳಿಕೆ ಕೊಟ್ಟಿದ್ದರ ಹಿಂದೆಯೂ ಮಾದೇ[ಶನ] ಭಯವೇ ಎದ್ದು ಕಾಣುತ್ತಿತ್ತು. ಸುಳ್ಳು ಸಾಕ್ಷಿ ಹೇಳಿದ್ದ[ಕ್ಕೆ] ಸ್ವತಃ ಜಡ್ಜ್ ಸಾಹೇಬರೇ ದೇವೇಂದ್ರನ ಮೇಲೆ ಕ[ೇಸು] ದಾಖಲಿಸುವಂತೆ ಪೊಲೀಸರಿಗೆ ಸೂಚನೆ ಕೊಟ್ಟಿದ್ದ[ರು].

ಅಲ್ಲಿಂದಾಚೆಗೆ, ಪಾತಕ ಜಗತ್ತಿನಿಂದ ಕಳಚಿಕೊ[ಂಡ] ದೇವೇಂದ್ರ ಸೈಲೆಂಟಾಗಿಬಿಟ್ಟಿದ್ದ. ಸಣ್ಣಪುಟ್ಟ ರಿಯಲ್‌ಎಸ್[ಟೇಟ್] ವ್ಯವಹಾರಗಳಷ್ಟೇ ಅವನ ಕಸುಬುಗಳಾಗಿ ಬಿಟ್ಟಿದ್ದವು.

ಯಾರು ಈ ಅವ್ವಾ ಮಾದೇಶ

ಮೂವತ್ತು ವರ್ಷಗಳ ಹಿಂದೆ ಸರಸ್ವತಿಪುರಂ, ಕೆ.ಜಿ. ಕೊಪ್ಪಲಿಂದಾಚೆಗೆ ಕುವೆಂಪುನಗರವಿನ್ನು ಬೆಳೆದಿರಲಿಲ್ಲ. [...] ಲೇಟೆಸ್ಟ್ ಪ್ರಕಾಶನ ಕೊಲೆಯ ಪ್ರಕರಣದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿದ್ದು ಕೊಪ್ಪಲಿನ ಚಂದ್ರಿ. ಈತ ಆ ಕಾಲದ ನಟೋರಿಯಸ್ ರೌಡಿ. ಅವ್ವಾ ಮಾದೇಶ ಆಗಿನ್ನೂ ಬಚ್ಚಾ! ಹೆಬ್ಬಾಳದ ಹುಡುಗರೊಂದಿಗೆ ಗಲಾಟೆ ಮಾಡಿಕೊಂಡಿದ್ದ ಮಾದೇಶನನ್ನು ನಿಕಾಲಿ ಮಾಡಲು ಹೆಬ್ಬಾಳದ ಹುಡುಗರು ಸ್ಕೆಚ್ ಹಾಕಿ ಕೂತಿದ್ದರು. ಆಗ ಮಾದೇಶನ ನೆ[ರವಿಗೆ] ಬಂದಿದ್ದು ಇದೇ ಚಂದ್ರಿ. ಹೀಗೆ ಅವನ ಪಟಾಲಮ್ಮು ಸೇರಿಕೊಂಡ ಮಾದೇಶ ಸಣ್ಣಪುಟ್ಟ ರೋಲ್‌ಕಾಲ್ [...] ಮಾಡಿಕೊಂಡಿದ್ದನಷ್ಟೆ. ತನ್ನ ತಮ್ಮ ಮಾದೇವ ಹಾಗೂ ಪಾಲಹಳ್ಳಿಯ ಸಂಬಂಧಿಗಳೊಂದಿಗೆ ತನ್ನದೇ ಗ[ುಂಪು] ಕಟ್ಟಿಕೊಂಡು ಸಣ್ಣಗೆ ಸದ್ದು ಮಾಡಲಾರಂಭಿಸಿದ ಮಾದೇಶ ರೌಡಿಸಂನ ಪಟ್ಟಕ್ಕಾಗಿ ಮೈಸೂರಿನ ಕುಖ್ಯಾತ [...] ವಿದ್ಯಾರಣ್ಯಪುರಂನ ಗಣೇಶನ ಹತ್ಯೆಗೆ ಸಂಚು ಹೂಡಿ ಹಲ್ಲೆಗೆ ಯತ್ನಿಸಿದ್ದ. ಇಂದಿಗೂ ಚಾಲ್ತಿಯಲ್ಲಿರುವ ಗಣೇಶ [...] ಅವನ ಪಡೆ ಒಂಟಿಕೊಪ್ಪಲಿಗೆ ನುಗ್ಗಿ ಅವ್ವಾ ಮಾದೇಶನನ್ನು ಅಟ್ಟಾಡಿಸಿತ್ತು. ಇದರಿಂದ ಹೆದರಿದ ಅವ್ವಾ ಮಾ[ದೇಶ] ಕೆಲದಿನ ಊರನ್ನೇ ಬಿಟ್ಟಿದ್ದ. ಅಂದಹಾಗೆ, ಈ ಗಣೇಶನ ಅಂದಿನ ಕಾಲದ ಜೈರಾಜ್, ಕೊತ್ವಾಲ್ ರಾಮ[ಚಂದ್ರ] ಮುಂತಾದ ಭೂಗತ ಲೋಕದ ಪಾತಕಿಗಳೊಂದಿಗೆ ಸಂಬಂಧ ಹೊಂದಿದ್ದ. ಸಣ್ಣ ಮಾತಿಗಾಗಿ ಕುವೆಂಪುನ[ಗರದ] ಕೇಬಲ್ ಆಪರೇಟರ್ ಬಾಲುವಿನ ತಮ್ಮ ಬಲ್ಬ್‌ನನ್ನು ಗಣೇಶ ಅದ್ಯಾವ ರೀತಿ ಕೊಂದಿದ್ದನೆಂದರೆ ಮೈಸೂರಿನ[...] ಆ ಘಟನೆಯನ್ನು ಇವತ್ತಿಗೂ ಮರೆತಿಲ್ಲ. ಸೌದೆ ಸೀಳುವಂತೆ ಕೈಕಾಲುಗಳು ದೇಹ ಮುಂಡಗಳನ್ನು ಕತ್ತರಿಸಿ ಹ[...] ಬಿಸಾಕಿ ಹಿಂತಿರುಗಿ ಬರುವಾಗ ಪೊಲೀಸರಿಗೆ ರೆಡ್‌ಹ್ಯಾಂಡಾಗಿ ತಗುಲಿಕೊಂಡಿದ್ದ ಗಣೇಶ ಜೀವಾವಧಿ ಶಿಕ್ಷೆ ಅನುಭ[ವಿಸುತ್ತಾ] ಅವ್ವಾ ಮಾದೇಶ ಈಗಿರುವ ಹಿಂಡಲಗ ಜೈಲಿನಲ್ಲೇ ಇದ್ದಾನೆ.

ರೌಡಿ ಗಣೇಶ ಅಂದರ್ ಆದನಂತರ ಸಣ್ಣಪುಟ್ಟ ಡೀಲ್, ಬಡ್ಡಿ ವ್ಯವಹಾರ, ಕಂಡವರ ಸೈಟಿಗೆ ಬೇಲಿ ಸ[...] ರಿಯಲ್ ಎಸ್ಟೇಟ್ ದಂಧೆಯ ಮೂಲಕ ಕೋಟ್ಯಾಂತರ ರೂಪಾಯಿ ಹಣ ಮಾಡಿದ ಅವ್ವಾ ಮಾದೇಶ ಸಹಜವಾ[ಗಿ] ಈ ಭಾಗದ ರಾಜಕಾರಣಿಗಳಿಗೆ ಫೇವರಿಟ್ ಪಟುವಾದ. ಇವನನ್ನು ಬಳಸಿಕೊಂಡು ಅನೇಕ ಘಟಾನುಘಟಿ ರಾಜಕಾರ[ಣಿಗಳು] ತಮ್ಮ ವ್ಯವಹಾರ ಮುಗಿಸಿಕೊಂಡರು. ಅವರೇ ಇವನನ್ನು ರಾಜಕೀಯಕ್ಕೂ ಕರೆತಂದರು.

ಎರಡು ಬಾರಿ ನಗರಪಾಲಿಕೆ ಸದಸ್ಯನಾಗಿದುದ್ದಲ್ಲದೆ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆ[ಡಿಎಸ್] ಟಿಕೆಟ್‌ಗಾಗಿ ಪ್ರಯತ್ನ ನಡೆಸುತ್ತಿದ್ದ ಅವ್ವಾ ಮಾದೇಶನ ರಾಜಕೀಯ ಆಡಂಬರ ತಿಳಿಯಬೇಕಾದರೆ ಅವನು ಪ್ರತಿ[...] ಆಚರಿಸಿಕೊಳ್ಳುವ ಹುಟ್ಟುಹಬ್ಬದ ವೈಭವ ನೋಡಬೇಕು. ಇವನಿಗೆ ಬೆಂಗಾವಲಾಗಿ ನಿಂತ ಮತ್ತು ಇವನನ್ನು [...] ಕರಾಳ ಕಸುಬುಗಳಿಗೆ ಬಳಸಿಕೊಂಡ ರಾಜಕಾರಣಿಗಳೆಲ್ಲ ಅವತ್ತು ಹಾಜರಿದ್ದು ಇವನಿಗೆ ಶುಭ ಕೋರುತ್ತಾರೆ. [...] ಅವನ ಮನೆಯಿರುವ ಒಂಟಿಕೊಪ್ಪಲಿನ ಪ್ರಮುಖ ರಸ್ತೆಗಳೆಲ್ಲ ಬಂದ್ ಆಗಿರುತ್ತವೆ. ಅಷ್ಟು ಜನರನ್ನು ಸೇರಿಸಿರು[...] ಪೊಲೀಸರೇ ಇವನಿಗೆ ಸೆಲ್ಯೂಟ್ ಹೊಡೆಯುವ ಮಟ್ಟಕ್ಕೆ ಹವಾ ಮಡಗಿದ್ದಾನೆ. ಆದರೆ ಅವ್ವಾ ಮಾದೇಶ ಜೀವ[ಾವಧಿ] ಶಿಕ್ಷೆಗೆ ಜೈಲು ಪಾಲಾಗುತ್ತಿದ್ದಂತೆಯೇ ಅವನ ಹುಟ್ಟುಹಬ್ಬದ ಫೋಟೊ ಆಲ್ಬಮ್‌ಗಳಲ್ಲಿ ಪ್ರತ್ಯಕ್ಷ ಸಾಕ್ಷಿ[ಗಳಾಗಿ] ಮಿಂಚುತ್ತಿರುವ ಅದೇ ರಾಜಕಾರಣಿಗಳು, ಶಾಸಕರು, ಕಾರ್ಪೊರೇಟರ್‌ಗಳು ಅವ್ವಾ ಮಾದೇಶ ಯಾರೆಂ[ದು] ತಮಗೆ ಗೊತ್ತಿಲ್ಲ ಅಂತ ಕತೆ ಕಟ್ಟುತ್ತಿದ್ದಾರೆ.


ಬಹುಶಃ ಇಂತಹ ಸೋಗಲಾಡಿಗಳಿಗೆಲ್ಲ 'ಜೈಲಲ್ಲಿದ್ದರೂ ನಾನಿನ್ನು ಪವರ್‌ಫುಲ್' ಅಂತ ತೋರಿಸುವುದಕ್ಕೋ[ಸ್ಕರ] ಪಡುವಾರಹಳ್ಳಿ ದೇವನ ಕೊಲೆ ಮಾಡಿಸಿದನೋ ಏನೋ....?

ಮೈಸೂರು ಪೋಲೀಸರೇ, ಪ್ಲೀಸ್ ಎಚ್ಚೆತ್ತುಕೊಳ್ಳಿ!

ಮೈಸೂರು ನಗರದಲ್ಲಿ ಜನವರಿಯಿಂದ ಇಲ್ಲಿಯವರೆಗೆ ಬರೋಬ್ಬರಿ 15 ಕೊಲೆಗಳಾಗಿವೆ. ಕಳೆದ ವರ್ಷ 23 ಕೊಲೆಗಳು ನಡೆದಿದ್ದು, ಅದರಲ್ಲಿ ಆರೋಪಿಗಳು ಪತ್ತೆಯಾದದ್ದು 17 ಪ್ರಕರಣಗಳಲ್ಲಿ ಮಾತ್ರ. ಇನ್ನುಳಿದ 6 ಪ್ರಕರಣಗಳಲ್ಲಿ ಕೊಲೆಗಾರರನ್ನು ಪತ್ತೆಹಚ್ಚಲು ಪೊಲೀಸರಿಗೆ ಸಾಧ್ಯವೇ ಆಗಿಲ್ಲ. ಕಳೆದ ಒಂದು ತಿಂಗಳಲ್ಲೇ ನಾಲ್ಕು ಕೊಲೆಗಳು ನಡೆದಿರೋದು ಮೈಸೂರಿನಲ್ಲಿ ಪೊಲೀಸ್ ವ್ಯವಸ್ಥೆಯ ವೈಫಲ್ಯವನ್ನು ಎತ್ತಿ ತೋರಿಸುತ್ತಿವೆ.

ಮೈಸೂರು ನಗರಕ್ಕೆ ಕಸ್ತೂರಿರಂಗನ್ ಪೊಲೀಸ್ ಕಮೀಷನರ್ ಆಗಿದ್ದ ಕಾಲದಲ್ಲಿ ರಚಿಸಲ್ಪಟ್ಟ ರೌಡಿ ನಿಗ್ರಹದಳ ಮೈಸೂರಿನ ಪುಡಿ ರೌಡಿಗಳನ್ನೆಲ್ಲ ಮಟ್ಟ ಹಾಕಿದ್ದಲ್ಲದೆ ಬೆಂಗಳೂರಿನಲ್ಲಿದ್ದುಕೊಂಡೇ ಮೈಸೂರಿಗೆ ತಮ್ಮ ವ್ಯಾಪ್ತಿ ವಿಸ್ತರಿಸುತ್ತಿದ್ದ ಭೂಗತ ಪಾತಕಿಗಳ ಬಾಲ ಕಟ್ ಮಾಡಿತ್ತು. ಪಾತಕ ಕ್ರಿಮಿಗಳಿಗೆಲ್ಲ ಬದಲಿ ಜೀವನೋಪಾಯಕ್ಕೆ ದಾರಿ ಕಲ್ಪಿಸಿದ ಖ್ಯಾತಿಯೂ ಆ ನಿಗ್ರಹದಳಕ್ಕೆ ಸಲ್ಲುತ್ತದೆ. ಆದರೆ ಇತ್ತೀಚೆಗೆ ಮತ್ತೆ ರೌಡಿ ಅಟ್ಟಹಾಸ ವಿಪರೀತವಾಗುತ್ತಿದ್ದು ಮೈಸೂರು ಪೊಲೀಸರು ಮೈಮರೆಯುತ್ತಿದ್ದಾರಾ ಅನ್ನೋ ಆತಂಕ ಜನರನ್ನು ಕಾಡಲು ಶುರು ಮಾಡಿದೆ.

ಯಾದವಗಿರಿಯ ತುಳಸಿ ಜ್ಯೂಯಲರ್ ಕುಟುಂಬದ ವಸುಮತಿ ಕೊಲೆ ಪ್ರಕರಣ, ಆರ್‌ಎಸ್‌ಎಸ್ ಕಾರ್ಯಕರ್ತ ರಾಜು ಕೊಲೆ ಪ್ರಕರಣ ಮತ್ತು ಅದನ್ನೇ ಮುಂದಿಟ್ಟುಕೊಂಡು ಬಿಜೆಪಿಗಳು ನಡೆಸಿದ ದಾಂಧಲೆ, ಮುಸ್ಲಿಂ ಅಪರಾಧಿಯೊಬ್ಬನ ಕೊಲೆ ಪ್ರಕರಣ, ಈಗ ದೇವು ಹತ್ಯೆ- ಹೀಗೆ ಸಾಲುಸಾಲು ಕೃತ್ಯಗಳು ಜರುಗುತ್ತಿರುವುದು ಪೊಲೀಸ್ ವ್ಯವಸ್ಥೆಯನ್ನು ಅಣಕಿಸುತ್ತಿರುವಂತಿದೆ. ಪೊಲೀಸ್ ಇಲಾಖೆಯ ಕೆಲ ಅಧಿಕಾರಿಗಳು ಬಹಳ ವರ್ಷಗಳಿಂದ ಮೈಸೂರಿನಲ್ಲೇ ಬೇರೂರಿದ್ದು ಇಲ್ಲಿನ ಗಾಂಜಾ ವ್ಯವಹಾರ, ಹೆಣ್ಮಕ್ಕಳ ಕಳ್ಳಸಾಗಾಣಿಕೆ, ವೇಶ್ಯಾವಾಟಿಕೆಯಂತಹ ಜಾಡ್ಯಗಳನ್ನೇ ತಮ್ಮ ಆದಾಯದ ಮೂಲವಾಗಿಸಿಕೊಂಡಿದ್ದಾರೆ. ಅದರಲ್ಲೂ



ಕಮೀಷನರ್ ದಯಾನಂದ್

ಹೈಟೆಕ್ ತಲೆಹಿಡುಕ ಸ್ಯಾಂಟ್ರೋ ರವಿಗೆ ಪೊಲೀಸರೇ ರಕ್ಷಣೆ ಕೊಡುತ್ತಿರುವುದು ರಹಸ್ಯ ಸಂಗತಿಯೇನೂ ಅಲ್ಲ. ಇಂತಹ ಭ್ರಷ್ಟ ಪೊಲೀಸರ ಸಪೋರ್ಟ್ ಇರುವುದರಿಂದಲೇ ಇವನ ದಂಧೆಯನ್ನು ಬಯಲು ಮಾಡಿದ ಒಡನಾಡಿ ಸಂಘಟನೆಯ ಸ್ಟ್ಯಾನ್ಲಿ-ಪರುಶುರನ್ನೇ ಕೊಲೆ ಮಾಡಲು ಯತ್ನಿಸುವಷ್ಟು ಆತ ಹದ್ದುಮೀರಿ ಹೋದದ್ದು. ಅದಕ್ಕಿಂತಲೂ ವಿಪರ್ಯಾಸವೆಂದರೆ ಇಂಥಾ ತಲೆಹಿಡುಕನನ್ನು ಬಂಧಿಸಿ ಜೈಲಿಗಟ್ಟಬೇಕಿದ್ದ ಪೊಲೀಸರೇ ಅವನ ಕಾಸು ತಿಂದವರಂತೆ ಸ್ಟ್ಯಾನ್ಲಿ-ಪರಶುರನ್ನು ಬಂಧಿಸಿ ಕೋರ್ಟ್‌ಗೆ ಅಲೆಸಿದ್ದು.

ಇನ್ನು ರೌಡಿಸಂ, ಇಸ್ಪೀಟ್ ಕ್ಲಬ್‌ಗಳು, ಕ್ರಿಕೆಟ್ ಬೆಟ್ಟಿಂಗ್‌ನಂತಹ ಚಟುವಟಿಕೆಗಳಿಗಿನ್ನೂ ಕಡಿವಾಣ ಬಿದ್ದಿಲ್ಲ. ಹಿಂದೆ ಮೈಸೂರಿನ ಸಿಸಿಬಿ ವಿಭಾಗದಲ್ಲಿ ಹಿರಿಯ ಅಧಿಕಾರಿಯಾಗಿದ್ದ ವಿಜಯ್‌ಕುಮಾರ್ ಒಬ್ಬನ ನಿದರ್ಶನ ಸಾಕು ಇಲ್ಲಿ ಎಷ್ಟು ಪೊಲೀಸ್ ವ್ಯವಸ್ಥೆ ಗಬ್ಬೆದ್ದು ಹೋಗಿದೆ ಅನ್ನೋದನ್ನು ಸಾಬೀತುಮಾಡಲು. ಯಾವುದೇ ಲಿಟಿಗೇಷನ್ ಸೈಟಾಗಿರಲಿ ಇವನ ಬಳಿ ಬಂದರೆ ಮಾಲೀಕ ಹಾಗೂ ಕೊಂಡವನು ಇಬ್ಬರಿಗೂ ನಾಮ. ಇವನ ಹೆಸರಿಗೆ ಆ ಸೈಟು ಮೀಸಲು. ಹೀಗೆ ಮಾಡಿಯೇ ಅಜಮಾಸು 300 ಸೈಟುಗಳ ಒಡೆಯನಾಗಿದ್ದ ಇವನ ಮೇಲೆ ಸ್ವತಃ ಸಿಸಿಬಿ ಪೊಲೀಸರೇ ಕೇಸ್ ದಾಖಲಿಸುತ್ತಾರೆಂದರೆ ಏನೆನ್ನಬೇಕು. ಅದೇರೀತಿ ಕೃಷ್ಣರಾಜ ಠಾಣೆಯ ಇನ್ಸ್‌ಪೆಕ್ಟರ್‌ರೊಬ್ಬ ಅಸಹಾಯಕ ವಿಧವೆಯೊಬ್ಬಳ ಮನೆ ಕೆಡವಲು ರಿಯಲ್ ಎಸ್ಟೇಟ್ ಕುಳಗಳೊಂದಿಗೆ ಕೈಜೋಡಿಸಿ ಸಸ್ಪೆಂಡ್ ಆಗಿದ್ದೂ ಉಂಟು. ಮೇಟಗಳ್ಳಿ ಠಾಣೆಯ ಮತ್ತೋರ್ವ ಅಧಿಕಾರಿ ಕತೆಯೂ ಇದೆ. ದೇವರಾಜ ಪೊಲೀಸ್ ಠಾಣೆಯ ಪೇದೆಯೊಬ್ಬ ಅದೇ ಠಾಣೆಯಲ್ಲಿ ಕಳೆದ 25 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಹೆಡ್‌ಕಾನ್ಸ್‌ಟೇಬಲ್, ಎಎಸ್‌ಐ, ಎಸ್‌ಐ ಆಗಿ ಬಡ್ತಿ ಹೊಂದಿದ್ದು, ಸಹೋದ್ಯೋಗಿಗಳಿಗೆ ರಜೆ ಮಂಜೂರು ಮಾಡುವುದಕ್ಕೂ 'ಸಮ್‌ಥಿಂಗ್'ಗೆ ಕೈಯೊಡ್ಡಿ ಕೂರುತ್ತಾನೆ.

ಮೈಸೂರಿನ ಮಂಡಿ, ಲಷ್ಕರ್,, ದೇವರಾಜ, ಉದಯಗಿರಿ ಠಾಣೆಗಳಿಗೆ ವರ್ಗವಾಗಿ ಬರಲು ಲಕ್ಷಾಂತರ ಹಣ ಸುರಿಯುತ್ತಾರೆಂದರೆ ಈ ವ್ಯಾಪ್ತಿಗಳಲ್ಲಿ ಖಾಕಿ ಮಂದಿಗಳು ಕಂಡುಕೊಂಡಿರುವ ಆಮದನಿಯ ಮೂಲ ಅದಿನ್ನೆಂತದ್ದಿರಬೇಡ. ಖುದ್ದು ಮುಖ್ಯಮಂತ್ರಿಗಳ ತವರುಜಿಲ್ಲೆಯಲ್ಲೇ ಈ ಪರಿ ಪೊಲೀಸ್ ವ್ಯವಸ್ಥೆ ಭ್ರಷ್ಟವಾಗಿದೆಯೆಂದರೆ ಏನೆನ್ನಬೇಡ. ಮುಖ್ಯಮಂತ್ರಿಗಳು ಇತ್ತ ಗಮನ ಹರಿಸಬೇಕಾದ ಜರೂರಿದೆ. ಅದಕ್ಕಿಂತ ಮೊದಲು ಪೊಲೀಸ್ ಕಮೀಷನರ್ ದಯಾನಂದ್ ಸಾಹೇಬರು ಭ್ರಷ್ಟ ಅಧಿಕಾರಿಗಳಿಗೆ ಬಿಸಿ ಮುಟ್ಟಿಸದಿದ್ದರೆ ಮೈಸೂರು ಮತ್ತೊಂದು ಪಾತಕ ನಗರಿಯಾಗುವುದರಲ್ಲಿ ಅನುಮಾನವೇ ಇಲ್ಲ.

ಹೇಳಿದೆ ಹೆಲ್ಪ್ ಮಾಡಿದ್ದರಿಂದ ಅವ್ವಾ ಮಾದೇಶ ತನ್ನನ್ನು ಮಾಫಿ ಮಾಡಿರುತ್ತಾನೆ ಅಂತ ಭ್ರಮಿಸಿಕೊಂಡಿದ್ದ ದೇವೇಂದ್ರ ಪಡುವಾರಹಳ್ಳಿಗೆ ತನ್ನನ್ನು ಸೀಮಿತ ಮಾಡಿಕೊಂಡಿದ್ದ. ಆದರೂ ಮತ್ತೊಂದು ಯಡವಟ್ಟಿನಲ್ಲಿ ಆತ ಅವ್ವಾ ಮಾದೇಶನ ಕೆಂಗಣ್ಣಿಗೆ ಗುರಿಯಾಗಬೇಕಾದ ಸಂದರ್ಭ ಒದಗಿಬಂದಿತ್ತು.

ಮಾದೇಶನ ಭಂಟ

ಹುಣಸೂರಿನ ಜೋಡಿ ಕೊಲೆ ನಡೆದು ಎರಡು ವರ್ಷವಾಗಿತ್ತಷ್ಟೆ. ಕೇಸ್‌ನಲ್ಲಿ ಉಲ್ಟಾ ಸಾಕ್ಷಿ ಹೊಡೆದ ದೇವೇಂದ್ರನೂ ತಣ್ಣಗಾಗಿದ್ದ. ಆಗಲೇ ನೋಡಿ ನಡೆದದ್ದು ಪಡುವಾರಹಳ್ಳಿ ಕರಿಯಪ್ಪನ ಹತ್ಯೆಯೆಂಬ ಹೊಸ ತಿರುವು. ಈ ಕರಿಯಪ್ಪ ಬೇರಾರೂ ಅಲ್ಲ, ಅವ್ವಾ ಮಾದೇಶನ ಬಲಗೈ ಭಂಟ. ದೇವೇಂದ್ರನ ಪಡುವಾರಹಳ್ಳಿಯವನೇ. ಜಯಲಕ್ಷ್ಮಿಪುರಂ ಹಾಗೂ ಸರಸ್ವತಿಪುರಂ ಠಾಣೆಯಲ್ಲಿ ರೌಡಿಶೀಟರ್ ಆಗಿ ಇವನ ಮೇಲೆ ಹಲವಾರು ಪ್ರಕರಣಗಳು ದಾಖಲಾಗಿದ್ದವು. ಈತ ಒಳ್ಳೆಯ ಫೈಲ್ವಾನ್ ಕೂಡಾ ಹೌದು. ಅದಕ್ಕಿಂತ ಹೆಚ್ಚಾಗಿ ಹುಣಸೂರು ಜೋಡಿಕೊಲೆ ಆರೋಪದಲ್ಲಿ ಅವ್ವಾ ಮಾದೇಶನ ಸಂಗಡ ಜೈಲಿಗೂ ಹೋಗಿಬಂದಿದ್ದ. ತೊಣಚಿಕೊಪ್ಪಲಿನ ಬಿಸಿಲು ಮಾರಮ್ಮ ದೇವಾಲಯದ ಮುಂದೆ ರಿಯಲ್ ಎಸ್ಟೇಟ್ ಆಫೀಸ್ ನಡೆಸುತ್ತಿದ್ದ ಕರಿಯಪ್ಪ ಕ್ರಷರ್, ಸೆಂಟ್ರಿಂಗ್ ಮೆಟೀರಿಯಲ್ಸ್ ಮೊದಲಾದ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಬಾಡಿಗೆ ನೀಡುವ ಕಾಯಕವನ್ನೂ ಮಾಡಿಕೊಂಡಿದ್ದ. ಇನ್ನು ಫೈನಾನ್ಸ್ ವ್ಯವಹಾರವಂತೂ ಇದ್ದೇ ಇತ್ತು. ಜನತಾ ನಗರ, ತೊಣಚಿಕೊಪ್ಪಲು, ವಿಜಯಬ್ಯಾಂಕ್ ರಸ್ತೆ ಹಾಗೂ ಸುತ್ತಮುತ್ತಲಿನ ಎಲ್ಲಾ ರೆವಿನ್ಯೂ ಸೈಟುಗಳ ವ್ಯವಹಾರದಲ್ಲಿ ಕೈಹಾಕುತ್ತಿದ್ದ ಕರಿಯಪ್ಪನಿಗೆ ಲಿಟಿಗೇಷನ್ ಸೈಟುಗಳೆಂದರೆ ಹಬ್ಬ. ಅವ್ವಾ ಮಾದೇಶನ ಹೆಸರಿನಲ್ಲಿ ರಾಜಿ ಪಂಚಾಯ್ತಿ ಮಾಡಿಸಿದಂತೆ ಮಾಡಿ ವಾದಿಗಳಿಬ್ಬರಿಗೂ ಉಂಡೆನಾಮ ಇಡಿ ಸೈಟನ್ನು ತನ್ನ ಹೆಸರಿಗೇ ಬರೆಸಿಕೊಳ್ಳುತ್ತಿದ್ದ. ಹಾಗೆ ನೋಡಿದರೆ, ಇವನ ಅಣ್ಣ ವಿಶ್ವ ಸಭ್ಯಸ್ಥ ಮನುಷ್ಯ. ಮೈಸೂರು ವಿವಿಯಲ್ಲಿ ಉದ್ಯೋಗಿ. ಆದರೆ ಕರಿಯಪ್ಪ ಮಾತ್ರ ಅವ್ವಾ ಮಾದೇಶನ ಸಹವಾಸಕ್ಕೆ ಬಿದ್ದು ಅಡ್ಡದಾರಿ ಹಿಡಿದಿದ್ದ.

ಈ ನಡುವೆ ಗ್ರಾಮದೇವತೆಯ ಹಬ್ಬದ ವಿಚಾರ ವೊಂದರಲ್ಲಿ ದೇವೇಂದ್ರನ ಗ್ಯಾಂಗ್, ವಕೀಲ ರಾಮಕೃಷ್ಣ ಎಂಬುವವರ ಗ್ಯಾಂಗ್ ಮೇಲೆ ಗಲಾಟೆ ಮಾಡಿತ್ತು. ಆಗ ಕರಿಯಪ್ಪ ರಾಮಕೃಷ್ಣರ ಪರವಾಗಿ ಬಂದುನಿಂತಿದ್ದ. ಆಗಿನಿಂದಲೂ ದೇವೇಂದ್ರ ಮತ್ತು ಕರಿಯಪ್ಪನ ನಡುವೆ ದುಶ್ಮನಿ ಮಡುಗಟ್ಟಿತ್ತು. ಮುಂದೊಮ್ಮೆ ವಿಜಯ ಬ್ಯಾಂಕ್ ಬಳಿಯಿರುವ ನಿವೇಶನವೊಂದರ ವಿಚಾರದಲ್ಲಿ ದೇವು ಗ್ಯಾಂಗ್‌ಗೂ, ಕರಿಯಪ್ಪನಿಗೂ ನೇರಾನೇರ ಗಲಾಟೆಯಾಗಿತ್ತು. ಅದನ್ನೇ ಮನಸ್ಸಿನಲ್ಲಿಟ್ಟುಕೊಂಡ ದೇವೇಂದ್ರ 2010ರ ಅಕ್ಟೋಬರ್ 4ರ ಸಂಜೆ ಸುಮಾರು 7 ಗಂಟೆಗೆ ಅಶೋಕ, ಮಂಜೇಶ, ಹೇಮಂತ, ಪ್ರವೀಣ, ರಮೇಶ, ವಿಜಯಕುಮಾರ, ಚಂದ್ರ, ಶೀನ, ಪಲ್ಲಿ ಮೊದಲಾದ ಸಹಚರರ ಜೊತೆ ಕರಿಯಪ್ಪನ ರಿಯಲ್ ಎಸ್ಟೇಟ್ ಕಚೇರಿ ಮೇಲೆ ದಾಳಿ ಮಾಡಿ ಭೀಕರವಾಗಿ ಹತ್ಯೆಗೈದಿದ್ದ. ಅವತ್ತು ಶ್ರೀಧರ್, ಮೀಣ ಎಂಬ ಗೆಳೆಯನ ಜೊತೆಗೆ ಆರಾಮಾಗಿ ಹರಟುತ್ತಾ ಕೂತಿದ್ದ ಕರಿಯಪ್ಪನನ್ನು ಹಂತಕ ಪಡೆ ಅದೆಷ್ಟು ವಿಕಾರವಾಗಿ ಕೊಚ್ಚಿ ಹಾಕಿತ್ತೆಂದರೆ ಮುಂಡದ ಕುರುಹೇ ಇಲ್ಲದೆ ರಕ್ತದ ಹೊಳೆಯಲ್ಲಿ ಮಿದುಳು ಕಚೇರಿ ತುಂಬಾ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಸರಸ್ವತಿಪುರಂ ಪೊಲೀಸ್ ಠಾಣೆಯವರು ಸೆಕ್ಷನ್ 302 ಐಪಿಸಿ 34 ರನ್ವಯ ಕೇಸ್ ನಂಬರ್ 230/10 ಪ್ರಕರಣ ದಾಖಲಿಸಿ ದೇವು ಮತ್ತು ಟೀಂನ್ನು ಜೈಲಿಗಟ್ಟಿದ್ದರು. ಹಲವು ವರ್ಷಗಳ ನಂತರ ಜಾಮೀನು ಪಡೆದು ಹೊರಬಂದ ದೇವು ಮೊದಮೊದಲು 'ಕರಿಯಪ್ಪನ ಕತೆ ಮುಗೀತು, ಇನ್ನು ನನ್ನ ಮುಂದಿನ ಟಾರ್ಗೆಟ್ ಅವ್ವಾ ಮಾದೇಶನೆ' ಎನ್ನುತ್ತಿದ್ದನಾದರೂ ವಯಸ್ಸು 'ಮಾಗಿದಂತೆ ಮೆತ್ತಗಾಗಿ ರೌಡಿಸಂ ರಗಡಿನಿಂದಲೇ ಹಿಂದೆ ಸರಿದಿದ್ದ. ಕೋರ್ಟ್‌ನಲ್ಲಿ ನಡೆಯುತ್ತಿರುವ ಕರಿಯಪ್ಪ ಕೊಲೆ ಪ್ರಕರಣದ ವಿಚಾರಣೆ ಅಂತಿಮ ಹಂತಕ್ಕೆ ಬಂದು ತಲುಪಿದ್ದು ದೇವೇಂದ್ರ ಮತ್ತವನ ಸಂಗಡಿಗರಿಗೆ ಶಿಕ್ಷೆಯಾಗುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಈ ಎರಡೂ ವಿಚಾರಗಳಿಂದ ಅವ್ವಾ ಮಾದೇಶ (ಜೋಡಿ ಕೊಲೆ ಪ್ರಕರಣ ಮತ್ತು ಕರಿಯಪ್ಪನ ಹತ್ಯೆ), ದೇವೇಂದ್ರನ ಮೇಲೆ ಕತ್ತಿ ಮಸೆಯುತ್ತಲೇ ಇದ್ದನಾದರೂ ಪಾಲಿಟಿಕ್ಸ್‌ನಲ್ಲಿ ಆಳವಾಗಿ ಬೇರೂರಬೇಕು ಮತ್ತು ಆದಷ್ಟು ಬೇಗ ಜೋಡಿ ಕೊಲೆ ಪ್ರಕರಣದಿಂದ ಕ್ಲೀನ್‌ಚಿಟ್ ಪಡೆಯಬೇಕೆಂಬ ಪ್ರಯತ್ನದಲ್ಲಿದ್ದ ಮಾದೇಶ, ದೇವೇಂದ್ರನನ್ನು ಟಾರ್ಗೆಟ್ ಮಾಡಿಕೊಂಡಿರಲಿಲ್ಲ, ದೇವೇಂದ್ರನೂ ಕರಿಯಪ್ಪನ ಕೊಲೆ ಪ್ರಕರಣದ ನಂತರ ಸಂಪೂರ್ಣ ಮೆತ್ತಗಾಗಿ ಸೈಲೆಂಟಾಗಿಬಿಟ್ಟಿದ್ದ.

ಮಾದೇಶನ ಎಲ್ಲಾ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿದ್ದು ಇದೇ ಫೆಬ್ರವರಿ 26ರಂದು ನ್ಯಾಯಾಧೀಶ ವಿಜಯ್ ಕುಮಾರ್ ಎಂ. ಆನಂದ್ ಶೆಟ್ಟಿಯವರು ಬರೆದಿಟ್ಟ ತೀರ್ಪು. ದೇವೇಂದ್ರ ಹಾಗೂ ಮತ್ತೊಬ್ಬ ಪ್ರಧಾನ ಸಾಕ್ಷಿ ಸುನೀಲನಂತೆ ನಾಕಷ್ಟು ಸಾಕ್ಷಿಗಳು ಉಲ್ಟಾ ಹೊಡೆದರೂ ಸಾಂದರ್ಭಿಕ ಸಾಕ್ಷಿಗಳನ್ನು ಆಧಾರವಾಗಿಟ್ಟುಕೊಂಡ ಕೋರ್ಟು, ಜೆಡಿಎಸ್ ಕಾರ್ಪೊರೇಟರ್ ಅವ್ವಾ ಮಾದೇಶ, ಅವನ ತಮ್ಮ ಮಂಜುನಾಥ ಹಾಗೂ ಮತ್ತವರ ಆರು ಮಂದಿ ಸಹಚರರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತ್ತು. ಮುಂದಿನ ಎಲೆಕ್ಷನ್ ವೇಳೆಗೆ ನರಸಿಂಹರಾಜು ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಬೇಕೆಂದು ತಯಾರಿ ನಡೆಸಿದ್ದ ಮಾದೇಶನಿಗೆ ಆ ತೀರ್ಪು ಅಕ್ಷರಶಃ ಆಘಾತ ತಂದಿತ್ತು. ಮೊದಲು ರಾಮನಗರದ ಸಬ್‌ಜೈಲಿಗೆ ಮಾದೇಶನನ್ನು ತಳ್ಳಲಾಯಿತಾದರೂ ಅವನ ಪಾತಕ ಪ್ರಭಾವವನ್ನು ಅರಿತ ಪೊಲೀಸರು ಸೀದಾ ಹಿಂಡಲಗ ಜೈಲಿಗೆ ತಳ್ಳಿದ್ದಾರೆ. ತನಗಾದ ಹೀನಗತಿಗೆ ರೋಷಗೊಂಡಿರುವ ಅವ್ವಾ ಮಾದೇಶ ಹತಾಶೆಯನ್ನೆಲ್ಲ ತನ್ನ ಹಳೆಯ ಪ್ರತೀಕಾರಗಳ ಮೇಲೆ ತೀರಿಸಿಕೊಳ್ಳುತ್ತಿದ್ದಾನೆನ್ನುವ ಮಾತಿಗೆ ದೇವೇಂದ್ರನ ಹತ್ಯೆ ಪುರಾವೆ ಒದಗಿಸುತ್ತಿರುವಂತಿದೆ.

ಬಹುಕೋಟಿ ಸುಪಾರಿ ಕಿಲ್ಲಿಂಗ್?

ಇತ್ತ ಪಡುವಾರಹಳ್ಳಿಯಲ್ಲಿ ದೇವೇಂದ್ರನ ಹೆಣ ಬಿದ್ದು ಪೊಲೀಸ್ ರಿಜಿಸ್ಟರ್‌ನಲ್ಲಿ ಕೇಸು ದಾಖಲಾಗುತ್ತಿದ್ದಂತೆಯೇ ಪಡುವಾರಹಳ್ಳಿಯ ಪವನ್‌ಕುಮಾರ್, ಕಾರ್ತಿಕ್, ಹೆಬ್ಬಾಳಿನ ರಾಕಿ, ಶ್ರೀರಂಗಪಟ್ಟಣ ತಾಲೂಕಿನ ಪಂಪ್‌ಹೌಸಿನ ರಮೇಶ್, ಗಂಜಾಂನ ಶಿವರಾಜು ಎಂಬುವವರು ನಾವೇ ಕರಿಯಪ್ಪನ ಕೊಲೆಯ ಪ್ರತೀಕಾರವಾಗಿ ದೇವೇಂದ್ರನನ್ನು ಕೊಲೆ ಮಾಡಿರುವುದಾಗಿ ವಕೀಲರೊಂದಿಗೆ ಜಯಲಕ್ಷ್ಮಿಪುರಂ ಠಾಣೆಗೆ ಬಂದು ಶರಣಾಗಿದ್ದರು. ಅಸಲೀ ಹಂತಕರನ್ನು ರಕ್ಷಿಸಿ ತನಿಖೆಯ ದಿಕ್ಕು ತಪ್ಪಿಸಲು ಹೆಣೆಯಲಾದ ಕಾಗಕ್ಕಗುಬ್ಬಕ್ಕನ ಕಥೆ ಇದೆಂಬುದು ಪೊಲೀಸರಿಗೂ ಮನದಟ್ಟಾಗಿತ್ತು. ಆದರೂ ಅವರನ್ನು ವಶಕ್ಕೆ ತೆಗೆದುಕೊಂಡು ಕೊಲೆಯ ಸಂಚನ್ನು ಬೇಧಿಸಲು ಉನ್ನತಾಧಿಕಾರಿಗಳ ಮಟ್ಟದಲ್ಲಿ ತನಿಖೆ ನಡೆಸುತ್ತಿದ್ದಾರೆ. ಶರಣಾಗಿರುವವರಲ್ಲಿ ಪ್ರಮುಖ ಆರೋಪಿಯಾಗಿರುವ ಪವನ್‌ನ ಸಹಚರರಾದ ಸುನೀಲ್ ಕುಮಾರ್ ಅಲಿಯಾಸ್ ರಘು, ಸಿ.ರಾಕೇಶ್ ಅಲಿಯಾಸ್ ರಾಕಿ, ಶಿವರಾಜ್ ಅಲಿಯಾಸ್ ಕರಿಯ, ಪಾಲಹಳ್ಳಿಯ ಕಾರ್ತಿಕ್, ಪಡುವಾರಹಳ್ಳಿಯ ಪದ್ಮನಾಭ ಅಲಿಯಾಸ್ ಪದ್ದಣ್ಣ ವಿನಾಯಕನಗರದ ಹೆಚ್.ಪಿ. ಕಾರ್ತಿಕ್, ಗುರುದತ್ತ ಅಲಿಯಾಸ್ ಗುರು ಎಂಬುವವರನ್ನೆಲ್ಲ ಗುಡ್ಡೆ ಹಾಕಿಕೊಂಡಿರುವ ಪೊಲೀಸರು ವರ್ಕ್‌ಔಟ್ ಶುರುವಿಟ್ಟುಕೊಂಡಿದ್ದಾರೆ. ಆದರೆ ಕೊಲೆ ಮಾಡಿದವರೇ ಸಲೀಸಾಗಿ ಬಂದು ಸರೆಂಡರ್ ಆಗುವಷ್ಟು ಪ್ರಕರಣ ಸರಳವಾಗಿಲ್ಲ ಅನ್ನೋದು ಮಾತ್ರ ಸತ್ಯ.

ಕೊಲೆಗೆ ಬಳಸಲಾಗಿದ್ದ ಬೊಲೆರೋ (ಕೆಎ-02-ಪಿ-804) ವಾಹನ ನಾಗನಹಳ್ಳಿಯಲ್ಲಿ ಅನಾಥವಾಗಿ ಪತ್ತೆಯಾಗಿತ್ತು. ಈ ಕಾರು ಅವ್ವಾ ಮಾದೇಶನ ಜೊತೆ ಸದ್ಯ ಹಿಂಡಲಗಾ ಜೈಲಿನಲ್ಲಿರುವ ಚಂದನ್‌ಗೆ ಸೇರಿದ್ದು. ಆತ ಜೈಲುಪಾಲಾದ ನಂತರ ಕರಿಯಪ್ಪನ ಸಂಬಂಧಿಕನಾದ ಪವನ್‌ಕುಮಾರ್‌ನ ವಶದಲ್ಲಿತ್ತು, ಅಷ್ಟಾದರೂ ಈಗ ಶರಣಾಗಿರುವ ಆರೋಪಿಗಳೇ ದೇವೇಂದ್ರನನ್ನು ಕೊಂದದ್ದು ಎಂದು ಹೇಳಲು ಹಲವು ತಕರಾರುಗಳಿವೆ. ಮೊದಲನೆಯದಾಗಿ ದೇವೇಂದ್ರನ ದೇಹ ವಿಛಿದ್ರವಾಗಿ ಹರಿದು ಬಿದ್ದಿದ್ದ ರೀತಿಯನ್ನು ನೋಡಿದರೆ ಅದು ಸುಪಾರಿ ಹಂತಕರ ಪ್ರೊಫೆಷನಲ್ ಕಸುಬೇ ಅನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಶರಣಾಗಿರೊ ಆರೋಪಿಗಳೂ ರೌಡಿ ಶೀಟರ್‌ಗಳಾದರೂ ಅವರ ಬಳಿ ಅಷ್ಟೆಲ್ಲ ಕಸುಬುತನ ಕಾಣಲಾಗುವುದಿಲ್ಲ. ಅದೂಅಲ್ಲದೆ ದೇವೇಂದ್ರನ ಮನೆ ಮುಂದೆ ಹಾಗೂ ಮಾರಿಗುಡಿ ಸರ್ಕಲ್‌ನಲ್ಲಿ ಹಾಕಲಾಗಿದ್ದ ಸಿಸಿ ಟಿವಿ ಕ್ಯಾಮೆರಾದ ದೃಶ್ಯಾವಳಿಗಳಲ್ಲಿ ಕಂಡುಬರುವ ಹಂತಕರ ಚಹರೆಗೂ, ಶರಣಾಗಿರುವ ಆರೋಪಿಗಳ ಚಹರೆಗೂ ಸಾಕಷ್ಟು ವ್ಯತ್ಯಾಸವಿದೆ. ಇನ್ನು ಘಟನೆಯನ್ನು ಕಣ್ಣಾರೆ ಕಂಡ ಪ್ರತ್ಯಕ್ಷದರ್ಶಿಗಳು ಹೇಳುವಂತೆ ಹಂತಕರ್‍ಯಾರು ಸ್ಥಳೀಯರಾಗಿರಲಿಲ್ಲ, ಅವರನ್ನು ಇದೇ ಮೊದಲ ಬಾರಿಗೆ ನೋಡಿದ್ದಾಗಿ ಹೇಳುತ್ತಿದ್ದಾರೆ. ಇದಿಷ್ಟನ್ನೂ ತಾಳೆಹಾಕಿ ನೋಡಿದಾಗ, ಕೊಲೆಗೆ ಪ್ಲಾನ್ ಹಾಕಿ ಸಹಕಾರ ನೀಡಿದ್ದು ಶರಣಾಗಿರುವ ಆರೋಪಿಗಳೇ ಆಗಿದ್ದರೂ ಕೊಲೆ ಮಾಡಿದವರು ಮಾತ್ರ ಸುಪಾರಿ ಕಿಲ್ಲರ್‌ಗಳೇ ಅಂತ ಸುಲಭವಾಗಿ ಅಂದಾಜಿಸಬಹುದು.

ಸುಪಾರಿ ಕಿಲ್ಲರ್‌ಗಳನ್ನು ಕೇಂದ್ರವಾಗಿಸಿಕೊಂಡು ಯೋಚಿಸಿದಾಗ ರಾಮನಗರದ ಸಬ್‌ಜೈಲಿನಲ್ಲಿದ್ದಾಗ ಅವ್ವಾ ಮಾದೇಶ ಗಳಿಸಿಕೊಂಡಿದ್ದ ಬೆಂಗಳೂರಿನ ಪಾತಕ ಲಿಂಕುಗಳು ಗಮನ ಸೆಳೆಯುತ್ತವೆ. ಹುಣಸೂರು ಜೋಡಿ ಕೊಲೆಗೆ ಸಂಬಂಧಿಸಿದಂತೆ ಜಾಮೀನು ಪಡೆದು ಹೊರಬರುವ ಮುನ್ನ ಅವ್ವಾ ಮಾದೇಶನನ್ನು ಎಂಟು ತಿಂಗಳ ಕಾಲ ರಾಮನಗರದ ಸಬ್‌ಜೈಲಿನಲ್ಲಿ ಇಡಲಾಗಿತ್ತು, ಆಗ ಅವನಿಗೆ ಬೆಂಗಳೂರಿನ ಸೈಲೆಂಟ್ ಸುನೀಲ, ಹೇಮಂತ, ಚಕ್ರಿ ಅಲಿಯಾಸ್ ಕ್ರಿಸ್ಟೋಫರ್ ಚಕ್ರವರ್ತಿ ಎಂಬಿತ್ಯಾದಿ ಪಾತಕ ಸುಳಿಗಳ ಪರಿಚಯವಾಗಿತ್ತು, ಜೈಲಿಂದ ಬಂದ ಅವ್ವಾ ಮಾದೇಶ ಬೆಂಗಳೂರಿನ ಈ ಭೂಗತ ದೋಸ್ತಿಗಳಿಗೆಲ್ಲ ಮೈಸೂರಿನಲ್ಲಿ ಆಶ್ರಯದಾತನಾಗಿದ್ದು ಈಗ ಹಳೇ ವಿಷಯ. ಇವರಲ್ಲಿ ಈಗಾಗಲೇ ಸೈಲೆಂಟ್ ಸುನೀಲ ಮತ್ತು ಹೇಮಂತ ನೇಪಥ್ಯಕ್ಕೆ ಸರಿದಿರುವುದರಿಂದ ಚಕ್ರಿಯ ಲಿಂಕುಗಳೇ ದೇವೇಂದ್ರನ ಸುಪಾರಿ ಕಿಲ್ಲರ್‌ಗಳ ನೆರವು ನೀಡಿರಬಹುದೆಂದು ಶಂಕಿಸಲಾಗುತ್ತಿದೆ.


ಅಂದಹಾಗೆ, ಸ್ಥಳೀಯರು ಹೇಳುವ ಪ್ರಕಾರ ಈ ಹತ್ಯೆಗೆ ಬರೋಬ್ಬರಿ ಒಂದು ಕೋಟಿ ರೂಪಾಯಿಗೂ ಹೆಚ್ಚು ಖರ್ಚು ಮಾಡಲಾಗಿದೆಯಂತೆ. ಕೊಲೆಗೈದ ಹಂತಕರಿಗೆ ಈಗಾಗಲೇ 50 ಲಕ್ಷ ಮುಂಗಡ ನೀಡಲಾಗಿದ್ದು ಒಂದು ತಿಂಗಳು ಕಾಲ ತಂಗಿ ದೇವುವಿನ ದಿನಚರಿಯನ್ನು ಅತ್ಯಂತ ಹತ್ತಿರದಿಂದಲೇ ಗಮನಿಸುತ್ತಾ ಬಂದಿದ್ದ ಈ ಸುಪಾರಿ ಹಂತಕ ಪಡೆಯ ಖರ್ಚಿಗೆಂದೇ ಹಲವು ಲಕ್ಷ ಖರ್ಚಾಗಿದೆ ಎನ್ನಲಾಗುತ್ತಿದೆ. ಇದಲ್ಲದೆ ಶರಣಾಗಿರುವ ಆರೋಪವನ್ನು ಹೊತ್ತಿರುವ ಕರಿಯಪ್ಪನ ಸಂಬಂಧಿಗಳ ಪರವಾಗಿ ನ್ಯಾಯಾಲಯದಲ್ಲಿ ಖರ್ಚು-ವೆಚ್ಚ ಭರಿಸುವುದು, ಒಂದೊಮ್ಮೆ ನಿಜವಾದ ಹಂತಕರು ಸಿಕ್ಕಿಬಿದ್ದಲ್ಲಿ ಅವರ ಜಾಮೀನು, ಬಿಡುಗಡೆ ಮುಂತಾದ ಭದ್ರತೆಗಳಿಗೆ ವ್ಯವಸ್ಥೆ ಮಾಡುವುದು ಅಂತೆಲ್ಲ ಭರ್ಜರಿ ತಯಾರಿಗಳನ್ನು ಮಾಡಿಕೊಳ್ಳಲಾಗಿದೆಯಂತೆ. ಇದನ್ನೆಲ್ಲ ಲೆಕ್ಕ ಹಾಕಿದರೆ ಇದು ದುಬಾರಿ ಕೊಲೆಯೇ ಸರಿ. ಇಂಥಾ ಪಾತಕಕೃತ್ಯಕ್ಕೆ ಇಷ್ಟೆಲ್ಲ ಖರ್ಚು ಮಾಡುವ ತಾಕತ್ತು ಅವ್ವಾ ಮಾದೇಶನಿಗೆ ಬಿಟ್ಟರೆ ಈ ಭಾಗದಲ್ಲಿ ಮತ್ಯಾರಿಗೂ ಇಲ್ಲ ಅನ್ನೋದು ಗಮನಾರ್ಹ ಸಂಗತಿಯಾದರೂ ದೇವೇಂದ್ರನನ್ನು ಕೊಲ್ಲಿಸುವುದರಿಂದ ಮಾದೇಶನಿಗೆ ಅಷ್ಟೆಲ್ಲಾ ಲಾಭವಿದೆಯಾ ಅನ್ನೋ ಪ್ರಶ್ನೆಯೂ ಕಾಡದಿರದು. ಒಟ್ಟಿನಲ್ಲಿ ಪಾತಕಲೋಕದ ಪ್ರತೀಕಾರದ ಸರಣಿಯೊಂದು ಶುರುವಾಗಿದ್ದು ಪೊಲೀಸರು ಅಲರ್ಟ್ ಆಗದಿದ್ದರೆ ಮೈಸೂರಿನ ಮರ್ಯಾದೆ ಮಣ್ಣು ಪಾಲಾಗುವುದರಲ್ಲಿ ಸಂಶಯವೇ ಇಲ್ಲ.



ಶರಣಾಗಿರುವ ಶಂಕಿತ ಆರೋಪಿಗಳು

● ಮೈಸೂರು ಮೋಹನ್

ಜಗಳೂರು: ಬರದ ನೆಲದಲ್ಲೊಬ್ಬ 'ಭಂಡ' ಶಾಸಕ


ರಾಜೇಶ

ದಾವಣಗೆರೆ ಜಿಲ್ಲೆಯ ಒಡಲೊಳಗಿರುವ ನತದೃಷ್ಟ ನೆಲವೆಂದರೆ ಅದು ಜಗಳೂರು. ಇಡೀ ಕರ್ನಾಟಕವೇ ತೃಪ್ತಿ ಪಡುವಷ್ಟು ಮಳೆ ಸುರಿದ ವರ್ಷಗಳಲ್ಲೂ ಜಗಳೂರಿನಿಂದ ಬರದ ಬೇರುಗಳು ಅಲ್ಲಾಡಿರುವುದಿಲ್ಲ. ಬಿಸಿಲ ಝಳ, ನೀರಿಲ್ಲದ ಹಳ್ಳಗಳು, ಬೆಳೆಯಿಲ್ಲದ ಹೊಲಗಳು, ಗುಳೇ ಹೊರಟ ಮಂದಿ, ಫ್ಲೋರೈಡ್ ವಿಷದ ನೀರು ಕುಡಿದು ನರಳಾಡುವ ಜನ- ಹೀಗೆ ಇಲ್ಲಿಯ ಚಿತ್ರಣ ಕಳೆದ ಮೂರ್‍ನಾಲ್ಕು ದಶಕಗಳಿಂದಲೂ ಬದಲಾಗದೆ ಬಿತ್ತರವಾಗುತ್ತಲೇ ಬರುತ್ತಿದೆ. ಕುಡಿಯುವ ನೀರಿನಂತಹ ಮೂಲಸೌಕರ್ಯಗಳೇ ಕೈಗೆಟುಕದ ಇಲ್ಲಿನ ಜನರ ಪಾಲಿಗೆ ಅಭಿವೃದ್ಧಿ ಎನ್ನುವುದಂತೂ ದೂರದ ಮಾತು. ನಂಜುಂಡಪ್ಪ ವರದಿಯಲ್ಲೇ ಈ ತಾಲೂಕನ್ನು ಶಾಶ್ವತ ಬರಪೀಡಿತ ಮತ್ತು ಅತ್ಯಂತ ಹಿಂದುಳಿದ ಕ್ಷೇತ್ರವೆಂದು ಉಲ್ಲೇಖಿಸಿದ್ದರೂ ಸಹ ಅಧಿಕಾರಕ್ಕೇರುವ ಸರ್ಕಾರಗಳು ಈ ನೆಲವನ್ನು ನಿರ್ಲಕ್ಷಿಸುತ್ತಲೇ ಬಂದಿವೆ. ಇದರಲ್ಲಿ ಸರ್ಕಾರಕ್ಕಿಂತ ಇಲ್ಲಿನ ಸ್ಥಳೀಯ ಶಾಸಕರ ಮಹಾದ್ರೋಹವೇ ಹೆಚ್ಚು. ಜಗಳೂರಿನ ಅನುದಾನವನ್ನೆಲ್ಲ ಹೀರಿ ಇನ್ನೆಲ್ಲೋ ಪೊಗರ್‌ದಸ್ತಾಗಿ ಬೆಳೆದುಕೊಳ್ಳುವಂತಹ ಹೇತ್ಲಾಂಡಿ ರಾಜಕಾರಣಿಗಳೇ ಇಲ್ಲಿಗೆ ಶಾಸಕರಾಗುತ್ತಾ ಬಂದದ್ದು ದೊಡ್ಡ ವಿಪರ್ಯಾಸವೇ ಸರಿ. ಈ ವಿಚಾರದಲ್ಲಿ ಪ್ರಸ್ತುತ ಕಾಂಗ್ರೆಸ್ ಎಂಎಲ್‌ಎ ಎಚ್.ಪಿ.ರಾಜೇಶನಿಗೇನೂ ವಿನಾಯಿತಿ ಇಲ್ಲ. ನಿಜ ಹೇಳಬೇಕೆಂದರೆ, ಹಿಂದಿನವರ ದುರಾಚಾರದ ದಾಖಲೆಗಳನ್ನೆಲ್ಲ ಅಳಿಸಿಹಾಕುವಂತಿದೆ ಇವನ ದುರಾಡಳಿತ.

ಅಸಲಿಗೆ, ಇವನಾಗಲಿ ಅಥವಾ ಪಕ್ಕದ ಮೊಳಕಾಲ್ಮೂರಿನ ಶಾಸಕ ಎಸ್.ತಿಪ್ಪೇಸ್ವಾಮಿಯಾಗಲಿ ರಾಜಕಾರಣಕ್ಕೆ ಇಳಿದದ್ದೇ ಬಳ್ಳಾರಿ ಗಣಿ ಮಾಫಿಯಾಕ್ಕೆ ಅರಣ್ಯ ಸಂಪತ್ತನ್ನೇ ಅಡವಿಟ್ಟು ಉಂಡೆದ್ದ ಭ್ರಷ್ಟ ಡಿಸಿಎಫ್ ಅಧಿಕಾರಿ ಎಸ್. ಮುತ್ತಯ್ಯನ ರಕ್ಷಣೆಗೆಂದು. ಎಸ್.ತಿಪ್ಪೇಸ್ವಾಮಿ, ಮುತ್ತಯ್ಯನ ಖಾಸಾ ಅಣ್ಣನಾದರೆ ಜಗಳೂರಿನ ಈ ರಾಜೇಶ ಮುತ್ತಯ್ಯನ ಸ್ವಂತ ಅಳಿಯ. ಮುತ್ತಯ್ಯ ಅದೆಂತಹ ಖತರ್ನಾಕ್ ಕಳ್ಳನೆಂದರೆ ತಾನು ಮಾಡಿರುವ ಅಪರಾತಪರಾಗಳಿಗೆ ಜೈಲುಶಿಕ್ಷೆ ಗ್ಯಾರಂಟಿ ಎನ್ನುವುದು ಗೊತ್ತಾಗುತ್ತಿದ್ದಂತೆಯೇ ಅಳಿಯ ರಾಜೇಶನನ್ನು ಕಾಂಗ್ರೆಸ್‌ನಿಂದ, ಅಣ್ಣ ತಿಪ್ಪೇಸ್ವಾಮಿಯನ್ನು ಬಿಜೆಪಿಯಿಂದ (ಈತ ಚುನಾವಣೆಗೆ ಶ್ರೀರಾಮುಲುವಿನ ಬಿಎಸ್‌ಆರ್ ಕಾಂಗ್ರೆಸ್ ಅಡಿ ಸ್ಪರ್ಧಿಸಿದರೂ, ಆ ಪಕ್ಷವನ್ನು ಸ್ವತಃ ರಾಮುಲನೇ ಬಿಜೆಪಿ ಜೊತೆ ವಿಲೀನ ಮಾಡಿದ್ದ) ಶಾಸಕರನ್ನಾಗಿಸಿ ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೇರಿದರೂ ತಾನು ಸೇಫ್ ಆಗುವ ಅಡ್ಡದಾರಿಯನ್ನು ಮೊದಲೇ ಹುಡುಕಿಕೊಂಡಿದ್ದ. ಆದಾಗ್ಯೂ ಅವನ ಪಾಪದ ಗಂಟು ಅದೆಷ್ಟು ಬಿಗಿದುಹೋಗಿತ್ತೆಂದರೆ ಆತ ಜೈಲು ಪಾಲಾಗುವುದನ್ನು ಇವರ್‍ಯಾರೂ ತಪ್ಪಿಸಲಾಗಲಿಲ್ಲ ಅನ್ನೋದು ಬೇರೆ ಮಾತು...

ಮತದಾರರ ಆಶೋತ್ತರಗಳಿಗೆ ಮಿಡಿಯುವ ಬದಲು ತಮ್ಮ ಕುಟುಂಬ ಕಾವಲಿಗೋಸ್ಕರ ಅಧಿಕಾರಕ್ಕೇರಿದ ಇಂತವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ. ಜನರಿಗೆ ಸ್ಪಂದಿಸುವ ಮಾತು ಒತ್ತಟ್ಟಿಗಿರಲಿ, ತನಗೆ ಓಟು ಹಾಕಿದ ಮಂದಿಗೆ ಈತ ಮುಖ ತೋರಿಸಿಯೇ ಬಹಳ ದಿನವಾಗುತ್ತಾ ಬಂತು. ತಮಗೊಬ್ಬ ಶಾಸಕ ಇದ್ದಾನೆ ಮತ್ತು ಆತ ಸದ್ಯ ಅಧಿಕಾರದಲ್ಲಿರುವ ಕಾಂಗ್ರೆಸ್ ಪಾರ್ಟಿಯಿಂದ ಗೆದ್ದು ಬಂದವನು ಎಂಬುದೇ ಜನಕ್ಕೆ ಮರೆತುಹೋಗುವ ಹಂತಕ್ಕೆ ಬಂದು ತಲುಪಿದೆ. ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳ ಭ್ರಷ್ಟಾವತಾರ ಎಗ್ಗಿಲ್ಲದೆ ರಾರಾಜಿಸುತ್ತಿದೆ. ಮೊದಲೇ ಬರದಿಂದ ಕಂಗೆಟ್ಟಿರುವ ಜನ ಲಂಚದ ಹಾವಳಿಯಿಂದ ತತ್ತರಿಸಿ ಹೋಗುತ್ತಿದ್ದಾರೆ. ಕಷ್ಟ ಹೇಳಿಕೊಳ್ಳಲು ಶಾಸಕನ ಪತ್ತೆಯೇ ಇಲ್ಲ.

ರಂಗು ರಾಜಕಾರಣದ ಜಾತಿಲೆಕ್ಕ

1952 ಚುನಾವಣೆಯಲ್ಲಿ ಪ್ರಜಾ ಪಾರ್ಟಿಯಿಂದ ಗೆದ್ದು ಬಂದ ಮುಶಿರುಲ್ಲಾ ಮುಲ್ಲಾರು ಇಲ್ಲಿ ಆಳ್ವಿಕೆ ನಡೆಸದೇಹೋಗಿದ್ದರೆ ಬಹುಶಃ ಜಗಳೂರು ಎಂಬ ಕ್ಷೇತ್ರ ಕೆರೆ, ರಸ್ತೆ, ಕರೆಂಟು ಅನ್ನೋ ಸೌಕರ್ಯಗಳನ್ನು ಇವತ್ತಿಗೂ ಕಾಣುತ್ತಿತ್ತೋ ಇಲ್ಲವೋ ದೇವರೇ ಬಲ್ಲ. ಮೈಸೂರು ಮಹಾರಾಜರ ಆಳ್ವಿಕೆಯಲ್ಲಿದ್ದ ಅವರು ಮುತುವರ್ಜಿ ವಹಿಸಿ ಮಾಡಿಸಿದ ಕೆಲಸಗಳು ಅವೆಲ್ಲ. ಆದಾದನಂತರ ಶಾಸಕರಾಗಿ ಬಂದವರು ವಿಧಾನಸೌಧ ಹೊಕ್ಕಿದ್ದು ಬಿಟ್ಟರೇ ಮತ್ತಾವ ಘನಂದಾರಿ ಸಾಹಸಕ್ಕೂ ಕೈಹಾಕಿಲ್ಲ. ಹಾಗೆ ನೋಡಿದರೆ, 1962ರಿಂದ 2004ರವರೆಗೆ ಇದು ಕಾಂಗ್ರೆಸ್‌ನ ಭದ್ರಕೋಟೆ. ಅದರಲ್ಲೂ ಬರೋಬ್ಬರಿ ಆರು ಬಾರಿ ಇಲ್ಲಿಂದ ಶಾಸಕನಾಗಿ ಮೆರೆದ ಡಿ. ಅಶ್ವತ್ಥ ರೆಡ್ಡಿ ಎಂಬ ಮಜಾವಾಲ ಐಬಿಯಲ್ಲಿ ಮದಿರೆ, ಮಾನಿನಿಯರ ಜತೆ ಕಳೆದನೇ ಹೊರತು ಮತ್ತೇನೂ ಕಿಸಿಯಲಿಲ್ಲ. 1972ರಲ್ಲಿ ಮೊದಲ ಬಾರಿ ಕಾಂಗ್ರೆಸ್‌ನಿಂದ ಶಾಸಕನಾಗಿದ್ದ ಈತ 1978ರಲ್ಲಿ ಜನತಾ ಪಾರ್ಟಿಯ ಕ್ಯಾಂಡಿಡೇಟಾಗಿ ಗೆದ್ದುಬಂದಿದ್ದ. ಆನಂತ 1983, 1985 ಮತ್ತು 1989ರಲ್ಲೂ ಸತತ ಮೂರು ಬಾರಿ ಗೆದ್ದು ಬಂದ ಅಶ್ವತ್ಥ ರೆಡ್ಡಿಗೆ ಮಣ್ಣು ಮುಕ್ಕಿಸಿದ್ದು 1994ರ ಚುನಾವಣೆ. ಆ ಎಲೆಕ್ಷನ್‌ನಲ್ಲಿ ಬಂಗಾರಪ್ಪ ಕಟ್ಟಿದ್ದ ಕೆಸಿಪಿಯಿಂದ ಕಣಕ್ಕಿಳಿದಿದ್ದ ಬಸಪ್ಪ, ರೆಡ್ಡಿಗೆ ಸೋಲಿನ ರುಚಿ ತೋರಿಸಿದ್ದ. ಆದಾದಮೇಲೆ 1999ರ ಎಲೆಕ್ಷನ್‌ನಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಿಂತ ಅಶ್ವತ್ಥ ರೆಡ್ಡಿ ಆ ಸಲ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ಬಸಪ್ಪನನ್ನು ಸೋಲಿಸಿ ಮುಯ್ಯಿ ತೀರಿಸಿಕೊಂಡಿದ್ದ. ಆದರೆ 2004ರ ಚುನಾವಣೆಯಲ್ಲಿ ಬಿಜೆಪಿಯ ಗುರುಸಿದ್ದನಗೌಡ ಅಶ್ವತ್ಥ ರೆಡ್ಡಿಯನ್ನು ಸೋಲಿಸುವ ಮೂಲಕ ಆತನ ರಾಜಕಾರಣಕ್ಕೆ ಇತಿಶ್ರೀ ಹಾಡಿದ್ದ ಜೊತೆಗೆ ಕ್ಷೇತ್ರದ ಮೇಲಿದ್ದ ಕಾಂಗ್ರೆಸ್ ಹಿಡಿತವೂ ಸಡಿಲಗೊಂಡಿತ್ತು.

2008ರ ವಿಧಾನಸಭಾ ಚುನಾವಣೆಯಲ್ಲಿ ಜಗಳೂರಿನ ಜನ ಮತ್ತೊಮ್ಮೆ ಕಾಂಗ್ರೆಸ್ಸಿನ ಎಸ್.ವಿ. ರಾಮಚಂದ್ರನನ್ನು ಗೆಲ್ಲಿಸಿಕೊಂಡರಾದರೂ ಆಪರೇಷನ್ ಕಮಲಕ್ಕೆ ಬಿಕರಿಯಾದ ಆತ ಬಿಜೆಪಿಗೆ ತನ್ನನ್ನು ಮಾರಿಕೊಂಡು, ಉಪ ಚುನಾವಣೆಯಲ್ಲಿ ಗೆದ್ದು ಬರುವ ಮೂಲಕ ಜನರ ಮೇಲೆ ಮತ್ತೆ ಬಿಜೆಪಿ ಹೊರೆಯನ್ನು ಹೇರಿದ್ದ. ಬಿಜೆಪಿ ಸರ್ಕಾರದ ಐಲಾಟಗಳನ್ನು ನೋಡಿ ಸುಸ್ತುಹೊಡೆದ ಮತದಾರ 2013ರಲ್ಲಿ ಭರವಸೆಯಿಟ್ಟು ಕಾಂಗ್ರೆಸ್‌ಗೆ ಮತ ಒತ್ತಿದ್ದೇ ರಾಜೇಶನಂತ ಹೇತ್ಲಾಂಡಿಯೊಬ್ಬ ಶಾಸಕನಾಗುವುದಕ್ಕೆ ನಾಂದಿ ಆಯಿತು. ಅಂದಹಾಗೆ, ಇವನೇನೂ ಅಪ್ಪಟ ಕಾಂಗ್ರೆಸ್ಸಿಗನೂ ಅಲ್ಲ. 2008ರ ಎಲೆಕ್ಷನ್ ಸಂದರ್ಭದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಸ್.ವಿ. ರಾಮಚಂದ್ರನಿಗೆ ಪ್ರತಿಸ್ಪರ್ಧಿಯಾಗಿ ಈತ ಕಣಕ್ಕಿಳಿದದ್ದು ಬಿಜೆಪಿಯಿಂದ!

ಇಂತೆಲ್ಲ ವರ್ಣರಂಜಿತ ರಾಜಕಾರಣವನ್ನು ಕಂಡ ಜಗಳೂರಿನ ನಸೀಬು ಮಾತ್ರ ಅಭಿವೃದ್ಧಿಯ ವಿಚಾರದಲ್ಲಿ ರಂಗೇರಲೇ ಇಲ್ಲ. ಎಸ್‌ಟಿ ಮೀಸಲು ಕ್ಷೇತ್ರವಾಗಿರುವ ಜಗಳೂರಿನಲ್ಲಿ ಪರಿಶಿಷ್ಟ ವರ್ಗ ಮತಗಳೇ ನಿರ್ಣಾಯಕವಾದರೂ ಲಿಂಗಾಯತ ಮತಗಳ ಪ್ರಭಾವವನ್ನು ತಳ್ಳಿ ಹಾಕುವಂತಿಲ್ಲ. ಒಟ್ಟು 2,17,513 ಮತದಾರರನ್ನು (2013ರ ಅಂಕಿಅಂಶದಂತೆ) ಹೊಂದಿರುವ ಇಲ್ಲಿ ನಾಯಕ ಜನಾಂಗದ ಓಟುಗಳೇ ಸುಮಾರು 65,000ಕ್ಕೂ ಹೆಚ್ಚಿವೆ. ಅಲ್ಲದೆ ಬೋವಿ. ಲಂಬಾಣಿ, ಆದಿ ಕರ್ನಾಟಕ, ಆದಿ ದ್ರಾವಿಡದಂತಹ ಎಸ್ಸಿ ಸಮುದಾಯದ ಮತಗಳ ಸಂಖ್ಯೆ 60,000ದಷ್ಟಿವೆ. ಆದಾಗ್ಯೂ ನಾಯಕ ಸಮುದಾಯವನ್ನು ಬಿಟ್ಟರೆ ಅಜಮಾಸು 61,700ಕ್ಕೂ ಹೆಚ್ಚು ಮತಗಳನ್ನು ಹೊಂದಿರುವ ಲಿಂಗಾಯತ ಸಮುದಾಯವೇ ಎರಡನೇ ದೊಡ್ಡ ಮತಬ್ಯಾಂಕ್ ಆಗಿದೆ. ಇನ್ನುಳಿದಂತೆ 17,000ದಷ್ಟು ಮುಸ್ಲಿಂ ಮತ್ತು 11,000ದಷ್ಟು ಕುರುಬ ಮತದಾರರ ಜೊತೆ ಸಣ್ಣಪುಟ್ಟ ಜಾತಿಗಳೂ ಒಂದಿಷ್ಟು ಮತಗಳನ್ನು ಹೊಂದಿವೆಯಾದರೂ ಅವು ಸೋಲುಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸುವಷ್ಟು ಗಮನಾರ್ಹವೇನಲ್ಲ.

ಈ ಲೆಕ್ಕಾಚಾರದಿಂದಾಗಿಯೋ ರಾಜೇಶನನ್ನೂ ಒಳಗೊಂಡಂತೆ ಇಲ್ಲಿ ಗೆದ್ದು ಬಂದಿರುವ ಬಹುಪಾಲು ಶಾಸಕರು ನಾಯಕ ಜನಾಂಗಕ್ಕೆ ಸೇರಿದವರೇ ಆಗಿದ್ದಾರೆ. ಆದರೂ ಅವರ್‍ಯಾರೂ ತಮ್ಮ ಸಮುದಾಯದ ಅಥವಾ ಕ್ಷೇತ್ರದ ಉನ್ನತಿಯತ್ತ ತಲೆ ಕೆಡಿಸಿಕೊಳ್ಳಲೇ ಇಲ್ಲ. ಕಡೇಪಕ್ಷ ಈ ಭಾಗದ ಜನರ ದಶಕಗಳ ಬೇಡಿಕೆಯಾದ ಭದ್ರಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಇವರಲ್ಲಿ ಯಾರೇ ಒಬ್ಬ ಪ್ರಾಮಾಣಿಕ ಪ್ರಯತ್ನ ಹಾಕಿದ್ದರೂ ಇಷ್ಟೊತ್ತಿಗಾಗಲೇ ಜಗಳೂರಿನ ಚಿತ್ರಣವೇ ಬದಲಾಗಿ ಹೋಗುತ್ತಿತ್ತು.

ಜಗಳೂರಿನ ದುರಂತ

ಭದ್ರಾ ಮೇಲ್ದಂಡೆ ಯೋಜನೆ, ಸೂಳೆಕೆರೆ ಕುಡಿಯುವ ನೀರು ತರುವ ಯೋಜನೆ, 21 ಕೆರೆಗಳಿಗೆ ನೀರು ತುಂಬಿಸಿ ಏತ ನೀರಾವರಿಗೆ ನೆರವಾಗುವ ಯೋಜನೆ ಹೀಗೆ ಜಗಳೂರನ್ನು ಬರದ ಶಾಪದಿಂದ ಮೇಲೆತ್ತಲು ಹಲವಾರು ಯೋಜನೆಗಳು ಚರ್ಚೆಗೆ ಬಂದಿವೆಯಾದರು ಅವು ಸರ್ಕಾರಿ ಕಾಗದಪತ್ರ ಬಿಟ್ಟು ಅನುಷ್ಠಾನಕ್ಕಿಳಿಯುವ ಮನಸ್ಸನ್ನೇ ಮಾಡಿಲ್ಲ. 1969ರಲ್ಲೆ, ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪರು ತುಂಗಭದ್ರಾ ನದಿ ನೀರನ್ನೇ ಕೆನಾಲ್‌ಗಳ ಮೂಲಕ ಪ್ರಮುಖವಾಗಿ ಜಗಳೂರು, ಚಳ್ಳಕೆರೆ, ಮೊಳಕಾಲ್ಮೂರು, ಕೂಡ್ಲಿಗಿ, ಸೊಂಡೂರು ತಾಲೂಕ್‌ಗಳಿಗೆ ತರುವ ಮಹತ್ವಾಕಾಂಕ್ಷಿ ನೀರಾವರಿ ಯೋಜನೆಗೆ ವರದಿ ತಯಾರಿಸಿದ್ದರು. ಆದರೆ ಈ ಭಾಗದ ಜನರ ದುರದೃಷ್ಟವೋ ಏನೋ ಆ ವರದಿ ಉಸಿರಾಡುವುದಕ್ಕೂ ಮೊದಲೇ ನಿಜಲಿಂಗಪ್ಪನವರ ಸರ್ಕಾರವೇ ಪತನವಾಯ್ತು. ಅಲ್ಲಿಂದ ಅಜಮಾಸು ಮೂರು ದಶಕಗಳ ಕಾಲ ಈ ಭದ್ರಾ ಮೇಲ್ದಂಡೆ ಯೋಜನೆಯತ್ತ ಅಧಿಕಾರಸ್ಥ ರಾಜಕಾರಣಿಗಳು ಕಣ್ಣಾಯಿಸಿ ಕೂಡಾ ನೋಡಲಿಲ್ಲ.

1997ರಲ್ಲಿ ಚಿತ್ರದುರ್ಗದ ಜಯಣ್ಣ, ಬಂಜಗೆರೆ ಜಯಪ್ರಕಾಶ್, ಒಡೆಯರ್‌ರಂಥವರು ಭದ್ರಾ ಮೇಲ್ದಂಡೆ ಹೋರಾಟ ಸಮಿತಿಯ ಚಳವಳಿಗೆ ಚುರುಕು ನೀಡಿದಾಗ ಅದು ಮತ್ತೆ ಉಸಿರಾಡಲು ಆರಂಭಿಸಿತು. ಆಗಿನ ಎಸ್.ಎಂ. ಕೃಷ್ಣಾ ಸರ್ಕಾರ ಈ ಚಳವಳಿಯನ್ನು ಗಂಭೀರವಾಗಿ ಪರಿಗಣಿಸಿದ್ದಲ್ಲದೇ ಬಜೆಟ್‌ನಲ್ಲೂ ಅನುಮತಿ ನೀಡಿತು. ಇನ್ನೇನು ಭದ್ರಾ ನೀರಾವರಿ ಯೋಜನೆಗೆ ಸರ್ಕಾರದ ತಾತ್ವಿಕ ಅನುಮತಿ ಸಿಕ್ಕೇ ಬಿಟ್ಟಿತು ಅನ್ನುವಾಗ ಮತ್ತೊಂದು ಹೊಸ ವರಾತ ಶುರುವಾಗಿತ್ತು. ಹೇಗೂ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳವರೆಗೆ ಬರುವ ಭದ್ರಾ ನೀರನ್ನು ತಮಗೂ ವಿಸ್ತರಿಸುವಂತೆ ತುಮಕೂರು-ಕೋಲಾರದ ಕಡೆಯ ರಾಜಕಾರಣಿಗಳು ತಗಾದೆ ತೆಗೆದು ಇಲ್ಲದ ವಿವಾದ ಹುಟ್ಟುಹಾಕಿದ್ದರು. ಹಾಗೆ ನೋಡಿದರೆ ಭದ್ರಾ ನೀರಾವರಿ ಯೋಜನೆಯನ್ನು ರೂಪಿಸಿದ್ದೇ ಹೊಸದುರ್ಗ, ಚಿತ್ರದುರ್ಗ, ಜಗಳೂರು, ಮೊಳಕಾಲ್ಮೂರು, ಹೊಳಲ್ಕೆರೆ, ಚಳ್ಳಕೆರೆ, ಕೂಡ್ಲಿಗಿ, ಸಂಡೂರು ತಾಲ್ಲೂಕುಗಳನ್ನು ಗಮನದಲ್ಲಿಟ್ಟುಕೊಂಡು. ಒಟ್ಟಾರೆ ಚಿತ್ರದುರ್ಗ ಜಿಲ್ಲೆಯಲ್ಲಿ ನದಿಯಿರಲಿ ಒಂದೇ ಒಂದು ಜಲಮೂಲವೇ ಇಲ್ಲದಿರುವುದರಿಂದ ಇಲ್ಲಿನ ಜನರ ನೀರಿನ ಹಾಹಾಕಾರ ತಣಿಸಲು ಈ ಯೋಜನೆ ರೂಪತಳೆದಿತ್ತು. ಯಾವಾಗ ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಂದಲೂ ಆ ಯೋಜನೆಯ ಫಲ ಸಮಗ್ರ... ಸಿಗಬೇಕು ಅನ್ನೋ ಕೂಗು ಕೇಳಿಬಂತೊ, ಆಗ ಸರ್ಕಾ... ಅದನ್ನೇ ನೆಪ ಮಾಡಿಕೊಂಡು ಯೋಜನೆಯನ್ನು ಸಂಪೂರ್ಣ... ಮೂಲೆಗೆ ತಳ್ಳಿತು.


ಆಮೇಲೆ ಸುಮಾರು ಹತ್ತು ವರ್ಷಗಳ ಕಾಲ ಅದನ್ನಾ... ಕೇಳಲೇ ಇಲ್ಲ. ಫ್ಲೋರೈಡ್ ವಿಷದ ನೀರಿಗೆ ತಮ... ಜೀವಗಳನ್ನೇ ಒತ್ತೆ ಇಡುವುದಕ್ಕೆ ಒಗ್ಗಿಹೋಗಿದ್ದ ಜಗಳೂರಿ... ಜನ ಕೂಡಾ ತಮ್ಮ ನೀರಿನ ಹಕ್ಕಿಗಾಗಿ ಗಟ್ಟಿಯಾ... ಕೂಗುವುದನ್ನೇ ಮರೆತಿದ್ದರು. ಆದರೆ 2011ರ... ಹೋರಾಟಕ್ಕೆ ಮತ್ತೆ ಧ್ವನಿ ತಂದುಕೊಟ್ಟದ್ದು ಎಪ್ಪತ್ತ... ಇಳಿವಯಸ್ಸಿನ ವೃದ್ಧ ನಿವೃತ್ತ ಇಂಜಿನಿಯರ... ತಿಪ್ಪೇಸ್ವಾಮಿಯವರು. ಅವರ ನೇತೃತ್ವದಲ್ಲಿ ರೈತಸಂಘಟನೆಗಳ... 105 ದಿನ ಧರಣಿ ಉಪವಾಸ ಸತ್ಯಾಗ್ರಹ ಶುರು ಮಾಡಿದ್ದ... ತಡ, ಅಂದಿನ ಎಂಎಲ್‌ಎ ಎಸ್.ವಿ ರಾಮಚಂದ್ರ ತಡಬಡಾ... ಯಿಸಿ, ಸಿಎಂ ಯಡ್ಡಿಯನ್ನು ಎಡತಾಕಿ ಹೋರಾಟಗಾರ... ಜೊತೆ ಮಾತುಕತೆಗೆ ತಂದು ಕೂರಿಸಿದ್ದ. ಧರಣಿ ನಿರತ... ಬೇಡಿಕೆಗೆ ಸ್ಪಂದಿಸಿದ ಸರ್ಕಾರ ನೀರಾವರಿ ಯೋಜನೆ... ಅನುಮತಿಯನ್ನೂ ನೀಡಿತ್ತು. ಅದು ಅಂತಿಮ ರೂ... ಪಡೆದುಕೊಳ್ಳುವ ಮುನ್ನ ಯಡ್ಡಿಯೇ ಅಧಿಕಾರ ಕಳೆದು... ಕೊಂಡು ರಾಜಕೀಯ ದೊಂಬರಾಟ ಶುರುವಾದದ್ದರಿಂ... ಯೋಜನೆ ಅಂದುಕೊಂಡಷ್ಟು ವೇಗ ಪಡೆಯಲೇ ಇಲ್ಲ...


2013ರ ಚುನಾವಣೆಯು ಹೊಸ್ತಿನಲ್ಲಿದ್ದಾಗಲೇ... ದಾವಣಗೆರೆ ಜಿಲ್ಲೆಯ 21 ಕೆರೆಗಳನ್ನು ಏತನೀರಾವರಿ... ಸಜ್ಜು ಮಾಡಬೇಕೆಂಬ ಮಹತ್ವದ ನಿರ್ಧಾರಕ್ಕೆ ರಾಜ್ಯ ಸರ್ಕಾ... ಬಂದಿತ್ತು. ಅದರಲ್ಲಿ ಜಗಳೂರಿನ ಕೆರೆಗಳೂ ಇದ್ದ... ಈಗಲಾದರೂ ಜಗಳೂರಿನ ಬವಣೆ ತಪ್ಪು... ಅಂದುಕೊಂಡವರಿಗೆ ಈ ಸಲ ಅಪ್ಪಟ ವಿಲನ್ ಆ... ಅಪ್ಪಳಿಸಿದ್ದು ಸಿರಿಗೆರೆ ಮಠದ ಪೀಠಾಧಿಪತಿ! ಅಸಲಿ... 21 ಕೆರೆಗೆ ನೀರು ತುಂಬಿಸುವ ಏತ ನೀರಾವರಿ ಯೋಜ... ಸಿದ್ಧವಾದದ್ದೇ ಜಗಳೂರಿನ ನಿಕೃಷ್ಟ ಪರಿಸ್ಥಿತಿಯನ್ನ... ಗಮನದಲ್ಲಿಟ್ಟುಕೊಂಡು. ತುಂಗಭದ್ರಾ ನದಿಯಿಂ... ಜಗಳೂರಿನ ತುಪ್ಪದಹಳ್ಳಿ-ಬಿಳಿಚೋಡು-ಅಲೇಕಲ್ಲು ಕೆರೆಗಳಿ... ಮೊದಲು ನೀರು ಭರ್ತಿಯಾದ ನಂತರ 20 ಕೆರೆಗಳಿ... ತುಂಬಿಸುವಂತಾಗಬೇಕಿತ್ತು.


2013ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾ... ಕಳೆದುಕೊಂಡು ಕಾಂಗ್ರೆಸ್ ಗದ್ದುಗೆ ಏರಿದ ಪರಿಣಾ... ಏತ ನೀರಾವರಿ ಯೋಜನೆಯ ಮಂದಗತಿಯಲ್ಲೇ ಸಾಗಿತ್ತು... ಈ ನಡುವೆ ಕಳೆದ, ಅಂದರೆ 2015ನೇ ಸಾಲಿನ ಸಿರಿಗೆ... ಮಠದ ತರಳಬಾಳು ಹುಣ್ಣಿಮೆ ಮಹೋತ್ಸವವ... ಚೆನ್ನಗಿರಿಯಲ್ಲಿ ಆಯೋಜಿಸಲಾಗಿತ್ತು. ತವ... ಮಹೋತ್ಸವಕ್ಕಾಗಿ ಆಗಮಿಸುವ ಜನರ ನೀರಿ... ಅನುಕೂಲಕ್ಕಾಗಿ ಸಿರಿಗೆರೆಯ ಸ್ವಯಂಘೋಷಿ... ಜಗದ್ಗುರುಗಳು 'ಮೊದಲು ಚನ್ನಗಿರಿ ಭಾಗದ ಕೆರೆಗಳ... ತುಂಗಭದ್ರಾ ಜಲಾಶಯದಿಂದ ನೀರು ಹರಿಸಿ ಏ... ನೀರಾವರಿ ಶುರು ಮಾಡಿದರೆ ತರಳಬಾಳು ಹುಣ್ಣಿ... ಇಲ್ಲಿ, ಇಲ್ಲಾ ಎಂದರೆ ಬೇರೆ ಕಡೆ ನಡೆಸುತ್ತೇವೆ' ಅ... ಧಮಕಿ ಹಾಕಿದ್ದೇ ತಡ, ಪರಮ ಜಾತಿಭಕ್ತ ಚನ್ನಗಿ... ಶಾಸಕ ವಡ್ನಾಳು ರಾಜಣ್ಣ ಅದೇನು ಪವಾಡ ಮಾಡಿದನೋ... ರಾತ್ರೋರಾತ್ರಿ ಚೆನ್ನಗಿರಿಯ ಬಹುಪಾಲು ಕೆರೆಗ... ತುಂಬಿನಿಂತಿದ್ದವು. ಯೋಜನೆಯ ಪ್ರಕಾರ ಮೊದಲು ಶಾಪ... ಜಗಳೂರಿನ ಕೆರೆಗಳನ್ನು ತುಂಬಿಸಬೇಕಿದ್ದ ನೀರು ಮ... ಪಾಳೆಗಾರಿಕೆ ರಾಜಕಾರಣದಿಂದ ಸೂಳೆಕೆರೆಯ ಬೆನ್ನ... ಇರುವ ಚೆನ್ನಗಿರಿಯ ಪಾಲಾಗುವಂತಾಯ್ತು. ಅ... ಜಗಳೂರಿನ ಜನಕ್ಕೆ ಮತ್ತೊಮ್ಮೆ ಸಿಕ್ಕಿದ್ದು ನಿರಾಶೆ ಮಾ...


ಜಗಳೂರಿನ ಶಾಸಕನೆನಿಸಿಕೊಂಡ ರಾಜೇಶ ಚೂ... ಚೂರು ದಿಟ್ಟತೆ ತೋರಿದ್ದರೂ ಜಗಳೂರಿಗೆ ಈ ... ಅನ್ಯಾಯವಾಗುತ್ತಿರಲಿಲ್ಲ. ತನ್ನ ಅಧಿಕಾರವನ್ನು ಕುಟುಂ... ವಕಾಲತ್ತಿಗಷ್ಟೆ ಸೀಮಿತವಾಗಿಸಿಕೊಂಡಿರೋ ಈ 'ಅದ... ಶಾಸಕ'ನನ್ನು ಅಬ್ಬಾ ಎನ್ನಲು ಜನ ತಯಾರಾಗಿ ಕೂತಿದಾ... ಇವನಿಗೆ ಹೋಲಿಸಿದರೆ ಎಸ್.ವಿ.ರಾಮಚಂದ್ರನೇ ಉತ್ತ... ಎನ್ನುವ ಮಾತುಗಳು ಮುಂಬರುವ ಎಲೆಕ್ಷನ್‌ನಲ್ಲಿ ರಾಜೇ... ಸೋಲಿನ ಮುನ್ನುಡಿಯಂತೆ ಕಾಣಿಸುತ್ತಿವೆ. ಬಿಜೆಪಿಯಲ್ಲಿದ್ದ... ಪಕ್ಕಾ ಚಡ್ಡಿಯಲ್ಲದ ರಾಮಚಂದ್ರ ಮೂಲತಃ ಸಾ... ಸ್ವಭಾವದ ವ್ಯಕ್ತಿ. ಜೊತೆಗೆ ಶಾಸಕನಾಗಿದ್ದಾಗ ಜನರ ಕೈ... ಸುಲಭವಾಗಿ ಸಿಗುತ್ತಿದ್ದ. ಅದೆಲ್ಲವೂ ಕಾಂಗ್ರೆಸ್‌ನ ರಾಜೇ... ಪಾಲಿಗೆ ಮೈಮನಸ್ಸುಗಳೇ. ಈಗಲಾದರೂ ಆತ ... ನೀರಾವರಿಗಾಗಲಿ, ಭದ್ರಾ ನದಿ ನೀರು ತರುವ ಯೋಜ... ಗಾಗಲಿ ಬೆಂಬಲವಾಗಿ ನಿಂತರೆ ಮಾತ್ರ ತನ್ನ ಸೋಲಿನ... ರಾಜೇಶ ತಪ್ಪಿಸಿಕೊಳ್ಳಬಹುದು. ಇಲ್ಲವಾದಲ್ಲಿ ಸೋ... ಅವನಿಗೆ ಕಟ್ಟಿಟ್ಟಬುತ್ತಿ.

● ಟಿ.ಎನ್. ಷಣ್ಮು...


ರಾಮಚಂದ್ರ


ಎಸ್.ತಿಪ್ಪೇಸ್ವಾಮಿ


ವಡ್ನಾಳು ರಾಜಣ್ಣ


ಸಿರಿಗೆರೆಯ ಸ್ವಯಂಘೋಷಿತ ಜಗದ್ಗುರು

"ನಿಮ್ಮ ಸಾಧನೆಗೆ ನೀವೇ ಬೆನ್ನು ತಟ್ಟಿಗಂಡ್ರಲ್ಲ ಸಾರ್"

ಧಾತ್ತೇರಿ

ಯಾಹೂ

ಮೂರು ವರ್ಷಗಳನ್ನು ಮುಗಿಸಿ ನಾಲ್ಕನೇ ವರ್ಷದ ಕಡೆಗೆ ಮೈಸೂರಿನ ಅಂಬಾರಿಯ ಮುಂದನಡಿಗೆಯಲ್ಲಿ ಕಾಲು ಹಾಕುತ್ತಿರುವ ಸಿದ್ದು ಸರಕಾರದ ಬಗ್ಗೆ ಕೆಲವು ಪ್ರಶ್ನೆ ಕೇಳಬೇಕೆನಿಸಿತಲ್ಲಾ, ಸದರಿ ಪ್ರಶ್ನೆಗಳೂ ಸಿದ್ದು ಹತ್ತಿರ ಹೋಗಲಾಗದ ಅಸಹಿಷ್ಣು ಜನರ ಪ್ರಶ್ನೆಗಳಾದ್ದರಿಂದ ಅವರನ್ನೇ ಕೇಳಿ ಪಡೆದುಕೊಳ್ಳಬೇಕೆನಿಸಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಯಾರೇ ಕೂಗಾಡಲಿ, ಊರೇ ಹೋರಾಡಲಿ, ನಿನ್ನ ನೆಮ್ಮದಿಗೆ ಭಂಗವಿಲ್ಲ, ಎಮ್ಮೇ ನಿನಗೆ ಸಾಟಿಯಿಲ್ಲ, ಬಿಸಿಲು ಬರಕ್ಕೂ ಬಿರುನುಡಿಯ ಕಡೆಗೂ ನಿ ಅಳುಕದೆ ಮುಂದೇ ಸಾಗುವೆ ಅರೇ ಹುಂಯ್ ಅರೆ ಹುಂಯ್, ಅರೆ"

"ಹಲೋ ಯಾರು?"

"ನೀವ್ಯಾರು?"

"ನಾನು ಶಿವಣ್ಣ ಕಂಡ್ರಿ."

"ಶಿವಣ್ಣ ಅಂದ್ರೆ?"

"ಸೋಷಲಿಸ್ಟ್ ಶಿವಣ್ಣ."

"ಸೋಷಲಿಸ್ಟರಿಗೆ ಕಾಂಗ್ರೆಸ್ಸಿನಲ್ಲೇನು ಕೆಲಸ?"

"ಸಿಎಂಗೆ ಗೈಡ್ ಮಾಡಬೇಕಾಗಿರುತ್ತೆ."

"ನಾನೂ ಒಂಚೂರು ಗೈಡ್ ಮಾಡಬೇಕು. ಪತ್ರಕರ್ತ ಯಾಹು ಅಂತ ಹೇಳಿ ಫೋನ್ ಕೊಡ್ತೀರಾ?"

"ಆಯ್ತು, ಯಾರೋ ಪತ್ರಕರ್ತನಂತೆ, ಮಾತಾಡಿ ಸಾರ್."

"ಹಲೋ?"

"ನಾನು ಸಾರ್ ಯಾಹು."

"ಏನ್ರಿ ಯಾಹು?"

"ಚನ್ನಾಗಿದ್ದೀರ ಸಾರ್?"

"ಊ...."

"ಕಳೆದ ವರ್ಷ ನಮ್ಮ ಸಂಪಾದಕರ ಜೊತೆ ಸಂದರ್ಶನ ಮಾಡಿದ್ರೊ. ಈ ವರ್ಷ ಫೋನಲ್ಲೇ ಸಂದರ್ಶನ ಮಾಡಾನ ಅಂತ ಫೋನ್ ಮಾಡಿದೆ ಸಾರ್."

"ಫೋನಲ್ಯಲ್ಲ ಸಂದರ್ಶನ ಆಗದಿಲ್ಲ ಕಂಡ್ರಿ."

"ಕೆಲವು ಪ್ರಶ್ನೆ ಇವೆ ಅಷ್ಟೇ ಸಾರ್."

"ಏನು?"

"ನಿಮ್ಮ ಮೂರು ವರ್ಷದ ಸಾಧನೆಗೆ ನೀವೇ ಬೆನ್ನು ತಟ್ಟಗಂಡಿದ್ದೀರಲ್ಲ ಸಾರ್?"

"ಯಾರೂ ತಟ್ಟಲಿಲ್ಲ ಅಂದ್ರೆ ಇನ್ನೇನು ಮಾಡದು?"

"ಒಂದು ವಿಷಯ ಸಾರ್, ಯಾಕೋ ನೀವು ಈಶ್ವರಪ್ಪ ನಂಗೆ ಮಾತಾಡ್ತಾಯಿದ್ದಿರಿ?"

"ನಾನೆಲ್ಲಿ ಮಾತಾಡಿದೆ?"

"ಈಶ್ವರಪ್ಪ ಇನ್ನು ಇಪ್ಪತ್ತು ವರ್ಷ ಬಿಜೆಪಿ ಸರ್ಕಾರನೆ ಇರುತ್ತೆ ಅಂದ್ರು. ಅಮ್ಯಾಲೆ ಹದಿನೈದು ವರ್ಷಕ್ಕೆ ಬಂದ್ರು. ನಂತ್ರ ತಾವೇ ಸೋತೋದ್ರು."


"ನಮ್ಮ ಕಾರ್ಯಕ್ರಮದ ಆಧಾರದ ಮೇಲೆ ಹಂಗೇಳಿದ್ದಿನಿ. ಬರಕ್ಮ ಟ್ರೈ ಮಾಡ್ತೀವಿ."

"ಅಹಿಂದ ಅಂತ ನೀವು ಮಾತ್ರ ಹೇಳ್ತಿರಿ. ಅದೇ ನಿಮ್ಮ ಪಕ್ಷದ ಯಾರೂ ಬಾಯಿಬಿಡಲ್ಲವಲ್ಲ ಸಾರ್?"

"ಬಾಯಿ ಬುಡಲ್ಲ ಅಂದ್ರೆ ಬುಡಸಕ್ಕಾದತೇನ್ರೀ? ನಾನು ಅಹಿಂದ ಅಂತ ನೂರಾರು ಸಭೆ ಮಾಡಿ, ಅದೇ ಹೆಸರಲ್ಲಿ ಗೆದ್ದು ಬಂದು ಸರ್ಕಾರ ಮಾಡಿದ್ದಿನಿ. ಈಗ್ಲು ಅದ್ನೆ ಹೇಳ್ತಿನಿ. ನಾನೇಳಿದ್ರೆ ಸಾಕಲ್ಲವಾ? ನನ್ನ ಸರ್ಕಾರದೋರ್‍ಯಲ್ಲ ಹೇಳಬೇಕಾಗಿಲ್ಲ."

"ಅಹಿಂದದ ಒಂದು ಸ್ಥೂಲವಾದ ಗುರಿ ಹೇಳಿ."

"ನಮ್ಮ ಕಾರ್ಯಕ್ರಮ ನೋಡಿ ಗೊತ್ತಾಯ್ತದೆ. ನನ್ನ ಶ್ರಮ ಅಹಿಂದ ಜನಗಳಿಗೆ ಸಾಮಾಜಿಕವಾದ ಸವಲತ್ತುಗಳನ್ನು ಕೊಡೋದು. ದೇವೇಗೌಡ್ರು ಪಾರ್ಟಿ ಶ್ರಮ ಏನಂದ್ರೆ ಮಕ್ಕಳು ಮರಿನ ಅಧಿಕಾರಕ್ಕೆ ತರೋದು. ಬಿಜೆಪಿಗಳ ಶ್ರಮ ಏನೂ ಅಂದ್ರೆ ಅಧಿಕಾರದಲ್ಲಿ ಪುರೋಹಿತ ಹಿತಾಸಕ್ತಿಗಳನ್ನು ಸ್ಥಾಪನೆ ಮಾಡೋದು. ಅವರದು ಸರಿನೊ ನಂದು ಸರಿನೊ?"



"ಅಂದು ಅರಸು ಇಂದು ಸಿದ್ದರಾಮಯ್ಯ ಅಂತಾರಲ್ಲ, ಇದಕೇನೇಳ್ತಿರಿ?"

"ಅರಸುನೆ ಬೇರೆ ನಾನೆ ಬೇರೆ. ಆ ಕಾಲ ಬೇರೆ ಈ ಕಾಲ ಬೇರೆ."

"ನೀವು ಸ್ವಜಾತಿಯವರಿಗೆ ಮಣೆ ಹಾಕಿದ್ದಿರಂತೆ?"

"ನಮ್ಮವರನ್ನ ನಾನು ಮಂತ್ರಿ ಮಾಡಿದ್ದಿನಾ? ನಾನು ಒಬ್ಬನೇ ಇರದು. ಕಾಣ್ತಾಯಿಲ್ಲವಾ?"

"ಶಾಶ್ವತವಾದ ಯಾವ ಕಾರ್ಯಕ್ರಮಗಳೂ ಇಲ್ಲವಂತೆ?"

"ಶಾಶ್ವತ ಕಾರ್ಯಕ್ರಮ ಅಂದ್ರೇನು?"

"ಅರಸು ಕಾಲ್ದಲ್ಲಿ ಜಾರಿಯಾದವು."

"ಅರಸು ಕಾಲ್ದಲಿ ಜಾರಿಯಾದವ ಪುನಃ ಜಾರಿ ಮಾಡಕಾದತ್ತೇನ್ರಿ? ಯಾವನ್ರಿ ಅಂಗಂದೋನು?"

"ನಿಮ್ಮ ಸರ್ಕಾರದಲ್ಲಿ ಸಣ್ಣಪುಟ್ಟ ಜಾತಿಗಳೇ ಇಲವಂತಲ್ಲಾ."

"ನನ್ನ ಸರ್ಕಾರದಲ್ಲಿ ಗುರುತಿಸಿ ಸ್ಥಾನಮಾನ ಕೊಟ್ಟರೋವಷ್ಟು ಜಾತಿ ಇನ್ನಾವ ಸರ್ಕಾರದಲ್ಲೂ ಇರಲಿಲ್ಲ."

"ಯಡಿಯೂರಪ್ಪ, ಕುಮಾರಸ್ವಾಮಿಗೆ ಪರವಾಗಿಲ್ಲ ಅಂತಾ ಅವುರೆ."

"ಯಾರು?"

"ರಾಮುಲು ಅತ್ರ ಇದ್ದ ವಕೀಲರು."

"ಅವುರು ಇನ್ನೇನೇಳ್ತರಿ. ಇಡೀ ಯಡಿಯೂರಪ್ಪನ ಆಡಳಿತದ ಕಾಲದಲ್ಲಿ ಬಳ್ಳಾರಿ ಗಣಿ ಲೂಟಿಯಾಗೋಯ್ತು, ಆಗೇಲಿದ್ರು ನಿಮ್ಮ ವಕೀಲರು?"

"ರಾಮುಲು ರೆಡ್ಡಿಗಳತ್ರ ವಕಾಲತ್ತು ಮಾಡತಿದ್ರು ಸಾರ್."

"ನಾನೂ ವಕೀಲ ಆಗಿದ್ದೆ ಕಂಡ್ರಿ. ನಾವು ವಕಾಲತ್ತಲ್ಲಿ ಒಂದು ಸೈಡು ಮಾತ್ರ ವಾದುಸ್ತಿವಿ. ಇನ್ನೊಂದು ಸೈಡು ಬೇಕಾಗದಿಲ್ಲ. ಅಂಥೋರು ಮಾತ ಕಟಿಗಂಡು ಪ್ರಶ್ನೆ ಕೇಳ್ತಿರಲ್ರೀ!"

"ವಕೀಲ್ರ ನಿಮ್ಮತ್ರ ಕರಕಂಡು ಬರ್ಲ ಸಾರ್?"

"ಯಾಕೆ?"

"ಅವುರು ಸುಮ್ಮನೆ ಇರಕ್ಕೆ ತುಂಬ ಕಷ್ಟಪಡ್ತ ಅವುರೆ. ಹಿಂದುಳಿದ ವರ್ಗದ ಸರ್ಕಾರ ಇರುವಾಗ ನಾವು ಅದರಲ್ಲಿ ಭಾಗಿಯಾಗಬೇಕು ಅಂತಯಿದ್ದಾರೆ."

"ಅದಕ್ಕೆ ನಾವೇನು ಮಾಡಬೇಕು?"

"ಯಾವುದಾದ್ರು ಸ್ಥಾನಮಾನ ಇದ್ರೆ ಕೊಟ್ಟು ಸುಮ್ಮನಿರಸಬಹುದು."

"ಅಂಥೋರು ಇಲ್ಲೆ ಜಾಸ್ತಿಯಾಗ್ಯವುರೆ ಕಂಡ್ರೀ."

"ಸಲಹೆಗಾರನಾಗಿ ತಗೋಬಹುದಲ್ಲ ಸಾರ್?"

"ಯಾವ ತರಾ?"

"ಕೆಂಪಯ್ಯನ್ನ ಇಟಗಂಡಿದ್ದೀರಲ್ಲ ಅಂಗೆ."

"ಯಾವ ಜಾತಿ ಅವುನು?"

"ಕೆಳಜಾತಿ"

"ಕೆಳಜಾತಿಯಾಗಿದ್ದು ಅಹಿಂದ ಸರ್ಕಾರ ಯಾಕೆ ಟೀಕೆ ಮಾಡ್ತನೆ?"

"ಸಾರ್, ನಿಮಗೆ ಇನ್ನೊಂದು ವಿಷಯ ಗೊತ್ತಿಲ್ಲ, ಮೇಲ್ಜಾತಿ ಜನ ಅದೇನೋ ಸಿದ್ದರಾಮಯ್ಯ ಮಾಡಿಕಂಡೋಗ್ಲಿ ಅಂತ ಸುಮ್ಮನವುರೆ. ಅದೇ ಕೆಳಜಾತಿ ಜನ ಅಪಪ್ರಚಾರ ಶುರು ಮಾಡಿಕಂಡು ಸಿದ್ದರಾಮಯ್ಯನಿಂದ ದಲಿತ್ರ ಉದ್ಧಾರ ಸಾಧ್ಯಯಿಲ್ಲ, ಪರಮೇಶನ್ನ ಸೋಲಿಸಿದ್ದೇ ಸಿದ್ದರಾಮಯ್ಯ ಅಂತ ಹೇಳಿಕಂಡು ತಿರುಗ್ತ ಅವುರೆ. ಈ ವಿಷಯದಲ್ಲಿ ದಲಿತರು ಮುಖ್ಯಮಂತ್ರಿಯಾಗಬೇಕು ಅಂತ ಸಭೆ ಮಾಡಿದ ಶಿವರಾಮ, ದಲಿತ ಸಂಘದಿಂದ್ಲೆ ಸಸ್ಪೆಂಡಾದೋನೊಬ್ಬ ಮೂಡಿಗೆರೆ ಮೋಟಮ್ಮ ಇಂಥೋರ್‍ಯಲ್ಲ ಅವುರೆ. ಆದ್ರಿಂದ ಅಹಿಂದ ಜಪ ಬುಟ್ಟು ಆಡಳಿತ ಮಾಡಿ ಸಾರ್."

"ಆದ್ಯಂಗಾಯ್ತದೇ?"

"ಎಸ್ಸೆಂ ಕೃಷ್ಣ ಮಾಡಲಿಲ್ವೆ ಅಂಗೆ."

"ಅವರು ಎಸ್ಸೆಂ ಕೃಷ್ಣ ನಾನು ಸಿದ್ದರಾಮಯ್ಯ."

"ಇನ್ನೊಂದು ವಿಷಯ ಸಾರ್, ನೀವು ಯಾವ ಚಳವಳಿನೂ ಮಾಡಿಲ್ಲವಂತಲ್ಲ ಸಾರ್?"

"ಯಾವ ಚಳವಳಿ ಮಾಡಬೇಕಾಗಿತ್ತು?"

"ಯಾವ ಚಳವಳಿನೂ ಮಾಡದೆ ಇರೋರು ಕೇಳಿದ ಪ್ರಶ್ನೆ ಸಾರಿದು."

"ಅಲ್ಲಾ ಕಂಡ್ರಿ, ನಾನು ರೈತ ಚಳವಳೀಲಿದ್ದೆ, ನನ್ನನ್ನ ಗುರುತಿಸಿ ಕಾರು ಕೊಟ್ಟು, ಚುನಾವಣೆಗೆ ನಿಲ್ಲಿಸಿದೋರು ಪ್ರೊ. ನಂಜುಂಡಸ್ವಾಮಿಗಳು. ದೇವನೂರು, ರಾಮದಾಸು ಇವರ ಜೊತೇಲೂ ಇದ್ದೆ, ನಾನು ಮಾಡಿದ ಒಂದೇ ಒಂದು ದೊಡ್ಡ ಚಳವಳಿ ಅಂದ್ರೆ ಬಳ್ಳಾರಿ ಪಾದಯಾತ್ರೆ."

"ಬಳ್ಳಾರಿಗೆ ಪಾದಯಾತ್ರೆ ಹೋದವರು ಲೋಕಾಯುಕ್ತರ ನಿಷ್ಕ್ರಿಯೆ ಮಾಡದನ್ನ ನಂಬಕ್ಯಾಗಲ್ಲ ಅಂದವುರೆ ಜಡ್ಜ್."

"ನಿಷ್ಕ್ರಿಯೆ ಎಲ್ಲಿ ಮಾಡಿದ್ದಿವಿ? ಅದರ ಕೆಲಸ ಅದು ಮಾಡ್ತ ಅದೆ. ಆ ಭಾಸ್ಕರ್ ರಾವ್‌ನ್ನ ನೇಮಿಸಿದೋರು ನಾವೆ? ಅವನಿಂದ ಲೋಕಾಯುಕ್ತಕ್ಕೆ ಕೆಟ್ಟ ಹೆಸರುಬಂದ ಹೊಣೆಗಾರಿಕೆನ ಯಾರು ಹೊರಬೇಕು?"

"ನಿಮ್ಮ ನಂತರ ನೀವು ಅಹಿಂದ ನಾಯಕರ ಬೆಳೆಸಿಲ್ಲವಂತೆ."

"ಯಾರೂ ಯಾರನ್ನ ಬೆಳೆಸಕ್ಯಾಗಲ್ಲ ಕಂಡ್ರಿ. ಪಾಪ ದೇವೇಗೌಡ್ರು ಲೀಡ್ರುಗಳನ್ನ ಬೆಳಸೋರು, ಕಡಿಗೆ ಅವರ ವಿರುದ್ಧನೆ ಹೋರಾಡತಿದ್ರು. ಇವತ್ತಿಗೂ ಅದೇ ರಾಜಕಾರಣ ಮಾಡಿ ಅವರ ಶ್ರಮನೆ ಹಾಳಾಯ್ತು. ಅದಕ್ಕೆ ಲೀಡ್ರುಗಳು, ಅದರಲ್ಲೂ ಅಹಿಂದ ಲೀಡ್ರುಗಳು, ತಮ್ಮ ನಡವಳಿಕೆಯಿಂದ, ಜಾತ್ಯತೀತ ಗುಣಗಳಿಂದ ಬೆಳೆದು ಬರಬೇಕೆ ಹೊರತು ನಾನು ಬೆಳೆಸಕ್ಯಾಗಲ್ಲ, ಬ್ರೈನ್‌ಲೆಸ್ ಜನ ಇಂತ ಆಪಾದ್ನೆ ಮಾಡ್ತರೆ. ಅದಕ್ಯಲ್ಲ ತಲೆ ಕೆಡಿಸಿಕೊಬಾರ್ದು."

"ನಿಮ್ಮ ಅಹಿಂದ ಕಾಳಜಿ ಒಂದಿಷ್ಟು ಅತಿಗೋಗಿದೆ ಅನ್ಸಲ್ವ?"

"ಅತಿಗೋದ್ರೆ ಕಂಡ್ರಿ ಕೆಲಸ ಆಗದು. ನೋಡಿ ನಮ್ಮ ಜಿಲ್ಲಾ ಪಂಚಾಯ್ತಿ ಮೀಸಲು ನಿರ್ಧಾರದಿಂದ ಒಂದು ಮಹಿಳಾ ಕ್ರಾಂತಿನೆ ನಡದಿದೆ. ಇದು ಸಮಾಜ ವಿಜ್ಞಾನಿಗಳಿಗೆ ಮಾತ್ರ ಹೊಳಿಯೋ ಅಂತದ್ದು. ನಾನು ಯಾರಿಂದ್ಲಾದ್ರು ಹೊಗಳಿಸಿಗಳಕ್ಕೆ ಈವರಿಗೂ ಏನೂ ಮಾಡಿಲ್ಲ, ನನಿಗೆ ಸರಿಕಂಡಿದ್ದ ಮಾಡ್ತ ಹೋಯ್ತಿನಿ, ಅಷ್ಟೇಯ."

"ಒಂದು ಕೊನೆ ಪ್ರಶ್ನೆ ಸಾರ್. ಮೀಡಿಯಾದವುರ ಒಲಿಸಿಗಳಕ್ಕೆ ಏನಾರ ಮಾಡ್ತಿರಾ?"

"ಏನು ಮಾಡದೂ?"

"ದುಡ್ಡು, ಕಾಸು, ಸೈಟು, ಪಾರ್ಟಿಗಳು ಹಿಂಗೆ ಏನಾರ ಮಾಡಬೇಕು."


"ಬ್ಯಾಡ. ಈ ಮೂರೊರ್ಸ ಹ್ಯಂಗಿದ್ವೋ ಅಂಗೆ ಇರನ. ಅವುರ ಕೆಲಸ ಅವುರ ಮಾಡ್ಲಿ, ನಮ್ಮ ಕ್ಯಲಸ ನಾವು ಮಾಡಣ." ●

ಮೆಟ್ಟಣ್ಣನ ಹೊಸ ಗಿಮಿಕ್

ಅಭಿನವ ಶಿವಾಜಿ, ಅಭಿನವ ಸುಭಾಷ್ ಚಂದ್ರ ಭೋಸ್, ಅಭಿನವ ತಾತ್ಯಾ ಟೋಪೆ ಮುಂತಾದ ಹಲವು ಅಭಿನವಗಳನ್ನು ಒಂದು ಕಾಲದಲ್ಲಿ ತಲೆ ಮೇಲೆ ಹೊತ್ತುಕೊಂಡು ಜನರನ್ನು ಯಾಮಾರಿಸಿದ್ದ ಅಭಿನಯ ಚತುರ ಗಿರೀಶ್ ಮಟ್ಟಣ್ಣನವರ್ ಜನರು ತನ್ನನ್ನು ಮರೆತು ಶತಮಾನಗಳೇ ಕಳೆದವಲ್ಲ ಎಂದು ಶ್ಯಾನೆ ದುಃಖಕ್ಕೆ ಒಳಗಾಗಿ ಹೊಸದೊಂದು ಗಿಮಿಕ್‌ಗೆ ತೊಡಗಿ ಜನರ ನಡುವೆ ಮೆಟ್ಟಣ್ಣನಾಗಿ ನಗೆಪಾಟಲಿಗೀಡಾಗಿದ್ದಾನಲ್ಲ,

ಬದುಕಿನಲ್ಲಿ ಯಾವೊಂದನ್ನೂ ಕೂಡ ಸುಸೂತ್ರದಲ್ಲಿ ಮಾಡಿಲ್ಲದ ಬಾಂಬ್ ಗಿರಾಕಿ ಮೆಟ್ಟಣ್ಣ ನಿಜಕ್ಕೂ ನಿಯತ್ತಿನವನಾಗಿದ್ದದ್ದರೆ ಈಗಾಗಲೇ ಯಾವುದೋ ಮುಖ್ಯ ಪೊಲೀಸ್ ಅಧಿಕಾರಿ ಹುದ್ದೆಯಲ್ಲಿದ್ದು ಅಲ್ಲಿಂದಲೇ ಭ್ರಷ್ಟಾಚಾರವೋ ಅನ್ಯಾಯವೋ ಅದರ ವಿರುದ್ಧ ಸಮರ ಸಾರಿ ಹೆಸರು ಮಾಡಬಹುದಿತ್ತು, ಆದರೆ ಅದು ಆತನ ಜನ್ಮಕುಂಡಲಿಗೇ ಒಗ್ಗುವಂಥಾದ್ದಲ್ಲವೆಂದು ಎಲ್ಲರಿಗೂ ತಿಳಿದಿರುವಂಥಾದ್ದೇ.

ಯಾರಿಗೂ ಪರಿಚಯವಿರದಿದ್ದ ಮಹಾರಾಷ್ಟ್ರ ರಾಳೇಗಾಂವ್ ಸಿದ್ಧಿಗೆ ಸೀಮಿತವಾಗಿದ್ದ ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ಚಳವಳಿಗೆ ನಿಂತಿದ್ದಾರೆಂದು ಕೇಳಿ ಇಡೀ ದೇಶವೇ ಅವರ ಹಿಂದೆ ನಿಂತು ಅವರು ದೇಶದ ಮನೆಮಾತಾಗಿ ಹೋದರು. ಮೋದಿ ಭ್ರಷ್ಟಾಚಾರವನ್ನು ಹೊಡೆದೋಡಿಸುತ್ತಾರೆ, ಇಲ್ಲಿನ ಧನಿಕರು ವಿದೇಶದಲ್ಲಿ ಬಚ್ಚಿಟ್ಟ ಹಡಬೆ ಹಣವನ್ನು ಮೋದಿ ಸಾಹೇಬರು ಕೆಲವೇ ದಿನಗಳಲ್ಲಿ ತಂದೇ ತರುತ್ತಾನೆ ಎಂದು ಮಾಧ್ಯಮಗಳ ಸುಳ್ಳು ಪ್ರಚಾರಕ್ಕೆ ಬೇಸ್ತು ಬಿದ್ದ ಜನರು ಮೋದಿಯನ್ನು ಭರ್ಜರಿಯಾಗಿ ಗೆಲ್ಲಿಸಿದ್ದರು. ಇದು ದೇಶದಲ್ಲಿರುವ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಬೇಸತ್ತ ಜನ ಯಾವ ರೀತಿ ನಿಶ್ಯರ್ಥವಾಗಿ ಪ್ರತಿಕ್ರಿಯಿಸುತ್ತಾರೆನ್ನುವುದಕ್ಕೆ ಕೆಲ ಉದಾಹರಣೆಗಳಷ್ಟೆ. ಜನರ ಈ ಮನಸ್ಥಿತಿಯನ್ನೇ ಕೆಲವರು ಬಂಡವಾಳ ಮಾಡಿಕೊಳ್ಳುವುದುಂಟು. ಮೆಟ್ಟಣ್ಣ ಆವತ್ತು ಶಾಸಕರ ಭವನಕ್ಕೇ ಬಾಂಬಿಟ್ಟು ಮನೆಹಾಳ ಕೆಲಸ ಮಾಡಿದ್ದರೂ ಆತ ಜನರ ಕಣ್ಮಣಿಯಾಗಿದ್ದುದು ಇದೇ ಕಾರಣಕ್ಕೇ ತಾನೇ? ಜನರ ಕನಸಿನ ಕಣ್ಮಣಿಯಾಗಿ ಹೋದ ಮೆಟ್ಟಣ್ಣ ನಂತರ ಮಾಡಿದ್ದು ಮಾತ್ರ ತಲೆಕೆಟ್ಟ ಕೆಲಸ ಬಿಟ್ಟರೆ ಬೇರೇನಿಲ್ಲ, ತನಗೆ ಸಿಕ್ಕ ಅಧಿಕಾರವನ್ನು ಬಳಸಿಕೊಂಡು



ಜನ ನೆನಪಿಡುವಂತಹ ಕಾರ್ಯ ಸಾಧಿಸಿ ತೋರಲೂ ಆತ ಮುಂದಾಗಲೇ ಇಲ್ಲ ಇಂತವನದ್ದು ಇದೀಗ ಅದೇ ಹಳೆ ಗಿಮಿಕ್.

ವಿವಾದಾತ್ಮಕ ಕಳಸಾ ಬಂಡೂರಿ ನಾಲೆಯ ಆಣೆಕಟ್ಟನ್ನು ಆತ ಹರಹರ ಮಹಾದೇವ್ ಎನ್ನುತ್ತಾ ಪಿಕಾಸಿನಿಂದ ಒಂದೇ ಏಟಿಗೆ (ಮೋದಿ ಸಾಹೇಬರು ಮೊಸಳೆಗಳೊಂದಿಗೆ ಕಾದಾಡಿದಂತೆ, ಹತ್ತು ಸಾವಿರ ಜನರನ್ನು ಕಾಮಿಕ್ಸ್ ಹೀರೋ ಫ್ಯಾಂಟಮ್‌ನಂತೆ ಬಚಾವು ಮಾಡಿದ ಹಾಗೆ) ಒಡೆದು ಬಿಸಾಕಿದನಂತೆ ವಾವ್?.! ಮೆಟ್ಟಣ್ಣ ನಿನ್ನ ತಿಕ್ಕಲು ಇಳಿಯಿತೇ?!


ಒಂದುವೇಳೆ ಆತ ಅದನ್ನು ಒಡೆದದ್ದೇ ಆದರೆ ನ್ಯಾಯಾಲಯ ವಿವಾದದಲ್ಲಿರುವ ಇದರಿಂದ ನಮಗೆ ಲಾಭಕ್ಕಿಂತ ಹೆಚ್ಚು ನಷ್ಟವೇ ಅನ್ನೋದು ಈ ಬುದ್ಧಿಗೇಡಿಗೆ ಗೊತ್ತಿಲ್ಲವೇ? ಅಷ್ಟೇ ಅಲ್ಲ ಆತ ಅದನ್ನು ಒಡೆದಿದ್ದರೆ ಆತ ಅಲ್ಲೇ ನೀರಲ್ಲಿ ಮುಳುಗಿ ಸತ್ತುಹೋಗುತ್ತಿದ್ದ ಎಂಬ ಜ್ಞಾನವೂ ಆತನಿಗೆ ಇಲ್ಲವಾಯಿತೆ?

ಇಂತಹ ಹುಚ್ಚಾಟದ ಮೆಟ್ಟಣ್ಣನನ್ನು ಒದ್ದು ಒಳಹಾಕುವವರು ಯಾರೂ ಇಲ್ಲವೇ?

- ಆರ್.ಎಸ್.ಪಿ. ಮಂಗಳೂರು

ಸಾಂಸ್ಕೃತಿಕ ಅವನತಿಯನ್ನು ಬಿಚ್ಚಿಡುವ 'ತಿಥಿ'

ದಿನಕ್ಕೊಂದು ರೈತನ ಆತ್ಮಹತ್ಯೆಯ ಸುದ್ದಿ ಓದುವ ನಮಗೆ 'ತಿಥಿ' ಈ ಪಿಡುಗಿಗೆ ಹಿಡಿದ ಕನ್ನಡಿಯಂತೆ ಕಾಣಿಸಬೇಕಿತ್ತು. ಕನ್ನಡ ಸಂಸ್ಕೃತಿಯ ಬೇಗುದಿಯ ಪ್ರತಿಬಿಂಬದಂತೆ 'ತಿಥಿ' ಚಿತ್ರ ವ್ಯಕ್ತವಾಗಬೇಕಿತ್ತು. ಸೋಕಾಲ್ಡ್ ಧರ್ಮವೊಂದರ ಅವನತಿ, ಸಮಾಜವೊಂದರ ನೈತಿಕ ದುರ್ಗತಿ ಮತ್ತು ಆರ್ಥಿಕ ಉದಾರೀಕರಣದ ಪ್ರತಿಫಲವಾದ ಕೃಷಿ ಬಿಕ್ಕಟ್ಟಿನ ಫಲಶ್ರುತಿಗಳೆಲ್ಲವನ್ನೂ ತನ್ನ ವಿಡಂಬಕ ಕಥನ ಶೈಲಿಯಲ್ಲೇ ಹುದುಗಿಸಿಕೊಂಡ 'ತಿಥಿ' ಅಂತರರಾಷ್ಟ್ರೀಯವಾಗಿ ಭಾರತದ ಹಳ್ಳಿಗಳನ್ನು ನೆಗೆಟಿವ್ ಆಗಿ ಬಿಂಬಿಸುತ್ತದೆಯೆಂಬ ಆರೋಪದಲ್ಲೇ ಪ್ರಾಮಾಣಿಕತೆಯ ಕೊರತೆ ಕಾಣಿಸುತ್ತದೆ.


ಸೆಂಚುರಿಗೌಡ

ಸೆಂಚುರಿಗೌಡ ಸಾಧಾರಣದವನಲ್ಲ. ನೂರಾ ಒಂದು ವರ್ಷ ಬದುಕಿ ಹೆಸರು ಮಾಡ್ದೋನು. ಸುತ್ತ ಹತ್ತು ಹಳ್ಳಿಗಳಲ್ಲಿ ಮೆರೆದವನು. ಅಂಥವನ ತಿಥಿ ಅಂದ್ರೆ ತಮಾಷೆ ಅಂದುಕೊಂಡ್ರಾ? ಮರಿ ಕಡೀಲೇಬೇಕು. ಇನ್ನು ಜಾತಿಯಿಂದ ನೀವು ಗೌಡ್ರು. ಸುತ್ತಮುತ್ತಲ ಹಳ್ಳಿಯವರನ್ನೆಲ್ಲ ಕರೆದು ಬಾಡೂಟ ಹಾಕಿಸ್ಲೇಬೇಕು. ಇಲ್ಲಾಂದ್ರೆ ಕರ್ಮ ಸುತ್ಕೋತದೆ....!

ಹಳ್ಳಿಯ ಶಾಸ್ತ್ರದವನೊಬ್ಬ ಸೆಂಚುರಿಗೌಡನ ಮೊಮ್ಮಗ ತಮ್ಮಣ್ಣ ಅರ್ಥಾತ್ ತಮ್ಮೇಗೌಡನನ್ನು ಕೂರಿಸಿಕೊಂಡು ತಿಥಿ ಬಾಡೂಟದ ಶೂಲಕ್ಕೇರಿಸುವ ಈ ದೃಶ್ಯವೇ 'ತಿಥಿ' ಚಿತ್ರದ ಕಥೆಯ ಮುಖ್ಯ ತಿರುವುಗಳಲ್ಲೊಂದು. ಚಿತ್ರವು ಸೆಂಚುರಿಗೌಡನ ಸಾವಿನೊಂದಿಗೆ ಶುರುವಾಗುತ್ತದೆಯಾದರೂ ಅದರ ಮುಂದಿನ ಘಟನಾವಳಿಗಳೆಲ್ಲವೂ ತಿಥಿಯ ಬಾಡೂಟದ ಸುತ್ತಲೇ ಚಲಿಸಲಾರಂಭಿಸುತ್ತವೆ. ನೂರೊಂದು ವರ್ಷ ಬದುಕಿದ ಸೆಂಚುರಿಗೌಡ ಯಾನೇ ಚನ್ನವೀರೇಗೌಡನೇನೋ ಸತ್ತವನು ಸತ್ತ. ಆದರೆ ಬದುಕುತ್ತಿರುವ ಅವನ ಮಗ, ಮೊಮ್ಮಗ, ಮರಿಮಕ್ಕಳು ಆತನ ತಿಥಿಗಾಗಿ ಹೆಣಗಬೇಕಾದ ಫಜೀತಿಗಳು ಮತ್ತು ಭಾರತದಂಥ ದೇಶವೊಂದರ ಟಿಪಿಕಲ್ ಹಳ್ಳಿಯೊಂದರ ಸಾಮಾನ್ಯ ಕುಟುಂಬದ ಆರ್ಥಿಕ ಸಂಕಷ್ಟಗಳೇ ವಿಡಂಬಕ ಚಿತ್ರವೊಂದಕ್ಕೆ ಕತೆಯಾಗಬಹುದು.

'ತಿಥಿ' ಅಂತರರಾಷ್ಟ್ರೀಯವಾಗಿ ಹೆಸರು ಮಾಡಿದ ಕನ್ನಡ ಚಿತ್ರ. ಪತ್ರಿಕೆಗಳಲ್ಲಿ ಅದರ ವೈವಿಧ್ಯದ ಕುರಿತಂತೆ ಪುಟಗಟ್ಟಲೆ ಬರೆದಾಗಿದೆ. ಕನ್ನಡ ಸಿನಿಮಾ ವ್ಯಾಕರಣಕ್ಕೇ ಇದೊಂದು ಸವಾಲೆಂದು ವರ್ಣಿಸಿದವರುಂಟು. ನಿರ್ದೇಶಕ ರಾಮ್ ರೆಡ್ಡಿಯವರ ಪ್ರತಿಭೆಯನ್ನು ಹೊಗಳಿದವರುಂಟು. ಚಿತ್ರದ ತಾಂತ್ರಿಕತೆ, ವಿಭಿನ್ನ ನಿರೂಪಣೆ, ಯಾರೇ ನಟರಿಲ್ಲದೆ ಹಳ್ಳಿಯ ಪಾತ್ರಗಳನ್ನೇ ಯಥಾವತ್ತಾಗಿ ಬಳಸಿದ್ದು, ಚಿತ್ರದ ಕಥೆ; ಎಲ್ಲವೂ ಕನ್ನಡ ಸಿನಿಮಾ ಜಾಯಮಾನಕ್ಕೆ ಹೊಸದೇ.

ಆದರೆ ಯಾರೂ ಗಮನಿಸದ ಸೂಕ್ಷ್ಮವೊಂದು 'ತಿಥಿ' ಚಿತ್ರದ ಕತೆಯೊಳಡಗಿದೆ. ಅದು ಸಾಂಸ್ಕೃತಿಕ ಅಧಃಪತನ, ಹಳ್ಳಿಗಳ ಅವನತಿ ಮತ್ತು ದಿವಾಳಿಯೆದ್ದ ಗ್ರಾಮೀಣ ಆರ್ಥಿಕತೆಯ ದುರ್ಗತಿ!

ದಿನಕ್ಕೊಂದು ರೈತನ ಆತ್ಮಹತ್ಯೆಯ ಸುದ್ದಿ ಓದುವ ನಮಗೆ 'ತಿಥಿ' ಈ ಪಿಡುಗಿಗೆ ಹಿಡಿದ ಕನ್ನಡಿಯಂತೆ ಕಾಣಿಸಬೇಕಿತ್ತು. ಕನ್ನಡ ಸಂಸ್ಕೃತಿಯ ಬೇಗುದಿಯ ಪ್ರತಿಬಿಂಬದಂತೆ 'ತಿಥಿ' ಚಿತ್ರ ವ್ಯಕ್ತವಾಗಬೇಕಿತ್ತು. ಸೋಕಾಲ್ಡ್ ಧರ್ಮವೊಂದರ ಅವನತಿ, ಸಮಾಜವೊಂದರ ನೈತಿಕ ದುರ್ಗತಿ ಮತ್ತು ಆರ್ಥಿಕ ಉದಾರೀಕರಣದ ಪ್ರತಿಫಲವಾದ ಕೃಷಿ ಬಿಕ್ಕಟ್ಟಿನ ಫಲಶ್ರುತಿಗಳೆಲ್ಲವನ್ನೂ ತನ್ನ ವಿಡಂಬಕ ಕಥನ ಶೈಲಿಯಲ್ಲೇ ಹುದುಗಿಸಿಕೊಂಡ 'ತಿಥಿ' ಅಂತರರಾಷ್ಟ್ರೀಯವಾಗಿ ಭಾರತದ ಹಳ್ಳಿಗಳನ್ನು ನೆಗೆಟಿವ್ ಆಗಿ ಬಿಂಬಿಸುತ್ತದೆಯೆಂಬ ಆರೋಪದಲ್ಲೇ ಪ್ರಾಮಾಣಿಕತೆಯ ಕೊರತೆ ಕಾಣಿಸುತ್ತದೆ.


2015 ರ ಆಗಸ್ಟ್‌ನಲ್ಲಿ ಸ್ವಿಟ್ಜರ್‌ಲ್ಯಾಂಡಿನ ಲೊಕಾರ್ನೋ ಚಿತ್ರೋತ್ಸವದಲ್ಲಿ 'ತಿಥಿ' ಅತ್ಯುತ್ತಮ ಚಿತ್ರವಾಗಷ್ಟೇ ಅಲ್ಲ, **best debut film** ಎಂಬ ಹೆಗ್ಗಳಿಕೆಗೂ ಪಾತ್ರವಾದಾಗ ದೇಶದ ಚಿತ್ರಬ್ರಹ್ಮರ ಕಣ್ಣುಬಿತ್ತು. ತದನಂತರ ಮುಂಬಯಿ ಫಿಲ್ಮ್ ಫೆಸ್ಟಿವಲ್‌ನ ಅಂತರರಾಷ್ಟ್ರೀಯ ವಿಭಾಗದಲ್ಲಿ ತಿಥಿಗೆ ಜ್ಯೂರಿ ಗ್ರ್ಯಾಂಡ್ ಅವಾರ್ಡ್ ಬಂದಾದ ಮೇಲಂತೂ ತಿಥಿಯ ಗುಣಮಟ್ಟದ ಬಗ್ಗೆ ಯಾರೊಬ್ಬರೂ ಮಾತಾಡುವಂತಿರಲಿಲ್ಲ. ಈತನಕ ಇರಾನಿಯನ್ ಮೂವಿಗಳಲ್ಲಷ್ಟೇ ಕಂಡುಬರುತ್ತಿದ್ದ ವಾಸ್ತವ ರೂಪಕ **(realistic)** ಭಾರತದಂಥ **(dramatic)** ಫ್ಯಾಂಟಸಿ ಶೈಲಿಗೆ ಹೊರತಾಗಿತ್ತು. ಇರಾನಿಯನ್, ಟರ್ಕಿ ಮತ್ತು ಈಸ್ಟರ್ನ್ ಯೂರೋಪಿಯನ್ ಚಿತ್ರರಂಗಗಳಲ್ಲಿ ಈ ಥರದ ರಿಯಲಿಸ್ಟಿಕ್ ಶೈಲಿಯೇ ಹೆಚ್ಚು ಜನಪ್ರಿಯ.

ಇರಾನ್‌ನ ಮಾಜ್ಜಿ ಮಖ್ಮಲ್‌ಭಾಫ್‌ರಂಥ ಪ್ರತಿಭಾವಂತ ನಿರ್ದೇಶಕರು ನೈಪುಣ್ಯತೆ ಮೆರೆದ ಇದೇ ಶೈಲಿಯಲ್ಲಿ ಕರ್ನಾಟಕದ ಹಳ್ಳಿಯೊಂದರ ತಲ್ಲಣಗಳನ್ನು ತೆರೆಗೆ ತಂದ ರಾಮ್‌ರೆಡ್ಡಿ ಲೊಕಾರ್ನೋ ಚಿತ್ರೋತ್ಸವಕ್ಕೆ ಪ್ರವೇಶ ಗಿಟ್ಟಿಸಿದ್ದೇ ದೊಡ್ಡ ಸಾಧನೆಯಾಗಿತ್ತು. **2007** ರಲ್ಲಿ ಅಡೂರು ಗೋಪಾಲಕೃಷ್ಣನ್‌ರ ಮಲೆಯಾಳಿ ಚಿತ್ರವೊಂದು ಲೊಕಾರ್ನೋ ಚಿತ್ರೋತ್ಸವಕ್ಕೆ ಭಾರತದ ಚಿತ್ರವಾಗಿ ಪ್ರವೇಶಿಸಿದ್ದೇ ಕೊನೆ. ಬರೋಬ್ಬರಿ **8** ವರ್ಷಗಳ ನಂತರ ಇಂಡಿಯನ್ ಎಂಟ್ರಿಯಾಗಿ ಕಾಲಿಟ್ಟಿದ್ದು ತಿಥಿ. ಸ್ಪರ್ಧೆಯ ಹತ್ತಕ್ಕೆ ಹತ್ತೂ ಪ್ರಶಸ್ತಿಗಳು ತಿಥಿಯ ಪಾಲಾದಾಗ ಭಾರತದ ಅನೇಕ ಸಿನಿಪಂಡಿತರ ಕಣ್ಣು ರಾಮ್‌ರೆಡ್ಡಿಯ ಮೇಲೆ ಬಿದ್ದಿತ್ತು.

ಭಾರತೀಯ ಗ್ರಾಮ್ಯ ಬದುಕನ್ನು ನೆಗೆಟಿವ್ ಆಗಿ ತೋರಿಸಿದ್ದೇ ಪಾಶ್ಚಿಮಾತ್ಯ ವಿಮರ್ಶಕರ ಮೆಚ್ಚುಗೆಗೆ ಕಾರಣವೆಂಬುದು ಎಲ್ಲೋ ತಗಾದೆಯೆಂಬಂತೆ ಕೇಳಿ ಬಂದ ಕೊಂಕಾಗಿತ್ತು. ತಿಥಿ ಚಿತ್ರವನ್ನು ಎತ್ತಿಂದೆತ್ತ ನೋಡಿದರೂ ಇಂಥ ಆಕ್ಷೇಪಣೆಗಳಿಗೆ ಪೂರಕವೆಂಬಂತೆ ತೃಣಮಾತ್ರದ ಸನ್ನಿವೇಶವಾಗಲಿ ಸಂದರ್ಭವಾಗಲಿ ಕತೆಯಲ್ಲಿ ಕಾಣಿಸುತ್ತಿಲ್ಲ. ತಿಥಿ ಗ್ರಾಮೀಣ ಆರ್ಥಿಕತೆಯ ಅವನತಿಯೂ ಹೌದು ತನ್ಮೂಲಕ ಸಂಸ್ಕೃತಿಯೊಂದರ ಅಧಃಪತನದ ಕಥಾನಕ ಕೂಡ.

ನೊರೆಕೊಪ್ಪಲು ಎಂಬುದು ಕೇವಲ ಮಂಡ್ಯದ ಸಾಮಾನ್ಯ ಹಳ್ಳಿಯಷ್ಟೇ ಅಲ್ಲ, ಮೈಸೂರು ಕರ್ನಾಟಕದ ಗ್ರಾಮೀಣ ಸೊಗಡಿನ ಸರ್ವೇಸಾಮಾನ್ಯ ಊರೊಂದರ ಸಂಕೇತವದು. ಆ ಊರಿನ ಯಾರ ಮುಖದಲ್ಲೂ ಸಂತೃಪ್ತಿಯಿಲ್ಲ. ಕೃಷಿ ಅವಲಂಬಿತ ಆರ್ಥಿಕತೆಯೊಂದರ ದುರ್ಗತಿಯ ಉದಾಹರಣೆಯಂತಿರುವ ನೊರೆಕೊಪ್ಪಲಿನ ಹಿರೀಕ ಚನ್ನವೀರೇಗೌಡ ಯಾನೇ ಸೆಂಚುರಿಗೌಡ ತನ್ನ ನೂರಾ ಒಂದನೇ ವರ್ಷಕ್ಕೆ ತೀರಿಕೊಳ್ಳುತ್ತಾನೆ. ಎಲ್ಲರ ಮನೆ ದೋಸೆಯೂ ತೂತೆಂಬಂತೆ ಆತನ ಕುಟುಂಬದ್ದೂ ಅದೇ ಕತೆ. ಇರುವ ಐದೆಕರೆ ಭೂಮಿಯಲ್ಲೇ ಎಲ್ಲವೂ ನಡೆಯಬೇಕು. ಸೆಂಚುರಿಗೌಡನ ಮಗ ಗಡ್ಡಪ್ಪ. ಆತನಿಗೂ **80** ರ ಆಸುಪಾಸಿನ ಇಳಿವಯಸ್ಸು. ಗಡ್ಡಪ್ಪನ ಮಗ ತಮ್ಮಣ್ಣನಿಗೆ ನಲವತ್ತರ ನಡುವಯಸ್ಸು. ತಮ್ಮಣ್ಣನ ಮಗನಿನ್ನೂ ಮೀಸೆ ಬಲಿಯದ ಪೋರ.

ಕುಟುಂಬದ ಹಿರಿತಲೆಯಂತಿದ್ದ ಸೆಂಚುರಿಗೌಡನ ಸಾವು ಕುಟುಂಬದ ಎಲ್ಲಾ ರಕ್ತ ಸಂಬಂಧಗಳನ್ನೂ ನಜ್ಜುಗುಜ್ಜಾಗಿಸುತ್ತದೆ. ಅಂದರೆ ಶಿಥಿಲಗೊಂಡ ಹಳ್ಳಿಯ ಆರ್ಥಿಕತೆಗೂ ಪರಸ್ಪರ ಮನುಷ್ಯ ಸಂಬಂಧಕ್ಕೂ ಅದೃಶ್ಯ ನಂಟಿದೆ. ಸತ್ತ ಸೆಂಚುರಿಗೌಡನ ತಿಥಿಯ ಬಗ್ಗೆ ಮಗ ಗಡ್ಡಪ್ಪನಿಗೆ ಯಾವುದೇ ಆಸಕ್ತಿಯಿಲ್ಲ. ತನ್ನ ಬದುಕು ಯಾವತ್ತಿಗೋ ಮುಗಿದುಹೋದಂತೆ ತಾನಾಯಿತು ತನ್ನ ಕುಡಿತವಾಯಿತು. ಮಿಕ್ಕಂತೆ ಮಕ್ಕಳ ಜೊತೆ ಚೌಕಾಭಾರ ಆಡಿಕೊಂಡಿರುತ್ತಾನೆ. ಐಹಿಕ ಪ್ರಪಂಚಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂಬಂತೆ ವೈರಾಗ್ಯ. ಈತನ ಮಗ ತಮ್ಮಣ್ಣನೇ ಮನೆವಾಳ್ತೆದಾರ.


ತಿಥಿ ನಿರ್ದೇಶಕ ರಾಮ್‌ರೆಡ್ಡಿ, ಕತೆ ಕಾರಣಕರ್ತ ಈರೇಗೌಡ

ಸೆಂಚುರಿಗೌಡನ ತಿಥಿಗೆ ಬಾಡೂಟ ಹಾಕಿಸುವ[...] ಹಳ್ಳಿಯ ಪೂಜಾರಿ ತಾಕೀತು ಮಾಡುವುದ[...] ಕುಟುಂಬವೊಂದರ ದಾರಿದ್ರ್ಯವನ್ನೇ ಅಣಕಿಸುವಂತಿದೆ. ಯ[...] ಕಷ್ಟಕ್ಕೆ ಯಾರೂ ಮರುಗುವವರಿಲ್ಲ, ಸೆಂಚುರಿಗೌಡನ ಸಾವ[...] ಬಾಡೂಟದ ಚಪಲಕ್ಕೆ ಒಡ್ಡುವ ಪೂಜಾರಿ. ಅದಕ್ಕೆ ತಗಲು[...] ಲಕ್ಷಗಟ್ಟಲೆ ಖರ್ಚಿಗೆ ತನ್ನ ಐದೆಕರೆ ಪಿತ್ರಾರ್ಜಿತ ಸೊತ್ತ[...] ಮಾರಲು ಹೊರಟ ತಮ್ಮಣ್ಣ, ಆತನ ಜಮೀನು ಮಾ[...] ಪುಡಿಕಾಸು ಕಮೀಷನ್ ಗಿಟ್ಟಿಸಲೆತ್ನಿಸುವ ಶಾನುಭೋ[...] ಶಾನುಭೋಗನ ಇಸ್ಪೀಟು, ಜೂಜುಕೋರತನದ ವಿರು[...] ಆತನನ್ನು ಬೈಯುವುದನ್ನೇ ಗೀಳಾಗಿಸಿಕೊಂಡ ಆ[...] ಜಗಳಗಂಟ ಪತ್ನಿ, ತನ್ನ ಜಮೀನು ಮಾರಲು ತ[...] ಗಡ್ಡಪ್ಪ ಬದುಕಿರುವುದೇ ಅಡ್ಡಗಾಲೆಂದು ಹೇಚಾಡುವ ಮ[...] ರೈತರ ಸಂಕಷ್ಟವನ್ನೇ ಬಂಡವಾಳ ಮಾಡಿಕೊಂಡು ಪುಡಿಗಾ[...] ಅವರ ಸೊತ್ತು ಮಾರಿ ಹಾಕುವುದನ್ನೇ ದಂಧೆಯಾಗಿಸಿಕೊ[...] ಸಾಮಿಲ್ಲಿನ ಮಾರ್ವಾಡಿ......!

ಇಲ್ಲಿನ ಪ್ರತಿಪಾತ್ರವೂ ದಾರಿದ್ರ್ಯದ ವಿ[...] ಮುಖವಾಡದಂತಿದೆ. ತಾತನ ತಿಥಿಗೆ ಇಡೀ ಕುಟುಂ[...] ಆಧಾರವಾದ ಜಮೀನನ್ನು ಮಾರಲೆತ್ನಿಸುವಲ್ಲಿ ಮೊಮ[...] ತಮ್ಮಣ್ಣನಿಗೆ ಸಣ್ಣದೊಂದು ಪಾಪಪ್ರಜ್ಞೆ ಕೂಡ ಇಲ್ಲ. ಇದ್ದ[...] ದಿನ ಹೋದಷ್ಟು ಗಳಿಗೆ ಎಂಬಂತೆ ದಿವಾಳಿ ಮನಸ[...] ಜಮೀನು ಮಾರಬೇಕೆಂದರೆ ಬದುಕಿರುವ ತನ್ನ ತ[...] ಗಡ್ಡಪ್ಪ ಸತ್ತಿದ್ದಾನೆಂದು ನಕಲಿ ದಾಖಲೆ ಸೃಷ್ಟಿಸಬೇ[...] ಅದಕ್ಕೆಂದು ತಾಲ್ಲೂಕು ಕೇಂದ್ರದ ಬ್ರೋಕರ್ ಓರ್ವನ[...] ಹಿಡಿಯುತ್ತಾನೆ. ಬದುಕಿರುವ ತಂದೆ ಸತ್ತಿದ್ದಾನೆಂದು ನ[...] ಡೆತ್ ಸರ್ಟಿಫಿಕೇಟ್ ಮಾಡಿಕೊಡಲು ಆ ಬ್ರೋಕರ್ [...] ಸಾವಿರ ಕೇಳುತ್ತಾನೆ. ಜೊತೆಗೆ ಜಮೀ[...] ಮಾರಾಟವಾಗುವತನಕ ನಿನ್ನ ತಂದೆ ಯಾರ ಕಣ್ಣ[...] ಕಾಣಿಸದಂತೆ ಇರಬೇಕೆಂಬ ಷರತ್ತನ್ನೂ ವಿಧಿಸುತ್ತಾನೆ.


ಬ್ರೋಕರ್‌ನ ಷರತ್ತಿಗೆ ಒಪ್ಪಿಕೊಂಡ ತಮ್ಮಣ್ಣ ನ[...] ಮರಣಪತ್ರ ಮತ್ತು ಗಡ್ಡಪ್ಪನನ್ನು ಕಣ್ಮರೆ ಮಾಡಲು [...] ಊರಿನ ಬಡ್ಡಿರಾಣಿಗೆ ದುಂಬಾಲು ಬೀಳುತ್ತಾನೆ. ಆಕೆಯ[...] ಮಹಾ ಗಯ್ಯಾಳಿ. ಕಣ್ಣಲ್ಲಿ ರಕ್ತವಿಲ್ಲದ ಧನಪಿಶಾಚಿ. ಜೊ[...] ನಕಲಿ ವಿಸ್ಕಿ ಮಾರಿಕೊಂಡೇ ಚಾಕಣಾ ಅಂಗಡಿಯ[...] ರೊಕ್ಕ ಬಿಚ್ಚದ ಕುಡುಕರನ್ನು ನಡುರಸ್ತೆಯಲ್ಲಿ ಇಟ್ಟಾ[...] ಬಡಿಯುವಂಥ ಘಟವಾಣಿ. ಅಂಥವಳ ಬಳಿ ಹದಿನ[...] ಪರ್ಸೆಂಟ್ ಬಡ್ಡಿಗೆ ಎರಡು ಲಕ್ಷ ರೂ. ಸಾಲ ಪಡೆಯ[...] ತಮ್ಮಣ್ಣನದ್ದು ನಾಶ ಖಾತರಿಯೆಂದು ಗೊತ್ತಿದ್ದೂ ಅಪಾಯ[...] ಬೀಳುವ ಹತಾಶ ಸ್ಥಿತಿ. ದುಬಾರಿ ಬಡ್ಡಿಗೆ ಸಾಲ ಪಡೆ[...] ಅದರಲ್ಲೇ ಗಡ್ಡಪ್ಪನನ್ನು ತೀರ್ಥಯಾತ್ರೆಗೆ ಸಾಗ ಹಾಕಿ ಅ[...] ನಕಲಿ ಡೆತ್ ಸರ್ಟಿಫಿಕೇಟಿಗೂ ದುಡ್ಡು ಕೊಟ್ಟು ತಂದೆ[...] ತಿಥಿಯನ್ನೂ ಮುಗಿಸಿದರೆ ನಂತರ ಜಮೀನು ಮಾ[...] ದುಡ್ಡಲ್ಲಿ ಮಾಡಿದ ಸಾಲ ತೀರಿಸಿದರಾಯಿತೆಂಬ ಆ[...] ಲೆಕ್ಕಾಚಾರ ವಾಸ್ತವದ ಯಡವಟ್ಟುಗಳಿಂದ[...] ವಿಫಲಗೊಳ್ಳುತ್ತದೆ.

ತಮ್ಮಣ್ಣನ ಮಗನದ್ದು ಮೀಸೆ ಬಲಿಯದ ಪುಂಡಾ[...]



⇨ 0[...]

'ತಿಥಿ'ಯಲ್ಲಿ ಜನಪದದ ತುಣುಕು



ಥಿ' ಚಿತ್ರ ಕಾಲೂರುವ ಊರು ಮಂಡ್ಯ ಜಿಲ್ಲೆಯ ಪ್ಪಲು. ಆ ಊರಿನಲ್ಲಿ ಸೆಂಚುರಿಗೌಡ ಎಂಬ ಷಿ ವ್ಯಕ್ತಿ ಸತ್ತಿದ್ದಾರೆ. ಅವರನ್ನು ಸುಟ್ಟ ಹನ್ನೊಂದು ತಿಥಿ. ಈ ಅವಧಿಯಲ್ಲಿ ಆ ಊರಿನ ಜನಪದ ಹೇಗೆ ಸಾಗುತ್ತದೆ, ಎತ್ತ ಸಾಗುತ್ತದೆ, ಅವರ ನೋವುನಲಿವು ಬೇಕು ಬೇಡದರ ನೈಜಚಿತ್ರಣ ವಲ್ಲಿ ಮೂಡಿ ಬಂದಿದೆ. ತಿಥಿ ಎಂದರೆ ಸತ್ತವರನ್ನು ಉಳಿದವರು ಮಾಡುವ ಒಂದು ಕ್ರಿಯಾಚರಣೆ. ಕುಟುಂಬದ ನೆಂಟರಿಷ್ಟರಲ್ಲದೆ ಊರ ಸಮಸ್ತರೂ ೕರುತ್ತಾರೆ. ಇಂದು 'ನೀನ್ ನಾಳೆ ನಾನ್' ಎಂಬ ಭಾವ ಆಗ ಮೂಡುತ್ತದೆ. ಆದರೆ ತಿಥಿ ದಿಂದ ಕಾಲು ಕಿತ್ತಕೂಡಲೆ ಬಂದವರ ಬದುಕಿನ ಯಥಾಪ್ರಕಾರ ರಾಗದ್ವೇಷಾದಿ ಅರಿಷಡ್ವರ್ಗಗಳಿಂದ ಬದುಕಿನ ಗಾಡಿ ಚಲಿಸುತ್ತವೆ; ಇಹದ -ಕೊಳುಗೆಯಲ್ಲಿ ಮಗ್ನವಾಗುತ್ತದೆ. ಇದು ಕಾಲದಿಂದಲೂ ನಡೆದು ಬಂದಿದೆ, ನಡೆಯುತ್ತಿದೆ. ತ್ಯ ಸತ್ಯವನ್ನು ತಿಥಿ ಚಿತ್ರ ಪ್ರತಿಬಿಂಬಿಸುತ್ತದೆ.

ಯುವ ಪ್ರತಿಭೆಗಳಾದ ನಿರ್ದೇಶಕ ರಾಮ್ ರೆಡ್ಡಿ ಚಿತ್ರ ಕಥೆಗಾರ ಈರೇಗೌಡ ಕೂಡಿ ನಿರ್ಮಿಸಿರುವ ನಿಮಾದಲ್ಲಿ ಮಂಡ್ಯ ಸೀಮೆ ಜನಪದ ಪರಿಸರದ ಳು ಒಟ್ಟಾಗಿ ಬದುಕಿನ ಕಿಂಚಿತ್ ತುಣುಕೊಂದು ಎಂಬಂತೆ ಯಥಾವತ್ ದೃಶ್ಯೀಕರಿಸಲ್ಪಟ್ಟಿದೆ. ಕೊಪ್ಪಲಿನ ರೈತಾಪಿ ಜನರ ಬದುಕು ಬವಣೆಗಳು ಎಲ್ಲಾ ಊರುಗಳ ದಾರುಣ ಬದುಕಿಗೆ ಹಿಡಿದ ಕನಕನಕಿಂಡಿಯೇ ಆಗುತ್ತದೆ. ಇಷ್ಟು ಪುಟ್ಟ ಚಿತ್ರದಲ್ಲಿ ದೊಡ್ಡ ಕೃಷಿಕ ಬದುಕು ಕಷ್ಟವಿಲ್ಲದೆ ಅಡಗಿದೆ. ಮಾತಿನ ಆಚೆಗೂ ಚಿತ್ರ ಎಷ್ಟು ಚೆಂದ ಇದೆ ಆದರ ಲವಲವಿಕೆ ಜೀವಂತಿಕೆ 'ರೇಶಿಮೆ ಪಕ್ಕ ಮುಟ್ಟಲಾರೆ ಭಯ' ಎಂಬ ಕವಿವಾಣಿಯನ್ನು ತ್ತದೆ. ಈ ಸಾವಯವ ಬದುಕು ಚಿತ್ರದುದ್ದಕ್ಕೂ ಕವಾಗಿ ಹಾಸುಹೊಕ್ಕಾಗಿ ಬಂದಿದೆ. ಇಲ್ಲಿ ಪಾತ್ರಗಳು ನನ್ನದೂ ಒಂದು ಟೇಕ್ ಒಡೆಯಿರಿ' ಎಂದು ಶಕನಿಗೆ ಮುಗಿಬೀಳುವಂತಿವೆ. ಅಷ್ಟೇ ಅಲ್ಲ, ಅವು ಹಿಡಿದು ತಾವೇ ತೆಗೆದ ಚಿತ್ರಗಳನ್ನು ಸಿನಿಮಾ ಗೆ ರವಾನಿಸುತ್ತಿವೆಯೋ ಎಂಬಂತಿವೆ.

ಟ್ಟುಸಾವು ಮೈಥುನ ಇವು ಲೋಕದ ಜನರಿಗೆ ನ್ಯ ಪ್ರವೃತ್ತಿಗಳು. ಈ ತ್ರಿವಳಿ ಪ್ರವೃತ್ತಿಗಳಿಂದ ತುಂಬಿದ ಯ ಅರೆಕಾಲು ಮುಂಜಾನೆಯಿಂದ ಸಂಜೆಯವರೆಗೆ ನವೂ ಯುಗಯುಗವೂ ಸುತ್ತಿಸುತ್ತಿ ಬರುತ್ತಿವೆ. ಇದಕ್ಕೆ ಯೆಂಬ ಕೊನೆಯಾಗಲಿ ಮೊದಲೆಂಬ ಮೊದಲಾಗಲಿ ಆದರೆ ಸೆಂಚುರಿಗೌಡರ ಸುಟ್ಟ ಬೂದಿಯಲ್ಲಿ ಅವರ ಾನ ಸವೆದ ಮೂಳೆಗಳನ್ನು ಸಂಗ್ರಹಿಸಿಕೊಳ್ಳುವ ಲ್ಲಿ ತಿಥಿ ನಿರ್ದೇಶಕ ಆ ಬದುಕನ್ನು ಒಂದು ಟ್ಟಿಗೆ ಹಿಡಿದುಕೊಡುತ್ತಾರೆ. ಆ ಮೂಲಕ ಕೊಪ್ಪಲಿನ ಜನಪದ ಬದುಕು ಸಮಕಾಲೀನವಾಗಿಯೂ ಕಾಲಿಕವಾಗಿಯೂ ನಿಲ್ಲುತ್ತದೆ. ನಾವು ಹತ್ತಿದ ಬದುಕಿನ ಮದುವೆಗೋ ಮಸಣಕ್ಕೊ ಗೊತ್ತಿಲ್ಲ; ಆದರೆ ಸಿಯೆ ನೆಲವಿಹುದು ಎಂಬ ಗಟ್ಟಿ ನಂಬಿಕೆ ಮಾತ್ರ ಅಚಲವಾಗಿದೆ. ಈ ಶ್ರದ್ಧಾ ನಂಬಿಕೆಯೇ ನಮ್ಮ ಬದುಕಿನ ಜೀವಂತಿಕೆ. ಇಲ್ಲವಾದರೆ ಎದೆ ಬಿರಿದು ಸತ್ತು ಚಿತೆಯೇರಬೇಕಾಗುತ್ತದೆ. ಬದುಕು ನಿಂತ ನೀರಲ್ಲ ಅದು ಸತ್ತವರೊಂದಿಗೆ ಮುಕ್ತಾಯವಾಗುವುದಿಲ್ಲ ಎಂಬ ನಿತ್ಯ ಸತ್ಯವನ್ನು ಅಜ್ಜನ ತಿಥಿ ನಡೆಯುತ್ತಿರುವಾಗಲೇ ಮೊಮ್ಮಗ ತನ್ನ ಸಂಗಾತಿಯೊಂದಿಗೆ ದನದ ಕೊಟ್ಟಿಗೆಯಲ್ಲಿ ಬೆರೆಯುತ್ತಿರುವ ದೃಶ್ಯ ಇದನ್ನು ಸಾಂಕೇತಿಸುತ್ತದೆ. ಇದು ಈ ಚಿತ್ರದ ಗಟ್ಟಿ ಧ್ವನಿ.

ನಾಲ್ಕು ತಲೆಮಾರುಗಳ ಒಂದು ಕುಟುಂಬದ ಸದಸ್ಯರ ಕಥೆ ವ್ಯಥೆ ಇಲ್ಲಿ ಚಿತ್ರೀಕರಣಗೊಂಡಿದೆ. ಸೆಂಚುರಿಗೌಡರ ಮೊಮ್ಮಗ ತಮ್ಮಣ್ಣ ಗೌಡ ತಾತನ ತಿಥಿಗೆ ಕಾಸಿಲ್ಲದೆ ಪರದಾಡುವುದು ಒಂದು ಕಡೆಯಾದರೆ ಅವನ ಅಪ್ಪ - ಅಂದರೆ ಸೆಂಚುರಿಗೌಡರ ಮಗ - ಗಡ್ಡಪ್ಪ ಕೈಗೂ ಬಾಯಿಗೂ ಸಿಕ್ಕದೆ ಟೈಗರ್ ಮಾರ್ಕ್ ಸೀಸೆ ಖಾಲಿ ಮಾಡುತ್ತ ತಿರುಗುವ ಅಲೆಮಾರಿ ಇನ್ನೊಂದು ಕಡೆಗೆ. ಹದಿಹರೆಯಕ್ಕೆ ಬಂದಿರುವ ಮೊಮ್ಮಗ ಅಭಿ ಮೀಸೆ ಬರುವಾಗ ದೇಶ ಕಾಣದು ಎಂಬಂತೆ ಇದ್ಯಾವುದರ ಪರಿವೆಯೂ ಇಲ್ಲದೆ ಸೆಲ್ ಫೋನಿನಲ್ಲಿ ಹೆಣ್ಣಿನ ನಗ್ನಚಿತ್ರಗಳನ್ನು ನೋಡುವುದರಲ್ಲಿ, ಇಸ್ಪೀಟು ಆಡುವುದರಲ್ಲಿ, ಬ್ರಾಂದಿ ಗುಟುಕರಿಸುವುದರಲ್ಲಿ, ಕುರಿಗಾಹಿ ಹುಡುಗಿಗೆ ಲೈನ್ ಹೊಡೆಯುವುದರಲ್ಲಿ ಮಗ್ನನಾಗಿರುವುದು ಮತ್ತೊಂದು ಕಡೆಗೆ. ಹೀಗೆ ನಾಲ್ಕೂ ಜನರ ಬದುಕು ನಾಲ್ಕು ದಿಕ್ಕಾಗಿದೆ. ಆದರೂ ಸೆಂಚುರಿ ಗೌಡರ ತಿಥಿ ನಡೆಯಬೇಕಾಗಿದೆ. ನಿಮ್ಮ ತಾತನ ತಿಥಿಗೆ ಕುರಿ ಬಾಡಿನ ಊಟ ಹಾಕಿಸಿದರೆ ಮಾತ್ರ ಸದ್ಗತಿ ಎನ್ನುವ ಜೋಯಿಸ; ಇಪ್ಪತ್ತೈದು ಸಾವಿರ ಲಂಚ ಕೊಟ್ಟು ನಿಮ್ಮಪ್ಪನನ್ನು ಕಣ್ಮರೆ ಮಾಡಿದರೆ ಅವನ ಡೆತ್ ಸರ್ಟಿಫಿಕೇಟ್ ಕೊಡುತ್ತೇನೆನ್ನುವ ರೆವಿನ್ಯೂ ಅಧಿಕಾರಿ; ತಮ್ಮಣ್ಣಗೌಡನ ಆಸ್ತಿಯನ್ನು ಆದಷ್ಟು ಕಡಿಮೆ ಬೆಲೆಗೆ ಲಪಟಾಯಿಸಲು ಹೊರಟಿರುವ ಸಾಮಿಲ್‌ನ ಸೇಟ್‌ಜೀ; 15% ಬಡ್ಡಿ ಅದೂ ಒಂದು ವಾರದೊಳಗೆ ಅಸಲು ಬಡ್ಡಿಸಮೇತ ಕೊಡಬೇಕು ಎಂದು ಕಂಡೀಷನ್ ಹಾಕುವ ಮೀಟರ್ ಬಡ್ಡಿಯ ಕಮಲಕ್ಕ, ತಂದೆಯ ತಿಥಿಗೆ ತಲೆ ಬೋಳಿಸಿಕೊಳ್ಳುವವನು ಹಿರಿಯ ಮಗ. ಅವನಿನ್ನೂ ಜೀವಂತ ಇರುವಾಗ ಅವನ ಮೊಮ್ಮಗ ಯಾಕೆ ಬೋಳಿಸಿಕೊಳ್ಳಬೇಕು ಎಂದು ಜಿಜ್ಞಾಸೆಗೆ ಬೀಳುವ ಊರ ಸಮಸ್ತರು; ಬಾಡೂಟಕ್ಕೆ ಅವಸರಿಸುವ ಅತಿಥಿಗಳು; ತಿಥಿ ಕಾರ್ಡ್ ನೋಡಿ ಸೆಂಚುರಿಗೌಡರಿಗೆ ಹೆಣ್ಣಿನ ಖಯಾಲಿ ಇತ್ತು ಎಂದು ನೆನಪಿಸಿಕೊಳ್ಳುವ ಹಿರೀಕರು; ನಾನು ಎಲ್ಲೋದ್ರು ಹುಡ್ಕೊಂಡ್ ಬಂದು ಮದುವೆಯಾಗ್‌ಬೇಕು ಎಂದು ಅಭಿಗೆ ಹೇಳುವ ಕುರಿಗಾಹಿ ಕಾವೇರಿ; ಹುಬ್ಬಳ್ಳಿ ಕಡೆಯ ವಲಸೆ ಕುರಿಗಾಹಿಗಳ ಅಡುಪಾಡು; ಬದುಕು ಬವಣೆ ಹೀಗೆ ಮಂಡ್ಯ ಸೀಮೆಯ ಹಳ್ಳಿಗಾಡಿನ ವರ್ತಮಾನದ ಬದುಕು ತಿಥಿ ಚಿತ್ರದಲ್ಲಿ ದಟ್ಟೈಸಿದೆ.

ಇದೆಲ್ಲಕ್ಕೂ ಸುವರ್ಣದ ಚೌಕಟ್ಟು ಹಾಕಿದಂತೆ ಗಡ್ಡಪ್ಪನ ಪಾತ್ರ ಅನುಸಂಧಾನಕ್ಕೆ ಯೋಗ್ಯವಾಗಿದೆ. ಅತ್ತ ಅಪ್ಪನ ತಿಥಿಗೆ ತನ್ನ ಮಗ ತಮ್ಮಣ್ಣಗೌಡ ಪಡಿಪಾಟಲು ಬಿದ್ದು ಸಿದ್ಧತೆ ಮಾಡಿಕೊಳ್ಳುತ್ತಿದ್ದರೆ ಇತ್ತ ಗಡ್ಡಪ್ಪ ಆ ಕುರಿಗಾಹಿಗಳೊಂದಿಗೆ ತನ್ನ ಬದುಕಿನ ಬುತ್ತಿಯ ಗಂಟು ಬಿಚ್ಚುತ್ತಾನೆ. ಅವನ ಸ್ವಗತದಂತೆ ಮನರನುಭವಿಸಿ ಹೇಳುವ ಕಥೆ ಕೇಳುತ್ತ ಮಂತ್ರಮುಗ್ಧರಾಗುವ ಕುರಿಗಾಹಿಗಳಂತೆ ಪ್ರೇಕ್ಷಕನೂ ಮೌನವಾಗಿಬಿಡುತ್ತಾನೆ. ಮನರನುಭವಿಸಿ ಹೇಳಿದ್ದು ಕಲೆ; ಉಳಿದದ್ದು ಕೇವಲ ವಾರ್ತೆ. ಇದುವರೆಗೆ ನಕ್ಕು ನಲಿಯುತ್ತ ಸಿನಿಮಾ ನೋಡುತ್ತಿದ್ದ ಪ್ರೇಕ್ಷಕ ಈಗ ಸೂಜಿ ಬಿದ್ದರೆ ಕೇಳಿಸುವಷ್ಟು ನಿಶ್ಶಬ್ದನಾಗಿಬಿಡುತ್ತಾನೆಂದರೆ ಸೋಜಿಗವಲ್ಲವೆ?

ಸೆಂಚುರಿಗೌಡರು ಪೂರ್ವದಲ್ಲಿ ಹೆಂಡತಿ - ಅಂದರೆ ಗಡ್ಡಪ್ಪನ ತಾಯಿ - ಸತ್ತ ಮೇಲೆ ಒಂದು ದಿನ ಎಲ್ಲಿಂದಲೋ ಒಂದು ಹುಡುಗಿಯನ್ನು ಕರೆತಂದು ಮಗನಿಗೆ ಲಗ್ನ ಮಾಡಿದರು. ಆ ನಂತರದ ಕಥೆ ಹೀಗೆ: ಅವಳಿಂದ ಗಡ್ಡಪ್ಪ ಎರಡು ಮಕ್ಕಳನ್ನು ಪಡೆದದ್ದು, ಆದರೆ ತನ್ನ ತಂದೆಯೇ ಆಕೆಯೊಂದಿಗೆ ಮನೆವಾಳ್ತನ ಮಾಡುತ್ತಿದ್ದುದು; ಒಮ್ಮೆ ತಾನೆ ಅದನ್ನು ಕಣ್ಣಾರೆ ಕಂಡದ್ದು; ಅದು ಗೊತ್ತಾದ ಕೂಡಲೆ ಹೆಂಡತಿ ತನ್ನ ಮಕ್ಕಳೊಂದಿಗೆ ಬಾವಿಗೆ ಹಾರಿದ್ದು, ಆದರೂ ಇವನು ಒಂದು ಮಗುವನ್ನು ತಮ್ಮಣ್ಣಗೌಡನನ್ನು ಉಳಿಸಿಕೊಂಡು ಬೆಳೆಸಿದ್ದು.

ಅಂದಿನಿಂದ ಬಿಟ್ಟ ಗಡ್ಡದಿಂದ ಗಡ್ಡಪ್ಪ ಎಂಬ ಹೆಸರು ಬಂದದ್ದು ಇತ್ಯಾದಿ. ಕೊನೆಗೆ ಅವನು ಇದೆಲ್ಲ ನಡೆದದ್ದು ನಿಜವೋ ಸುಳ್ಳೊ ಕನಸೋ ಕಲ್ಪನೆಯೊ ನನಗೇ ತಿಳಿಯದು ಎಂದು ತನಗೆ ತಾನೆ ಹೇಳಿಕೊಳ್ಳುತ್ತಾನೆ. ಇದು ಜೀವ ಇದು ಜೀವನ ಎಂಬ ಅವಧೂತ ಫಿಲಾಸಫಿ ತನಗೆ ತಾನೆ ಅರಳುತ್ತದೆ. ಇದು ಜನಪದರ ಜೀವನ ದರ್ಶನ. ಅಳಿದ ಮೇಲೆ ಉಳಿಯುವುದೇನೆಂದು ಪ್ರೇಕ್ಷಕ ಕೇಳಿಕೊಳ್ಳುವಂತಾಗುತ್ತದೆ.

ಸುಖದುಃಖವನ್ನು ಸಮಾನವಾಗಿ ಕಾಣುವವನು ಸ್ಥಿತಪ್ರಜ್ಞ ಎನ್ನುತ್ತದೆ ಗೀತೆ. ಗಡ್ಡಪ್ಪನ ಪಾತ್ರ ಬೆಳವಣಿಗೆ ಈ ಬಗೆಯದು. ಅವನೀಗ ವಸುದೈವ ಕುಟುಂಬಿಕ. ಅವನು ಪಲಾಯನವಾದಿಯಲ್ಲ. ಮಕ್ಕಳೊಂದಿಗೆ ಕುರಿಗಾಹಿಗಳೊಂದಿಗೆ ಆರಾಮವಾಗಿ ಇರಬಲ್ಲ. ಕಳೆದುಹೋದುದರ ಬಗ್ಗೆ ಚಿಂತೆ ಇಲ್ಲ. ನಾಳೆ ಹೇಗೆಂಬುದರ ಬಗ್ಗೆ ಕನಸಿಲ್ಲ. ಆದರೂ ಲೋಕದ ಸುಖದುಃಖದಲ್ಲಿ ಬೆರೆಯುತ್ತಾನೆ. ಮಕ್ಕಳನ್ನು ಕಂಡರೆ ಅಕ್ಕರೆ ಉಕ್ಕಿಸುತ್ತಾನೆ. ಕಾವೇರಿಗೆ ಹುಲಿಯಿಂದ ಅವಳು ತನ್ನ ಕುರಿಗಳನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ಹುಲಿ ಕಟ್ಟುವ ಆಟದ ಮೂಲಕ ತೋರಿಸಿಕೊಡುತ್ತಾನೆ. ಒಟ್ಟಾರೆ ಬದುಕು ಎಂಬುದಿದು ಹುಲಿ ನೆಕ್ಕಿ ಬದುಕಿದಂತೆ ಎಂಬುದನ್ನು ಸಾಕ್ಷಾತ್ಕಾರ ಮಾಡಿಸುತ್ತಾನೆ. ಈ ಅನುಸಂಧಾನದ ಮೂಲಕ ಪ್ರೇಕ್ಷಕ ಥೀಯೆಟರ್‌ನಿಂದ ಹೊರಬರುತ್ತಾನೆ.

ತಿಥಿ ಚಿತ್ರದಲ್ಲಿ ಮಂಡ್ಯ ಸೀಮೆಯ ಸೊಗಡಿನ ಭಾಷೆ ಉತ್ತರ ಕರ್ನಾಟಕದ ಭಾಷೆಯೊಂದಿಗೆ ಬೆರೆತು ಸಂಗೀತದಂತೆ ಕೇಳಿಬರುತ್ತದೆ. ಇದರಲ್ಲಿ ಕರೆದು ತಂದ ಪಾತ್ರಗಳಿಲ್ಲ. ಸ್ಥಳೀಯ ಪಾತ್ರಗಳೇ ಚಿತ್ರ ಚೌಕಟ್ಟಿನಲ್ಲಿ ಅಭಿನಯಿಸಿವೆ.

ವಯಸ್ಸಿಗೆ ತಾರತಮ್ಯವುಂಟು ಆದರೆ ಸೃಜನಶೀಲತೆಗೆ ತಾರತಮ್ಯವೆ? ಯುವ ನಿರ್ದೇಶಕರಾದ ರಾಮ್ ರೆಡ್ಡಿ ಮತ್ತು ಕಥೆಗಾರ ಈರೇಗೌಡ ಇವರ ಹೆಸರು ಈಗಾಗಲೆ ಸದ್ದುಗದ್ದಲವಿಲ್ಲದೆ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿವೆ. ತಿಥಿ ಚಿತ್ರದ ಮೂಲಕ ಜಾಗತಿಕ ಸಿನಿಮಾ ಮಂದಿ ಕರ್ನಾಟಕದ ಮಂಡ್ಯ ಜಿಲ್ಲೆಯತ್ತ ಕಣ್ಣು ಕೀಲಿಸಿ ನೋಡುವಂತೆ ಇವರಿಬ್ಬರು ಶ್ರಮ ಸಮಯವನ್ನು ಸುರಿದಿದ್ದಾರೆ. ಆದ್ದರಿಂದ ಇವರು ಅಭಿನಂದನಾರ್ಹರು.

● ಪ್ರೊ. ಶಿವರಾಮಯ್ಯ

8⇦

ಕದ್ದು ಸಾಗಿಸುವುದು, ಕುಡಿತ, ಮೋಜು, ಇಸ್ಪೀಟು, ಲಿಯಾಟ, ಹುಡುಗಿಯರನ್ನು ಚುಡಾಯಿಸುವುದೇ ದಿನಚರಿ. ಇಂಥವನು ತಿಥಿಕಾರ್ಡು ಹಂಚಲು ಗಿ ಅಲೆಮಾರಿ ಕುರುಬರ ಹುಡುಗಿಯೊಬ್ಬಳನ್ನು ಯಿಸುತ್ತಾನೆ. ಇತ್ತ ತಮ್ಮಣ್ಣನಿಂದ ಖರ್ಚಿಗೆ ಕಾಸು ು ತೀರ್ಥಯಾತ್ರೆಗೆಂದು ಸಿಕ್ಕ ಬಸ್ಸು ಹತ್ತುವ ಗಡ್ಡಪ್ಪ ತಮ್ಮಣ್ಣ ಯಾವ ಬಸ್ಸಿಗೆ ಹೋಗ್ತಿಯಾ ಎಂದು ಾಗ 'ಮೊದಲು ಸಿಕ್ಕ ಬಸ್ಸನ್ನು ಹತ್ತುತ್ತೇನೆ, ಅದು ಹೋಗಿ ನಿಲ್ಲುತ್ತೋ ಅಲ್ಲಿ ಇಳಿದುಕೊಳ್ಳುತ್ತೇನೆ' ವುದು ಆತನ ಬದುಕಿನ ನಿರರ್ಥಕತೆ ಮತ್ತು ಅತಂತ್ರ ನ್ನು ಸಂಕೇತಿಸುತ್ತದೆ.

ಾಗೇ ಬಸ್ಸು ಹತ್ತಿದ ಗಡ್ಡಪ್ಪ ವೈನ್‌ಸ್ಟೋರೊಂದನ್ನು ದ್ದೇ ಬಸ್ ನಿಲ್ಲಿಸಲು ಹೇಳಿ ಇಳಿದುಕೊಂಡಿದ್ದೇ ಬಾಟಲಿಯ ಮೊರೆ ಹೋಗುತ್ತಾನೆ. ಪಕ್ಕದಲ್ಲೇ ಂದೆ ಮೇಯಿಸಿಕೊಂಡಿದ್ದ ಅಲೆಮಾರಿ ಕುರಿಗಾಹಿಂಗಳ ಸೇರಿಕೊಳ್ಳುತ್ತಾನೆ. ಅವರು ಉತ್ತರ ಕರ್ನಾಟಕದಿಂದ ಮೇಯಿಸುತ್ತಲೇ ಈಪಾಟ ದೂರಬಂದಿದ್ದ ಾರಿಗಳು. ಅವರಿಗೆ ವಿನಾಕಾರಣ ತಮ್ಮ ಜೊತೆ ದ ಗಡ್ಡಪ್ಪನ ಬಗ್ಗೆ ವಿಚಿತ್ರ ಕುತೂಹಲ. ಒಂದು ಎಲ್ಲರನ್ನೂ ಕೂರಿಸಿಕೊಂಡು ತನ್ನ ಬದುಕಲ್ಲಿ ಸಿದ ಚಿತ್ರವಿಚಿತ್ರ ದುರಂತಗಳನ್ನು ಬಿಚ್ಚಿಡುತ್ತಾನೆ. ಂದೆ ಸೆಂಚುರಿಗೌಡ ಜಾತ್ರೆಗೆ ಹೋದವನು ಯಾರೋ ಚಿತ ಹುಡುಗಿಯೊಬ್ಬಳ ಜೊತೆ ವಾಪಸ್ಸಾಗಿದ್ದು, ದುಷ್ಟೇ ತನಗೆ ಮದುವೆ ಮಾಡಿದ್ದು, ಇಬ್ಬರು ಾಗಿದ್ದು, ಅದೊಂದು ದಿನ ತಾನು ಸೊಪ್ಪು ದೊಂದು ಮರ ಹತ್ತಿದಾಗ ಕೆಳಗೆ ಹೊಲದಲ್ಲಿ ತನ್ನ



ಪತ್ನಿಯ ಜೊತೆ ಅಪ್ಪ ಸೆಂಚುರಿಗೌಡ ವಿವಸ್ತ್ರನಾಗಿದ್ದು....!

.... ಅವತ್ತು ಮಾಮೂಲಿನಂತೆ ನನ್ನ ಹೆಂಡತಿ ಮಕ್ಕಳನ್ನೂ ಕೂರಿಸಿ ಊಟ ಬಡಿಸಿದಳು. ಆದರೆ ನನ್ನ ಮುಖವನ್ನು ಮಾತ್ರ ಅಪ್ಪಿತಪ್ಪಿಯೂ ನೋಡಲಿಲ್ಲ, ಬಹುಶಃ ನನ್ನ ಮುಖ ನೋಡಲು ಆಕೆಯಿಂದ ಸಾಧ್ಯವಾಗಲಿಲ್ಲವೇನೋ. ನಾನು ಈ ಬಗ್ಗೆ ಆಕೆಯನ್ನು ಏನೆಂದೂ ಕೇಳಲಿಲ್ಲ, ನನ್ನ ಪಾಡಿಗೆ ನಾನಿದ್ದೆ, ಆ ರಾತ್ರಿ ಏನೋ ಸದ್ದಾದಂತಾಯಿತು. ಹೆಂಡತಿ ಮಲಗಿರಲಿಲ್ಲ, ಹೊರಗೆ ಬಂದು ನೋಡಿದೆ. ಬಾವಿಯಲ್ಲಿ ಮತ್ತೆ ಸದ್ದಾಯಿತು. ಹೋಗಿ ನೋಡಿದರೆ ಇಬ್ಬರು ಮಕ್ಕಳ ಸಮೇತ ಹೆಂಡತಿ ಬಾವಿಗೆ ಹಾರಿದ್ದಳು. ನಾನು ತಡಮಾಡದೇ ಬಾವಿಗೆ ಹಾರಿದೆ. ಕಷ್ಟಪಟ್ಟು ಒಬ್ಬ ಮಗನನ್ನು ಬದುಕಿಸಿದೆ. ಇನ್ನೇನು ಹೆಂಡತಿ ಮತ್ತೊಬ್ಬ ಮಗನನ್ನೂ ಎತ್ತಬೇಕೆನ್ನುವ ಹೊತ್ತಿಗೆ ಅವರಿಬ್ಬರೂ ಮುಳುಗಿ ಹೆಣವಾಗಿದ್ದರು. ಉಳಿದ ಒಬ್ಬ ಮಗನನ್ನೇ ಸಾಕಿ ಬೆಳೆಸಿದೆ. ಇದು ನನ್ನ ಬದುಕಲ್ಲಿ ಸಂಭವಿಸಿದ ಮರೆಯಲಾಗದ ಘಟನೆ. ಇದು ನಿಜವಾ ಅಥವಾ ನಿನ್ನೆ ರಾತ್ರಿ ಕನಸಲ್ಲಿ ಕಂಡ ಪ್ರಸಂಗವಾ ನನಗೇ ಅರ್ಥವಾಗುತ್ತಿಲ್ಲ....!


ವಿಶಾಲ ಬಯಲಿನ ಆ ಕತ್ತಲು ಸುತ್ತಲೂ ಕುರಿಮಂದೆ. ಒಟ್ಟಿದ ಬೆಂಕಿಯ ಸುತ್ತ ಕತೆ ಕೇಳುತ್ತಾ ಕೂತ ಕುರುಬರು, ಅವರ ನಡುವೆ ಪೆಟ್ಟಿಗೆಯೊಂದರ ಮೇಲೆ ಕುಂತು ಕಾಲಗರ್ಭದ ಯಾವುದೋ ಆಳದಿಂದ ಅಗೆದು ತೆಗೆದಂತೆ ತನ್ನ ಬದುಕಿನ ದುರಂತವನ್ನು ಬಿಚ್ಚಿಟ್ಟ ಗಡ್ಡಪ್ಪ. ಇದು ತಿಥಿ ಚಿತ್ರದ ಕೇಂದ್ರಬಿಂದು. ಅಲ್ಲಿಗೆ ಗಡ್ಡಪ್ಪನ ಪಾತ್ರವೇ ಪ್ರಕಾಶಮಾನವಾಗಿ ಹೊಳೆಯುತ್ತದೆ!

ತಿಥಿಗೆಂದು ಬಡ್ಡಿಗೆ ತಂದ ದುಡ್ಡಲ್ಲಿ ಕುರಿ ಖರೀದಿಸಿ ತರಬೇಕಿದ್ದ ತಮ್ಮಣ್ಣನ ಪಡ್ಡೆ ಮಗ ತನ್ನ ಪುಂಡು ಗೆಳೆಯರ ಜೊತೆ ಇಸ್ಪೀಟಾಡಿ ಹುಡಿ ಹಾರಿಸುತ್ತಾನೆ. ಬಾಡೂಟಕ್ಕೆ ಕುರಿಗಳು ಬೇಕಲ್ಲ; ತನ್ನ ಪುಂಡು ಗೆಳೆಯರ ಜೊತೆ ನಡುರಾತ್ರಿ ಕುರುಬರು ಮೊಕ್ಕಾಂ ಮಾಡಿದ್ದಲ್ಲಿಗೇ ನುಗ್ಗಿ ಕುರಿಗಳನ್ನು ಕದ್ದೊಯ್ಯುತ್ತಾರೆ. ತಿಥಿಯ ಬಾಡೂಟದ ದಿನ ಎಲ್ಲ ಪಾತ್ರಗಳೂ ಪರಸ್ಪರ ಘರ್ಷಣೆಗಿಳಿಯುತ್ತವೆ. ಅದು ಸೆಂಚುರಿಗೌಡನ ತಿಥಿ ಮಾತ್ರವಾಗದೇ ಪಾತ್ರಗಳೆಲ್ಲರ ದುರಾಸೆಗಳಿಗೊದಗಿದ ತಿಥಿ ರೂಪದ ದುರ್ಗತಿಯಾಗಿ ಪರಿಣಮಿಸುತ್ತದೆ. ವಿಷಾದವಿಲ್ಲಿ ಹಾಸ್ಯದ ಲೇಪನ ಹೊದ್ದಿದೆ. ಮೇಲುನೋಟಕ್ಕಿದು ಕುಟುಂಬವೊಂದರ ಮೂರು ತಲೆಮಾರುಗಳ ತಾಕಲಾಟವಾದರೂ ಆಳದಲ್ಲಿ ಸಂಸ್ಕೃತಿಯೊಂದರ ಅಧಃಪತನವನ್ನು ಧ್ವನಿಸುತ್ತದೆ.

ಗಿರೀಶ್ ಕಾಸರವಳ್ಳಿ, ಶೇಷಾದ್ರಿ, ನಾಗಾಭರಣ, ಎಂ.ಎಸ್. ಸತ್ಯು, ಲಂಕೇಶ್ ಚಿತ್ರಗಳು ಹುಟ್ಟುಹಾಕಿದ ಹೊಸ ಅಲೆಯ ಚಿತ್ರಗಳ ಪರಂಪರೆಯೇ ಒಂದಾದರೆ ಈಗ ರಾಮ್‌ರೆಡ್ಡಿ ನಾಂದಿ ಹಾಕಿದ ರಿಯಲಿಸ್ಟಿಕ್ ಪರಂಪರೆಯೇ ಇನ್ನೊಂದು. ಒಂದಲ್ಲ ಎರಡಲ್ಲ ಹಲವಾರು ವಿಶೇಷಗಳ ಕಾರಣಕ್ಕಾದರೂ 'ತಿಥಿ' ಚಿತ್ರವನ್ನು ಕನ್ನಡಿಗರು ಗೆಲ್ಲಿಸಲೇಬೇಕು.

ಕನಿಷ್ಠ ಆತ್ಮ ಸಂತೃಪ್ತಿಗಾದರೂ ಒಮ್ಮೆ ಈ ಚಿತ್ರವನ್ನು ಜನ ನೋಡಲೇಬೇಕು!

● ರಾ. ಸೋಮನಾಥ್


ಸಯ್ಯಮೀಂದ್ರ ಸ್ವಾಮಿ

ಮಂಗಳೂರು

ಬಾಳಿಗಾ ಕಗ್ಗೊಲೆಯಲ್ಲಿ ಕೊಂಕಣಿಗರ ಕಾಶೀಮಠ ಮಾಫಿಯಾ!!

ವೆಂಕಟರಮಣ ದೇವಸ್ಥಾನ ಆಡಳಿತ, ಕಾಶೀಮಠದ ಚಟುವಟಿಕೆ ಮತ್ತು ಕೊಂಕಣಿಗರ ಸಹಕಾರಿ ಬ್ಯಾಂಕ್‌ನಲ್ಲಿ ನರೇಶ್ ಶೆಣೈನ ಕೈ ಕಾಣದಂತೆ ಕಾರ್ಯಾಚರಣೆ ನಡೆಸುತ್ತ ಬಂದಿತ್ತು. ಇದನ್ನು ಸೂಕ್ಷ್ಮವಾಗಿ ಕಂಡುಹಿಡಿದಿದ್ದು ಹತ ವಿನಾಯಕ ಬಾಳಿಗಾ. ತನ್ನ ಆಯುರ್ವೇದಿಕ್ ದಂಧೆ, ಧನ್ವಂತರಿ ಲ್ಯಾಂಡ್‌ಲಿಂಕ್ಸ್, ರೆಸಾರ್ಟ್‌ಗೆಲ್ಲಿ ದೊಡ್ಡ ಮೊತ್ತದ ಕಾಸು ಬೇಕೆಂದಾಗೆಲ್ಲ ನರೇಶ್ ಶೆಣೈ ವೆಂಕಟರಮಣನ ಹುಂಡಿಗೇ ಕೈಹಾಕುತ್ತಿದ್ದ. ಹೀಗಾಗಿಯೇ ದೇವಸ್ಥಾನದ ಹಣಕಾಸಿನ ವ್ಯವಹಾರಕ್ಕೆ ಯಾವ ಲೆಕ್ಕವೂ ಇಡಲಾಗುತ್ತಿರಲಿಲ್ಲ. ಯಾವಾಗ ಬಾಳಿಗಾ ಪುನರ್‌ನಿರ್ಮಾಣದ ಆಡಿಟ್ ಬಗ್ಗೆ ಆಕ್ಷೇಪ ಎತ್ತಿ ನ್ಯಾಯಾಲಯಕ್ಕೆ ಹೋಗಿ ಹೊಸ ಆಡಿಟ್‌ಗೆ ಹಠ ಹಿಡಿದರೋ ಆಗ ನರೇಶ್ ಶೆಣೈ ಮತ್ತು ಕಾಶೀಮಠಾಧೀಶ ಸಯ್ಯಮೀಂದ್ರ ತೀರ್ಥರ ಪರಿವಾರದಲ್ಲಿ ತಳಮಳ ಶುರುವಾಯ್ತು.


ವೆಂಕಟರಮಣ ದೇವಸ್ಥಾನ

ಹೈಟೆಕ್ ಪಾತಕ ಲೋಕ ಮಂಗಳೂರಲ್ಲಿ ಹಬ್ಬಿರುವ ಧನಾಧಾರಿತ ಧರ್ಮಕಾರಣ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾರನ್ನು ಬಲಿ ಪಡೆದು ತಿಂಗಳೆರಡು ಕಳೆಯುತ್ತಿದೆ. ಒಂದೆರಡು ಮೂರು ಮಚ್ಚು, ತಲವಾರು, ಚೂರಿಗಳನ್ನು ಬಂಧಿಸಿರುವ ಪೊಲೀಸರಿಗೆ ಆ ಅಸ್ತ್ರ


ಬಾಳಿಗಾ



ಕರಾರುವಾಕ್ಕಾಗಿ ಬಳಸಿದ ಸಂಘ ಪರಿವಾರದ ಸೈತಾನರನ್ನು ಮಾತ್ರ ಇವತ್ತಿಗೂ ಮುಟ್ಟಲಿಕ್ಕೂ ಆಗಿಲ್ಲ! ಕೊಲೆಗೀಡಾತ ಪಕ್ಕಾ ಚೆಡ್ಡಿ; ಕೊಲ್ಲಿಸಿದ್ದೂ ಅದೇ ಹಿಂದೂತ್ವದ ಕುಲಕಲಿಗಳೇ!! ಮಂಗಳೂರಿನ ಕೊಂಕಣಿಗರ ಪ್ರತಿಷ್ಠಿತ ವೆಂಕಟರಮಣ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕುವ ಕೇಸರಿ ಮುಂಡಾಸು ಮುಖಂಡರ ಮುಸುಡಿಗೆಲ್ಲ ಬಾಳಿಗಾರ ಹಸಿಹಸೀ ರಕ್ತ ಅಂಟಿಕೊಂಡಿದೆ. ಈ ಧರ್ಮ ರಕ್ಷಕರಿಗೆ ಸ್ವಜಾತಿ ಕಾಶೀಮಠದ ಕಾವಿ ಮಾಫಿಯಾ ಬೆಂಗಾವಲಾಗಿ ನಿಂತಿರುವುದು ಬಹಿರಂಗ ರಹಸ್ಯ!

ಕೋಟಿ-ಕೋಟಿಯ ವೆಂಕಟರಮಣ

ಮಂಗಳೂರಿನ ರಥಬೀದಿಯಲ್ಲಿರುವ ಸಾವಿರಾರು ರೂಪಾಯಿ ಚರ-ಸ್ಥಿರ ಆಸ್ತಿಯ ವೆಂಕಟರಮಣ ದೇವಸ್ಥಾನದ ಪಾರುಪತ್ಯ ಗೌಡ ಸಾರಸ್ವತ ಬ್ರಾಹ್ಮಣ (ಜಿಎಸ್‌ಬಿ) ಭೂಪರದು. ನೂರಾರು ಕೋಟಿಯ ವಾರ್ಷಿಕ ವಹಿವಾಟಿನ ಈ ದೇವಸ್ಥಾನದ ಪರಮಭಕ್ತ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ. ತನ್ನ ಜಾತಿಯ ಒಣಗತ್ತಿನ ಸಂಕೇತದಂತಿದ್ದ ಸದ್ರಿ ದೇವಳದಲ್ಲಿ ನಡೆಯುತ್ತಾ ಬಂದಿದ್ದ ಅವ್ಯವಹಾರ-ಅವಾಂತರ-ಅಕ್ರಮ ಬಾಳಿಗಾರನ್ನು ಬೆಚ್ಚಿಬೀಳಿಸಿತ್ತು, ನ್ಯಾಯಾನ್ಯಾಯ-ಸತ್ಯಾಸತ್ಯತೆ ಒರೆಗೆ ಹಚ್ಚಲು ಮಾಹಿತಿ ಹಕ್ಕು ಕಾಯ್ದೆ ಬಳಸುವ ಹುಚ್ಚಿನ ಬಾಳಿಗಾ ತನ್ನ ಆರಾಧ್ಯದೈವವನ್ನು ಕಬ್ಜಾ ಮಾಡಿಕೊಂಡು ಮೇಯುತ್ತಿದ್ದ ಬಕಾಸುರರ ಬಣ್ಣ ಬಯಲಾಗಿಸುವ ರಿಸ್ಕ್‌ಗೆ ಕೈಹಾಕಿದ್ದರು. ಇದೇ ಮುಂದೊಂದು ದಿನ ತನ್ನ ಪ್ರಾಣಹರಣಕ್ಕೂ ಕಾರಣವಾದೀತೆಂಬ ಸೂಚನೆಯೂ ಆತನಿಗಿತ್ತು, ಆದರೆ 'ಆ ದಿನ' ಇಷ್ಟು ಬೇಗ ಬರಬಹುದೆಂಬ ನಿರೀಕ್ಷೆ ಮಾತ್ರ ಇರಲಿಲ್ಲ.

ವೆಂಕಟರಮಣ ದೇವಸ್ಥಾನದ ಗೋಲ್‌ಮಾಲ್‌ಗೆ 1927 ರಲ್ಲಿ ಮದ್ರಾಸ್ ಹೈಕೋರ್ಟ್ ಮೂಲಕ ರಚಿತವಾಗಿದ್ದ ಟ್ರಸ್ಟ್‌ಡೀಡ್ ಮೂಲಕಾರಣವೆಂಬ ತೀರ್ಮಾನಕ್ಕೆ ಬಾಳಿಗಾ ಬಂದಿದ್ದರು. ದುಡ್ಡು-ಬಂಗಾರ-ಬೆಳ್ಳಿ ಕಾಣಿಕೆಯಾಗಿ ಕೋಟಿಯ ಲೆಕ್ಕದಲ್ಲೇ ವೆಂಕಟರಮಣ ಹುಂಡಿಗೆ ಬೀಳುತ್ತಿತ್ತು, ಆದರೆ ಈ ದೇವರ ಸಂಪತ್ತಿಗೆ ಒಂದೂ ಲೆಕ್ಕ-ಪತ್ರ ಇಡುತ್ತಿರಲಿಲ್ಲ, ಆಡಳಿತಮಂಡಳಿ ಹಣದ ನಿರ್ವಹಣೆಗೆ ಸಾಂಸ್ಥಿಕ ರೂಪದ ನಿಯಮಾವಳಿ ಜಾರಿಗೆ ಬರಬೇಕೆಂಬ ಹಠ ಬಾಳಿಗಾರದಾಗಿತ್ತು, ಈ ಉದ್ದೇಶಕ್ಕಾಗಿಯೇ ಆತ ಹೈಕೋರ್ಟ್ ತನಕ ನ್ಯಾಯಾಲಯಗಳ ಮೆಟ್ಟಿಲೇರುತ್ತ ಹೋಗಿದ್ದರು.

ಮದ್ರಾಸ್ ಹೈಕೋರ್ಟ್ ನಿರ್ದೇಶಿತ ಬೈಲಾದಂತೆ ದೇವಳಕ್ಕೆ ಪ್ರತಿ ಐದು ವರ್ಷಕ್ಕೊಮ್ಮೆ ಮೂರು ಕೊಂಕಣಿಗರ ಸಮಿತಿ ಅಸ್ತಿತ್ವಕ್ಕೆ ಬರುವುದು ವಾಡಿಕೆಯಾಗಿತ್ತು, ಈ ಕಮಿಟಿ ಸ್ವ-ಜಾತಿಯ ಕಾಶಿಮಠಕ್ಕೆ ವೆಂಕಟರಮಣನ ಹುಂಡಿ ಕಾಸನ್ನು ಎತ್ತೆತ್ತಿ ಬೇಕಾಬಿಟ್ಟಿಯಾಗಿ ಕೊಡುತ್ತಿತ್ತು, ಮಂಗಳೂರು-ದಕ್ಷಿಣ ಕನ್ನಡ ಕಡೆಯ ಕೊಂಕಣಿಗರಿಗೆ ಈ ಕಾಶೀಮಠ ಗುರು ಮಠ. ಆದರೆ ಜಿಎಸ್‌ಬಿಗಳಿಗೆ ಇಂಥದೇ ಮೂರ್‍ನಾಲ್ಕು ಮಠಗಳಿವೆ. ಕೈವಲ್ಯಮಠ, ಪರ್ತಗಾಳಿ ಮಠದ ಕೊಂಕಣಿ ಶಿಷ್ಯರೂ ಮಂಗಳೂರು ವೆಂಕಟರಮಣನ ಭಕ್ತರು. ಹೀಗಾಗಿ ಕಾಶೀಮಠ ಒಂದಕ್ಕೆ ವೆಂಕಟರಮಣ ಕಾಸು ಕೊಡುವುದು ಸರಿಯಲ್ಲ ಎಂಬ ವಾದ ಬಾಳಿಗಾರದಾಗಿತ್ತು, ಹೀಗೆ ಕಾಶೀಮಠಕ್ಕೆ ಕಾಸು ಕೊಡುವ ಮೂಲಕ ಮಂಗಳೂರು ವಲಯದ ಕೊಂಕಣಿಗರ ನಡುವೆ ಪ್ರಭಾವ ಬೆಳೆಸಿಕೊಳ್ಳಲು ಕೆಲವು ಕಾವಿ ಮುಂಡಾಸು ಮುಂದಾಳುಗಳು ತಂತ್ರಗಾರಿಕೆ ನಡೆಸುತ್ತಿರುವುದು ಬಾಳಿಗಾರ ಕೆರಳಿಸಿತ್ತು, ಹೀಗೆ ಕಾಶೀಮಠಕ್ಕೆ ದೇಣಿಗೆ ಕೊಡುವಾಗ ಸಣ್ಣದೊಂದು ಪಾಲು ಈ ದೇವರ ಏಜೆಂಟರು ತಾವಿಟ್ಟುಕೊಳ್ಳುತ್ತಿದ್ದರು.

ನರೇಶ್‌ನ ಪಾರುಪತ್ಯ

2009-14ರ ಐದು ವರ್ಷದ ಅವಧಿಗೆ ರಚಿತವಾಗಿದ್ದ ವೆಂಕಟರಮಣ ದೇವರ ದೇಖರೇಖಿ ಸಮಿತಿಯಲ್ಲಿದ್ದ ಮೂವರು ಹೆಸರಿಗಷ್ಟೇ ಎಂಬಂತಿದ್ದರು. ಪಿ.ಎಲ್.ಶೆಣೈ, ನಿತ್ಯಾನಂದ ನಾಯಕ್ ಮತ್ತು ಮಾಧವ ಕಾಮತ್‌ರ ಕಮಿಟಿಗೆ ರಿಂಗ್‌ಮಾಸ್ಟರ್ ಆಗಿದ್ದಾತ ನಮೋ ಬ್ರಿಗೇಡ್‌ನ ನರೇಶ್ ಶೆಣೈ ಎಂಬ ಕ್ರಿಮಿನಲ್ ಕರಾಮತ್ತುಗಾರ! ಚಕ್ರವರ್ತಿ ಸೂಲಿಬೆಲೆಯಂಥ ಸೋಗಲಾಡಿಯ ಸಹವಾಸ ಕುದುರಿಸಿ[...] ನರೇಶ್ ಶೆಣೈ ವೆಂಕಟರಮಣನ ಕಾಸು ಹಿಂದೂತ್ವ-ಬಿಜೆ[...] ಹಿಕಮತ್ತಿಗೆ ಮನಸೋ ಇಚ್ಛೆ ಬಳಸುತ್ತಿದ್ದ, ಅತ್ತ ಕಾಶೀಮಠ[...] ಸ್ವಾಮಿ ಸಯ್ಯಮೀಂದ್ರನ ಸಖ್ಯವೂ ದೇವರ ದುಡ್ಡಿ[...] ಪ್ರಸಾದದಿಂದಲೇ ಕುದುರಿಸಿಕೊಂಡಿದ್ದ ಶೆಣೈ! 2009-14ರ ಅವಧಿಯಲ್ಲಿ ವೆಂಕಟರಮಣ ದೇವಸ್ಥಾ[...] ಪುನರ್‌ನಿರ್ಮಾಣ ಬರೋಬ್ಬರಿ 22 ಕೋಟಿ ವ್ಯಯದ[...] ನಡೆದಿತ್ತು, ನರೇಶ್ ಶೆಣೈನ ರಹಸ್ಯ ಉಸ್ತುವಾರಿ[...] ಯಜಮಾನಿಕೆಯಲ್ಲಿ ಜರುಗಿದ್ದ ದೇವಸ್ಥಾನದ ಕೆಲಸ[...] ಕಾಮಗಾರಿ-ಕಾರ್ಯಕ್ರಮದಲ್ಲಿ ಆರೇಳು ಕೋಟಿ ಕೃಷ್ಣ[...] ಲೆಕ್ಕಕ್ಕೆ ಸೇರಿತ್ತು.

ನರೇಶ್ ಶೆಣೈ ವೆಂಕಟರಮಣ ದೇವಸ್ಥಾನ ಆಡಳಿ[...] ಕಾಶೀಮಠದ ವ್ಯವಹಾರ ಮತ್ತು ಮಂಗಳೂರು ಏರಿಯಾ[...] ಜಿಎಸ್‌ಬಿ ಸಮಾಜದ ಚಟುವಟಿಕೆಗೆಲ್ಲ ಸಂವಿಧಾನೇತ[...] ಸರದಾರನಾಗಿದ್ದ! ನಮೋ ಬ್ರಿಗೇಡ್‌ನ ಹುಂಬ ಹುಡುಗ[...] ತಾಕತ್ತು, ಕಾಶೀಮಠಾಧೀಶರ ಕೃಪಾಶೀರ್ವಾದ, ಕಲ್ಲಡ್ಕ ಭ[...] ಸಂಸದ ನಳಿನ್ ಕುಮಾರ್ ಕಟೀಲ್‌ರಂಥವರ ಬೆಂಬಲದಿಂ[...] ನರೇಶ್ ಕೊಂಕಣಿಗರ ಕೇರಿಗಳಲ್ಲಿ ನೋಡುನೋಡ[...]ತ್ತಿದ್ದಂತೆಯೇ ಗಂಡಾಂತರಕಾರಿಯಾಗಿ ಬೆಳೆದುಬಿಟ[...] ಮುಂಬರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮಂಗಳೂರು ಉತ್ತ[...] ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂಬಷ್ಟರ ಮಟ್ಟಿಗೆ ನರೇಶ್[...] ನಖರಾ ಜೋರಾಗಿ ಹೋಯ್ತು, ಬಿಜೆಪಿಯಲ್ಲಿ ತನ[...] ಪ್ರತಿಸ್ಪರ್ಧಿಯೊಡ್ಡುವ ಶ್ರೀಕರ ಪ್ರಭು, ಮಾಜಿ ಶಾಸ[...] ಯೋಗೇಶ್ ಭಟ್ಟರಂಥರ ಸೊಂಟ ಮುರಿಯುವ ಸರ್ಕ[...] ಯಶಸ್ವಿಯಾಗೇ ನರೇಶ್ ಮಾಡಿಮುಗಿಸಿದ್ದ.

ವೆಂಕಟರಮಣ ದೇವಸ್ಥಾನ ಆಡಳಿತ, ಕಾಶೀಮಠ[...] ಚಟುವಟಿಕೆ ಮತ್ತು ಕೊಂಕಣಿಗರ ಸಹಕಾರಿ ಬ್ಯಾಂಕ್‌ನ[...] ನರೇಶ್ ಶೆಣೈನ ಕೈ ಕಾಣದಂತೆ ಕಾರ್ಯಾಚರಣೆ ನಡೆಸು[...] ಬಂದಿತ್ತು, ಇದನ್ನು ಸೂಕ್ಷ್ಮವಾಗಿ ಕಂಡುಹಿಡಿದಿದ್ದು ಹ[...] ವಿನಾಯಕ ಬಾಳಿಗಾ. ತನ್ನ ಆಯುರ್ವೇದಿಕ್ ದಂ[...] ಧನ್ವಂತರಿ ಲ್ಯಾಂಡ್‌ಲಿಂಕ್ಸ್, ರೆಸಾರ್ಟ್‌ಗೆಲ್ಲಿ ದೊಡ್ಡ ಮೊತ್ತ[...] ಕಾಸು ಬೇಕೆಂದಾಗೆಲ್ಲ ನರೇಶ್ ಶೆಣೈ ವೆಂಕಟರಮಣ[...] ಹುಂಡಿಗೇ ಕೈಹಾಕುತ್ತಿದ್ದ. ಹೀಗಾಗಿಯೇ ದೇವಸ್ಥಾನ[...] ಹಣಕಾಸಿನ ವ್ಯವಹಾರಕ್ಕೆ ಯಾವ ಲೆಕ್ಕವೂ ಇಡಲಾಗುತ್ತಿರಲಿ[...] ಯಾವಾಗ ಬಾಳಿಗಾ ಪುನರ್‌ನಿರ್ಮಾಣದ ಆಡಿಟ್ ಬ[...] ಆಕ್ಷೇಪ ಎತ್ತಿ ನ್ಯಾಯಾಲಯಕ್ಕೆ ಹೋಗಿ ಹೊಸ ಆಡಿಟ್[...] ಹಠ ಹಿಡಿದರೋ ಆಗ ನರೇಶ್ ಶೆಣೈ ಮತ್ತು ಕಾಶೀಮಠಾಧೀಶ ಸಯ್ಯಮೀಂದ್ರ ತೀರ್ಥರ ಪರಿವಾರದ[...] ತಳಮಳ ಶುರುವಾಯ್ತು. ಕಾರ್‌ಸ್ಟ್ರೀಟ್‌ನ ಬೆಲೆಬಾಳು[...] ದೇವಳದ 33 ಸೆಂಟ್ಸ್ ಜಾಗ ಕಾಶೀಮಠಕ್ಕೆ 'ದಾ[...] ಮಾಡಿದ ಬಗ್ಗೆಯೂ ಬಾಳಿಗಾ ಪ್ರಶ್ನಿಸಿದ್ದರು. ದೇವಸ್ಥಾ[...] ಮಠ ಬೇರೆ-ಬೇರೆ ಆಗಿರುವಾಗ ಪುಕ್ಕಟೆಯಾಗಿ ಕೋಟ್ಯಾಂ[...] ರೂ. ಭೂಮಿ ಮಠಕ್ಕೆ ಪರಭಾರೆ ಮಾಡಿದ್ದು ತಪ್ಪೆಂ[...] ಬೊಬ್ಬೆ ಬಾಳಿಗಾ ಹೊಡೆಯುತ್ತಿದ್ದರು.

ಅಷ್ಟೇ ಅಲ್ಲ, ಕಾಶೀಮಠದ 'ದೇವಗಣ' ದೇವಸ್[...] ಟ್ರಸ್ಟ್‌ನ ಹಣ ನುಂಗುತ್ತಿರುವುದು ಬಾಳಿಗಾರನ್ನು ಕೆರಳಿಸಿ[...]




ಕಾಶೀಮಠ

ನರೇಂದ್ರ ನಾಯಕ್‌ಗೆ ಬೆದರಿಕೆ!!

ಆರ್‌ಟಿಐ. ಕಾರ್ಯಕರ್ತ ವಿನಾಯಕ ಬಾಳಿಗಾ ಕಗ್ಗೊಲೆ ಕೇಸ್ ಹಳಿತಪ್ಪಿದೆ! ಮಂಗಳೂರಿನ ಪೊಲೀಸರು ಕೈಕಟ್ಟಿ ಹಾಕಿದಂತೆ ಚಡಪಡಿಸುತ್ತಿದ್ದಾರೆ. ಬಾಳಿಗಾ ಹತ್ಯರಾದ ನಾಲ್ಕೆ ದಿನಕ್ಕೆ ಇಬ್ಬರನ್ನು ಬಂಧಿಸಿದ ಪೊಲೀಸರಿಂದ ಸುಪಾರಿದಾರರ ಜಾಡು ಹಿಡಿಯಲಾಗಲೇ ಇಲ್ಲ. ಕೊಲೆ ಹಿಂದಿನ ಕಾವಿ-ಖಾದಿ-ಕೇಸರಿ "ಡಾನ್-ಡಾಕೂಗಳ ತಾಕತ್ತಿಗೆ ಸರ್ಕಾರವೇ ತಟಸ್ಥವಾಗಿ ಬಿಟ್ಟದೆ!

ಬಾಳಿಗಾ ಹತ್ಯೆ ಬಗ್ಗೆ ಮಂಗಳೂರಿನ ಯಾವ ರಾಜಕೀಯ ಪಕ್ಷವೂ ತಲೆ ಕೆಡಿಸಿಕೊಂಡಿಲ್ಲ. ಒಂದಿಷ್ಟು ಪ್ರಗತಿಪರರು ಎಡಸಂಘಟನೆಯವರನ್ನೂ ಬಿಟ್ಟರೆ ಕಾಂಗ್ರೆಸ್-ಬಿಜೆಪಿ ಭಂಡರು ಏನೂ ಆಗದಂತೆ ಆರಾಮಾಗಿದ್ದಾರೆ. ಕೋಮು ಗಲಭೆಯಲ್ಲಿ ಹಿಂದೂ ಒಬ್ಬ ತನ್ನದೇ ಪ್ರಮಾದದಿಂದ ಸತ್ತರೂ ಸಾಕು ಹಿಂದೂತ್ವದ ಕೋಲಾಹಲ ಎಬ್ಬಿಸಿ ಸೀನ್ ಕ್ರಿಯೇಟ್ ಮಾಡುವ ಸಂಘ ಪರಿವಾರಕ್ಕೂ ತನ್ನದೇ ಗ್ಯಾಂಗಿನ ಕಾರ್ಯಕರ್ತ ಬಾಳಿಗಾರ ಹತ್ಯೆ ಬಗ್ಗೆ ಬೇಸರ-ಕನಿಕರ ಇಲ್ಲ! ಕಾಂಗ್ರೆಸ್ಸಿಗರಂತೂ ಕಳ್ಳಾಟ ಆಡುತ್ತ ಕಿಮ್ಮತ್ತು ಕಳೆದುಕೊಳ್ಳುತ್ತಿದ್ದಾರೆ, ಬಿಡಿ. ತಮ್ಮದೇ ಗೃಹಮಂತ್ರಿ 3 ಕೋಟಿ ಡೀಲ್ ಕಾಶೀಮಠದವರೊಂದಿಗೆ ಮಾಡಿಕೊಂಡು ಕೇಸ್ ಹಳ್ಳ ಹಿಡಿಸಿದ್ದಾರೆಂಬ ಗೌಜಿ ಎದ್ದರೂ ಕಾಂಗ್ರೆಸ್ಸಿಗರು ನಿದ್ದೆಯಿಂದ ಏಳುತ್ತಿಲ್ಲ.



ದುರಂತವೆಂದರೆ, ಯಾವ ಜಿಎಸ್‌ಬಿ ಸಮಾಜಕ್ಕಾಗಿ, ನ್ಯಾಯಕ್ಕಾಗಿ, ಜಾತಿ ದೇವಸ್ಥಾನದ ರಕ್ಷಣೆಗಾಗಿ ಬಾಳಿಗಾ ಹೋರಾಡಿದ್ದರೋ ಆ ಸಮಾಜದವರೂ ಬಾಯಿಬಿಡುತ್ತಿಲ್ಲ. ಇಡೀ ಕೊಂಕಣಿ ಸಮಾಜದ ಮೇಲೆ ಕೊಲೆಗಡುಕರ ಗ್ಯಾಂಗ್ ಅದೆಂಥ ಬಿಗಿಹಿಡಿತ ಸಾಧಿಸಿದೆ ಎಂಬುದಕ್ಕಿದು ಸಾಕ್ಷಿಯಂತಿದೆ. ವಿಚಾರವಾದಿ ನರೇಂದ್ರ ನಾಯಕ್ ಒಬ್ಬರಲ್ಲದಿದ್ದರೆ ಬಾಳಿಗಾ ಕೇಸ್ ಅದೆಂದೋ ಖತಮ್ ಮಾಡುತ್ತಿದ್ದರು ಆಡಳಿತ-ವಿರೋಧ ಪಕ್ಷದ ಸಮಾನ ಮನಸ್ಕ ಭಂಡರು! ನಾಯಕ್ ಪ್ರಗತಿಪರರು, ಎಡಸಂಘಟನೆಯವರನ್ನು ಕಟ್ಟಿಕೊಂಡು ಬಾಳಿಗಾ ಕೊಲೆ ಕೇಸಿಗೆ ನ್ಯಾಯ ಒದಗಿಸಲು ಹೋರಾಡುತ್ತಿದ್ದಾರೆ.

ಈಗ ನಾಯಕರೂ ಗಂಡಾಂತರದಲ್ಲಿದ್ದಾರೆ. ಕೊಂಕಣಿ ಮಾಫಿಯಾದಿಂದ ಅವರಿಗೆ ಕೊಲೆ ಬೆದರಿಕೆ ಬರುತ್ತಿದೆ. ಮನುಷ್ಯತ್ವಕ್ಕಾಗಿ-ನ್ಯಾಯಕ್ಕಾಗಿ ಜೀವದ ಹಂಗು ತೊರೆದು ಹೋರಾಡುವ ನರೇಂದ್ರ ನಾಯಕ್ ದೋ ನಂಬರ್‌ಗಳ ಬೆದರಿಕೆಗೆಲ್ಲ ಹೆದರುವ ಪೈಕಿಯಲ್ಲ. ಜಿಲ್ಲಾ ಪೊಲೀಸರು, ಮಂಗಳೂರು ಪೊಲೀಸ್ ಕಮೀಷನರ್ ನಾಯಕರ ಕಾಪಾಡಬೇಕಿದೆ ಆದ್ಯ ಅವರ ಕರ್ತವ್ಯವೂ ಹೌದು. ಇಳಿವಯಸ್ಸನ್ನೂ ಲೆಕ್ಕಿಸದೇ ಬೀದಿಗಿಳಿದಿರುವ ನಾಯಕ ಬೆನ್ನಿಗೆ ವಿಚಾರವಂತರು, ಪ್ರಗತಿಪರರು ನಿಲ್ಲಬೇಕಿದೆ. ಆ ಮೂಲಕ ಸ್ವ-ಜಾತಿ ಕಳ್ಳರ ಬಣ್ಣ ಬಯಲಾಗಿಸಿದ ಬಾಳಿಗಾ ಆತ್ಮಕ್ಕೆ ಶಾಂತಿ ನೀಡಬೇಕಿದೆ.



ನರೇಶ್

...ಗಳೂರಲ್ಲಿ ಸಯ್ಯಮೀಂದ್ರ ಸ್ವಾಮಿ ಚಾತುರ್ಮಾಸ ...ಕೈಗೊಂಡಿದ್ದಾಗ ಆತನ ಅನುಕೂಲಕ್ಕಾಗಿ ದೇವಸ್ಥಾನದ ...ಲ್ಲಿ ಲಿಫ್ಟ್ ಹಾಕಿಸುವುದಕ್ಕೂ ಬಾಳಿಗಾ ಆಕ್ಷೇಪ ...ಪಡಿಸಿದ್ದರು. ಸ್ವಾಮೀಜಿಯ ವೈದ್ಯಕೀಯ ಖರ್ಚಿಗೆಂದು ...ಲಕ್ಷದಷ್ಟು ಖರ್ಚು ಹಾಕಿ ಮುಂಡಾಸು ಮುಖಂಡರು ...ಮಾಡಿರುವುದನ್ನು ಆತ ಯಾವ ಮುಲಾಜೂ ...ದೆ ದೊಡ್ಡ ಗಂಟಲಲ್ಲಿ ಹೇಳುತ್ತಿದ್ದರು. ಬಾಳಿಗಾರ ಈ ...ಡ ಬಯಲು' ಕಾರ್ಯಕ್ರಮದಿಂದ ಫಜೀತಿಗೆ ಬಿದ್ದಿದ್ದು ...ಂಗರ ಬಳಗ ಬಾಸ್ ನರೇಶ್ ಶೆಣೈ ಮತ್ತಾತನ ...ಪ್ತ ಸಖನೂ-ಸಯ್ಯಮೀಂದ್ರ ಸ್ವಾಮಿಯ ...ರ್ಗದರ್ಶಿಯೂ ಆದ ವಿಶ್ವನಾಥ ಭಟ್!

ಬಡ್ಡಿಮಕ್ಕಳ ಮಠ!


...ಕಾಶೀಮಠ ಮತ್ತು ವೆಂಕಟರಮಣ ದೇವಸ್ಥಾನದ ...ವುದೇ ಲಕ್ಷ-ಲಕ್ಷದ ವ್ಯವಹಾರದಲ್ಲಿನ ಲೂಟಿ ಪ್ರಕರಣ ...ಕ್ಷವಾಗಿ ಅವಲೋಕಿಸಿದರೂ ಅಲ್ಲಿ ನರೇಶ್ ಶೆಣೈ, ...ನಾಥ ಭಟ್ಟ, ವೇದವ್ಯಾಸ ಕಾಮತ್, ಶ್ರೀಕಾಂತ್‌ರ ...ರ ಆಕೃತಿ ಗೋಚರಿಸುತ್ತದೆ. ಈ ಸತ್ಯ ಸಾಕ್ಷಾತ್ಕಾರ ...ಳಿಗಾರಿಗಾಗಿತ್ತು. ಹೀಗಾಗಿ ಬಾಳಿಗಾ ದೇವಸ್ಥಾನದ ...ಕಾಸಿನ ಲಫಡಾ ಪ್ರಕರಣ ಎತ್ತಿಕೊಂಡು ನ್ಯಾಯಾಲಯಕ್ಕೆ ...ದಾಗೆಲ್ಲ ಕಂಗಾಲಾಗಿ ನರೇಶ್ ಶೆಣೈನ ಕಳ್ಳರ ಪಡೆ ...ಗೆಡುವಂತಾಗುತ್ತಿತ್ತು. ದೇವಸ್ಥಾನದ ಅವ್ಯವಹಾರ ...ಲಾದರೆ ಅಲ್ಲಿ ತಮ್ಮ ಬಿಂಬ ಕಾಣಿಸುತ್ತದೆಂಬ ಆತಂಕ ...ಮಾಫಿಯಾಕ್ಕೆ ಶುರುವಾಗಿತ್ತು. ಈ ಪಾಪಿ ಪಡೆ ...ದಾಗಿ ತಮ್ಮ ದರೋಡೆ ದಾರಿಗೆ ಅಡ್ಡವಾಗಿರುವ ...ಳಿಗಾಗೆ ಮೋಕ್ಷ ಕಾಣಿಸುವ ಸ್ಕೆಚ್ ಹಾಕಿದ್ದರೆಂದೇ ...ಂಗಳೂರಲ್ಲಿ ಮಾತಾಡಿಕೊಳ್ಳಲಾಗುತ್ತಿದೆ.

...ಕಾಶೀಮಠದ ಢೋಂಗಿತನ, ಬಡ್ಡಿ ವ್ಯವಹಾರ, ...ಲ್‌ಮಾಲ್ ಎತ್ತಿಯಾಡುವವರಿಗಂತೂ ಉಳಿಗಾಲವೇ ...! ಈಗಿನ ಪೀಠಾಧಿಪತಿಯ ಗುರುವಿನ ಶಿಷ್ಯರಾಗಿದ್ದ ...ಘವೇಂದ್ರ ತೀರ್ಥ ಸ್ವಾಮಿಗೆ ಮಠ ಮಾಫಿಯಾ 'ಕಾಫಿರ್' ...ದು ಓಡಿಸಿತ್ತು. ಈ ರಾಘವೇಂದ್ರ ಮಾಡಿದ ದೊಡ್ಡ ...ದರೆ ಮಠದಲ್ಲಿ ದೊಡ್ಡ ಸ್ವಾಮಿಯ ವಂದಿಮಾಗಧ ...ತೆ ನಡೆಸುತ್ತಿದ್ದ ಬಡ್ಡಿ ವ್ಯವಹಾರಕ್ಕೆ ಆಕ್ಷೇಪ ...ಪಡಿಸಿದ್ದಾಗಿತ್ತು.

...ಮಠದ ಹತ್ತಾರು ಕೋಟಿ ರೂ. ಪ್ರಭಾವಿ ಕೊಂಕಣಿ ...ರ್ತಕರು ಸ್ವಾಮಿಗೆ ಪೂಸಿ ಹೊಡೆದು ತಮ್ಮ ವ್ಯವಹಾರಕ್ಕೆ ...ಸಿಕೊಳ್ಳುತ್ತಿದ್ದರು. ಇವರಲ್ಲಿ ಕೆಲವರು ಬಡ್ಡಿ ಕೊಟ್ಟರೆ, ...ನ್ನೂ ಕೆಲವರು ಸ್ವಾಮಿ ದೋಸ್ತಿ ಬಳಸಿ ಬಿಟ್ಟಿಯಾಗಿ ...ಒಯ್ಯುತ್ತಿದ್ದರು. ಒಮ್ಮೆ ಕೊಂಕಣಿಗರ ಮೂರೂರು ...ಮಿಲಿಗೆ ಹತ್ತಾರು ಕೋಟಿ ಕೊಟ್ಟಿದ್ದು ಬಹಳ ...ದವರೆಗೆ ತಿರುಗಿ ಬರಲೇ ಇಲ್ಲ. ಆಗ ರಾಘವೇಂದ್ರ ...ರ್ಥರು ಸಮಾಜದ ಹಣ ವೈಯಕ್ತಿಕ ದಂಧೆಗೆ ಕೊಡುವ ...ದಲಿಗೆ ಸಮಷ್ಟಿ ಕೆಲಸ-ಕಾಮಗಾರಿಗೆ ಬಳಸೋಣವೆಂದು ...ಡ್ಡ ಗುರುಗಳ ಬಳಿ ಹೇಳಿದ್ದರು. ಯಾರದೋ ವ್ಯವಹಾರ ...ದ್ಧಿಗೆ ಮಠದ ಕಾಸು ದುರ್ಬಳಕೆಯಾಗುವುದಕ್ಕಿಂತ ...ದ ಆಸ್ಪತ್ರೆ, ಶಿಕ್ಷಣ ಸಂಸ್ಥೆ ತೆಗೆಯಲು ಉಪಯೋಗಿ







ಸೋಣ ಎಂಬುದು ರಾಘವೇಂದ್ರರ ಪುರೋಗಾಮಿ ನಿಲುವಾಗಿತ್ತು. ಇದು ಬಂಡವಾಳಶಾಹಿ-ದಗಾಕೋರ ಮಠ ಮಾಫಿಯಾದ ವರ್ತಕ ಗಣ್ಯರಿಗೆ ಹಿಡಿಸಲಿಲ್ಲ.

ಮರಿ ಸ್ವಾಮಿಯ ನೈತಿಕತೆಯೇ ಸರಿಯಿಲ್ಲವೆಂದು ಈ ಮತಾವಲಂಬಿಗಳು ಗುಲ್ಲೆಬ್ಬಿಸಿದರು. ಆತನಿಗೆ ಕಿರುಕುಳ ನೀಡಿದರು. ದೊಡ್ಡ ಗುರು ಈತ ತನ್ನ ಶಿಷ್ಯನೇ ಅಲ್ಲ; ಆತನಿಗೆ ದೀಕ್ಷೆಯೇ ನೀಡಿಲ್ಲ ಎಂದರು. ಈಗಿನ ಪೀಠಾಧಿಪತಿ ಸಯ್ಯಮೀಂದ್ರರನ್ನು ಶಿಷ್ಯನಾಗಿ ಸ್ವೀಕಾರ ಮಾಡಿ ರಾಘವೇಂದ್ರರನ್ನು ಮಠದಿಂದ ರಾತ್ರೋರಾತ್ರಿ ಓಡಿಸಿದರು. ರಾಘವೇಂದ್ರರು ಕೋರ್ಟು-ಕಚೇರಿ ಎಂದು ಅಲೆದು ಸುಪ್ರೀಮ್‌ತನಕ ಹೋಗಿ ಸೋತು ಹೈರಾಣಾದರು. ಸೇಡು ಬಿಡದ ಮಠ ಮಾಫಿಯಾ ರಾಘವೇಂದ್ರನನ್ನು ಆಂಧ್ರದಲ್ಲೆಲ್ಲೋ ಬಂಧಿಸಿ ಜೈಲಿಗೂ ಕಳಿಸಿತು. ಈಗ ಆತ ಎಲ್ಲಿದ್ದಾನೆಂಬುದು ಯಾರಿಗೂ ಗೊತ್ತಿಲ್ಲ. ಅಂದು ರಾಘವೇಂದ್ರನನ್ನು ಓಡಿಸಿದಂತೆಯೇ ಈಗ ವಿನಾಯಕ ಬಾಳಿಗಾರ ಆಹುತಿ ಪಡೆಯಲಾಗಿದೆ ಎಂದು ಹಳೆ ತಲೆಮಾರಿನ ಕೊಂಕಣಿ ಹಿರಿಯರು ಹೇಳುತ್ತಾರೆ; ಮಠದ 'ಚರಿತ್ರೆ'ಯ ಫ್ಲಾಶ್‌ಬ್ಯಾಕ್‌ಗೆ ಹೋಗುತ್ತಾರೆ!!

ಆತ ಸ್ವಾಮಿ ಸೆಕ್ರೆಟರಿ!

ಮಂಗಳೂರಲ್ಲಿ ನಾಲ್ಕು ಜನ ಸೇರಿದಲ್ಲಿ ಈಗ ಒಂದೇ ಮಾತು! "ಬಾಳಿಗಾ ಮರ್ಡರ್‌ನಲ್ಲಿ ಕಾಶೀಮಠದವರೂ ಇದ್ದರಂತೆ ಮಾರಾಯಾ... ಹಾಗಾಗಿಯೇ ನರೇಶ್ ಶೆಣೈನ ಪೊಲೀಸರು ಹಿಡಿಯೋದಿಲ್ವಂತೆ ಮಾರಾಯಾ....!" ಎಂದು ಜನರು ಮಾತಾಡಿಕೊಳ್ಳುತ್ತಿದ್ದಾರೆ. ಆರಂಭದಲ್ಲಿ ಮಂಗಳೂರು ಪೊಲೀಸ್ ಕಮೀಷನರ್ ಚಂದ್ರಶೇಖರ್ ಖುದ್ದು ಆಸಕ್ತಿ ವಹಿಸಿ ಬಾಳಿಗಾ ಮರ್ಡರ್ ಮಿಸ್ಟರಿ ಬೇಧಿಸಲು ಪ್ರಯತ್ನಿಸಿದ್ದರು. ಸುಪಾರಿ ಪಡೆದು ಕೊಲೆ ಮಾಡಿದ್ದ ವಿನಿತ್ ಪೂಜಾರಿ, ನಿಶಿತ್ ದೇವಾಡಿಗ ಮತ್ತು ಶಿವು ಎಂಬವರ ಬಂಧಿಸಲಾಗಿತ್ತು. ನರೇಶ್ ಶೆಣೈನ ಹೆಡೆಮುರಿ ಕಟ್ಟಲು ಸ್ಕೆಚ್ ಸಹ ಹಾಕಲಾಗಿತ್ತು.

ಸ್ವಾಮಿಗಳ, ಸ್ವ-ಜಾತಿ ಮಂತ್ರಿ, ಸ್ವ-ಪಕ್ಷದ ಶಾಸಕ-ಸಂಸದರ ಕೃಪಾಶೀರ್ವಾದದ ನರೇಶ್ ಶೆಣೈ ಮಾತ್ರ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತ ಬಿಡಾರ ಬದಲಿಸುತ್ತಲೇ ಇದ್ದ. ಇನ್ನೊಂದೆಡೆ ನಿರೀಕ್ಷಣಾ ಜಾಮೀನಿಗೆ ಹವಣಿಸುತ್ತಿದ್ದ. ಕಮೀಷನರ್ ಚಂದ್ರಶೇಖರ್‌ಗೆ ಪಕ್ಕಾ ಆಗಿತ್ತು ನರೇಶ್‌ನ ಹಿಂದೆ ಬಲಾಢ್ಯ ಕಾವಿ, ಖಾದಿ ಗ್ಯಾಂಗ್ ಇದೆಯೆಂಬುದು. ಆದರೂ ಆತ ಸುಪಾರಿ ಕೊಟ್ಟವರ ಹಿಡಿಯುವ ಛಲವೇನೂ ಬಿಡಲಿಲ್ಲ. ಆದರೆ ಯಾವಾಗ ಕಮಿಷನರ್ ಸಾಹೇಬರು ನರೇಶ್‌ನ ಆತ್ಮಾಪ್ತ ಸಖ-ಕಾಶೀಮಠಾಧೀಶರ ನೀಲಿಗಣ್ಣಿನ ಹುಡುಗ ವಿಶ್ವನಾಥ ಭಟ್ಟನ ಬೆನ್ನಟ್ಟಿ ಹೋದರೋ ಆಗ ಶುರುವಾಯ್ತು ಗೃಹ ಇಲಾಖೆಯಲ್ಲಿ ಪೊಲೀಸರ ಕೈ-ಕಟ್ಟಿ ಹಾಕುವ ಕರಾಮತ್ತು.

ಮೊದಲು ಪೊಲೀಸರು ಬಲೆಗೆ ಕೆಡವಿಕೊಂಡಿದ್ದು ಕೊಂಕಣಿಗರ ಬ್ಯಾಂಕಿನ ವ್ಯವಹಾರ ನಿಭಾಯಿಸುವ ವೇದವ್ಯಾಸ ಕಾಮತ್‌ನನ್ನು! ಈತ ಕಾಶೀಮಠದ ಮಾಫಿಯಾಕ್ಕೂ ನಿಕಟವರ್ತಿಯೇ! ಮಂಗಳೂರು ನ್ಯಾಯಾಲಯದಲ್ಲಿ ನರೇಂದ್ರ ಶೆಣೈಯ ನಿರೀಕ್ಷಣಾ ಜಾಮೀನು ಅರ್ಜಿ ವಜಾ ಆದಾಗ ನಡುಗಲಾರಂಭಿಸಿದ ವೆಂಕಟರಮಣ ದೇವಸ್ಥಾನ ಕಮಿಟಿ ಮತ್ತು ಕಾಶೀಮಠ ಪರಿವಾರ ವೇದವ್ಯಾಸನ ಬಂಧನವಾದಾಗ ದಿಕ್ಕೆಟ್ಟುಹೋದರು. ಬೆನ್ನಿಗೇ ವಿಶ್ವನಾಥ ಭಟ್ ಪೊಲೀಸ್ ಬೋನಿಗೆ ಬಿದ್ದಾಗ ಖುದ್ದು ಮಠದ ಕಾವಿ ದೊರೆಯೇ ಮೈಕೊಡವಿ ಏಳಬೇಕಾಗಿ ಬಂತು. ನರೇಶ್ ಶೆಣೈನ ಬಂಧನ ಸನ್ನಿಹಿತವಾಗಿದೆ ಎಂಬ ಆತಂಕಕ್ಕೆ ಬಿದ್ದ ದೇವಧೂತರು ನೇರ ಗೃಹಮಂತ್ರಿಯನ್ನೇ ಸಂಧಿಸುವ ಅಡ್ಡದಾರಿ ಹುಡುಕತೊಡಗಿದರು.

[illegible]

ನರೇಶ್ ಶೆಣೈ, ವಿಶ್ವನಾಥ ಭಟ್ಟ, ವೇದವ್ಯಾಸ ಕಾಮತ್, ಶ್ರೀಕಾಂತರ ಸಾತ್ ನಂಬರ್ ಟೋಳಿ ಸಂಚು ಹೂಡಿ ಬಾಳಿಗಾರ ಮುಗಿಸಿದೆ ಎಂಬುದು ಪೊಲೀಸರಿಗೂ ಖಾತ್ರಿಯಾಗಿದೆ. ಈ ಗ್ಯಾಂಗಿಗೆ ಹಿಂದೂತ್ವದ ಹಿರೇಮಣಿ ಪುರಾಣಿಕ್, ಕಾಂಗ್ರೆಸ್ ಬಿಲ್ಡರ್ ರಮೇಶ್‌ಕುಮಾರ್‌ರಂಥವರ ಶಿಕ್ಷಣ, ಭೂ, ಬ್ಯಾಂಕಿಂಗ್ ಲಾಬಿ ತೆರೆಮರೆಯಲ್ಲಿ ನಿಂತು ಸಹಕರಿಸಿದೆ ಎಂಬ ಅನಿಸಿಕೆಯೂ ಮಂಗಳೂರಲ್ಲಿದೆ. ಇದೆಲ್ಲದರ ಒಟ್ಟು ಪರಿಣಾಮದಿಂದ ನರೇಶ್ ಶೆಣೈ



ಪರಮೇಶ್ವರ್

ಬಂಧನವಾದರೆ ಕಾವಿ-ಕೇಸರಿ-ಖಾದಿಗಳ ಅಸಲಿಯತ್ತು ನಿಸ್ಸಂಶಯವಾಗಿ ಸಾಬೀತಾಗುತ್ತದೆ.

ಇದು ಕಾಶೀಮಠ ಮಹಾಮಹಿಮರಿಗೆ, ವೆಂಕಟರಮಣನ ಆಡಳಿತಗಾರರಿಗೆ ಬೇಡದ ಬಂಧನ! ಹೇಗಾದರೂ ಮಾಡಿ ನರೇಶ್ ಶೆಣೈನನ್ನೂ ಕೇಸಿಂದಲೇ ಮೋಕಳಿಕ್ ಮಾಡಬೇಕೆಂಬ ಯೋಜನೆ ಈ ಪಾಪಿ ಪಟಾಲಮ್ಮಿನದು. ಆದಾಗದಿದ್ದರೆ ನಿರೀಕ್ಷಣಾ ಜಾಮೀನಾದರೂ ಸಿಗುವಂತೆ ಮಾಡಿ ನಿಧಾನಕ್ಕೆ ಕೇಸ್ ಹಳ್ಳ ಹಿಡಿಸುವ ಪ್ಲಾನ್ ಹಾಕಲಾಗಿತ್ತು. ಆದರೆ ಮಠದ ಮಹತ್ವದ ಮುಖಂಡ ವಿಶ್ವನಾಥ ಭಟ್ ಬಂಧನವಾಗುತ್ತಿದ್ದಂತೆಯೇ ಬಾಳಿಗಾರ ನೆತ್ತರು ಸೀದಾ ಕಾಶೀಮಠದ ಸ್ವಾಮಿಯ ಕಾಲಬುಡಕ್ಕೆ ಹರಿದುಬರುತ್ತಿರುವ ಸಂಕೇತ ಹೊರಬರಲಾರಂಭಿಸಿತು. ಆಗ ಸಯ್ಯಮೀಂದ್ರ ಸ್ವಾಮಿ ಪೀಠದಿಂದ ಎದ್ದು ಕಾವಿ ಮಂತ್ರದಂಡ ಪ್ರಯೋಗಿಸುವ ಅನಿವಾರ್ಯಕ್ಕೆ ಬಿದ್ದರು, ಪಾಪ.

ಮಂಗಳೂರಿನ ಮೂಲ್ಕಿ ಮೂಲದ ಚಂದ್ರಶೇಖರ ಸ್ವಾಮಿ ಎಂಬ ಅಧಿಕಾರಸ್ಥ ರಾಜಕಾರಣಿಗಳ ದೇವ ಮಾನವನ ಸಂಧಿಸಿದ ಸ್ವಾಮಿ ಹೇಗಾದರೂ ಈ ಕಂಟಕದಿಂದ ಬಚಾವ್ ಮಾಡುವಂತೆ ಬೇಡಿಕೊಂಡರು. ಈ ಚೊಂಭಟ್ಟನಿಗೆ ಗೃಹಮಂತ್ರಿ ಪರಮೇಶ್ವರ್ ಸಖ್ಯವಿರುವುದು ಗೊತ್ತಿದ್ದ ಸ್ವಾಮಿ ಪರಿವಾರ ಮತ್ತು ಕೇಸ್ ಖತಮ್ ಮಾಡಲು ಎಷ್ಟು ಹಣವಾದರೂ ವಿನಿಯೋಗಿಸಲು ರೆಡಿಯಾಗಿತ್ತು. ಇಂಥ ಡೀಲ್‌ಗಳಲ್ಲಿ ನಿಪುಣನಾದ ಚೊಂಭಟ್ಟ ಮೊದಲು ಸ್ವ-ಜಾತಿ ಮಂತ್ರಿ ದೇಶಪಾಂಡೆಯನ್ನು ಸಂಧಿಸಲು ಸ್ವಾಮಿ ಪರಿವಾರಕ್ಕೆ ದಾರಿ ತೋರಿಸಿದೆ. ದೇಶಪಾಂಡೆ ಲಿಂಕು ಮತ್ತು ತನ್ನ ಭೂಮಂತ್ರಗಾಳಿ ಎರಡನ್ನೂ ಸೇರಿಸಿ ಗೃಹಮಂತ್ರಿ ಪರಮೇಶ್ವರ್ ಮೇಲೆ ಪ್ರಯೋಗಿಸುವ ತಂತ್ರಗಾರಿಕೆ ಚೊಂಭಟ್ಟನದಾಗಿತ್ತು.

ಕೇಸಿನ ಕಾವಾರುತ್ತಿದೆ

ಅದೇನಾಯ್ತೋ?! ಸಯ್ಯಮೀಂದ್ರರು ಕಂಗಾಲಾಗಿ ಬೆಂಗಳೂರಿಗೆ ಹೋಗಿದ್ದೇ ಹೋಗಿದ್ದು ಇತ್ತ ಮಂಗಳೂರಿನ ಕಮಿಷನರ್ ಚಂದ್ರಶೇಖರ್ ಒಂಥರಾ ನರಮ್ ಆಗಿದ್ದಾರೆ. ಇದ್ದಕ್ಕಿದ್ದಂತೆ ಕೇಸಿನ ಕಾವು ಆರಲಾರಂಭಿಸಿದೆ. ವೆಂಕಟರಮಣನ ಮಾಲೀಕರು ಮತ್ತು ಕಾಶೀಮಠದ ಕರಾಮತ್ತುಗಾರರ ಬಿಟ್ಟು ಹಂತಕರಾದ ಶಿವು, ನಿಶಿತ್, ವಿನಿತ್ ಸುತ್ತಲಷ್ಟೇ ಕೇಸು ಗಿರಕಿ ಹೊಡೆವಂತೆ ಮಾಡಲಾಗುತ್ತಿದೆ. ಗೃಹಮಂತ್ರಿ ಪರಮೇಶ್ವರ್‌ರನ್ನು ಚೊಂಭಟ್ಟ ಭೇಟಿಯಾಗುತ್ತಿದ್ದಂತೆಯೇ ಮಂಗಳೂರು ಪೊಲೀಸರು ಮರ್ಡರ್ ರೂವಾರಿ ನರೇಶ್ ಶೆಣೈ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿ ಮಾಡಿದ್ದಾರೆ.

ಏನಿದರ ಅರ್ಥ? ಇಷ್ಟು ದಿನ ಆರೋಪಿ ನರೇಶನೇ ಎನ್ನುತ್ತಿದ್ದ ಪೊಲೀಸರು ಆತ ಒಣ ಮೀನು-ಕೊಚ್ಚಕ್ಕಿ ಗಂಜಿ ಉಣ್ಣುವಂತೆ ಮಾಡೋದು ಬಿಟ್ಟು ಲುಕ್‌ಔಟ್ ನೋಟಿಸ್ ಹೊರಡಿಸುತ್ತಾರೆಂದರೆ ಕೇಸ್ ಹಳ್ಳ ಹಿಡಿಸುವ ತಯಾರಿ ನಡೆಸಿದ್ದಾರೆಂದಾ? ನರೇಶ್‌ಗೆ ನಿರೀಕ್ಷಣಾ ಜಾಮೀನು ಸಿಗಲು ಪೊಲೀಸರು ನೆರವಾಗುತ್ತಿದ್ದಾರಾ? ವದಂತಿ ಹಬ್ಬಿಸೋದರಲ್ಲಿ ನಿಸ್ಸೀಮರಾದ ಚೆಡ್ಡಿಗಳೀಗ ಮಂತ್ರಿ ಪರಮೇಶ್ವರ್ 3 ಕೋಟಿ ಡೀಲ್ ಮಾಡಿ ನರೇಶ್‌ನ ಕಾಪಾಡುತ್ತಿದ್ದಾರೆಂದು ಸುದ್ದಿ ಹಬ್ಬಿಸಿದ್ದಾರೆ. ಚೆಡ್ಡಿಗಳ ಚಮತ್ಕಾರ ಹೇಗಿದೆ ನೋಡಿ ತಮ್ಮ ಪರಿವಾರದ ನರೇಶ್ ಶೆಣೈ ಬಚಾವೂ ಆಗಬೇಕು; ಕಾಂಗ್ರೆಸ್ ಸರ್ಕಾರದ ಮಾನವೂ ಹೋಗಬೇಕು.

ಧರ್ಮರಕ್ಷಕ ಮುಖವಾಡದ ಮಂದಿಯೇ ಕೊಲೆ ಮಾಡಿ ಅದರ ಪಾಪ ತಮ್ಮ ತಲೆಗೆ ಕಟ್ಟುತ್ತಿದ್ದರೂ ಮೂರ್ಖ ಕಾಂಗ್ರೆಸ್ ನಾಯಕರಿಗೆ ಪರಿವೇ ಇಲ್ಲದಾಗಿದೆ.


ಇನ್ನಾದರೂ ಗೃಹಮಂತ್ರಿ ಪರಮ್ ಎಚ್ಚೆತ್ತುಕೊಳ್ಳುವರಾ? ಮೂರು ಕೋಟಿ ಡೀಲ್‌ನ ಕಳಂಕದಿಂದ ಪಾರಾಗಲು ಕೊಲೆಗಡುಕ-ಚೆಡ್ಡಿ ನರೇಶ್ ಶೆಣೈನ ಕೈಗೆ ಕೋಳ ತೊಡಿಸುವರಾ? ತಿಹಾಲಕ್ಷ್ಮಾಜಿಗೆ ಭಂಗ ತಂದು ಬೆಂಗಳೂರಿಗೆ ಸಯ್ಯಮೀಂದ್ರ ಸ್ವಾಮಿ ಬಂದಿದ್ದರೂ ತನ್ನನ್ನು ಕಾಣಲಿಲ್ಲ ಎಂಬುದು ಖಾತ್ರಿ ಮಾಡುವರಾ? ಅಥವಾ ತಾನು ಚೊಂಭಟ್ಟನ ಪರಮ್ ಶಿಷ್ಯನೆಂದು ಸಾಬೀತು ಮಾಡುವರಾ?

ಹಾಗಂತ ಮಂಗಳೂರಿಗರು ಕೇ[illegible]

● ಶುದ್ದೋಧನ

ಬ್ರಾಹ್ಮಣವಾದದ ಮೇಲೆ ಯುದ್ಧ ಘೋಷಣೆ ಭಾಗ-3

ಬ್ರಾಹ್ಮಣ್ಯದ ವಿರುದ್ಧ ಪೆರಿಯಾಳ್ ಈ.ವಿ. ರಾಮಸ್ವಾಮಿ ಅವರು 1973 ರಲ್ಲಿ ಮಾಡಿದ ಕೊನೆಯ ಭಾಷಣದ ಮೂರನೇ ಭಾಗ ಇಲ್ಲಿದೆ.



ನಾನು ಯಾವುದೇ ನಾಸ್ತಿಕ ಪ್ರಚಾರ ಇಲ್ಲಿ ಮಾಡುತ್ತಿಲ್ಲ. ದೇವರು ಇಲ್ಲ ಎಂದು ಹೇಳಲು ನಾನು ಇಲ್ಲಿಗೆ ಬಂದಿಲ್ಲ. ಅದಕ್ಕಾಗಿ ಬೇರೆ ಸಂದರ್ಭಗಳನ್ನು ನಾವು ಬಳಸಿಕೊಳ್ಳೋಣ.

ನಮ್ಮ ಕೆಲಸ ಕೇಡುಗಳನ್ನು ಅಳಿಸುವುದಾಗಿದೆ. ಶಾಸನಸಭೆಯ ಸದಸ್ಯನಾಗುವ ಆಸೆ ಇದ್ದರೆ, ನಾವು ಇದನ್ನು ಮಾಡಲಾರೆವು. ಮಂತ್ರಿಗಿರಿಗೆ ಆಸೆಪಟ್ಟರೆ, ನಾವು ಈ ಕೆಲಸ ಮಾಡಲಾರೆವು. ಅಧಿಕಾರ ಮತ್ತು ಸ್ಥಾನಮಾನಕ್ಕೆ ದುರಾಸೆಪಟ್ಟರೆ ಇದನ್ನು ನಾವು ಮಾಡಲು ಸಾಧ್ಯವಿಲ್ಲ. ಆದ್ದರಿಂದಲೇ ಅಂಥ ಆಸೆಗಳಿಂದ ನಾವು ದೂರ ಇದ್ದೇವೆ. ನಮ್ಮ ಪ್ರಮುಖ ಅಭಿಲಾಷೆ ಅಂದರೆ ಸಮಾಜವನ್ನು ಸುಧಾರಿಸುವುದೇ ಆಗಿದೆ.

ಆದ್ದರಿಂದ ಇದನ್ನು ಗಂಭೀರವಾಗಿ ಚಿಂತಿಸಿ. ನಮ್ಮ ಪ್ರಯತ್ನದಲ್ಲಿ ನಾವು ಜಯಶಾಲಿಗಳಾಗಲೇಬೇಕು. ಅಪಾರ ಸಂಖ್ಯೆಯಲ್ಲಿ ಮುಂದೆ ಬನ್ನಿ. ಚಳವಳಿಯನ್ನು ದೊಡ್ಡದಾಗಿ ಯಶಸ್ವಿಗೊಳಿಸಿ.

ನಮ್ಮನ್ನು ಕಂಬಿ ಹಿಂದೆ ಹಾಕಬಹುದು. ಈ ವಿಷಯವನ್ನು ನಾವು ಗಾಢವಾಗಿ ತೆಗೆದುಕೊಳ್ಳೋಣ. ಜೈಲುಕೋಣೆಗಳನ್ನು ಸಂಪೂರ್ಣವಾಗಿ ತುಂಬಿ. ಒಂದು ಪಕ್ಷ ನೀವು ಸೆರೆಮನೆಗೆ ಹೋಗಲು ಸಾಧ್ಯವಾಗದಿದ್ದರೆ ಯಾರನ್ನಾದರೂ ಕಳುಹಿಸಲು ನೀವು ಪ್ರಯತ್ನ ಪಡಲೇಬೇಕು. ನಿಮ್ಮ ಬಂಧುಗಳು, ಸ್ನೇಹಿತರು, ನೆರೆಹೊರೆಯವರನ್ನು ಸೆರೆಮನೆಗೆ ಹೋಗಲು ಪುಸಲಾಯಿಸಿ. ಪ್ರತಿಯೊಬ್ಬನೂ ತನ್ನ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿದೆ ಎಂಬ ಭಾವನೆ ಅನುಭವಿಸಬೇಕು. ಈ ಚಳವಳಿ ನಮ್ಮ ಮಾತೃಭೂಮಿಯನ್ನು ಬಿಡುಗಡೆಗೊಳಿಸುವಲ್ಲಿ ಸಫಲವಾದರೆ ಆಶ್ಚರ್ಯಪಡಬೇಕಾಗಿಲ್ಲ, ನಮ್ಮ ತೌರು ಭೂಮಿಯನ್ನು ಬೇರ್ಪಡಿಸುವಲ್ಲಿ ಇದು ಫಲ ಕಾಣಬಹುದು.

ಪರಕೀಯರಿಗೆ ಅವಕಾಶ ಕೊಟ್ಟದ್ದು ನಮ್ಮ ತಪ್ಪು. ಕಾಂಗ್ರೆಸ್ಸಿಗರಿಗೆ ಮತ್ತು ಇತರೆ ಕೆಟ್ಟ ಶಕ್ತಿಗಳಿಗೆ ನಾವು ಜಾಗ ಕೊಟ್ಟೆವು. ಅವರು ಹಾರುವರು. ಸ್ವಾರ್ಥ ದೃಷ್ಟಿಯಿಂದ ಕೆಲವು ಜನ ಅಬ್ರಾಹ್ಮಣರು ಅವರ ಜೊತೆ ಸೇರಿಕೊಂಡರು. ಅವರು ವಂಚಕರು. ಅವರು ತಮ್ಮ ಅನುಕೂಲಕ್ಕಾಗಿ ಶೂದ್ರರು ಎಂಬ ಕೀಳು ಸ್ಥಾನವನ್ನು ಒಪ್ಪಿಕೊಂಡಿದ್ದಾರೆ. ಈಗ ಅವರಲ್ಲೇ ವಿಷಯಗಳು ಉಲ್ಲಾಸಕರವಾಗಿಲ್ಲ, ಆದರೂ ಅವರು ತಮ್ಮ ಕಷ್ಟ ನಿಷ್ಠುರಗಳನ್ನು ಬಹಿರಂಗವಾಗಿ ಹೇಳಿಕೊಳ್ಳಲಾರರು. ಹಾರುವರ ವಿರುದ್ಧ ಅವರು ಹೋರಾಡಲು ಸಾಧ್ಯವೇ ಇಲ್ಲ.

ನಿಮಗೆ ಗೊತ್ತು, ನಮ್ಮ ದೇಶ ಈಗ ಅನೇಕ ರಾಜ್ಯಗಳಾಗಿ ವಿಭಜನೆಯಾಗಿದೆ. ಅವುಗಳಲ್ಲಿ ನಮ್ಮ ರಾಜ್ಯವೂ ಒಂದು. ಈ ರಾಜ್ಯದಲ್ಲಿ ಇರುವ ಅನೇಕ ಪಕ್ಷಗಳಲ್ಲಿ ನಮ್ಮ ದ್ರಾವಿಡ ಕಳಗಂ ಪಕ್ಷವು ಒಂದು. ಆದ್ದರಿಂದ ನಮ್ಮ ಕಾರ್ಯಕ್ರಮಗಳನ್ನು ನಿಜವಾಗಿ ಜಾರಿಗೊಳಿಸುವುದು ಅಷ್ಟು ಸುಲಭವಲ್ಲ, ಇತರ ರಾಜ್ಯಗಳಲ್ಲಿ ಅನೇಕ ಜನರಿದ್ದಾರೆ. ಅವರಿಗೆ ನಾವು ಅನುಭವಿಸುತ್ತಿರುವ ಸಾಮಾಜಿಕ ದಬ್ಬಾಳಿಕೆ ಅರ್ಥವಾಗುತ್ತಿಲ್ಲ. "ನಮ್ಮನ್ನು ಶೂದ್ರರೆಂದು ಕರೆದರೆ ಏನಂತೆ? ನಾವು ಶೂದ್ರರಲ್ಲವೆ?" ಎಂದು ಅವರು ರಾಮನನ್ನು ದೇವರು ಮತ್ತು ಮಹಾರಾಜ ಎಂದು ಪೂಜಿಸುತ್ತಾರೆ. ಅವರ ಅಜ್ಞಾನಕ್ಕಾಗಿ ಅವರನ್ನು ನಾವು ನಿಂದಿಸಬಾರದು. ಅವರಿಗೆ ಸರಿಯಾಗಿ ತಿಳಿವಳಿಕೆ ಬಂದಿಲ್ಲ.

ಮುಂದೆ ನಡೆಸುವ ಚಳವಳಿಯಲ್ಲಿ ನಾವು ಪಡುವ ಶ್ರಮ ಮತ್ತು ಕಷ್ಟಗಳು ಮತ್ತು 'ಶೂದ್ರ' ಎಂಬ ಕೀಳು ಸ್ಥಾನದ ನಿರ್ಮೂಲನೆಗೆ ನಾವು ಮಾಡುವ ತ್ಯಾಗಗಳನ್ನು ನೋಡಿ ಜನರು ಈ ಸತ್ಯವನ್ನು ಅರ್ಥಮಾಡಿಕೊಂಡು ನಮ್ಮ ಹೋರಾಟದ ಪಡೆಗಳ ಶಕ್ತಿಯನ್ನು ಹೆಚ್ಚಿಸಲು ಮುಂದೆ ಬರುತ್ತಾರೆ. ನಾವು ಸಾವಿರಾರು ಜನರು ಜೈಲಿಗೆ ಹೋದರೆ ನಮ್ಮ ಹೋರಾಟದ ಬಗ್ಗೆ ಅವರು ವಿಚಾರಿಸುವುದಿಲ್ಲವೆ? ಹುಟ್ಟಿನಿಂದ ಅಂಟಿರುವ 'ಶೂದ್ರರು' ಎಂಬ ಕಳಂಕವನ್ನು ತೆಗೆದುಹಾಕಲು ನಾವು ಚಳವಳಿ ಮಾಡುತ್ತಿದ್ದೇವೆಂದು ಅವರು ಅರಿತುಕೊಳ್ಳುತ್ತಾರೆ. ತಾವು ಸಹ 'ಸೂಳೆ ಮಕ್ಕಳು' ಎಂದು ಅವರು ಅರಿತುಕೊಳ್ಳುತ್ತಾರೆ. ನಾವು ಯಾವುದೇ ಅಧಿಕಾರ ಅಥವಾ ಭೋಗಕ್ಕಾಗಿ ಹೋರಾಟ ನಡೆಸುತ್ತಿಲ್ಲ ಎಂದು ಅವರು ಅರಿತುಕೊಳ್ಳುವರು.

ಸಹಜವಾಗಿಯೇ ನಮ್ಮ ಚಳವಳಿ ಬಗ್ಗೆ ಅವರು ಸಹಾನುಭೂತಿ ತಾಳುತ್ತಾರೆ. ನಾವು ಈ ಚಳವಳಿಯನ್ನು ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿದುಕೊಳ್ಳುವರು.

ಅವರು ಸಹಜವಾಗಿಯೇ ತಮ್ಮ ಸ್ವಂತ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಯೋಚಿಸಲು ಪ್ರೇರಣೆಗೊಳ್ಳುತ್ತಾರೆ. ಇದು ಖಚಿತ. ಉತ್ತರ ಭಾರತದ ರಾಜ್ಯಗಳ ಜನರು ನಿರುತ್ಸಾಹಿಗಳಾಗಿದ್ದರೂ, ಕೊನೆಪಕ್ಷ ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಕೇರಳದ ಜನರು ಖಂಡಿತ ಈ ಪ್ರಮುಖ ಸಾಮಾಜಿಕ ಸಮಸ್ಯೆ ಬಗ್ಗೆ ತಮ್ಮ ಮನಸ್ಸು ಹರಿಸುತ್ತಾರೆ.

ನಾಯರ್ ಮಲಯಾಳಿಗಳು ಸೂಳೆಯ ಮಕ್ಕಳೆಂದು ನಿಮಗೆ ಗೊತ್ತು, ಅವರು ಹಾರುವರಿಗೆ ಹುಟ್ಟಿದವರು. ಅದನ್ನು ಅವರೇ ಬಹಿರಂಗವಾಗಿ ಒಪ್ಪಿಕೊಳ್ಳುತ್ತಾರೆ. ಹಾಗೆ ಹೇಳಲು ಸಹ ಅವರು ಹೆಮ್ಮೆ ಪಡುತ್ತಾರೆ. ತಾವು ನಾಯರ್‌ಗಳಲ್ಲ ಎಂದು ಅವರು ಘೋಷಿಸುತ್ತಾರೆ. ತಾವು ನಂಬೂದರಿ ಬ್ರಾಹ್ಮಣರಿಗೆ ಹುಟ್ಟಿದವರೆಂದು ಅವರು ಹೇಳಿಕೊಳ್ಳುವರು. ಅವರು ಬ್ರಾಹ್ಮಣರಿಗೆ ದಕ್ಷಿಣೆ (ಹಣ) ಕೂಡ ಕೊಡುತ್ತಾರೆ.

ಆದರೆ ಈಗ ಅವರು ಬದಲಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅವರು ತಮ್ಮ ಸ್ವಾಭಿಮಾನ ಮತ್ತು ಗೌರವವನ್ನು ಪುನಃ ಪಡೆದುಕೊಳ್ಳಲು ಹಂಬಲಿಸುತ್ತಿದ್ದಾರೆ.

> ಸ್ವತಂತ್ರವಾದ ರಾಷ್ಟ್ರದಲ್ಲಿ ಪ್ರಜೆಗಳು ಶೂದ್ರರಾಗಿರಬೇಕೇ? ಪ್ರಜೆಗಳನ್ನು ಅಸ್ಪೃಶ್ಯರು, ಗುಲಾಮರು, ಪಾಪಿಗಳು ಮತ್ತು ಆಳುಗಳು ಎಂದು ಪರಿಗಣಿಸುವ ಮತಗಳು, ಮಹಾಕಾವ್ಯಗಳು ಮತ್ತು ಕಾನೂನುಗಳು ಇರಬೇಕೇ? ಯೋಚಿಸಿ.
>
> ನನಗೆ ಯಾರೂ ಕೀಳಲ್ಲ, ಹಾಗೆಯೇ ನನಗೆ ಯಾರೂ ಮೇಲಲ್ಲ, ಇದರರ್ಥ: ಪ್ರತಿಯೊಬ್ಬರೂ ಸಮಾನವಾಗಿ ಸ್ವತಂತ್ರವಾಗಿ ಬದುಕಬೇಕು. ಇಂಥ ಸ್ಥಿತಿಯನ್ನು ಸೃಷ್ಟಿಸಲು ಜಾತಿಯನ್ನು ನಿರ್ಮೂಲನೆ ಮಾಡಲೇಬೇಕು.
>
> ರೋಗಿಗೆ ಕಾಯಿಲೆ ಬಂದಾಗ ವೈದ್ಯರು ಅದನ್ನು ವಾಸಿ ಮಾಡುತ್ತಾರೆ. ಅದನ್ನು ತಡೆಗಟ್ಟಲು ಅದು ಏಕೆ ಬರುತ್ತದೆಂಬ ಕಾರಣಗಳನ್ನು ಕಂಡುಹಿಡಿದು ರೋಗವನ್ನು ಅಳಿಸಿಹಾಕಬೇಕು. ಆದರೆ ಪ್ರತಿ ಸಾರಿ ರೋಗ ಬಂದಾಗಲೂ ಶಮನಕಾರಿ ಔಷಧವನ್ನು ಕೊಡುವುದು ಪರಿಣಾಮಕಾರಿ ಕ್ರಮ ಅಲ್ಲ, ಅದೇರೀತಿ ನಮ್ಮ ಸಮಾಜವನ್ನು ಹಾಳು ಮಾಡುತ್ತಿರುವ ಜಾತಿ ಎಂಬ ರೋಗಕ್ಕೆ ಮೂಲಕಾರಣ ಪತ್ತೆ ಹಚ್ಚಿ ಅದನ್ನು ಕೊನೆಗಾಣಿಸಲೇಬೇಕಾಗಿದೆ.
>
> \- ಪೆರಿಯಾರ್

ನಮ್ಮ ಹೋರಾಟದಲ್ಲಿ ಮಲಯಾಳಿಗಳು ಭಾಗವಹಿಸಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುವ ಪತ್ರಗಳನ್ನು ನನಗೆ ಬರೆದಿದ್ದಾರೆಂದು ತಿಳಿಯಲು ನಿಮಗೆ ಸಂತೋಷವಾಗುತ್ತದೆ. ನಮ್ಮ ಹೋರಾಟದ ಧ್ಯೇಯ ಪ್ರಥಮತಃ ಪ್ರತಿಯೊಬ್ಬ ವ್ಯಕ್ತಿಯ ಆತ್ಮಗೌರವ ಮತ್ತು ಮರ್ಯಾದೆ ಆಗಿರುವುದರಿಂದ ನಮ್ಮ ಚಳವಳಿ ದೀರ್ಘಕಾಲದಲ್ಲಿ ಜಯಶಾಲಿಯಾಗುತ್ತದೆ.

ಹಾಗೆಯೇ ಆಂಧ್ರಪ್ರದೇಶ, ಕರ್ನಾಟಕ ಮತ್ತು ಇನ್ನಿತರ ರಾಜ್ಯಗಳು ನಮ್ಮ ಧ್ಯೇಯವನ್ನು ಎತ್ತಿಹಿಡಿಯಲು ನಿಶ್ಚಯವಾಗಿಯೂ ಮುಂದೆ ಬರುತ್ತವೆ. ಇಂದು ಅವರು ಅಜ್ಞಾನಿಗಳಾಗಿದ್ದಾರೆ. ಅವರನ್ನು ನಮ್ಮ ಚಳವಳಿ ಎಚ್ಚರಿಸುತ್ತದೆ. ಇಲ್ಲಿ ನಡೆಯುವ ನಮ್ಮ ಚಳವಳಿಯ ಬಗ್ಗೆ ಅವರು ಸುದ್ದಿಯನ್ನು ಓದುತ್ತಾರೆ, ಅನೇಕ ಸಂಗತಿಗಳನ್ನು ಕೇಳುತ್ತಾರೆ. ಖಂಡಿತವಾಗಿಯೂ ಬದಲಾವಣೆಯಾಗುತ್ತದೆ. ಆದರೆ ಅದು ಹಠಾತ್ ಬರುವುದಿಲ್ಲ, ಅವರು ನಿಧಾನವಾಗಿ ನಮ್ಮ ಕರೆಗೆ ಓಗೊಡುತ್ತಾರೆ.

ತಮಿಳುನಾಡು

ತಮಿಳುನಾಡು ಮುಕ್ತವಾಗಿ ಸ್ವತಂತ್ರವಾದರೆ ಹತ್ತು ವರ್ಷಗಳ ಕಿರು ಅವಧಿಯಲ್ಲಿ ನಮ್ಮ ಜನರ ಆಯುಃಪ್ರಮಾಣ ಒಂದು ನೂರು ವರ್ಷಗಳವರೆಗೆ ವಿಸ್ತರಿಸುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಲು ನಾವು ಸಮರ್ಥರಾಗುತ್ತೇವೆ.

ನಾವು ಗಾಳಿಯಲ್ಲಿ ಹಾರಲು ಸಮರ್ಥರಾಗುತ್ತೇವೆ. ಇಂದು ಒಂದು ವಿಮಾನ 300 ರಿಂದ 400 ರಷ್ಟು ಪ್ರಯಾಣಿಕರನ್ನು ಒಯ್ಯುತ್ತದೆ. ಈಗ ಮನುಷ್ಯನ ಸಾಧಾರಣ ಜೀವಮಾನ 52 ವರ್ಷ. ಇದು 20 ವರ್ಷಗಳಷ್ಟು ಹೆಚ್ಚಾಗುತ್ತದೆ. ಕ್ರಿ. ಶ 2000 ದ ಹೊತ್ತಿಗೆ 75 ವರ್ಷಗಳಾಗಬಹುದು. ಪಾಶ್ಚಾತ್ಯ ದೇಶಗಳಲ್ಲಿ 100 ವರ್ಷಗಳಷ್ಟು ಕಾಲ ಬದುಕಲು ಸಮರ್ಥರಾಗಿದ್ದಾರೆ.

ಅಷ್ಟರವಟ್ಟಿಗೆ ವೈದ್ಯಕೀಯ ವಿಜ್ಞಾನಗಳು ಸುಧಾರಣೆಗೊಂಡಿವೆ. ಈಗ ನಾವು ಪೂರ್ಣ ಬೆಳವಣಿಗೆಯಾದ ಜಗತ್ತಿನಲ್ಲಿ ಇದ್ದೇವೆ. ಎಲ್ಲಾ ಕಾಯಿಲೆಗಳಿಗೂ ವೈದ್ಯಕೀಯ ಚಿಕಿತ್ಸೆ ಲಭ್ಯವಿದೆ. ಈಗ ವೀರ್ಯಾಣು ನಿಧಿ ಇರುವುದನ್ನು ನೀವು ನೋಡಬಹುದು. ಮೊಟ್ಟೆಯಿಂದ ಕೋಳಿಮರಿ ಬರುವಂತೆ ಪ್ರನಾಳ ನಳಿಕೆಗಳಿಂದ ಮಾನವ ಶಿಶುಗಳನ್ನು ತಯಾರಿಸಬಹುದು. ನೈಜ ಫೋಟೋಗಳಿಂದ ನೀವು ಸುದ್ದಿ ತಿಳಿದುಕೊಳ್ಳಲಿಕ್ಕೆ ಸಾಧ್ಯ. ಒಂದು ಗಂಟೆಗೆ 10 ಸಾವಿರ ಮೈಲಿ ವೇಗದಲ್ಲಿ ಹಾರಲು ಕೂಡ ಮನುಷ್ಯ ಈಗ ಸಮರ್ಥನಾಗಿದ್ದಾನೆ. ಮನುಷ್ಯ ಚಂದ್ರಲೋಕಕ್ಕೆ ಹೋಗಿ ಬರಬಲ್ಲ. ಇವೆಲ್ಲ ಬರಿ ಸುಳ್ಳುಗಳೆಂದು ಯಾರೂ ಖಂಡಿಸುವುದಿಲ್ಲ. ಈಗ ನಾವು ನಮ್ಮ ಆತ್ಮಗೌರವ ಕಾಪಾಡಿಕೊಳ್ಳಲು ಹೋರಾಡುತ್ತಿದ್ದೇವೆ. ಈ ಚೈತನ್ಯ ಎಲ್ಲಾ ಕಡೆ ಹರಡಬೇಕು. ಬಂಧನ ಎದುರಿಸಲು ನಾವು ತಯಾರಾಗಬೇಕು. ಸೆರೆವಾಸ ಎಂದರೇನು? ಜೈಲುವಾಸಿಗಳು ಹಸಿವಿನಿಂದ ಬಳಲಬೇಕಾದ್ದಿಲ್ಲ. ಅವರು ಸೆರೆ ಆಗುವವರೆಗೆ ನಾವು ಅವರನ್ನು ನೋಡಿಕೊಳ್ಳುತ್ತೇವೆ. ಸ್ವಯಂಸೇವಕರಿಗೆ ಊಟ ಹಾಕಲು ಉದಾರವಂತ ಜನರು ಅಕ್ಕಿಮೂಟೆಗಳನ್ನು ಈಗಾಗಲೇ ನಮಗೆ ದಾನ ಮಾಡಿದ್ದಾರೆ. ಅವುಗಳನ್ನು ಅಪಾರ ಸಂಖ್ಯೆಯಲ್ಲಿ ಪೇರಿಸಿಡಲಾಗಿದೆ. ಕೆಲವರು ಹಣವನ್ನು ದಾನ ಮಾಡಿದ್ದಾರೆ. ಸದ್ಯದಲ್ಲಿಯೇ ನಮ್ಮ ಖರ್ಚಿಗೆ 50 ಸಾವಿರ ರೂ ಸಂಗ್ರಹವಾಗುತ್ತದೆ. ಅನೇಕ ಜನರು ಹೆಚ್ಚು ಹೆಚ್ಚು ದಾನ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ನಮ್ಮ ಧ್ಯೇಯ ದೋಷಾತೀತವಾದುದು. ಆದ್ದರಿಂದ ದಾನಗಳು ಹರಿದುಬರುತ್ತಿವೆ. ಸುಮಾರು ಒಂದು ಲಕ್ಷ ಜನರನ್ನು ನಾವು ಸೆರೆಮನೆಗೆ ಕಳುಹಿಸಲಿದ್ದೇವೆ. ಇದಕ್ಕಾಗಿ ಈಗಾಗಲೇ ಸಿದ್ಧತೆಗಳನ್ನೂ ಮಾಡಲಾಗಿದೆ.

ನಾವು ಪ್ರಪಂಚಕ್ಕೆ ಖಂಡಿತ ಒಂದು ಮೇಲ್ಪಂಕ್ತಿ ಹಾಕಲಿದ್ದೇವೆ. ನಾವು ಒಂದು ಹೊಸ ಜಗತ್ತನ್ನು ರೂಪಿಸುತ್ತೇವೆ. ಇಡೀ ಶೂದ್ರ ವರ್ಗವನ್ನು ಮುನ್ನಡೆಸಲು ನಮಗೆ ಶಕ್ತಿಸಾಮರ್ಥ್ಯ ಇದೆ. ನಿಜ, ನಮ್ಮ ಸಮಾಜದಲ್ಲಿ ಇನ್ನೂ ಬೇರೆ ಕೇಡುಗಳು ಇವೆ. ಅವುಗಳ ಬಗ್ಗೆ ಆಮೇಲೆ ನಮ್ಮ ಗಮನ ಹರಿಸುತ್ತೇವೆ. ನಮ್ಮ ಜೊತೆ ಸೇರಿಕೊಂಡು ಸಾರ್ವಜನಿಕರು ವಹಿಸುವ ಪಾತ್ರದ ಉತ್ಸಾಹದ ಮೊತ್ತದ ಮೇಲೆ ಎಲ್ಲವೂ ನಿಂತಿದೆ. ತಿಳಿವಳಿಕೆ ಪಡೆದರೆ ನಮ್ಮ ಮಹಿಳಾ ಸಮುದಾಯವು ತನ್ನ ಪಾತ್ರ ನಿರ್ವಹಿಸುತ್ತದೆ. ನೀವು ಅವರಿಗೆ ತಿಳಿವಳಿಕೆ ಕೊಡಬೇಕು. "ಅಮ್ಮ, ಈ ಚಳವಳಿ ನಿಮಗಾಗಿ ನಡೆಯುತ್ತಿದೆ. ಹಾರುವರು ನಿಮ್ಮನ್ನೆಲ್ಲಾ ಸೂಳೆಯರು ಅಂತ ಬೈದಿದ್ದಾರೆ. ನಿಮ್ಮನ್ನೆಲ್ಲ ಅವರ ಉಪಪತ್ನಿಯರೆಂದು ಪರಿಗಣಿಸಿದ್ದಾರೆ. ಈ ಅವಮಾನವನ್ನು ತೆಗೆದುಹಾಕುವುದಕ್ಕಾಗಿ ಈಗಿನ ಚಳವಳಿಯು ನಡೆಯುತ್ತಿದೆ. ಆದ್ದರಿಂದ ನೀವೆಲ್ಲಾ ಈ ಚಳವಳಿಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲಾ ರೀತಿಯಲ್ಲಿಯೂ ನಿಮ್ಮ ಕೈಲಾದಷ್ಟನ್ನು ಮಾಡಲು ನೀವು ಮುಂದೆ ಬನ್ನಿ". ಅವರನ್ನು ನೀವು ಕಂಡು ಅಂಕಿ ಅಂಶಗಳ ಮೂಲಕ ಅವರಿಗೆ ಆಸಕ್ತಿಯಿಂದ ವಿವರಿಸಿದರೆ ಅವರು ಸಂತೋಷದಿಂದ ಮುಂದೆ ಬರುತ್ತಾರೆ.

ಈ ಹೋರಾಟ ಅನಿವಾರ್ಯ. ಈ ಧರ್ಮದಲ್ಲಿ ನಮಗೇನೂ ಇಲ್ಲ, ದೇವರು ಎಂಬ ಕಲ್ಪನೆಯೇ ತಪ್ಪು, ಶಾಸ್ತ್ರಗಳು ಕಸದರಾಶಿ. ಅವುಗಳನ್ನು ಗಟಾರಕ್ಕೆ ಎಸೆಯಿರಿ. ಅವೆಲ್ಲಾ ಹಾರುವರ ಕಲ್ಪನೆಗಳು, ಅಷ್ಟೆ.

ಜನರು ಮುಗ್ಧರೂ ಅನಾಗರಿಕರೂ ಆಗಿದ್ದಾಗ ನಮ್ಮ ದೇವರುಗಳನ್ನು ಸೃಷ್ಟಿಸಲಾಯಿತು. ಈಗ ಎಲ್ಲರೂ ಮಹಾಕಾವ್ಯ ರಾಮಾಯಣದ ಬಗ್ಗೆ ಮಾತನಾಡುತ್ತಾರೆ. ರಾಮನನ್ನು ದೇವರೆಂದು ಕರೆಯುವುದು ವಾಡಿಕೆಯಾಗಿದೆ. ಆದರೆ ರಾಮನ ಹುಟ್ಟನ್ನೇ ನೋಡಿ. ರಾಮ ಹುಟ್ಟಿದ್ದು ಯಾರಿಗೆ? ದಶರಥನಿಗೆ ಎಂದು ನೀವು ಹೇಳಬಹುದು. ಆದರೆ ರಾಜ ದಶರಥನಿಗೆ ಮಕ್ಕಳಿರಲಿಲ್ಲ ಎಂದು ಕಥೆ ಹೇಳುತ್ತದೆ. ಹಾಗಾಗಿ ಅವನು ತನ್ನ ಹೆಂಡತಿಯರನ್ನು ಹಾರುವರಿಗೆ ಅರ್ಪಿಸಿದನು. ಆದರೆ ಅದಕ್ಕೆ ಮುನ್ನ ರಾಣಿಯರಿಗೆ ಕಾಮೋತ್ತೇಜನ ಉಂಟುಮಾಡಲು ಕುದುರೆಗಳಿಂದ ಅವರಿಗೆ ಸಂಭೋಗ ಮಾಡಿಸಿದರು.

ಆಮೇಲೆ ಹಾರುವರು ರಾಣಿಯರನ್ನು ಕೂಡಿದರು. ಇದು ಮಹಾಕಾವ್ಯವಾದ ರಾಮಾಯಣದ ಬಾಲಕಾಂಡದಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಯಾವುದೇ ದೇವರನ್ನು ನೀವು ತೆಗೆದುಕೊಂಡು ಆಳವಾಗಿ ಯೋಚಿಸಿ. ಈಗಿನ ಕಾಲಕ್ಕೆ ನಾವು ಒಪ್ಪುವಂಥ ಯಾವ ದೇವರೂ ಇಲ್ಲ.

ದೇವರುಗಳ ಅವಿವೇಕಗಳನ್ನು ಬಿಚ್ಚಿಡುವುದರಲ್ಲಿ ನಮಗೆ ಯಾವ ಸ್ವಾರ್ಥ ಉದ್ದೇಶವೂ ಇಲ್ಲ, ನಿಮ್ಮನ್ನು ವಂಚಿಸುವುದರಿಂದ ನಮಗೇನೂ ಲಾಭ ಇಲ್ಲ, ನಾವು ಏನನ್ನೂ ಕಥೆ ಕಟ್ಟುತ್ತಿಲ್ಲ, ಸತ್ಯಾಂಶಗಳನ್ನು ಹೇಳುತ್ತಿದ್ದೇವೆ. ನಾವು ಯಾವಾಗಲೂ ಪ್ರಮಾಣಭೂತವಾಗಿ ಮಾತನಾಡುತ್ತೇವೆ.

ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆ ಬದುಕಿದ್ದ ಜನರು ಅಜ್ಞಾನಿಗಳಾಗಿದ್ದರೆಂಬುದು ನಿಜ. ಅವರಿಗೆ ಸರಿಯಾದ ಶಿಕ್ಷಣ ಇರಲಿಲ್ಲ, ಅವರ ಬೆಳವಣಿಗೆ ಆಗಿರಲಿಲ್ಲ, ಹಾಗಾಗಿ ಹಾರುವರಿಗೆ ತಮಗೆ ಖುಷಿಯಾದಂತೆ ಬರೆಯುವುದು ಸುಲಭವಾಗಿತ್ತು, ಬ್ರಾಹ್ಮಣ ಬರಹಗಾರರಿಗೆ ಮಹಿಳೆಯರ ಮೇಲೆ ಗೌರವ ಅಥವಾ ಆದರ ಇಲ್ಲದೇ ಇದ್ದುದ್ದರಿಂದ ಮಹಾಕಾವ್ಯಗಳಲ್ಲಿ ಅವರನ್ನು ಕುರಿತು ಅಶ್ಲೀಲವಾಗಿ ಅಸಭ್ಯವಾಗಿ ಬರೆದಿದ್ದಾರೆ.

ಇದೆಲ್ಲಾ ಜನರು ಅವಿದ್ಯಾವಂತರೂ ಅನಾಗರಿಕರೂ ಆಗಿದ್ದಾಗ ಅಸ್ತಿತ್ವಕ್ಕೆ ಬಂದ ಸಾಹಿತ್ಯ. ಆ ಕಾಲದಲ್ಲಿ ಹಾರುವರು ಅವುಗಳನ್ನು ತಮ್ಮ ಸಾಧನಗಳನ್ನಾಗಿ ಸೃಷ್ಟಿಸಿದರು. ಈ ಎಲ್ಲಾ ಮೂರ್ಖ ವಿಚಾರಗಳು, ಕಾಲ್ಪನಿಕ ಭಾವನೆಗಳು ಆ ದಿನಗಳಲ್ಲಿ ಆಳವಾಗಿ ಬೇರೂರಿಬಿಟ್ಟವು. ಕಿಲಾಡಿ ಹಾರುವರು ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳಲು ಜನರ ಅಜ್ಞಾನ ಅನುವು ಮಾಡಿಕೊಟ್ಟಿತು.

ಹಾರುವರು ಅಪರಿಮಿತ ದೇವರುಗಳನ್ನು ಸೃಷ್ಟಿಸಿದ್ದಾರೆ. ದಿನಕ್ಕೆ ನಾಲ್ಕು ಐದು ಆರು ಬಾರಿ ದೇವರಿಗೆ ಆಹಾರ ನೈವೇದ್ಯ ಕೊಡಬೇಕು ಎಂದು ಹಾರುವ ಹೇಳಿದ. ದೇವರಿಗೆ ಹಬ್ಬಗಳು ಮತ್ತು ಮದುವೆಗಳನ್ನು ಮಾಡಿದ. ಅದೇರೀತಿ ನಡೆದುಕೊಳ್ಳುವುದು ತಮ್ಮ ಕರ್ತವ್ಯ ಎಂದು ಜನರು ನಂಬಿದರು. ಧರ್ಮಕ್ಕೆ ಮತ್ತು ದೇವರುಗಳಿಗೆ ಗೊಣಗದೆ ಮನುಷ್ಯ ಖರ್ಚು ಮಾಡುವಂತೆ ಮಾಡಿದರು. ಅಂಥ ಸನ್ನಿವೇಶಗಳಲ್ಲಿ ಹೆಚ್ಚು ಹೆಚ್ಚು ದೇವರುಗಳನ್ನು ಸೃಷ್ಟಿ ಮಾಡಲು ಹಾರುವರಿಗೆ ಸಾಧ್ಯವಾಯಿತು.

ನಿರಂತರವಾಗಿ ನಮ್ಮ ಜನರು ಮೋಸ ಹೋಗುತ್ತಿದ್ದಾರೆ. ಮನುಷ್ಯ ದೇವರನ್ನು ನಂಬುತ್ತಾನೋ ಇಲ್ಲವೋ - ಆದರೆ ದೇವಸ್ಥಾನಗಳಿಗೆ ಹೋಗುವುದು ಅವನ ಖಯಾಲಿಯಾಗಿದೆ. ನಮ್ಮ ಮಹಿಳೆಯರು ಸಾಂಪ್ರದಾಯಿಕವಾಗಿ ಮನೆಯ ನಾಲ್ಕು ಗೋಡೆ ಒಳಗೆ ಬಂಧಿತರಾಗಿ ಇರುವುದರಿಂದ ಹಬ್ಬದ ದಿನಗಳಲ್ಲಿ ಮಾತ್ರ ಅವರು ಹೊರಗೆಹೋಗಲು ಸಾಧ್ಯವಾಗುತ್ತದೆ. ಲಲನೆಯರ ಮೈ ಉಜ್ಜಲು, ಕೈ ಹಿಂಡಲು, ಅವರನ್ನು ತಾಕಲು, ಇದು ಸುವರ್ಣ ಅವಕಾಶವನ್ನು ಬೀದಿಯ ಕಾಮಣ್ಣಗಳಿಗೆ ಒದಗಿಸುತ್ತದೆ. ಎಲ್ಲಾ ಹೆಂಗಸರು ಈ ಸ್ಥಿತಿಯನ್ನು ಅನುಭವಿಸುವುದರಿಂದ ಯಾರೊಬ್ಬರೂ ಯಾರಿಗೂ ದೂರು ಹೇಳುವುದಿಲ್ಲ, ಹೀಗಾಗಿ ದೇವಸ್ಥಾನಗಳು ಮತ್ತು ದೇವರುಗಳ ಹಬ್ಬ ಮತ್ತು ಜಾತ್ರೆಗಳಿಗೆ ಜನಸಂದಣಿ ಆಕರ್ಷಿತವಾಗುತ್ತದೆ.

ಪ್ರಿಯ ಸಂಗಾತಿಗಳೇ, ಈಗಾಗಲೇ ಸಮಯ ರಾತ್ರಿ ಹತ್ತು ಗಂಟೆ ಮೀರಿದೆ. ನಾನು ಒತ್ತಿ ನಿಮಗೆ ಹೇಳಬೇಕಾದ ಅಂಶ ನಾವು ಶುರುಮಾಡಲಿರುವ ಚಳವಳಿಯ ಬಗ್ಗೆ. ಈ ಚಳವಳಿಯ ಹಿಂದಿರುವ ವಿಚಾರ ಅಥವಾ ತತ್ವ ಏನು? ಈ ಚಳವಳಿಯ ಅಗತ್ಯ ಏನಿದೆ? ಈಗಾಗಲೇ ನಾನು ಸ್ಪಷ್ಟ ಮಾತುಗಳಲ್ಲಿ ಬಿಡಿಸಿ ಹೇಳಿದ್ದೇನೆ. ಅದನ್ನು ನೀವೆಲ್ಲರೂ ಮನನ ಮಾಡಬೇಕು, ನಿಮ್ಮ ಕರ್ತವ್ಯವನ್ನು ನೀವು ತಿಳಿಯಬೇಕು. ಒಬ್ಬ ವ್ಯಕ್ತಿಗಾಗಿ ಈ ಚಳವಳಿಯನ್ನು ನಾವು ಪ್ರಾರಂಭಿಸುತ್ತಿಲ್ಲ, ನಾಲ್ಕೂವರೆ ಕೋಟಿ ಜನರ ವಿಮೋಚನೆಗಾಗಿ ಈ ಚಳವಳಿಯನ್ನ ಮಾಡುತ್ತಿದ್ದೇವೆ.

ನಾವು ಪ್ರಚಾರ ಮಾಡುತ್ತಿರುವುದು, ಕೆಲವರಿಗೆ ಕಸಿವಿಸಿಯಾಗಬಹುದು. ಅಶ್ಲೀಲ, ಅಸಭ್ಯ ಅಥವಾ ಅಸತ್ಯವಾದ ಏನನ್ನೂ ನಾನು ಹೇಳುತ್ತಿಲ್ಲ, ದೇವರು, ಧರ್ಮ ಮತ್ತು ಶಾಸ್ತ್ರಗಳನ್ನು ಸೃಷ್ಟಿಮಾಡಿರುವ ಹಾರುವರ ಮಾರ್ಗ ಅದು. ಒರಟಾದುದನ್ನು ಕ್ರೂರವಾದುದನ್ನು ನಾನು ಹೇಳುತ್ತಿಲ್ಲ, ಅದು ಹಾರುವರ ರೀತಿ. ನಮ್ಮ ಮಾರ್ಗ ವಿಚಾರವಾದ. ನಮ್ಮ ಗುರಿ ಸತ್ಯದ ಅನ್ವೇಷಣೆ. ನಾವು ಸತ್ಯವನ್ನು ಹೇಳುತ್ತಿದ್ದೇವೆ, ಸತ್ಯವನ್ನಲ್ಲದೆ ಬೇರೇನೂ ಹೇಳುತ್ತಿಲ್ಲ.

'ಪ್ರಬಂಧಂ' ಅನ್ನು ಬರೆದಿರುವವರು, ಯಾರು ದೇವರನ್ನು ನಂಬುವುದಿಲ್ಲವೋ ಅವರನ್ನು ನಿರ್ದಯವಾಗಿ ಕೊಲ್ಲಬೇಕೆಂದು ಹೇಳಿದ್ದಾರೆ. ಇದನ್ನು ಅವರು ದೈವ ಭಕ್ತಿ ಎಂದು ಕರೆಯುತ್ತಾರೆ. 'ಥೇವರಂ'ನ ಗೀತಕಾರ ಇನ್ನೂ ಮುಂದೆಹೋಗಿದ್ದಾನೆ: "ದೇವರನ್ನು ನಂಬದವನ ಹೆಂಡತಿಯ ಮಾನಭಂಗ ಮಾಡಬೇಕು. ಹಾಗೆ ಮಾಡಿದವನನ್ನು ಹರಸು" ಎಂದು ಅವನು ದೇವರನ್ನು ಪ್ರಾರ್ಥಿಸುತ್ತಾನೆ. ಅವನ ಹೆಸರನ್ನು ತಿಳಿಯಲು ನೀವು ಇಚ್ಛಿಸಬಹುದು. ಅವನ ಹೆಸರು ಸಂಬಂಧರ್. ಅವನನ್ನು ಸಂತ ಅಥವಾ ದೇವಮಾನವ

ತ ಹೇಗೆ ಗೌರವಿಸುವುದು? ಇಂಥದ್ದನ್ನೆಲ್ಲ ರ್ಮಗ್ರಂಥಗಳಲ್ಲಿ ನಾವು ನೋಡುತ್ತೇವೆ.

ನಿಮ್ಮ ತಿಳಿವಳಿಕೆಯನ್ನು ಬಳಸಿ ದೇವರ ಪರಿಕಲ್ಪನೆಯನ್ನು ೀಧಿಸಿ ಎಂದು ಬುದ್ಧ ಜನರಿಗೆ ಮನವಿ ಮಾಡಿದ್ದಾರೆ. ಯಾವುದನ್ನೂ ಕುರುಡಾಗಿ ನಂಬಬೇಡಿ" ಎಂಬುದು ದ್ಧ ಅವರ ಉಪದೇಶ. "ಯೋಚಿಸಿ, ಕೆಲಸ ಮಾಡಿ" ನ್ನುವುದು ಅವರ ಸಂದೇಶ. ಅವರ ಉಪದೇಶದಲ್ಲಿ ನು ತಪ್ಪಿದೆ? ಬುದ್ಧರ ಅನುಯಾಯಿಗಳನ್ನು ಈ ದೇವ ಾನವರು ಹೇಗೆ ನಡೆಸಿಕೊಂಡರೆಂದು ನೀವು ಬಲ್ಲಿರಿ. ುದ್ಧರ ಅನುಯಾಯಿಗಳ ತಲೆಗಳನ್ನು ಕತ್ತರಿಸಿ ಹಾಕಿದರು. ವರ ಹೆಣಗಳ ರಾಶಿ ಮಾಡಿದರು. ಈ ಶಿರಶ್ಛೇದನ ಕೃತ್ಯ ಂದೂ ಮತದ ಧರ್ಮಗ್ರಂಥಗಳಲ್ಲಿ ದಾಖಲಾಗಿದೆ. ಒಬ್ಬ ರುವ ಬುದ್ಧ ಧರ್ಮೀಯನ ಕಾಲನ್ನು ಹಿಡಿದು, ಇನ್ನೊಬ್ಬ ಗಳನ್ನು ಹಿಡಿದು, ಮೂರನೆಯವ ಕತ್ತರಿಸುವುದನ್ನು ಲ್ಪಕಲೆಯಲ್ಲಿ ಕೆತ್ತಲಾಗಿದೆ.

ಶೈವರು ಏನು ಮಾಡಿದ್ದಾರೆ, ನೋಡಿ! ದೇವರನ್ನು ಬಲು ನಿರಾಕರಿಸಿದವರನ್ನೆಲ್ಲಾ ಅವರು ಶೂಲಕ್ಕೆ ಎತ್ತಿದ್ದಾರೆ. ವರು ಅವರನ್ನೆಲ್ಲಾ ಬೆತ್ತಲು ಮಾಡಿದ್ದಾರೆ. ಅವರನ್ನು ೀಲಕ್ಕೆ ಎತ್ತಿ ಹರಿತವಾದ ಈಟಿಗಳ ಮೇಲೆ ಇಟ್ಟು ಮುಕಿದಾಗ ಅವರ ಗುದದ್ವಾರವನ್ನು ಹರಿದುಕೊಂಡು ೋದ ಭರ್ಜಿ ಅವರ ನೆತ್ತಿಯ ಮೇಲೆ ಕಡೆದಿದೆ. ಈ ತಿಯಲ್ಲಿ ಸುಮಾರು 8 ಸಾವಿರ ಮಂದಿಯನ್ನು ಕ್ರೂರವಾಗಿ ಲ್ಲಲಾಯಿತು. ಇವತ್ತಿಗೂ ಕೂಡ ಈ ಕ್ರೂರ ಅಮಾನುಷ ತ್ಯವನ್ನು ನೆನಪಿಸಿಕೊಳ್ಳಲು ಪ್ರತಿವರ್ಷ ಹಬ್ಬವನ್ನು ಚರಿಸುತ್ತಾರೆ. ಇದು ಪುರಾಣಗಳಲ್ಲಿ ಮಾತ್ರ ಕಾಣುತ್ತಿಲ್ಲ, ತಿಹಾಸದಲ್ಲಿ ಕೂಡ ದಾಖಲಾಗಿದೆ. ನಾನು ಸತ್ಯ ಗತಿಗಳನ್ನು ಅಂಕಿಅಂಶಗಳೊಂದಿಗೆ ಹೇಳುತ್ತಿದ್ದೇನೆ. ನಮ್ಮ ೋಧನೆಯಲ್ಲಿ ಒಂದಿಂಚನ್ನೂ ಧಾರ್ಮಿಕ ಭಕ್ತಿಯ ಜನರಲ್ಲಿದ್ದ ಂಸೆ ಅಥವಾ ದ್ವೇಷ ಅಥವಾ ಕ್ರೌರ್ಯ ಇಲ್ಲ.

ಮುಯ್ಯಿಗೆ ಮುಯ್ಯಿ


'ಭಾರತದ ಸಂವಿಧಾನ' ಬರೆಯುವಾಗ ಭಾರತದ ಜಕೀಯದ ಬೇಜವಾಬ್ದಾರಿ ಮುಖಂಡರು ನಮ್ಮನ್ನು ಳೆಯ ಮಕ್ಕಳನ್ನಾಗಿ ಮಾಡಿದ್ದಾರೆ. ಇದಕ್ಕಿಂತ ಇನ್ನೇನು ೇಕು? ಕಾನೂನುಪ್ರಕಾರ ನಾವು ಸೂಳೆಯರ ಮಕ್ಕಳು. ಂದೂ ಜನ ಸಂಖ್ಯೆಯಲ್ಲಿ ಕೇವಲ ನೂರಕ್ಕೆ ಮೂವರು ್ರಹ್ಮಣರಿದ್ದಾರೆ. ಜನಸಂಖ್ಯೆಯ ಇನ್ನುಳಿದ ತೊಂಬತ್ತೇಳು ಂದಿಯನ್ನು ಶೂದ್ರರು ಎಂದು ಕರೆಯಲಾಗಿದೆ. ಇದನ್ನು ನೂನಿನ ಗ್ರಂಥಗಳು ಸಹ ಗುರುತಿಸಿವೆ. ಇದಕ್ಕೆ ಏನು ರಣ? ಇದರ ವಿರುದ್ಧ ನಾವು ನಮ್ಮ ದನಿ ಎತ್ತಿಲ್ಲ. ನ್ನು ನಾವು ಪ್ರತಿಭಟಿಸಬೇಕು. ನಾವು ಹಾರುವನನ್ನು ದುರಾದಾಗ, "ಹಲೋ, ಸೂಳೆಮಗನೆ!" ಎಂದು ಬೋಧಿಸಬೇಕು. ಏಕೆ ನನ್ನನ್ನು ಹೀಗೆ ಕರೆಯುತ್ತೀರಿ? ಂದು ಅವನು ಕೇಳಿದರೆ, ನೀನೇಕೆ ಶೂದ್ರ ಎಂಬ ದವನ್ನು ಶಾಸ್ತ್ರಗಳಲ್ಲಿ ಮತ್ತು ಕಾನೂನು ಗ್ರಂಥಗಳಲ್ಲಿ ಳಸಿದೆ? ಎಂದು ಕೇಳಿ. ಅದೇ ಪದವನ್ನು ನಾವು ಪ್ರತಿಯಾಗಿ ಳಸಿದ್ದೇವೆ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ.

ಕಸಪೊರಕೆ

ನಮ್ಮ ಮಹಿಳೆಯರು ಪ್ರತಿಭಟಿಸುವಂತೆ ನಾವು ಾಡಲೇಬೇಕು. "ಅಮ್ಮಾ, ಒಂದು ಕೈಯಲ್ಲಿ ಪೊರಕೆ ಡಿದುಕೊಳ್ಳಿ, ಇನ್ನೊಂದು ಕೈಯಲ್ಲಿ ಸಂವಿಧಾನ ಹಿಡಿದುಕೊಳ್ಳಿ, ಪೊರಕೆಯಿಂದ ಸಂವಿಧಾನಕ್ಕೆ ಹೊಡೆಯಿರಿ!" ಎಂದು ಹೇಳಿ. ೀವು ಸಹ ಶೂದ್ರರು; ಶಾಸ್ತ್ರಗಳು ಮತ್ತು ಕಾನೂನುಗಳ ಕಾರ ನೀವು ಸೂಳೆಯರು ಮತ್ತು ಉಪಪತ್ನಿಯರು" ಎಂದು ವರಿಗೆ ಹೇಳಿ. ಅವರು ಹಾರುವರ ವಿರುದ್ಧ ಪ್ರತಿಭಟಿಸುತ್ತಾರೆ, ದರ್ಶನ ಮಾಡುತ್ತಾರೆ.

ಇದುವರೆಗೆ ನಾವು ಪ್ರತಿಕ್ರಿಯಿಸದೇ ಇದ್ದುದ್ದರಿಂದ ರುವರ ಸೊಕ್ಕು ಹೆಚ್ಚುತ್ತಾ ಹೋಗಿದೆ. ನಮ್ಮ ಧ್ಯೇಯವನ್ನು ತ್ತಿಕೊಂಡು ವೀರಾಗ್ರಣಿಯಾಗಿ ಹೋರಾಡಲು ಯಾರೂ ಮುಂದೆ ಬರಲಿಲ್ಲ. ಈ ಸಭೆ ಮುಗಿದನಂತರ ನಾಳೆ ತಿಕ್ರಿಯೆ ಏನಿರಬಹುದೆಂದು ಸ್ವಲ್ಪ ಯೋಚಿಸಿ. ನನ್ನ ಾಷಣದ ಬಗ್ಗೆ ನಮ್ಮ ಜನರು ತುಂಬಾ ಉನ್ನತವಾಗಿ ಾತನಾಡುತ್ತಾರೆ, ಅಷ್ಟೇ. ಚಳವಳಿಯನ್ನು ಕುರಿತು ಅವರು ಂತಿಸುವುದಿಲ್ಲ, ಆದರೆ ಹಾರುವರು ಮೌನವಾಗಿರುವುದಿಲ್ಲ, ವರು ಒಟ್ಟಾಗಿ ಸೇರಿ ನನ್ನ ಭಾಷಣ ಕುರಿತು ಚರ್ಚಿಸುತ್ತಾರೆ, ಳಿವಳಿಯಾಗಿ ಚಳವಳಿಯನ್ನು ಹತ್ತಿಕ್ಕಲು ಅವರು ಾರ್ಯಕ್ರಮ ರೂಪಿಸುತ್ತಾರೆ. ಮುಂದಿನ ಅಪಾಯವನ್ನು ರಿತುಕೊಂಡು ಅವರು ತಮ್ಮ ಹೆಂಡತಿಯರಿಗೆ ಬಂಧು ಗಳಿಗೆ ಎಚ್ಚರಿಕೆ ಕೊಡುತ್ತಾರೆ.

ಇಂಥ ವೈಜ್ಞಾನಿಕ ಕಾಲದಲ್ಲಿಯೂ ನಾವು ...ಪುದರಿಂದ ದೇವರು ಎಂಬ ಕಲ್ಲು (ಕಲ್ಲಿನ ದೇವರು) ...ಗೆ ಆಗುತ್ತದೆಂದು ಹಾರುವರು ಧಾರ್ಷ್ಟ್ಯದಿಂದ ...ತ್ತಾರೆ. ಹಾರುವರು ಇನ್ನೂ ನಮ್ಮನ್ನು ಶೂದ್ರರು ...ದು ಕರೆಯುವುದರಿಂದ ನಮ್ಮ ಬಗ್ಗೆ ವಿದೇಶಿಗ ...ದುಕೊಳ್ಳುತ್ತಾರೆ? ಮುಸ್ಲಿಮರನ್ನು ನೋಡಿ. ಯಾವ ...ಸ್ಲಿಮನನ್ನೂ ಸೂಳೆಮಗ ಎಂದು ಕರೆಯುವುದಿಲ್ಲ. ...ರೆಲ್ಲ ಸಮಾನರು. ಅವರು ಒಟ್ಟಿಗೆ ಕುಳಿತು ಊಟ ...ಡುತ್ತಾರೆ. ಅವರು ಮುಕ್ತವಾಗಿ ತಿರುಗಾಡುತ್ತಾರೆ ಅವರ



ಸಹೋದರತ್ವ ಸೊಗಸಾದ ಬಗೆಯದು. ಕ್ರಿಸ್ತರು ಸಹ ಮುಸ್ಲಿಮರಂತೆಯೇ ಇದ್ದಾರೆ. ಅಷ್ಟು ದೂರ ಏಕೆ ಹೋಗಬೇಕು? ಹಾರುವರಲ್ಲಿ ಕೂಡ ಸಮಾನತೆ ಇದೆ. ಅವರಲ್ಲಿ ಇರುವ ಉಪಪಂಗಡದ ಆಧಾರದ ಮೇಲೆ ಅವರು ಭೇದ ಭಾವ ಎಣಿಸುವುದಿಲ್ಲ, ಆದರೆ ನಮ್ಮನ್ನು ಶೂದ್ರರು ಎಂದು ಕರೆಯುವಲ್ಲಿ ಅವರು ಒಟ್ಟಾಗಿದ್ದಾರೆ.

ನಮ್ಮ ಸ್ವಾಭಿಮಾನಿ ಚಳವಳಿಯ ಪರಿಣಾಮವಾಗಿ ಸ್ವಲ್ಪ ಜಾಗೃತಿ ಬಂದಿದೆ. ಹಂತಹಂತವಾಗಿ ನಾವು ಬದಲಾವಣೆ ಕಾಣಬಹುದು. ನಾವು ಹಾರುವರ ವಿರುದ್ಧ ಸಂಘಟಿತರಾಗಿ ಆರ್ಭಟಿಸುವ ಚಳವಳಿಯನ್ನು ಮಾಡಿದರೆ, ಹಾರುವರು ಹಿಂದಕ್ಕೆ ಹೆಜ್ಜೆ ಹಾಕುತ್ತಾರೆ. ಅವರು ಬಹಿರಂಗವಾಗಿ ನಮ್ಮನ್ನು ಶೂದ್ರರು ಎಂದು ಕರೆಯುವುದಿಲ್ಲ, ಖಾಸಗಿಯಾಗಿ ಅವರು ಹಾಗೆನ್ನಬಹುದು. ಆದ್ದರಿಂದ ಹಾರುವರ ವಿರುದ್ಧ ನಾವು ಬಲವಾದ ವಿರೋಧವನ್ನು ಕಟ್ಟಬೇಕು. ದೇವರು, ಶಾಸ್ತ್ರಗಳು ಅಥವಾ ಕಾನೂನನ್ನು ತಮ್ಮ ಬೆಂಬಲಕ್ಕೆ ಹಾರುವರು ಎಳೆದರೆ, ಆ ದೇವರುಗಳನ್ನು ಚಪ್ಪಲಿಯಿಂದ ಗಟ್ಟಿಸಲು ನಮ್ಮ ಜನರಿಗೆ ಕುಮ್ಮಕ್ಕು ಕೊಡಬೇಕು. ಅಂಥ ದೇವರುಗಳಿಗೆ ನಮ್ಮ ಹೆಂಗಸರು ಕಸಪೊರಕೆ ಸೇವೆ ಮಾಡಲೇಬೇಕು. ಈಗಾಗಲೇ ಸ್ವತಃ ನಾನು ಈ ರೀತಿ ಪ್ರತಿಭಟನೆಯನ್ನು ಮಾಡಿದ್ದೇನೆ.

ನಮ್ಮ ಸ್ವಾಭಿಮಾನ ಚಳವಳಿ ಹೆಚ್ಚುತ್ತಿರುವುದರಿಂದ ಅನೇಕ ವಿಷಯಗಳಲ್ಲಿ ಹಾರುವರು ಮೌನವಾಗಿದ್ದಾರೆ. ಒಂದು ಪಕ್ಷ ನಾಳೆ ದಿವಸ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮರುದಿವಸವೇ ಹಾರುವರು ತಮ್ಮ ಬಾಲ ಅಲ್ಲಾಡಿಸುತ್ತಾರೆ. ಇವತ್ತು ಎಲ್ಲಾ ರಾಜಕೀಯ ಪಕ್ಷಗಳು ತಮಿಳುನಾಡು ಸರ್ಕಾರವನ್ನು ಉರುಳಿಸಲು ಮಸಲತ್ತು ಮಾಡುತ್ತಿವೆ. ಅವರು ಮಾಡಲಿ. ನನಗೇನೂ ಚಿಂತೆ ಇಲ್ಲ.

ನಮ್ಮ ನಿಲುವು ಯಾವಾಗಲೂ ವಿಮರ್ಶಾತ್ಮಕ ವಾದುದು. ಹಿಂದೂ ಕಾನೂನಿನಲ್ಲಿ ಮತ್ತು ಭಾರತದ ಸಂವಿಧಾನದಲ್ಲಿ ಕಣ್ಣು ಕುಕ್ಕುವಂತಹ ಮೂರ್ಖತನದ ಅಂಶಗಳನ್ನು ಸೇರಿಸಿರುವುದು ಅತ್ಯಂತ ಕಳಂಕಮಯವಾಗಿದೆ. ಕಳೆದ ಎರಡು ಸಾವಿರ ವರ್ಷಗಳವರೆಗೂ ಇದ್ದ ಮೂರ್ಖತನ ತಾಳಿಕೊಳ್ಳಬಹುದಿತ್ತು. ಸಂವಿಧಾನದ ತಿದ್ದುಪಡಿಯನ್ನು ಒತ್ತಾಯಿಸದೆ ನಾವು ಈ ಸರ್ಕಾರದ ಪ್ರಜೆಗಳಾಗಿ ಮುಂದುವರೆದರೆ ಅದು ಹಿಮಾಲಯದಷ್ಟು ದೊಡ್ಡ ತಪ್ಪಾಗುತ್ತದೆ. ಸಹಜವಾಗಿ ತಮ್ಮ ಹೊಟ್ಟೆಪಾಡಿಗಾಗಿ ಈ ಸರ್ಕಾರದ ಮೇಲೆ ಅವಲಂಬಿಸಿರುವ ಜನರು ಇದ್ದಾರೆ. ಆದರೆ ಅವರು ಪ್ರಾಮಾಣಿಕ ಹಾಗೂ ದೇಶಭಕ್ತಿಯ ಜೀವನವನ್ನು ನಡೆಸಲಾರರು. ನಿಮ್ಮನಿಮ್ಮಲ್ಲೇ ನೀವೆಲ್ಲ ಸಮಾನರು. ಆದರೆ ಹಾರುವರ ಜೊತೆ ಹೋಲಿಸಿದಾಗ ಅವರು ಮಾತ್ರ ಮೇಲಿನವರು. ಏತಕ್ಕಾಗಿ ಹೀಗೆ? ಇದನ್ನು ಹೇಗೆ ಬದಲಾಯಿಸುವುದು? ಚಳವಳಿಯನ್ನು ನಡೆಸುವುದನ್ನು ಬಿಟ್ಟರೆ ಬೇರಾವ ದಾರಿಯಿದೆ? ಹೆಚ್.ಆರ್.ಇ. ಕಾಯಿದೆಯನ್ನು ತಿದ್ದುಪಡಿ ಮಾಡಲು ಡಿ.ಎಂ.ಕೆ ಸರ್ಕಾರ ಶಾಸನವನ್ನು ತಂದಿದೆ. ಈ ಕಾಯಿದೆಯ ಉದ್ದೇಶ ಜಾತಿಯನ್ನು ಪರಿಗಣಿಸದೇ ತರಬೇತಿಯಾಗಿರುವ ವ್ಯಕ್ತಿಯನ್ನು ದೇವಸ್ಥಾನದಲ್ಲಿ ಅರ್ಚಕನನ್ನಾಗಿ ನೇಮಕ ಮಾಡುವ ಅವಕಾಶ ಮಾಡುವುದು. ಈ ತಿದ್ದುಪಡಿಯನ್ನು ಬ್ರಾಹ್ಮಣರ ನ್ಯಾಯಾಲಯ (ಸರ್ವೋಚ್ಚ ನ್ಯಾಯಾಲಯ)ದಲ್ಲಿ ಆಕ್ಷೇಪಿಸಿ ವಾದ ಹೂಡಲಾಯಿತು. (ಸಭಿಕರಿಂದ ನಗು) ದಯವಿಟ್ಟು ನಗಬೇಡಿ! ಆ ನ್ಯಾಯಾಲಯದಲ್ಲಿ ತಮಿಳರಿಗೆ ಸ್ಥಾನವಿಲ್ಲ, ಅವರಿಗೆ ನ್ಯಾಯ ಅಷ್ಟು ಸುಲಭವಾಗಿ ಸಿಗುವುದಿಲ್ಲ, ಒಂದು ಪಕ್ಷ ತಮಿಳನಿಗೆ ಜಾಗ ಸಿಕ್ಕಿದರೂ ಅವನು ತನ್ನ ಹಾರುವ ಸಹೋದ್ಯೋಗಿಯನ್ನು ಮಾತ್ರ ಸಂತೃಪ್ತಿಪಡಿಸಬೇಕಾಗಿದೆ. ಹಿಂದೂ ಕಾನೂನಿನ ಆಧಾರದ ಮೇಲೆ ಅವನು ತೀರ್ಪುಗಳನ್ನು ನೀಡಬೇಕು.

ದೇವಸ್ಥಾನದ ಗರ್ಭಗುಡಿಯನ್ನು ಪ್ರವೇಶಿಸಲು ಅಬ್ರಾಹ್ಮಣರಿಗೆ ಹಕ್ಕಿಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತು. ಅಂಥ ಒಂದು ಕಾಯಿದೆ ಹಿಂದೂ ಶಾಸ್ತ್ರಗಳಿಗೆ ವಿರುದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ.

ಆ ಹಿಂದೂ ಶಾಸ್ತ್ರಗಳು ಯಾವುವು? ಅವುಗಳನ್ನು ಯಾರು ಬರೆದರು? ಯಾವಾಗ ಅವುಗಳನ್ನು ಬರೆಯಲಾಯಿತು? ಯಾರಾದರೂ ಮುಂದೆ ಬಂದು ಉತ್ತರ ನೀಡಬಹುದು. ಆಗಮಗಳ ಆಧಾರದ ಮೇಲೆ ನ್ಯಾಯಾಧೀಶರುಗಳು ತೀರ್ಪುಗಳನ್ನು ಬರೆಯುತ್ತಾರೆ. ಕೋರ್ಟಿನಲ್ಲಿ ಇರುವವರೆಲ್ಲ ಹೆಚ್ಚಾಗಿ ಹಾರುವರೇ. ಆ ನ್ಯಾಯಾಧೀಶರನ್ನು ನೇಮಕ ಮಾಡುವವರು ಒಬ್ಬ ಕಾಶ್ಮೀರಿ ಹಾರುವ ಮಹಿಳೆ. ಹಾಗಾಗಿ ಅವರೆಲ್ಲ ಹಾರುವರ ಪರವಾಗಿಯೇ ತೀರ್ಪು ಬರೆಯುತ್ತಾರೆ. ಆದರೆ ಅದನ್ನು ಅಳಿಸಿಹಾಕುವುದೇ ನಮ್ಮ ಪ್ರಪ್ರಥಮ ಕರ್ತವ್ಯವಾಗಿದೆ.

ಇಂದು ನಾವು ಸ್ವಲ್ಪ ಕಷ್ಟಪಟ್ಟರೆ ಮುಂದೆ ಭವಿಷ್ಯದಲ್ಲಿ ಶಾಶ್ವತ ಒಳ್ಳೆಯದಾಗುತ್ತದೆ.

ಆದ್ದರಿಂದ ಈಗಲೇ ಸಿದ್ಧರಾಗಿ.

ಚಳವಳಿಯನ್ನು ಸಫಲಗೊಳಿಸಿ.

ಶಾಂತಿಯಿಂದ ನನ್ನ ಮಾತುಗಳನ್ನು ಕೇಳಿದ್ದಕ್ಕಾಗಿ ನಿಮಗೆ ನನ್ನ ನಮಸ್ಕಾರಗಳು.

ನಿಮಗೆಲ್ಲ ಧನ್ಯವಾದಗಳು. ವಣಕ್ಕಂ.

● **ಕನ್ನಡಕ್ಕೆ: ಪ್ರೊ. ಕೆ.ಎಸ್. ಭಗವಾನ್**

ಪೆರಿಯಾರ್ ಕುರಿತು ವಿಶ್ವ ಸಂಸ್ಥೆ

ಪೆರಿಯಾರ್ ಅವರಿಗೆ ವಿಶ್ವಸಂಸ್ಥೆಯ ಶೈಕ್ಷಣಿಕ. ವೈಜ್ಞಾನಿಕ ಸಾಂಸ್ಕೃತಿಕ ಸಂಘಟನೆ ನೀಡಿದ ಪ್ರಶಸ್ತಿಯಲ್ಲಿ ಹೀಗೆ ದಾಖಲಿಸಲಾಗಿದೆ:

ಪೆರಿಯಾರ್, ನವಯುಗದ ಪ್ರವಾದಿ,

ಆಗ್ನೇಯ ಏಷ್ಯಾದ ಸಾಕ್ರೆಟೀಸ್,

ಸಮಾಜ ಸುಧಾರಣೆ ಚಳವಳಿಯ ಪಿತಾಮಹ,

ಅಜ್ಞಾನ ಮೂಢನಂಬಿಕೆಗಳು ಅರ್ಥಹೀನ ಆಚರಣೆಗಳು ಮತ್ತು ತುಚ್ಛ ನಡವಳಿಗಳ ಕಡುವೈರಿ.

ಶಿಕ್ಷಣದ ದುರವಸ್ಥೆ

02⇐

ಎಂಎಸ್ ಮಾಡದೇ ಇದ್ದರೆ ಅದಕ್ಕೆ ಬೆಲೆ ಇಲ್ಲವಂತೆ. ಅತ್ಯುತ್ತಮ (ಹಣ ಸಂಪಾದನೆಯ ದೃಷ್ಟಿಯಿಂದ) ಕೋರ್ಸುಗಳ ಎಂಡಿ ಅಥವಾ ಎಂಎಸ್ ಸೀಟುಗಳಾವುವೂ ಲಕ್ಷಗಳ ಲೆಕ್ಕದಲ್ಲಿ ಇಲ್ಲ, ಕೋಟಿಗಿಂತ ಹೆಚ್ಚು ಇವೆ.

ಏಕೆಂದರೆ, ಸರ್ಕಾರೀ ಎಂಬಿಬಿಎಸ್ ಸೀಟುಗಳ ಸಂಖ್ಯೆ ಸಾಕಷ್ಟಿದ್ದರೂ, ಅದನ್ನು ಲಕ್ಷಾಂತರ ಸ್ಪರ್ಧಿಗಳ ಸ್ಪರ್ಧೆಯಲ್ಲಿ ಪಡೆದುಕೊಳ್ಳುವುದು ಸಾಧ್ಯವೆನ್ನಲಾಗದು. ಸ್ನಾತಕೋತ್ತರ ಸೀಟುಗಳು ಖಾಸಗಿ ಕಾಲೇಜುಗಳಲ್ಲೇ ಹೆಚ್ಚಿವೆ. ಸ್ನಾತಕೋತ್ತರ ಸೀಟನ್ನು ಪಡೆದುಕೊಳ್ಳಲಾಗದೇ ಖಿನ್ನತೆಗೆ ಒಳಗಾಗಿರುವ, ಒಳಗಾಗುತ್ತಿರುವ ವೈದ್ಯರ ಸಂಖ್ಯೆ ಬೇಕಾದಷ್ಟಿದೆ.

ಖಾಸಗಿ ಕಾಲೇಜುಗಳಲ್ಲಿ ಒಂದಷ್ಟು ಸರ್ಕಾರೀ ಸೀಟುಗಳಿವೆ. ಅವುಗಳ ಸಂಖ್ಯೆ ಕಡಿಮೆ. ಮೇಲಾಗಿ ಅಲ್ಪಸಂಖ್ಯಾತ ಸಮುದಾಯದ ಹೆಸರಿನಲ್ಲಿ ಅನುಮತಿ ಪಡೆದುಕೊಂಡಿರುವವರು ಒಂದು ಸೀಟನ್ನೂ ಸರ್ಕಾರಕ್ಕೆ ಕೊಡಬೇಕಿಲ್ಲ, ಇದೊಂದು ಹಗಲುದರೋಡೆಯಾಗಿದೆ. ಅಲ್ಪಸಂಖ್ಯಾತ ಕಾಲೇಜುಗಳು 'ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೇ' ಸೀಟು ಕೊಡಬೇಕೆಂಬ ನಿಯಮಗಳು ಸ್ಪಷ್ಟವಾಗಿದ್ದರೂ, ಅವು ಸರಿಯಾಗಿ ಜಾರಿಯಾಗುವುದಿಲ್ಲ, ಉದಾಹರಣೆಗೆ ಕರ್ನಾಟಕದಲ್ಲಿ ತಮಿಳು ಅಲ್ಪಸಂಖ್ಯಾತ ಸಮುದಾಯದ ಹೆಸರಿನಲ್ಲಿ ಯಾರಾದರೂ ಮೆಡಿಕಲ್ ಕಾಲೇಜು ಪಡೆದುಕೊಂಡಿದ್ದರೆ, ಅವರು ಕರ್ನಾಟಕದಲ್ಲಿರುವ ತಮಿಳು ಅಲ್ಪಸಂಖ್ಯಾತರಿಗೆ ಕನಿಷ್ಠ ಶೇ.75 ಸೀಟುಗಳನ್ನು ಕೊಡಬೇಕು. ತಮಿಳುನಾಡಿನಲ್ಲಿರುವ ತಮಿಳರು ಅಲ್ಪಸಂಖ್ಯಾತರಲ್ಲ, ಆದರೆ, ಈ ಕಾಲೇಜುಗಳು ತಮಿಳುನಾಡಿನ ತಮಿಳರಿಗೂ ಸೇರಿ ಬೇರೆ ಬೇರೆ ರಾಜ್ಯಗಳ ಹಾಗೂ ಕರ್ನಾಟಕದಲ್ಲಿರುವ ವಿವಿಧ ಭಾಷಿಕರಿಗೆ ಸೀಟುಗಳನ್ನು ಮಾರಿಕೊಳ್ಳುತ್ತವೆ. ಆ ಮೂಲಕ ಅಲ್ಪಸಂಖ್ಯಾತ ಸಮುದಾಯಕ್ಕಿರುವ ಹಕ್ಕನ್ನೂ ಕಿತ್ತುಕೊಳ್ಳುತ್ತವೆ.

ಇನ್ನೂ ಒಂದು ಉದಾಹರಣೆ ಕೊಟ್ಟರೆ, ಇದು ಚೆನ್ನಾಗಿ ಅರ್ಥವಾಗುತ್ತದೆ. ದಕ್ಷಿಣ ಕನ್ನಡದ ಎರಡು ತಾಲೂಕುಗಳು ಮತ್ತು ಕೊಡಗಿನ ಕೆಲ ಭಾಗದಲ್ಲಿರುವ ಅರೆಭಾಷೆ ಗೌಡ ಎಂಬ ಸಮುದಾಯದ ಹೆಸರಿನಲ್ಲೂ ಕರ್ನಾಟಕದಲ್ಲಿ ಒಂದು ಮೆಡಿಕಲ್ ಕಾಲೇಜಿದೆ. ಆ ಕಾಲೇಜಿನ ಅಸಲೀ ಮಾಲೀಕತ್ವ ಅದೇ ಸಮುದಾಯದ ವ್ಯಕ್ತಿಗಳ ಕೈಲೂ ಇಲ್ಲ, ಅವರ ಹೆಸರಿನಲ್ಲಿ ಲೈಸೆನ್ಸ್ ಪಡೆದುಕೊಳ್ಳಲಾಗಿದೆ ಅಷ್ಟೇ. ಬಹುಶಃ ವರ್ಷವೊಂದರಲ್ಲಿ ಅರೆಭಾಷೆ ಗೌಡ ಸಮುದಾಯದಲ್ಲಿ ಎರಡನೇ ಪಿಯುಸಿ ವಿಜ್ಞಾನ ಪರೀಕ್ಷೆ ಬರೆಯುವ ಎಲ್ಲಾ ಮಕ್ಕಳಿಗೂ ಆ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಟ್ಟು ಬಿಡಬಹುದೇನೋ. ಅಷ್ಟೇ ಚಿಕ್ಕ ಸಮುದಾಯ ಅದು. ಆ ಕಾಲೇಜಿನಲ್ಲಿ ಒಬ್ಬ ಅರೆಭಾಷೆ ಗೌಡ ಸಮುದಾಯದ ವಿದ್ಯಾರ್ಥಿಗಾದರೂ ಸೀಟು ಕೊಡುತ್ತಾರೋ ಇಲ್ಲವೋ ಹೇಳಲಾಗದು. ಎಲ್ಲವನ್ನೂ ಮಾರಿಕೊಳ್ಳುತ್ತಾರೆ. ಅಲ್ಪಸಂಖ್ಯಾತ ಸಮುದಾಯದ ಹೆಸರಿನಲ್ಲಿ ಪಡೆದುಕೊಂಡ ಕಾಲೇಜಾದ್ದರಿಂದ, ಒಂದು ಸೀಟನ್ನೂ ಸರ್ಕಾರ ಕೇಳಲಾಗದು. ನಿಜವಾಗಲೂ ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರು ನಡೆಸುತ್ತಿರುವ ಕಾಲೇಜುಗಳಲ್ಲಿ ಈ ರೀತಿಯ ಮೋಸ ನಡೆಯುತ್ತಿಲ್ಲ.

ಅಂದರೆ, ನಮ್ಮ ಮಧ್ಯಮ ಮತ್ತು ಕೆಳಮಧ್ಯಮವರ್ಗದ ವಿದ್ಯಾರ್ಥಿಗಳೂ ಎಂಬಿಬಿಎಸ್ ಮತ್ತು ಎಂಡಿ, ಎಂಎಸ್‌ಗಳನ್ನು ಓದಬೇಕೆಂದರೆ, ಇಂತಹ ಮೋಸಗಳನ್ನು ಇಲ್ಲವಾಗಿಸಬೇಕು. ಅದನ್ನು ಪತ್ತೆ ಹಚ್ಚುವುದಾಗಲೀ, ಪತ್ತೆ ಹಚ್ಚಿದರೂ ಅದನ್ನು ಪ್ರಶ್ನಿಸುವುದಾಗಲೀ ಮಾಡಲು ಈ ವರ್ಗಗಳು ಸಿದ್ಧರಿಲ್ಲ. ಮಾರುಕಟ್ಟೆಯಲ್ಲಿ ಹೇಗಾದರೂ ತಮ್ಮ ಮನೆಯ ಮಗ ಅಥವಾ ಮಗಳು ಸೀಟು ಗಿಟ್ಟಿಸಿಕೊಂಡರೆ ಅವರಿಗೆ ಸಾಕು. ಅದಕ್ಕಾಗಿ ಮೇಲೆ ಹೇಳಿದ ಎಲ್ಲಾ ಸರ್ಕಸ್ಸುಗಳೂ ನಡೆಯುತ್ತವೆ. ಮೇಲೆ ಒಂದು ಕಡೆ ಬಹುಸಂಖ್ಯಾತ ವಿದ್ಯಾರ್ಥಿಗಳು ಪಿಯುಸಿ ವಿಜ್ಞಾನ ಓದುವುದೇ ಇಲ್ಲ ಎಂತಲೂ ಹೇಳಲಾಗಿದೆ. ಖಚಿತವಾಗಿ ಎರಡನೇ ಪಿಯುಸಿ ವಿಜ್ಞಾನ, ಕಲಾ ವಿಭಾಗ, ವಾಣಿಜ್ಯ ವಿಭಾಗದಲ್ಲಿ ಎಷ್ಟು ಮಕ್ಕಳು ಓದುತ್ತಾರೆ ಎಂಬುದರ ಲೆಕ್ಕ ಈ ಸದ್ಯ ಇಲ್ಲಿ ಕೊಡಲಾಗಿಲ್ಲ, ಆದರೆ, ಉನ್ನತ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಇರಲೇಬೇಕು ಎಂದು ಪ್ರತಿಪಾದಿಸುತ್ತಿರುವ ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಹಿರಿಯ ಚಿಂತಕ ಕೆ.ಪಿ.ನಟರಾಜು ಅವರು ಕೆಲವು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಅವರ ಪ್ರಕಾರ ಎಸ್‌ಎಸ್‌ಎಲ್‌ಸಿಯಲ್ಲಿ ಇಂದಿಗೂ 5 ಲಕ್ಷ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿದ್ದಾರೆ. 2.5 ಲಕ್ಷ ಮಕ್ಕಳು ಮಾತ್ರ ಇಂಗ್ಲಿಷ್ ಮಾಧ್ಯಮದಲ್ಲಿ ಪರೀಕ್ಷೆ ಬರೆದಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಬರೆದವರೂ ಪಿಯುಸಿಯಲ್ಲಿ ವಿಜ್ಞಾನ ವಿಭಾಗವನ್ನು ಆಯ್ದುಕೊಳ್ಳುತ್ತಾರಾದರೂ, ಅವರ ಸಂಖ್ಯೆ ಬಹಳ ಕಡಿಮೆ. ಪಿಯುಸಿಯಲ್ಲಿ ಮತ್ತು ಆ ನಂತರದಲ್ಲಿ ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸದೇ ಇರುವುದರಿಂದ, 'ಪ್ರತಿಭಾಶಾಲಿ' ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಬಹು ದೊಡ್ಡ ಅನ್ಯಾಯವಾಗುತ್ತಿದೆ. ಈ ಕುರಿತು ದೊಡ್ಡ ಸದ್ದು ಆಗುತ್ತಿಲ್ಲ.

ಇವೆಲ್ಲವೂ ಕೇವಲ ಮಾಧ್ಯಮದ ಪ್ರಶ್ನೆ ಅಲ್ಲ; ಕೆಲವು ಖಾಸಗಿ ಮೆಡಿಕಲ್ ಕಾಲೇಜುಗಳ ವ್ಯಾಪಾರದ್ದು ಅಕ್ರಮವಾಗಿ ಹಣ ಮಾಡುತ್ತಿರುವ ಹಗರಣ ಮಾತ್ರವೇ ಅಲ್ಲ, ಇದು ನಾವು ಬದುಕುತ್ತಿರುವ ಸಮಾಜದಲ್ಲಿ ಪ್ರಜಾತಂತ್ರ ಇಲ್ಲ ಎಂಬುದರ ಪ್ರತಿಬಿಂಬ. ಶಿಕ್ಷಣದ ಮೂಲಭೂತ ಉದ್ದೇಶವಾದ ರಾಷ್ಟ್ರ ನಿರ್ಮಾಣ ಮತ್ತು ನೈತಿಕ ಮೌಲ್ಯಗಳ ನಿರ್ಮಾಣದ ವಿಚಾರದಲ್ಲಿ ನಾವು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎನ್ನುವ ಗಂಭೀರ ವಿದ್ಯಮಾನದ ಕುರಿತಾಗಿದೆ.

ಲಕ್ಷ-ಕೋಟಿಗಳನ್ನು ಖರ್ಚು ಮಾಡಿ ಸೀಟು ಕೊಳ್ಳುವುದಕ್ಕಿಂತ, ಸಾವಿರ-ಲಕ್ಷಗಳನ್ನು ಖರ್ಚು ಮಾಡಿ ಅತ್ಯುತ್ತಮ ಅಂಕಗಳನ್ನು ಸಂಪಾದಿಸೋಣ ಎಂಬುದಕ್ಕೆ ಮೇಲಿನದ್ದೆಲ್ಲಾ ನಡೆಯುತ್ತಿದೆ. ಇದೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಪ್ರಶ್ನೆಪತ್ರಿಕೆಯನ್ನೇ ಖರೀದಿಸುವ ಮೂಲಕ ಅಂಕಗಳನ್ನೇ ಕೊಳ್ಳುವ ಮಟ್ಟಕ್ಕೆ ಹೋಗಿದೆ. ಪ್ರಶ್ನೆಪತ್ರಿಕೆ 'ಲೀಕ್' ಆಗುವುದು ಇನ್ಯಾತಕ್ಕೆ? ಈ ಮೌಲ್ಯಕುಸಿತದ ಬಗ್ಗೆ ಯಾರೂ ಮಾತಾಡದೇ, ಕೇವಲ ಕಿಂಗ್‌ಪಿನ್ ಯಾರು, ಶಿಕ್ಷಣ ಸಚಿವ ಎಷ್ಟು ಬಿಗಿಯಾಗಿದ್ದರು ಎಂಬುದರ ಕುರಿತು ಚರ್ಚೆ ನಡೆಸುವುದು ಅಸಂಗತವಷ್ಟೇ ಅಲ್ಲ; ಒಟ್ಟಾರೆ ಹುನ್ನಾರದ ಭಾಗವೂ ಆಗಿದೆ. ಈ ಪ್ರಶ್ನೆಪತ್ರಿಕೆ ಬಯಲಾದ ಹಗರಣದಲ್ಲಿ ಕೆಲವು ಟ್ಯೂಷನ್ ಸೆಂಟರ್‌ಗಳು ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ 85% ತೆಗೆದವರನ್ನು 90% ಮಾಡುವ ಅಪೂರ್ವ ಪವಾಡ ನಡೆಸುವ ಪಿಯುಸಿ ಕಾಲೇಜುಗಳ ಪಾತ್ರದ ಕುರಿತೂ ತನಿಖೆ ನಡೆಯಬೇಕಿದೆ.

ಆದ್ದರಿಂದಲೇ ಶಿಕ್ಷಣದ ವ್ಯಾಪಾರಿಗಳು ನೈತಿಕ ಮೌಲ್ಯಗಳ ಬಗ್ಗೆ ಮಾತಾಡುವುದನ್ನು ಕೇಳಿದಾಗ ಮೈಯೆಲ್ಲಾ ಉರಿಯುತ್ತದೆ. ತಮ್ಮ ಶಿಕ್ಷಣಸಂಸ್ಥೆಗಳ ಮೂಲಕ ರೂಪಿಸಿರುವ ವಿದ್ಯಾರ್ಥಿಗಳು ಹಣದ ಹಿಂದೆ ಹೋಗಿಲ್ಲ ಎಂಬ ಬೊಗಳೆ ಮಾತುಗಳನ್ನು ತನ್ನ ಟಿವಿ ಫೋನಲ್ಲಿ ನಾರಾಯಣ ವಿದ್ಯಾಸಂಸ್ಥೆಯ ಮುಖ್ಯಸ್ಥ ಬಿಡುತ್ತಿದ್ದ. ಶಾಲಾ ಶಿಕ್ಷಣವನ್ನು ಕೋಟ್ಯಾಂತರ ಹಣ ಮಾಡುವ ದಂಧೆಯನ್ನಾಗಿ ಪರಿವರ್ತಿಸಿರುವ ಈ ವ್ಯಕ್ತಿಯ ಅಪಾಯಭೂತಿತನ ನೋಡಿ. ಈತ ಯಾವ ರೀತಿಯ ಮೌಲ್ಯ ನಿರ್ಮಾಣ ಮಾಡಬಹುದು? ಸಾರ್ವಜನಿಕವಾಗಿ ಇಂತಹ ಸುಳ್ಳನ್ನು ಹೇಳುತ್ತಿದ್ದರೆ, ಮಧ್ಯಮವರ್ಗದ ಪರಮಪೂಜ್ಯ ಮಾತಾಪಿತೃಗಳು ಬಾಯಿಬಿಟ್ಟುಕೊಂಡು ಕೇಳುತ್ತಿದ್ದರು. ಅಷ್ಟೂ ಸಾಲದೆಂದು, ಒಬ್ಬ ತಾಯಿ 'ನೀವು ಕೇವಲ ಹೈಸ್ಕೂಲ್ ಮತ್ತು ಪಿಯುಸಿ ಕಾಲೇಜುಗಳನ್ನಷ್ಟೇ ಅಲ್ಲದೇ, ಇಂಜಿನಿಯರಿಂಗ್ ಮೆಡಿಕಲ್ ಕಾಲೇಜುಗಳನ್ನೂ ತೆರೆಯಬೇಕು' ಎಂದು ಸಲಹೆಯನ್ನೂ ನೀಡಿಬಿಟ್ಟರು.

ಇದೊಂದು ದುರ್ಗತಿ ಎಂದು ಅರ್ಥಮಾಡಿಕೊಳ್ಳಲಾಗದಷ್ಟು ಸಮಾಜ ಕೆಟ್ಟಿದೆ. ಬೀದಿಯಲ್ಲಿ ಕಣ್ಣು ಹಾಯಿಸಿದರೆ, ಎಲ್ಲಿ ನೋಡಿದರೂ ಮೊಬೈಲ್ ಜಾಹೀರಾತುಗಳು ಕಾಣುವಂತೆ, ಶಾಲಾ ಕಾಲೇಜುಗಳ ಜಾಹೀರಾತುಗಳೂ ಕಾಣುತ್ತಿವೆ.

ಇಷ್ಟು ಪ್ರಮುಖವಾದ ಪ್ರಜಾಪ್ರಭುತ್ವ ವಿರೋಧಿ, ಸಮಾಜ ವಿರೋಧಿ ಚಟುವಟಿಕೆಗಳಿಗೆ ಸಾರ್ವಜನಿಕ ಮಾನ್ಯತೆ ಸಿಕ್ಕಿಬಿಟ್ಟಿದೆ. ಯಾರಿಗೆ ಸಾರ್ವಜನಿಕವಾಗಿ ಛೀಮಾರಿ ಹಾಕಬೇಕೋ, ಅವರಿಗೆ ಪದ್ಮ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಗುತ್ತಿದೆ. ಇವೆಲ್ಲದರ ಮಧ್ಯೆ 'ಕೆಲವು ಉಜ್ವಲ ಪ್ರತಿಭೆ'ಗಳ ಬಗ್ಗೆ ಮಾಧ್ಯಮಗಳಲ್ಲಿ ಬರುವ ವರದಿಗಳು ನಮಗೆ 'ಕಷ್ಟಪಟ್ಟರೆ ಫಲವುಂಟು' ಎಂದು ... ಹಯತ್ನಿಸುತ್ತವೆ. ನಾವು ಮೋಸ ಹೋಗದಿರೋಣ. ●

ದಿಟ್ಟ ಹೋರಾಟದ ಗೌಸಿಯಾ ಖಾನ್



ಹೊಸಪೇಟೆಯ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟಾಂಡಿನಿಂದ ರೈಲ್ವೇ ಸ್ಟೇಷನ್‌ಗೆ ಹೋಗುವ ದಾರಿಯಲ್ಲಿ ನಡೆಯುತ್ತಿದ್ದರೆ ಸ್ವಲ್ಪ ದೂರದಲ್ಲಿ ಕಾಲುವೆಯೊಂದು ಬರುತ್ತದೆ. ಕಾಲುವೆ ದಾಟುತ್ತಲೆ ಬೃಹತ್ ಹೋಟೆಲೊಂದು ನಿಮ್ಮನ್ನು ದಂಗುಬಡಿಸುತ್ತದೆ. ಇದಕ್ಕೆ ಎದುರಾಗಿ ನಿಂತರೆ ಅದರ ಎಡಭಾಗಕ್ಕೆ ಹೋಟೆಲಿನ ಮೈಗೆ ಅಂಟಿಕೊಂಡಂತೆ ಪುಟ್ಟದೊಂದು ಮನೆ ಕಾಣುತ್ತದೆ. ಮೇಲುನೋಟಕ್ಕೆ ಈ ಮನೆಗಾಗಿ ಹೋಟೆಲ್ ಕಾಂಪೌಂಡಿನ ವಿನ್ಯಾಸವೇ ಬದಲಾದಂತಿದೆ. ಅಂತೆಯೇ ಈ ಮನೆಗೆ ಭಯಗೊಂಡು ಕಾಂಪೌಂಡು ತಾನೇ ಹಿಂದಕ್ಕೆ ಸರಿದು ಮುದುರಿಕೊಂಡಂತೆ ಕಾಣುತ್ತದೆ.

ಈ ಬೃಹತ್ ಕಟ್ಟಡದೆದುರು ಗುಬ್ಬಚ್ಚಿ ಗೂಡಿನಂತಹ ಈ ಪುಟ್ಟಮನೆಯ ಬಗ್ಗೆ ಏನಿದು ಕಥೆ ಎಂದು ನಿಮಗೆ ಕುತೂಹಲವಾಗಬಹುದು. ಈ ಪುಟ್ಟಮನೆಯ ಮೈದಡವಿದರೆ 'ದಿಟ್ಟ ಹೋರಾಟದ' ಕಥನವೊಂದು ಬೆಚ್ಚಗೆ ಅವಿತು ಕುಳಿತಂತಹ ಅನುಭವವಾಗುತ್ತದೆ. ಎಂಟು ಜನ ಸದಸ್ಯರಿರುವ ಈ ಮನೆಯ ಹೊರಗಡೆ ಸದಾ ಕುರುಚಲು ಗಡ್ಡದ ಅಜ್ಜನೊಬ್ಬ ಕುಳಿತಿರುತ್ತಾನೆ. ಆತನನ್ನು ಮಾತನಾಡಿಸಿದರೆ, ಸ್ವಲ್ಪ ತಡೀರಿ ಮಗಳು ಮಾತಾಡ್ತಾಳೆ ಎಂದು ಹೊರಗಡೆ ಹೋದವರು ಮಗಳಿಗೆ ಸೂಚನೆ ನೀಡುತ್ತಾರೆ. ಆಗ ಅವರ ಮಗಳು 'ಯಾರು?' ಎಂಬ ಪ್ರಶ್ನಾರ್ಥಕವಾಗಿ ಚೂರು ಅನುಮಾನದಲ್ಲಿಯೇ ಪ್ರಶ್ನಿಸುತ್ತಾಳೆ. ನಾವು ಈ ಮನೆ ಉಳಿವಿನ ಕಥೆ ಕೇಳಲು ಬಂದಿದ್ದೇವೆಂದರೆ 'ಓ ಅದಾ.. ಬನ್ನಿ ಹೇಳ್ತೀನಿ' ಎಂದು ಒಳಗೆ ಕರೆದು ಮೊದಲು ಕೂಲಂಕಶವಾಗಿ ನಮ್ಮ ಬಗ್ಗೆ ತಿಳಿಯುತ್ತಾಳೆ. ನನ್ನ ಕಥೆಯನ್ನು ಇವರಿಗೆ ಹೇಳಬಹುದೆನ್ನುವ ವಿಶ್ವಾಸ ಬಂದನಂತರ ಮಾತನ್ನು ಆರಂಭಿಸುತ್ತಾಳೆ.

ತನ್ನದೇ ಮನೆಯನ್ನು ಉಳಿಸಿಕೊಳ್ಳಲು ದೈತ್ಯಶಕ್ತಿಗಳ ವಿರುದ್ಧ ಹೋರಾಟ ಮಾಡಿದ್ದನ್ನು ಅಕ್ಷರಶಃ ಯುದ್ಧವೊಂದರ ಚಿತ್ರಣದಂತೆ ಕಣ್ಮುಂದೆ ತರುತ್ತಾಳೆ. ಆಗ ಅವಳ ಮುಖದಲ್ಲಿ ಸಿಟ್ಟು, ಆಕ್ರೋಶದ ವಿರಳಿತಗಳನ್ನು ಸೂಕ್ಷ್ಮವಾಗಿ ಗಮನಿಸಬಹುದು. ಅವಳ ಧೈರ್ಯ, ಸಾಹಸೀ ಮನೋಭಾವ, ಆತ್ಮವಿಶ್ವಾಸ ಎಲ್ಲವೂ ಎದುರು ಕೂತವರನ್ನು ದಂಗುಬಡಿಸುತ್ತವೆ. ಒಮ್ಮೊಮ್ಮೆ ಮಾತಿನ ಮಧ್ಯೆ ದುಃಖವೂ ಉಮ್ಮಳಿಸಿ ಗಂಟಲು ಕಟ್ಟುತ್ತದೆ. ಸ್ವಲ್ಪ ಹೊತ್ತು ಮೌನಕ್ಕೆ ಮರಳಿ ಮತ್ತೆ ಮಾತನ್ನು ಆರಂಭಿಸುತ್ತಾಳೆ. ಎದುರು ಕುಳಿತವರಿಗೆ ಗುಡುಗು ಸಿಡಿಲಿನ ಮಧ್ಯೆ ಮಳೆಸುರಿದ ಅನುಭವದಲ್ಲಿ ಮನಸ್ಸು ಒದ್ದೆಯಾಗುತ್ತದೆ.

ಈ ಘಟನೆಗಳನ್ನು ಕೇಳಿದಾಗ ಸಿನಿಮಾವೊಂದರ ಕಥೆಯನ್ನು ಕೇಳುತ್ತಿದ್ದಂತೆ ಅನ್ನಿಸುತ್ತದೆ. ಒಂದು ಬಾರಿ ಈ ಹುಡುಗಿ ಹೇಳುತ್ತಿರುವ ಈ ವಿವರಗಳು ನಿಜವಾ ಎಂದು ನಮ್ಮೊಳಗೆ ಅನುಮಾನವೊಂದು ಕಾಡತೊಡಗುತ್ತದೆ. ನಿಮ್ಮ ಅನುಮಾನವನ್ನು ಗ್ರಹಿಸಿಯೇ ಹೋರಾಟದ ಸಾಕ್ಷಿಗಳಾದ ಇಂಚಿಂಚು ದಾಖಲೆಗಳನ್ನು ನಿಮ್ಮ ಮುಂದೆ ಹರವುತ್ತಾಳೆ. ಇವುಗಳನ್ನೆಲ್ಲಾ ಮೈದಡವಿದರೆ ಅವು ಒಂದೊಂದಾಗಿ ಸಾಕ್ಷಿ ನುಡಿಯುತ್ತಾ ಹೋಗುತ್ತವೆ. ನಿಮ್ಮ ಎದುರು ಇಡೀ ಹೋರಾಟದ ಕಥನವೊಂದು ಜೀವತಳೆದು ನಿಮ್ಮನ್ನು ಆವರಿಸಿ ಒಂದುಕ್ಷಣ ರೋಮಾಂಚನಗೊಳಿಸುತ್ತದೆ. ಈ ಹುಡುಗಿಯೇ ನಾನು ನಿಮಗೆ ಪರಿಚಯಿಸಲು ಹೊರಟಿರುವ ಎಂ. ಗೌಸಿಯಾ ಖಾನ್.

****

2008-09ರ ಕರ್ನಾಟಕದ ರಾಜಕೀಯ ವಿಧ್ಯಮಾನಗಳನ್ನೊಮ್ಮೆ ನೆನಪಿಸಿಕೊಳ್ಳಿ. ಅದು ದಕ್ಷಿಣ ಭಾರತದಲ್ಲಿ ಬಿಜೆಪಿಯು ಮೊದಲ ಬಾರಿಗೆ ಪೂರ್ಣಪ್ರಮಾಣದ ಸರಕಾರವನ್ನು ರಚಿಸಿದ ಸಂದರ್ಭ. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲ. ಆಪರೇಷನ್ ಕಮಲದ ಮೂಲಕ ಶಾಸಕರುಗಳನ್ನು ಖರೀದಿ ಮಾಡಿ ಸರಕಾರವನ್ನು ಅಸ್ತಿತ್ವಕ್ಕೆ ತಂದಿದ್ದ ಗಣಿದನಿಗಳ ದರ್ಪ ದೌರ್ಜನ್ಯದ ತುಟ್ಟತುದಿಯನ್ನು ಕಂಡ ಕಾಲವೂ ಕೂಡ. ಎಲ್ಲವನ್ನು ಬೆರಳ ತುದಿಯಲ್ಲೇ ಆಡಿಸುತ್ತಾ ಆಕಾಶದಲ್ಲಿ ಹಾರುತ್ತಿದ್ದ 'ರಿಪಬ್ಲಿಕ್ ಬಳ್ಳಾರಿ'ಯನ್ನು ಆಳುತ್ತಿದ್ದ 'ರೆಡ್ಡಿ ಬ್ರದರ್ಸ್' ಯುಗ. ಆಗ ಬಳ್ಳಾರಿಯ ಈ ಶಕ್ತಿಯೇ ಪರೋಕ್ಷವಾಗಿ ರಾಜ್ಯ ಸರಕಾರವನ್ನು ನಿಯಂತ್ರಿಸುತ್ತಿತ್ತು. ಗಾಲಿ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಇಬ್ಬರೂ ಸಚಿವರಾಗಿದ್ದರು. ಸ್ಥಳೀಯವಾಗಿ ಹೊಸಪೇಟೆಯಲ್ಲಿ ಗಣಿ ಉದ್ಯಮಿ ಆನಂದ ಸಿಂಗ್ ಶಾಸಕರಾಗಿದ್ದರು.

ಇಂತಹ ಸಂದರ್ಭದಲ್ಲಿ 'ರೆಡ್ಡಿ ಬ್ರದರ್ಸ್' ಒಳಗೊಂಡಂತೆ ಗಣಿದಣಿಗಳಿಗೆ ಎದುರಾಗುವುದು ಕನಸಿನ ಮಾತಾಗಿತ್ತು, ಕಾರಣ ಹಣದಿಂದ ಎಲ್ಲವನ್ನೂ ಕೊಳ್ಳಬಹುದಾದ, ಏನನ್ನಾದರೂ ಮಾಡಬಹುದಾದ ದುಸ್ಸಾಹಸಗಳನ್ನು ತೋರಿದ್ದರು. ಕರ್ನಾಟಕದ ಚರಿತ್ರೆಯಲ್ಲಿ ಸಿನಿಮೀಯ ಘಟನೆಗಳನ್ನು ವಾಸ್ತವದಲ್ಲಿ ಕಂಡ ದಿನಗಳವು. ಇದರ ಅತಿರೇಕದ ಪರಿಣಾಮ ಏನಾಗಿದೆ ಎನ್ನುವುದು ಈ ಹೊತ್ತು ಎಲ್ಲರಿಗೂ ಗೊತ್ತಿರುವ ವಾಸ್ತವ. ಹೀಗಿರುವಾಗ ಹೊಸಪೇಟೆಯ ಎಂ.ಗೌಸಿಯಾ ಖಾನ್ ಪರಿಚಯಕ್ಕೂ ಈ ವಿದ್ಯಮಾನಕ್ಕೂ ಎತ್ತಣಿಂದೆತ್ತ ಸಂಬಂಧ ಎಂದು ನೀವು ಯೋಚಿಸುತ್ತಿರಬಹುದು. ಆಗ ಬಳ್ಳಾರಿಯಲ್ಲಿದ್ದ ಇಂತಹ ಭಯದ ವಾತಾವರಣದಲ್ಲಿಯೇ ರಿಪಬ್ಲಿಕ್ ಬಳ್ಳಾರಿಯನ್ನು ಆಳುತ್ತಿದ್ದವರ ಒಡೆತನದ 'ಎನ್ನೋಬಲ್ ಇಂಡಿಯಾ ಫೈವ್‌ಸ್ಟಾರ್ ಹೋಟೆಲ್'ನ ಡೈನೋಸಾರ್‌ನಂತಹ ಬೃಹತ್ ಕಟ್ಟಡವೊಂದು ತನ್ನ ಪುಟ್ಟ ಮನೆಯನ್ನು ಬಲಿತೆಗೆದುಕೊಳ್ಳುವುದನ್ನು ತಪ್ಪಿಸಲು ದಿಟ್ಟ ಹೋರಾಟ ಮಾಡಿದ ಗಟ್ಟಿಗಿತ್ತಿಯೇ ಈ ಗೌಸಿಯಾ ಖಾನ್.

****

ಒಂದು ದಿನ ಬೃಹತ್ ಕಟ್ಟಡದ ಕೆಲಸ ನಡೆಯುವ ಮಧ್ಯೆ ಈ ಜವಾಬ್ದಾರಿ ಹೊತ್ತ ಮ್ಯಾನೇಜರೊಬ್ಬ ಗೌಸಿಯಾ ತಂದೆಯಾದ ಎಂ.ಚಾಂದ್‌ಭಾಷಾ ಅವರನ್ನು ಸಾಹೇಬರು ಕರೆಯುವುದಾಗಿ ಹೇಳುತ್ತಾರೆ. ತಂದೆ ಮೈಯಲ್ಲಿ ಹುಷಾರಿಲ್ಲದ ಕಾರಣ ಗೌಸಿಯಾ ಮತ್ತವರ ತಮ್ಮ ಸಾಹೇಬರ ಬಳಿಗೆ ಹೊರಡುತ್ತಾರೆ. "ನಾನು ಹೋಟೆಲಿನ ಒಳಗಡೆ ಬರುವುದಿಲ್ಲ, ಬೇಕಿದ್ದರೆ ಅವರೇ ಹೊರಗಡೆ ಬಂದು ಮಾತನಾಡಲಿ" ಎಂದು ಗೌಸಿಯಾ ಹೇಳುತ್ತಾಳೆ. ಅನಿವಾರ್ಯ ಮಂತ್ರಿಗಳೇ ಬಂದು ಕುಶಲೋಪರಿ ಮಾತಾಡಿ "ನಮಗೆ ನಿಮ್ಮ ಮನೆಯ ಜಾಗ ಬೇಕು ಕೊಡಿ" ಎನ್ನುತ್ತಾರೆ. "ಕೊಡುವುದೆಂದರೆ ಹೇಗೆ ಅಂಕಲ್?" ಗೌಸಿಯಾ ಪ್ರಶ್ನಿಸುತ್ತಾಳೆ. "ಏನಿಲ್ಲ ಕೊಡಬೇಕೆಂದರೆ ಕೊಡಬೇಕಷ್ಟೆ" ಎನ್ನುವ ಮಾತು ಸಿಡಿಲಿನಂತೆ ಎರಗುತ್ತದೆ. ಗೌಸಿಯಾ ಬೆದರದೆ ನಿಧಾನಕ್ಕೆ "ಅದೇನು ಕೊಡಲು ತರಕಾರಿಯಂತಹ ಚಿಕ್ಕಪುಟ್ಟ ವಸ್ತುವಲ್ಲ, ಹೀಗೆ ದಿಢೀರನೆ ಕೇಳಿದರೆ ಕೊಡಲು ಸಾಧ್ಯವೂ ಇಲ್ಲ, ನನಗೆ ಯೋಚಿಸಲು ಸಮಯ ಬೇಕು" ಎನ್ನುತ್ತಾಳೆ. ತಕ್ಷಣ ಸ್ಥಳೀಯ ಶಾಸಕರು "ನಮ್ಮ ಬಳಿ ನಾಲ್ಕುಸಾವಿರ ಜನ ಆಳುಗಳಿದ್ದಾರೆ. ನಿಮ್ಮ ಪ್ಲೇಸನ್ನು ಅಕ್ಯುಪೇಷನ್ ಮಾಡಕೊಂಡುಬಿಡ್ತೀವಿ" ಎಂದು ಗದರುತ್ತಾರೆ. ಇದಕ್ಕೆ ಗೌಸಿಯಾ ಪ್ರತಿಕ್ರಿಯಿಸದೆ, ಅದೇನು ಮಾಡ್ತೀರೋ ಮಾಡಿ ಎನ್ನುವಂತೆ ಎದುರಾಡದೆ ಮನೆಗೆ ಮರಳುತ್ತಾಳೆ.

ಮನೆಗೆ ಬಂದಾಗ ಅಚ್ಚರಿ ಕಾದಿತ್ತು, ಜೆಸಿಬಿಯೊಂದು ಕೌನ್ಸೆಲ್ಲರುಗಳ ಸಮ್ಮುಖದಲ್ಲಿಯೇ ಮನೆಕೆಡಹಲು ಸಿದ್ಧಗೊಂಡಿತ್ತು, ತಕ್ಷಣ ಗೌಸಿಯಾ ಕೌನ್ಸೆಲ್ಲರುಗಳ ಜತೆ ವಾಗ್ವಾದಕ್ಕಿಳಿದು, ದೌರ್ಜನ್ಯದ ವಿರುದ್ಧ ಸಿಡಿದು ಮನೆ ಕೆಡವದಂತೆ ದಿಟ್ಟವಾಗಿ ತಡೆದಳು. ಮರುದಿನವೇ ಪತ್ರಿಕಾಗೋಷ್ಠಿಯಲ್ಲಿ ತನ್ನ ಕುಟುಂಬದ ಮೇಲೆ ಸ್ಥಳೀಯ ಶಾಸಕರನ್ನೊಳಗೊಂಡಂತೆ ಬಿಜೆಪಿ ಸದಸ್ಯರುಗಳಿಂದ ನಡೆಯುತ್ತಿದ್ದ ದೌರ್ಜನ್ಯದ ವಿರುದ್ಧ ಮಾತನಾಡಿದಳು. ಮಾಧ್ಯಮದವರಿಗೆ ಈ ದರ್ಪದ ಬಗ್ಗೆ ವಿಶೇಷವೆನ್ನಿಸದೆ "ನೀವು ಈಗ ಪ್ರಚಾರ ತಗೊಂಡು ಮುಂದೆ ರಾಜಿಯಾಗಿ ಮನೆಯನ್ನು ಹೆಚ್ಚಿನ ಬೆಲೆಗೆ ಮಾರುವುದಿಲ್ಲ ಎನ್ನುವ ಗ್ಯಾರಂಟಿ ಏನಿದೆ?" ಎಂದು ಪ್ರಶ್ನಿಸಿದರು. ಆಗಲೂ ಗೌಸಿಯಾ "ಏನೇ ಆದರೂ ನನ್ನ ಮನೆಯನ್ನು ಮಾತ್ರ ಬಿಟ್ಟುಕೊಡಲ್ಲ, ಇದು ನನ್ನ ದಿಟ್ಟ ನಿರ್ಧಾರ. ಇದಕ್ಕಾಗಿ ಎಷ್ಟೇ ಕಷ್ಟವಾದರೂ ನಾನು ಒಂಟಿಯಾಗಿ ಹೋರಾಡುತ್ತೇನೆ" ಎಂದು ಧೈರ್ಯವಾಗಿ ಉತ್ತರಿಸಿದಳು. ಮರುದಿನ ಇದು ಸುದ್ದಿಯೂ ಆಯಿತು.

ಆಗ ಹೊಸಪೇಟೆಯ ಮನೆಮನೆಗಳಲ್ಲಿ ಈ ಹುಡುಗಿಯ ಬಗೆಗೆ ತರಾವರಿ ಮೌಖಿಕ ಕಥನಗಳು ಸೃಷ್ಟಿಯಾಗತೊಡಗಿದವು. ಅದರ ಬಹುಪಾಲುಗಳು ಈಗಲೂ ಲಭ್ಯವಿವೆ. ಕೆಲವರು ಈ ಹುಡುಗಿ "ಗುಡ್ಡಕ್ಕೆ ತಲೆ ಹೊಡಕೊಂಡಂಗೆ ಮಾಡ್ತಿದೆ" ಎಂದರು. ಇನ್ನು ಕೆಲವರು ಹುಡುಗಿಯ ದುಸ್ಸಾಹಸದ ಬಗ್ಗೆ ಅಚ್ಚರಿಯನ್ನೂ ಕೌತುಕವನ್ನೂ ಭಯವನ್ನೂ ವ್ಯಕ್ತಪಡಿಸಿ "ಇನ್ನು ಈ ಹುಡುಗಿ ಕಥೆ ಮುಗಿದಂಗೇ..". ಎಂದು ನಿಟ್ಟುಸಿರುಬಿಟ್ಟರು. ಅಂತೆಯೇ ಗೌಸಿಯಾಗೆ "ಮನೆ ಮಾರಿ ಕೋಟಿಗಟ್ಟಲೆ ಹಣ ಪಡೆದು ಯಾವ ತಂಟೆತಕರಾರಿಲ್ಲದೆ ಸುಖವಾಗಿ ಜೀವಿಸುವ" ಬಗ್ಗೆ ಅನೇಕರು ಬುದ್ಧಿ ಮಾತುಗಳನ್ನೂ ಹೇಳಿದರು. ಇದೆಲ್ಲದರ ಮಧ್ಯೆ ಗೌಸಿಯಾ ತನ್ನ ಮನೆಯನ್ನು ಯಾರೇ ಕೇಳಿದರೂ ಬಿಟ್ಟುಕೊಡುವ ಮಾತೇ ಇಲ್ಲ ಎನ್ನುವ ನಿರ್ಧಾರಕ್ಕೆ ಬಂದಳು.

ಇದಾದ ಮೂರ್ನಾಲ್ಕು ದಿನಗಳ ಬಳಿಕ ಸ್ಥಳೀಯ ಶಾಸಕರಿಂದ ಮತ್ತೆ ಕರೆ ಬಂತು. ಆಗಲೂ ಗೌಸಿಯಾ ತನ್ನ ತಮ್ಮನೊಂದಿಗೆ ಹೋದಳು. "ಜನ ಹೇಳ್ತಾರೆ ನೀನು ತುಂಬಾ ಶಾರ್ಪ್ ಇದೀಯಂತೆ" ಶಾಸಕರೇ ಮಾತನ್ನು ಆರಂಭಿಸಿದರು. "ಹೌದು ನಾನು ಓದಿದ್ದೀನಿ. ಎಲ್ಲಾನೂ ತಿಳಿಯುತ್ತೆ, ಅದಕ್ಕೆ ಮಾತಾಡ್ತೀನಿ, ನಾನು ಕಾನೂನು ಬಿಟ್ಟು ಮಾತಾಡ್ತಿಲ್ವಲ್ಲಾ?" ಗೌಸಿಯಾ ನಿರುಮ್ಮಳವಾಗಿ ಉತ್ತರಿಸಿದಳು. ಶಾಸಕರು ಚೂರು ಸಿಟ್ಟಾದಂತೆ "ನೋಡಮ್ಮಾ, ನಡೀತಿರೋದು ನಮ್ಮ ಸರಕಾರ. ಏನನ್ನಾದರೂ ಮಾಡಬಹುದು. ಯೋಚ್ನೆ ಮಾಡು" ಎಂದು ಸೂಚ್ಯವಾಗಿ ಹೇಳಿದರು. ಮುಂದುವರೆದು "ನೀನು ಚಾಪೆ ಕೆಳಗೆ ನುಸುಳಿದ್ರೆ, ನಮಗೆ ರಂಗೋಲಿ ಕೆಳಗಿಂದ ಬರೋದು ಗೊತ್ತಿದೆ" ಎನ್ನುತ್ತಾ, ಬಾಲ್ಯದಲ್ಲಿ ಎದುರು ಮನೆಯ ಕುರ್ಚಿಯೊಂದನ್ನು ಇಷ್ಟಪಟ್ಟ ಕಾರಣಕ್ಕೆ, ಪಟ್ಟುಹಿಡಿದು ದಕ್ಕಿಸಿಕೊಂಡ ಕಥೆ ಹೇಳಿ ಪರೋಕ್ಷವಾಗಿ ತಾನು ಇಷ್ಟಪಟ್ಟದ್ದನ್ನು ಈತನಕ ಯಾವುದನ್ನೂ ಬಿಟ್ಟಿಲ್ಲ ಎನ್ನುವ ಅರ್ಥದಲ್ಲಿ ಮಾತನಾಡಿದರು.

ಆಗ ಗೌಸಿಯಾ ಮಾತುಗಳನ್ನು ಕೇಳಿಸಿಕೊಂಡಳೇ ವಿನಃ ಮಾತನಾಡಲಿಲ್ಲ, ಈ ಮೌನದಿಂದ ಶಾಸಕರು ಮತ್ತಷ್ಟು ಸಿಟ್ಟಾಗಿ ಮುಖ ಕೆಂಪಾಗಿಸಿಕೊಂಡು "ನಿನ್ನ ಮನೆಯೇನು ತಾಜಮಹಲಾ, ಕುತುಬ್ ಮಿನಾರಾ?" ಎಂದರು. ತಕ್ಷಣಕ್ಕೆ ಗೌಸಿಯಾ "ಹೌದು, ನನ್ನ ಮನೆ ನನಗೆ ತಾಜಮಹಲೇ, ಏನೀಗ?" ಎಂದು ಸವಾಲು ಹಾಕಿದಳು. ಶಾಸಕರು "ನೋಡಮ್ಮಾ ನಿನ್ನ ಮನೆ ನಿನಗೆ ತಾಜಮಹಲೇ ಇರಬಹುದು, ನನಗೆ ಇಷ್ಟವಾಗಿದೆ. ನೀವು ಕೊಡಬೇಕಷ್ಟೆ" ಎಂದರು. ಹೀಗೆ ಮಾತಿನ ಸಂಘರ್ಷ ವಿಕೋಪಕ್ಕೆ ಹೋಯಿತು. ಈ ಸಂದರ್ಭವನ್ನರಿತು ಮಾತು ಮುಂದುವರಿಸದ ಗೌಸಿಯಾ "ನೀವು ಹೀಗೆ ದೌರ್ಜನ್ಯ ಮಾಡೋದು ಸರಿಯಲ್ಲ, ನಿಮ್ಮ ಹತ್ರ ಮಾತಾಡೋಕೆ ನನಗೆ ಇಷ್ಟವಿಲ್ಲ" ಎಂದವಳೇ ಮನೆಗೆ ವಾಪಸ್ಸಾದಳು.

****

ಈ ಎಲ್ಲಾ ಬೆಳವಣಿಗೆಗಳು ಗೌಸಿಯಾ ಮನೆಯಂಗಳವನ್ನು ಅಕ್ಷರಶಃ ರಣರಂಗವನ್ನಾಗಿಸಿದ್ದವು. ನಿತ್ಯವೂ ಬೆದರಿಕೆಯ ಮಾತುಗಳು, ಮನೆಯ ಮುಂದೆ ಶಾಸಕರ ಬೆಂಬಲಿಗರ ಕೂಗಾಟ, ಅವಾಚ್ಯ ಶಬ್ದಗಳ ಬೈಗುಳ, ಸಂಜೆಯಾದಂತೆ ಕುಡಿದು ಬಂದು ವಿನಾಕಾರಣ ಜಗಳ ತೆಗೆಯುವುದು ಹೀಗೆ ಮನೆಯಲ್ಲಿ ನೆಮ್ಮದಿಯೇ ಇಲ್ಲದಂತಾಯಿತು. ಪ್ರತಿ ರಾತ್ರಿ 12 ಗಂಟೆಯ ವರೆಗೆ ಇದು ನಿತ್ಯದ ಗೋಳಾಯಿತು. ಒಂದೊಂದು ಕ್ಷಣವನ್ನೂ ಆತಂಕದಲ್ಲಿ ಕಳೆಯುವಂತಾಯಿತು. ಆಡಳಿತ ಸರಕಾರವೇ ಬಿಜೆಪಿಯಾದ ಕಾರಣ ರಕ್ಷಣಾ ವ್ಯವಸ್ಥೆಯೂ ಗೌಸಿಯಾ ಪರವಾಗಿ ನಿಲ್ಲಲಿಲ್ಲ, ಬದಲಾಗಿ ಗೌಸಿಯಾಳ ಮನೆಯವರನ್ನು ಬೆದರಿಸುವ ತಂತ್ರವನ್ನೂ ಮಾಡಲಾಯಿತು. ಇದ್ದಕ್ಕಿದ್ದಂತೆ ಒಂದು ದಿನ ಗೌಸಿಯಾ ತಂದೆ ಮನೆಯನ್ನು ಮಾರಾಟ ಮಾಡಿದ್ದಾರೆನ್ನುವ ಫೋ[…]
ಡಾಕುಮೆಂಟ್ ತಂದವರೊಬ್ಬರು ಮನೆ ಖಾಲಿ ಮಾಡ[…]
ದಬ್ಬಾಳಿಕೆ ಮಾಡಿದರು. ಈ ಪೇಪರ್ ಪಡೆದ ಗೌ[…]
"ಇದು ಫೋರ್ಜರಿ ಪೇಪರ್. ನಿಮ್ಮಮೇಲೆ ಕಂ[…]
ಮಾಡುತ್ತೇನೆ" ಎಂದು ಗದರುತ್ತಲೂ ಡಾಕುಮೆಂಟ್[…]
ವರು ಓಟಕಿತ್ತರು. ಈ ಬಗ್ಗೆ ಫೋರ್ಜರಿ ಕೇಸನ್ನು ದಾ[…]
ದಾಗಲೂ ಯಾವುದೇ ಕಾನೂನುಕ್ರಮ ತೆಗೆದು ಕ[…]
ಮೌನವಾಯಿತು.

ಈ ಘಟನೆ ನಡೆದ ದಿನ ಮಧ್ಯರಾತ್ರಿ ಕನಿ[…]
ಜನರಿಂದ ಮನೆಯ ಮೇಲೆ ಆಕ್ರಮಣ ನಡೆ[…]
ಮನೆಯವರೆಲ್ಲಾ ಆತಂಕದಿಂದಲೂ, ಭಯದಿ[…]
ಹೊರಬಂದು ಧೈರ್ಯ ತಂದುಕೊಂಡು ಆಕ್ರಮಣ[…]
ಹಿಮ್ಮೆಟ್ಟಿದರು. ಹೀಗೆ ಆಕ್ರಮಣಕ್ಕೆ ಬಂದಿದ್ದ ಇ[…]
ಹಿಡಿದು ರಾತ್ರಿಯೇ ಪೊಲೀಸ್ ಸ್ಟೇಷನ್‌ಗೆ ಹ[…]
ಕೇಸನ್ನು ಮರುದಿನ ದಾಖಲಿಸಿಕೊಳ್ಳುವುದಾಗಿ
ಇಬ್ಬರನ್ನೂ ಬಂಧಿಸಿದರು. ಮರುದಿನ ಬೆಳಗ್ಗೆ ಪೊ[…]
ಸ್ಟೇಷನ್ನಿನಲ್ಲಿ ಬಂಧಿತರು ಕಾಣೆಯಾಗಿದ್ದರು. ಕಾರ[…]
ಆಕ್ರಮಣಕ್ಕೆ ಕಾರಣವಾದವರ ಹೆಸರನ್ನು ಈ ಬಂ[…]
ಬಾಯಿಬಿಟ್ಟಿದ್ದರು. ಈ ಆಕ್ರಮಣಕ್ಕೆ ಸ್ಥಳೀಯ ಶಾ[…]
ಕಾರಣ ಎಂದು ಗೌಸಿಯಾ ಕೇಸನ್ನೂ ದಾಖಲಿ[…]
ಆದರೆ ಈ ಕೇಸು ದಾಖಲಾಯಿತೇ ಹೊರತು
ಯಾವ ಪರಿಣಾಮವನ್ನೂ ಬೀರಲಿಲ್ಲ.

ಒಂದು ದಿನ ಇದ್ದಕ್ಕಿದ್ದಂತ ಗೌಸಿಯಾ ಮನೆಯ [...]
ನಾಲ್ಕು ರಿಸರ್ವ್ ವ್ಯಾನ್‌ಗಳು, ನಾಲ್ಕು ಪೊ[…]
ಜೀಪ್‌ಗಳು ಅದರ ತುಂಬಾ ಪೊಲೀಸರು, ತಾ[…]
ಎಲ್ಲಾ ಪೊಲೀಸ್ ಅಧಿಕಾರಿಗಳು ದೌಡಾಯಿಸಿದರು [...]
ಓಣಿಯೇ ಪೊಲೀಸರಿಂದ ತುಂಬಿಹೋಯಿತು. ಗ[…]
ಮನೆಯವರು ಹೆದರಿಕೆಯಿಂದ ತತ್ತರಿಸಿಹೋದರು
ಮಧ್ಯೆಯೂ ಗೌಸಿಯಾ ಧೈರ್ಯವಾಗಿ ಏನೆಂದು ವಿ[…]
ದಾಗ "ಅರೆಸ್ಟ್ ವಾರೆಂಟ್ ಇದೆ, ನಿಮ್ಮನ್ನು ಬಂಧಿಸು[…]
ಎಂದರು. ಕಾನೂನಿನ ಸರಿಯಾದ ಅರಿವಿದ್ದ
ಗೌಸಿಯಾ 'ವಾರೆಂಟ'ನ್ನು ಕೇಳಿದಳು. "ನನಗೆ ರಕ್ಷಣೆ[…]
ಎಂದು ನಾನು ಕೇಸು ದಾಖಸಿದರೆ ನನ್ನನ್ನು
ಮಾಡಲು ವಾರೆಂಟ್ ತರುತ್ತೀರಾ? ಕೊಡಿ
ವಾರೆಂಟ್" ಎಂದಾಗ ವಾರೆಂಟೇ ಇಲ್ಲದೆ ಬೆದ[…]
ಮೇಲೆ ಬಂಧಿಸಲು ಬಂದಿದ್ದು ತಿಳಿಯಿತು. ಸ್ಥಳದ[…]
ಗೌಸಿಯಾ ಎಸ್.ಪಿಗೆ ಫೋನಾಯಿಸಿದಾಗ ವಾರೆಂಟ್ [...]
ಶಾಸಕರ ಒತ್ತಡದ ಮೇಲೆ ಅರೆಸ್ಟ್ ಮಾಡಲು ಬಂ[…]
ತಿಳಿಯಿತು. ಹೀಗೆ ವಾರೆಂಟ್ ಕೊಟ್ಟದ್ದು ನಿಜವೇ
ತಹಸೀಲ್ದಾರರಲ್ಲಿ ಗೌಸಿಯಾ ಕೇಳಿದಾಗಲೂ, ಕೊ[…]
ರುವುದು ತಿಳಿಯಿತು. ನಂತರ ನೋಟಿಸಿಲ್ಲದೆ, ವಾರೆ[…]
ತನ್ನನ್ನು ಅರೆಸ್ಟ್ ಮಾಡಲು ಬಂದದ್ದಾಗಿ ಕೋರ್ಟ್ [...]
ಸ್ಟೇ ತಂದಳು. ಆಗ ಕೋರ್ಟ್‌ಗೆ ಉತ್ತರ ಕೊಡ[…]
ಪೊಲೀಸ್ ಇಲಾಖೆ ಕ್ಷಮಾಪಣೆ ಕೇಳಿತು. ನಂತರ
ಪೂರ್ವಯೋಜಿತ ದಬ್ಬಾಳಿಕೆ ಎನ್ನುವುದು ಅರಿವಿಗೆ [...]
ಮತ್ತು ಇದನ್ನೆಲ್ಲಾ ಗೌಸಿಯಾ ದಿಟ್ಟವಾಗಿಯೇ ಎದುರ[…]

ಆದರೆ ಈ ಘಟನೆಯ ಪರಿಣಾಮವಾಗಿ ಗೌ[…]
ತನ್ನ ಸಹೋದರಿ ಆಶಿಯಾ ಖಾನ್‌ಳನ್ನು ಕಳೆದ[…]
ಬೇಕಾಯಿತು. ಹೀಗೆ ಪೊಲೀಸರು ದಿಢೀರನೆ [...]
ಮುಂದೆ ದೌಡಾಯಿಸಿ ಗೌಸಿಯಾಳನ್ನು, ಮನೆಯ[…]
ಬಂಧಿಸುವ ಮಾತನಾಡಿದಾಗ ಗೌಸಿಯಾ ಸಹ[…]
ವಿಪರೀತ ಭಯಗೊಂಡಿದ್ದಳು. ಒಂದು ಬಗೆಯ
ಒಳಗಾಗಿದ್ದಳು. ಈ ಭಯಕ್ಕೆ ನಲುಗಿದ ಆಕೆ ಇದ[…]
ರಕ್ತವನ್ನು ವಾಂತಿ ಮಾಡಿಕೊಂಡು ತೀರಾ ಅಸ್ವಸ್ಥ[…]
ಇಂತಹ ಕಠಿಣ ಪರಿಸ್ಥಿತಿಯಲ್ಲಿ ತಂಗಿಯನ್ನು
ದಾಖಲಿಸಲಾಯಿತು. ಹೀಗೆ ಅಸ್ವಸ್ಥೆ ತುಂಬಾ
ಗೊಂಡು ಸಾವನ್ನಪ್ಪಿದಳು. ಈ ಸಾವು ಗೌಸಿ[…]
ಇನ್ನಿಲ್ಲದಂತೆ ಕಂಗೆಡಿಸಿತು.

****

ಹೀಗೆ ದಬ್ಬಾಳಿಕೆಗಳು, ಆಕ್ರಮಣಗಳು ನಿರಂ[…]
ನಡೆಯುತ್ತಿದ್ದಂತೆ ಗೌಸಿಯಾ ಕಾನೂನು ಸಮರಕ್ಕೆ ಸಿದ್ಧ[…]
ಅಂದಿನ ಭಾರತದ ರಾಷ್ಟ್ರಪತಿಗಳಾಗಿದ್ದ ಪ್ರತಿಭಾ ಪ[…]
ಅವರಿಗೆ ಎಲ್ಲಾ ದಾಖಲೆಗಳ ಸಮೇತ ದೌರ್ಜನ್ಯದ [...]
ಸವಿವರವಾಗಿ ಬರೆದು ರಕ್ಷಣೆ ಕೊಡುವಂತೆ ಕೋ[…]
ಇದೇ ಪ್ರತಿಯನ್ನು ಸುಪ್ರೀಂಕೋರ್ಟ್‌ಗೂ ಕಳ[…]
ಇದರಿಂದಾಗಿ ಸುಪ್ರೀಂಕೋರ್ಟ್‌ನಿಂದ [...]
ಹೈಕೋರ್ಟ್‌ಗೆ ಈ ವಿಷಯವಾಗಿ ಕ್ರಮವಹಿ[…]
ಪತ್ರ ಬಂತು. ಈ ಕುರಿತ ಪತ್ರವೊಂದು ಗೌಸಿ[…]
ತಲುಪಿತು. ಪತ್ರದಲ್ಲಿ ಚೀಫ್ ಸೆಕ್ರೆಟರಿ ಅವರನ್[…]
ಯಾಗುವಂತೆ ತಿಳಿಸಲಾಗಿತ್ತು, ನಂತರ ವಿಧಾನಸೌಧಕ್ಕೆ[…]
ಚೀಫ್ ಸೆಕ್ರೆಟರಿ ಆಗಿದ್ದ ಸುಧಾಕರನ್ ಅವರನ್ನು ಭೇ[…]
ಸವಿವರವಾಗಿ ವಿವರಿಸಿದಾಗಲೂ ಯಾವ [...]
ಜಾರಿಯಾಗಲಿಲ್ಲ. ಈ ಮಧ್ಯೆ ಮಿಡ್ ಡೇ [...]
ಬಂದ ವರದಿಯೊಂದರಲ್ಲಿ ಮುಂದೆ ಎಂ.ಎಲ್.ಎ [...]
ನಿಲ್ಲುವ ಸಲುವಾಗಿ ಉದ್ದೇಶಪೂರಿತವಾಗಿ ಗೌಸಿಯ[…]
ಮಾಡುತ್ತಿರುವುದಾಗಿ ಹೇಳಿಕೆ ಪ್ರಕಟವಾಯಿತು.

ಈ ಕೇಸನ್ನು ಲೋಕಾಯುಕ್ತದಲ್ಲೂ ದಾಖಲಿ[…]
ಈ ಕುರಿತ ವಿಚಾರಣೆಗೆ ಹಾಜರಾದಾಗ ಗೌಸಿಯಾ[…]
ರಭಸಕ್ಕೆ ಮಹಿಳಾ ಜಸ್ಟೀಸ್ ಒಬ್ಬರು ಕೋಪ[…]
ಗರಂ ಆದರು. ಆಗ ಗೌಸಿಯಾ "ಇದು [...]
ವಿಷಯ ಅಲ್ಲ ಮೇಡಂ. ಇರೋದನ್ನು ಹೇಳಿದೀ[…]



ಗೇಷನ್ ಮಾಡಿ" ಎಂದು ತಣ್ಣಗೆ ಹೇಳಿದಳು. ಗಿ ಅವರು ವಿಚಾರಿಸಲಾಗಿ ಈ ಕೇಸು ನಿಜವಿರುವ ಮಾಹಿತಿ ಪಡೆದು ಉಪ ಲೋಕಾಯುಕ್ತಕ್ಕೆ ಈ ನ್ನು ವರ್ಗಾಯಿಸಿದರು. ಆಗ ಪತ್ರಿ ಬಸವನಗೌಡ ರು ಉಪಲೋಕಾಯುಕ್ತರಿದ್ದರು. ಅವರಲ್ಲಿಯೂ ತನಾಡಿ ಗೌಸಿಯಾ ತನ್ನ ಕಷ್ಟವನ್ನು ವಿವರಿಸಿದಳು. ರು ಇದನ್ನೆಲ್ಲಾ ಕೇಳಿಸಿಕೊಂಡು "ಓ, ಇಟ್ಸ್ ಹಾರಿಬಲ್" ದರು. ತಕ್ಷಣ ಗೌಸಿಯಾ "ಸಾರ್, ಇದು ಹಾರಿಬಲ್ಲೇ.. ದ್ರೂ ಕ್ರಮ ತೊಗೊಳ್ಳಿ ಸಾರ್ ಅವರ ಮೇಲೆ" ದಾಗ "ಆಯ್ತು ನಾವು ಕ್ರಮತೊಗೋತೀವಿ" ಎಂದರು. ಂದೆ ಲೋಕಾಯುಕ್ತವೂ ಈ ಬಗ್ಗೆ ಹೆಚ್ಚು ವಹಿಸಲಿಲ್ಲ.

ರಾಷ್ಟ್ರೀಯ ಮಾನವ ಹಕ್ಕುಗಳ ಕಮೀಷನ್ನಿಗೂ ಗೌಸಿಯಾ ಕೇಸನ್ನು ದಾಖಲಿಸಿದಳು. ಕಮಿಷನರು ಕೂಡ ಯಾಳನ್ನು ಕರೆಯಿಸಿ ವಿಚಾರಣೆ ಮಾಡಿದರು. ಆಗ ದ ಎಲ್ಲವನ್ನೂ ವಿವರಿಸಿದಳು. ಅಂತೆಯೇ ತನಗೂ ಮನೆಯವರಿಗೂ ಏನೇ ತೊಂದರೆಯಾದರೂ ಸ್ಥಳೀಯ ಕರು ಮತ್ತು ಅವರ ಬೆಂಬಲಿಗರೇ ಕಾರಣವೆಂಬಂತೆ ತೆಯನ್ನೂ ಕೋರಿದಳು. ನಂತರದಲ್ಲಿ ಇಷ್ಟೊಂದು ದ್ಧ ಆರೋಪದ ಪಟ್ಟಿಯನ್ನು ಮಾಡಿದ್ದೀರಲ್ಲಾ ಎಂದು ದಾಗ, ಹೌದು ಸಾರ್ ನಮ್ಮ ಮನೆಯ ಮೇಲಾದ ಲ್ಲಾ ಬಗೆಯ ಹಲ್ಲೆಗಳನ್ನೂ ದಾಖಲಿಸಿದ್ದೇನೆಂದು ಳಿದಳು.

ನಂತರ ಕಮೀಷನ್ನಿನ ಚೀಫ್ ಜಸ್ಟೀಸ್ ಆಗಿದ್ದ .ಆರ್.ನಾಯಕ್ ಬಳಿ ಎಲ್ಲವನ್ನೂ ವಿವರಿಸಿದಳು. ತರ ಅವರು ಇನ್ವೆಸ್ಟಿಗೇಷನ್ ಆಫೀಸರನ್ನು ಕರೆಯಿಸಿ ದು ಲೆಟರ್ ಟೈಪ್ ಮಾಡಿಸಲು ಹೇಳಿದರು. ಈ ರಲ್ಲಿ ರೆಡ್ಡಿ ಬ್ರದರ್ಸ್ ಮತ್ತು ಹೊಸಪೇಟೆಯ ಶಾಸಕರನ್ನು ಣೆ ಮಾಡುವಂತೆಯೂ, ಗೌಸಿಯಾಳದೇ ಎಲ್ಲಾ ರುವಂತೆಯೂ ತಿರುಚಿ ಪತ್ರವನ್ನು ಸಿದ್ಧಪಡಿಸಲಾಯಿತು. ಅಪಾಯವನ್ನರಿತ ಗೌಸಿಯಾ ಅದನ್ನು ವಿರೋಧಿಸಿ ವನ್ನು ಬದಲಿಸಿ ಟೈಪ್ ಮಾಡಿಸಿದಳು. ಆದರೆ ಆಮೇಲೆ ಶೀಲಿಸಲಾಗಿ ಕಮೀಷನ್ನಿಗೆ ನೀಡಿದ ಗೌಸಿಯಾಳ ದೂರಿನ ರ್ಜಿಯೇ ಕಾಣೆಯಾಗಿತ್ತು. ಇಲ್ಲಿಯೂ ಎದುರಾಳಿಗಳ ಾಡ ನಡೆಯುತ್ತಿರುವ ಬಗ್ಗೆ ಯಾವುದೇ ಅನುಮಾನ ಳಿಯಲಿಲ್ಲ.

ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರಿಗೆ ನ್ಯಾಯ ಿ ಕಳಿಸಿದ ಪತ್ರದ ಪರಿಣಾಮವಾಗಿ ಸಿಬಿಐಯಲ್ಲಿಯೂ ಯಾರ ಕೇಸು ದಾಖಲಾಯಿತು. ಬಕ್ರೀದ್ ಸಂದರ್ಭದಲ್ಲಿ ಐ ಪೊಲೀಸರು ಬಂದರು. ಆಗ ಗೌಸಿಯಾಳ ಕೋದರಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಐನವರು ಮನೆಯನ್ನೆಲ್ಲಾ ಪರಿಶೀಲಿಸಿದರು. ಹಬ್ಬದ



ದಿನದಂದೇ ಮನೆಯಲ್ಲಿನ ದುಃಖದ ವಾತಾವರಣ ನೋಡಿ ಸಿಬಿಐ ಪೊಲೀಸರು ಕನಿಕರ ವ್ಯಕ್ತಪಡಿಸಿದರು. ಅಂತೆಯೇ "ನೀವು ಇನ್ನು ಮುಂದೆ ಧೈರ್ಯವಾಗಿರಿ. ಇಂದಿನಿಂದ ಸಿಬಿಐ ಪೊಲೀಸ್ ಪ್ರೊಟೆಕ್ಷನ್ ಕೊಡುತ್ತೇವೆ" ಎಂದು ಹೇಳಿದರು. ಇದರ ಪರಿಣಾಮವಾಗಿ ಐದು ತಿಂಗಳ ಕಾಲ ಸೆಕ್ಯುರಿಟಿಯನ್ನು ಕೊಡಲಾಯಿತು. ಇದು ಗೌಸಿಯಾಗೆ ಕತ್ತಲಿನಲ್ಲಿ ಸಿಕ್ಕ ಮಿಂಚಿನ ಹುಳುವಿನಂತೆ ಒಂದು ಭರವಸೆ ಮೂಡಲು ಕಾರಣವಾಯಿತು.

ಪೊಲೀಸ್ ಇಲಾಖೆಯನ್ನು ಒಳಗೊಂಡಂತೆ ಇನ್ವೆಸ್ಟಿಗೇಷನ್ ಸಂಸ್ಥೆಗಳು ಮೊದಮೊದಲು ಅಸಹಕಾರ ತೋರಿದರೂ ಎಲ್ಲೋ ಒಂದು ಕಡೆ ಗೌಸಿಯಾಳ ಹೋರಾಟ ಪ್ರಬಲವಾಗುತ್ತಾ ಎಲ್ಲಾ ಸಂಸ್ಥೆಗಳ ಹಿರಿಯ ಅಧಿಕಾರಿಗಳ ಗಮನ ಸೆಳೆಯುತ್ತಾ ಹೋಯಿತು. ಇನ್ನೂ ದಬ್ಬಾಳಿಕೆ ಆಕ್ರಮಣವನ್ನು ಮುಂದುವರೆಸಿದರೆ ರಾಷ್ಟ್ರೀಯ ಸುದ್ದಿಯಾಗುವ, ಮುಂದೆ ದೊಡ್ಡದೊಂದು ತೊಡಕಾಗುವ ಲಕ್ಷಣಗಳು ಕಾಣುತ್ತಲೂ ಎದುರಾಳಿಗಳು ತಮ್ಮ ಪಟ್ಟನ್ನು ಸಡಿಲಿಸುತ್ತಾ ಹೋದರು. ಬದಲಿಗೆ ಬ್ರೋಕರುಗಳನ್ನು ಕಳಿಸಿ ಎಷ್ಟು ಕೋಟಿಗಾದರೂ ಸರಿ ಮನೆಯನ್ನು ಕೊಳ್ಳುತ್ತೇವೆಂಬ ಬೇಡಿಕೆ ಇಟ್ಟರು. ಗೌಸಿಯಾ "ಮನೆ ಮಾರಾಟಕ್ಕಿಲ್ಲವೆಂದ ಮೇಲೆ, ಬೆಲೆಕಟ್ಟುವ ಪ್ರಶ್ನೆಯೇ ಇಲ್ಲ" ಎಂದು ದೃಢವಾಗಿ ಹೇಳಿದಳು. ಹೀಗೆ ಎದುರಾಳಿಗಳ ಕೊನೆಯ ಅಸ್ತ್ರವೂ ಫಲಿಸದೆ ಹೋಯಿತು.

ಸುಲಭವಾಗಿ ಹೊಸಕಿ ಹಾಕಬಹುದಾದ ಕ್ಷುದ್ರ ಹುಳುವೆಂದು ಭಾವಿಸಿದ ಗೌಸಿಯಾ ದಿನದಿಂದ ದಿನಕ್ಕೆ ಬೃಹತ್ ಗಾತ್ರದಲ್ಲಿ ಎದುರು ನಿಂತಂತಾಗಿ ಉಸಿರು ಕಟ್ಟಿಸಿದಳು. ಇದರ ಪರಿಣಾಮದಿಂದಾಗಿ ನಿಧಾನಕ್ಕೆ ಗೌಸಿಯಾ ಮನೆಯನ್ನು ಆಕ್ರಮಿಸುವ ಆಸೆಯನ್ನು ಬಿಡತೊಡಗಿದರು. ಈ ಮಧ್ಯೆ ಹೋಟೆಲ್ ಕಾಂಪೌಂಡು ಸದ್ದಿಲ್ಲದೆ ಗೌಸಿಯಾ ಮನೆಯನ್ನು ಬಿಟ್ಟು ಹಿಂದಕ್ಕೆ ಸರಿದುಕೊಂಡು ನಿರ್ಮಾಣವಾಯಿತು. ಗೌಸಿಯಾ ಅನುಭವಿಸಿದ ದೌರ್ಜನ್ಯಕ್ಕೆ ಸರಿಯಾದ ನ್ಯಾಯ ಸಿಕ್ಕಿಲ್ಲವಾದರೂ, ಸದ್ಯಕ್ಕೆ ತನ್ನ ಮನೆ ಉಳಿಸಿಕೊಂಡಿರುವುದೇ ದೊಡ್ಡದಾಗಿದೆ. ದೊಡ್ಡ ಧ್ವನಿಯಲ್ಲಿ ಗಟ್ಟಿಯಾಗಿ ಮತ್ತೆ ಮತ್ತೆ ನ್ಯಾಯ ಕೇಳಿದರೆ ಈ ವ್ಯವಸ್ಥೆಯ ಇರುವ ಚೌಕಟ್ಟಿನಲ್ಲಿಯೇ ನ್ಯಾಯ ಸಿಗುತ್ತದೆ ಎನ್ನುವುದನ್ನು ಗೌಸಿಯಾ ತನ್ನ ಹೋರಾಟದ ಮೂಲಕ ಸಾಬೀತು ಮಾಡಿದಳು. ತನ್ನದೇ ಅಸ್ತಿತ್ವಕ್ಕಾಗಿ ಅಧೈರ್ಯಗೊಳ್ಳದೆ, ಪೊಳ್ಳು ಬೆದರಿಕೆಗಳಿಗೆ ಹೆದರದೆ ದಿಟ್ಟವಾಗಿ ವ್ಯಕ್ತಿಗತ ನೆಲೆಯಲ್ಲಿ ಜೀವದ ಹಂಗು ತೊರೆದು ಹೋರಾಟವೊಂದನ್ನು ಕಟ್ಟಿದಳು.

ಈ ಎಲ್ಲದರ ಸಿಟ್ಟು ಅವಮಾನ ಹೋರಾಟದ ಭಾಗವಾಗಿಯೇ ಗೌಸಿಯಾ 2013 ರ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದಳು. ಇದೊಂದು ಸಾಂಕೇತಿಕ ಸ್ಪರ್ಧೆಯಾಗಿತ್ತು, ಜನರು ಪ್ರಚಾರದ ಸಂದರ್ಭಕ್ಕೆ ಕೇಕೆಹಾಕಿ ಬೆಂಬಲಿಸಿದವರು ಬಹುತೇಕರು ಮತ ನೀಡಿ ಬೆಂಬಲಿಸಲಿಲ್ಲ, ಕೇವಲ ಗಣಿದನಿಗಳು ಮಾತ್ರ ಚುನಾವಣೆಗೆ ನಿಲ್ಲಲು ಸಾಧ್ಯ ಎನ್ನುವುದನ್ನು ಜನರೆದುರು ಹೇಳಬೇಕಿತ್ತು, ಅಂತೆಯೇ ಹಣವಂತ ಶ್ರೀಮಂತರಿಗೆ ಮಾತ್ರ ಮಣೆ ಹಾಕುವ ರಾಷ್ಟ್ರೀಯ ಪಕ್ಷಗಳಿಗೂ ಪ್ರತಿರೋಧ ತೋರಬೇಕಾಗಿತ್ತು ಎನ್ನುತ್ತಾಳೆ ಗೌಸಿಯಾ.

ತನ್ನ ಹೋರಾಟದ ಸಂದರ್ಭದಲ್ಲಿ ಹೊಸಪೇಟೆಯ ಭಾಗದಲ್ಲಿದ್ದ ಯಾವೊಂದು ಸಂಘಟನೆಯೂ ಗೌಸಿಯಾಗೆ ಬೆಂಬಲಿಸಲಿಲ್ಲ, ಅಂತೆಯೇ ಸುತ್ತಮುತ್ತಲ ಜನರು ಕೂಡ ಈ ಎಲ್ಲಾ ಘಟನೆಗಳನ್ನು ನಿಂತು ನೋಡಿದರೇ ವಿನಃ ದೌರ್ಜನ್ಯದ ವಿರುದ್ಧ ಧ್ವನಿಗೂಡಿಸಲಿಲ್ಲ, ದುರ್ಜನರ ದರ್ಪಕ್ಕಿಂತ, ಸಜ್ಜನರ ಮೌನ ಹೆಚ್ಚು ಅಪಾಯಕಾರಿ ಎನ್ನುವುದು ಗೌಸಿಯಾ ಅವರ ಅನುಭವ. ಇಷ್ಟಾಗಿಯೂ ಅನೇಕ ಸಂಘಟನೆಗಳು ಬೆಂಬಲ ನೀಡಿದ್ದಾಗಿ ಸುಳ್ಳು ಹೇಳಿಕೊಂಡದ್ದರ ಬಗ್ಗೆ ಗೌಸಿಯಾ ಬೇಸರವನ್ನು ವ್ಯಕ್ತಪಡಿಸುತ್ತಾರೆ. ಅಂತೆಯೇ ಕಾಂಗ್ರೆಸ್ ಪಕ್ಷ ತಮ್ಮನ್ನು ಬೆಂಬಲಿಸಿತಂತೆ ಎಂದು ಕೇಳಿದರೆ "ಯಾರು ಬೆಂಬಲ ನೀಡಿದವರು? ನನ್ನೆದುರು ಕರ್ಕೊಂಡು ಬನ್ನಿ ಕೇಳತೀನಿ" ಎಂದು ಖಡಕ್ಕಾಗಿ ನುಡಿಯುತ್ತಾರೆ. ಸಂಘಟನೆಗಳ ಈ ಬಗೆಯ ನಿಷ್ಕ್ರಿಯ ಧೋರಣೆಯನ್ನು ಗಮನಿಸಿಯೇ ಸ್ವತಃ ಗೌಸಿಯಾ ಸಂಘಟನೆಯೊಂದನ್ನು ಹುಟ್ಟುಹಾಕಿದ್ದಾರೆ. 'ರಜ್ಜಾ ಜಸ್ಟಿಸ್ ಅಂಡ್ ಡೆಮಾಕ್ರಸಿ ವುಮೆನ್ ಅಂಡ್ ಯೂತ್ ಪ್ರೊಟೆಕ್ಷನ್ ಆಂದೋಲನ್' ಕಟ್ಟಿದ್ದಾರೆ. ಈ ಸಂಘಟನೆಯ ಮೂಲಕ ನೊಂದವರ ಪರವಾದ ಹೋರಾಟಕ್ಕೆ ನೆರವಾಗುತ್ತಿದ್ದಾರೆ. ತನ್ನಂತೆಯೇ ಕಷ್ಟಕ್ಕೆ ಸಿಲುಕಿದವರಿಗೆ ಜೊತೆಯಾಗುತ್ತಿದ್ದಾರೆ. ಇದೀಗ ಬಳ್ಳಾರಿ ಜಿಲ್ಲೆಯ ರೈತಸಂಘದ ಮಹಿಳಾ ಅಧ್ಯಕ್ಷೆಯಾಗಿಯೂ ಮತ್ತು ಇಂತಹದ್ದೇ ಹತ್ತಾರು ಜೀವಪರ ಸಂಘಟನೆಗಳನ್ನು ಸೇರಿ ಕೆಲಸ ಮಾಡುತ್ತಿದ್ದಾರೆ.

****

ಗೌಸಿಯಾಳ ಹೋರಾಟದ ಹಿಂದೆ ಇದ್ದ ದೊಡ್ಡ ಶಕ್ತಿಯೆಂದರೆ ಶಿಕ್ಷಣ. ಅದರಲ್ಲೂ ಕಾನೂನಿನ ಅರಿವು ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಕಾನೂನು ಸಂಬಂಧಿ ಚಿಂತನೆಗಳು ಮತ್ತು ಭಾರತದ ಸಂವಿಧಾನದ ಸರಿಯಾದ ತಿಳಿವಳಿಕೆ ಗೌಸಿಯಾಳ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಗೌಸಿಯಾಳ ಇಂಗ್ಲಿಷ್ ಭಾಷೆಯೂ ಪರಿಣಾಮಕಾರಿ ಸಂವಹನಕ್ಕೆ ನೆರವಾಗಿದೆ. ಇಂದು ಸ್ಪೆಷಲ್ ಎಕನಾಮಿಕ್ ಜೋನ್ ಒಳಗೊಂಡಂತೆ ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳು ರೈತರ ಉಳುಮೆ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿರುವ ಹೊತ್ತು, ಭೂಸ್ವಾಧೀನ ಕಾಯ್ದೆಯ ಮೂಲಕ ಅಸ್ತಿತ್ವಕ್ಕೇ ಕೊಡಲಿ ಪೆಟ್ಟುಕೊಟ್ಟು ಭೂಮಿಯನ್ನು ಕಸಿದುಕೊಳ್ಳುತ್ತಿರುವಾಗ, ರೈತರ ಸಾವುಗಳು ಸಹಜವೆಂಬ ಸ್ಥಿತಿ ನಿರ್ಮಾಣವಾಗಿರುವಾಗ, ಉಳ್ಳವರ ಆಸೆ ಆಕಾಂಕ್ಷೆಗಳಿಗೆ ತುಳಿತಕ್ಕೊಳಪಟ್ಟವರು ಬಲಿಯಾಗುತ್ತಿರುವಾಗ, ಗೌಸಿಯಾ ಖಾನರ ಈ ಹೋರಾಟ ನಿಜಕ್ಕೂ ಒಂದು ಸ್ಫೂರ್ತಿಯಂತೆಯೂ, ಈ ಕಾಲದ ದಿಟ್ಟತನದ ಮಾದರಿಯಂತೆಯೂ ಕಾಣುತ್ತದೆ.

ಎಂ. ಗೌಸಿಯಾ ಖಾನ್ ಅವರ ಸಂಪರ್ಕ: 9739254919

ಡಾ.ಅರುಣ್ ಜೋಳದಕೂಡ್ಲಿಗಿ

ದೇವರು ಮತ್ತು ಮಹಿಳೆ: ಸ್ಪಂದನೆಯಲ್ಲೂ ಇಣುಕುವ ತಾರತಮ್ಯ

ಪರಂಪರೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ತಮ್ಮನ್ನು ಸ್ಥಾನದಿಂದ ಹೊರಗಿಡುವ ಪುರೋಹಿತಶಾಹಿ ಮತ್ತು ಪ್ರದಾಯವಾದಿ ಮನಸ್ಥಿತಿಗಳ ವಿರುದ್ಧ ಸಮರ ಸಾರಿ ನೆಗೂ ದೇವರ ಮೂರ್ತಿ ಸ್ಪರ್ಶಿಸುವ ಅವಕಾಶ ಸಿಕೊಂಡ ಯುವತಿಯರು ದೇಶದ ಗಮನ ಸೆಳೆಯುವಲ್ಲಿ ಲರಾದರು. ಆ ಮೂಲಕ ಸಾಂಪ್ರದಾಯಿಕ ಆಚರಣೆಗಳ ಸಿನಲ್ಲಿ ತಮ್ಮನ್ನು ಎರಡನೇ ದರ್ಜೆಯ ಮನುಷ್ಯರಾಗಿ ಗಣಿಸುವ ವ್ಯವಸ್ಥಿತ ತಾರತಮ್ಯಕ್ಕೆ ಇತಿಶ್ರೀ ಹಾಡುವ ಟ್ಟಿನಲ್ಲಿ ಸಣ್ಣದೊಂದು ಸಂಚಲನ ಸೃಷ್ಟಿಸಿದರು. ಇದನ್ನು ಗಿಸಿಕೊಳ್ಳಲಾಗದ ಕೆಲ ರೋಗಗ್ರಸ್ತ ಮನಸ್ಸುಗಳು ತಮಗೆ ೀಚಿದಂತೆಲ್ಲ ಒದರುವ ಮೂಲಕ ತಮ್ಮೊಳಗಿನ ಅವಿವೇಕ ದರ್ಶಿಸಿದ್ದಲ್ಲದೇ, ವಿವಾದಗಳನ್ನೂ ಹುಟ್ಟು ಹಾಕಿದರು. ಇದೀ ಬೆಳವಣಿಗೆಗೆ ಸಾಕಷ್ಟು ಪ್ರಚಾರವೂ ದೊರೆಯಿತು.

ಅಲ್ಲೆಲ್ಲೋ ಮಹಾರಾಷ್ಟ್ರದಲ್ಲಿ ನಡೆದ ಘಟನೆ ಕುರಿತು ಮ್ಮ ಅಭಿಪ್ರಾಯಗಳನ್ನು ಮಂಡಿಸುವ ಮೂಲಕ ನಾವು ಡ ಸ್ಪಂದಿಸುತ್ತ ಹೋದೆವು. ಅಲ್ಲಿ ಸಂಪ್ರದಾಯದ ನೆಪ ಮುಂದಿಟ್ಟುಕೊಂಡು ಮಹಿಳೆಯರು ದೇವರಮೂರ್ತಿ ರ್ಶಿಸಲು ಅವಕಾಶ ನೀಡಿರಲಿಲ್ಲ, ಇದೇವೇಳೆ ನಮ್ಮದೇ ಜ್ಯದ ಹಳ್ಳಿಯೊಂದರಲ್ಲಿ ದೇವಸ್ಥಾನ ಪ್ರವೇಶಿಸಿದ ದಲಿತ ಹಿಳೆಯರಿಗೆ ಊರಿನ ಸವರ್ಣೀಯರು ದಂಡ ವಿಧಿಸಿದ ಟನೆಗೆ ಕುರಿತು ನಾವೆಲ್ಲ ಜಾಣಕುರುಡು ಪ್ರದರ್ಶಿಸಿದೆವು, ಂದಿಗೂ ಹಲವರು ಪ್ರದರ್ಶಿಸುತ್ತಲೇ ಇದ್ದಾರೆ.

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕು ಗರನಹಳ್ಳಿಯಲ್ಲಿ ನಡೆದ ಈ ಘಟನೆಯಲ್ಲಿ ನೋವು ತ್ತು ಅವಮಾನ ಉಂಡವರ ಪರ ಅಭಿಪ್ರಾಯ ಮಂಡಿಸಲು ನ್ನು ನಾಲಿಗೆಗಳು ಅದ್ಯಾಕೋ ತೊದಲಿದವು. ಇಲ್ಲೂ ೆ ದಂಡ ಕಟ್ಟುವ ಶಿಕ್ಷೆಗೆ ಒಳಗಾದ ದಲಿತ ಮಹಿಳೆಯರು, ಾಗದ ಅನ್ಯಾಯ ಒಪ್ಪಿಕೊಂಡು ಸುಮ್ಮನಾಗಲಿಲ್ಲ, ರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಬಲವಾಗಿರುವ ತಿಸಮುದಾಯವೊಂದರ ವಿರುದ್ಧ, ಅದರಲ್ಲೂ ರಾಜ್ಯದ ಪ್ರಪಿ ರಾಜಕಾರಣಿಗಳ ಎದುರು ಹೋರಾಡುವ ಮೂಲಕ ನ್ನ ಮೂಲಭೂತ ಹಕ್ಕು ದಕ್ಕಿಸಿಕೊಳ್ಳಲು ಎಲ್ಲ ರೀತಿಯ ಯತ್ನಗಳನ್ನು ಎದುರಿಸಿದರು. ಕೊನೆಗೂ ದೇವಸ್ಥಾನ ವೇಶಿಸುವ ಹಕ್ಕು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಆದರೆ ಇವರಿಗೆ ಬೆಂಬಲವಾಗಿ ನಿಂತವರ ಸಂಖ್ಯೆ ಮಾತ್ರ ಅತ್ಯಲ್ಪ, ಇದು ದಲಿತ ಮಹಿಳೆಯರಿಗೆ ಸಂಬಂಧಿಸಿದ ವಿಷಯವಾಗಿದ್ದರಿಂದಲೋ ಏನೋ, ಮೇಲ್ವರ್ಗಗಳ ಮಹಿಳಾ ವಲಯವೂ ಇವರ ಪರ ದನಿ ಎತ್ತದೇಹೋಯಿತು. ಇದು ಕೇವಲ ದಲಿತರು ಮತ್ತು ಸವರ್ಣೀಯರ ನಡುವಿನ ಸಂಘರ್ಷವಾಗಿಯಷ್ಟೆ ಉಳಿಯಿತು.

ಸಮಾನ ಹಕ್ಕು ಪಡೆಯುವ ಹಾಗು ಮನುಷ್ಯ ಘನತೆ ಎತ್ತಿ ಹಿಡಿಯುವ ಉದ್ದೇಶದಿಂದ ನಡೆದ ಸಿಗರನಹಳ್ಳಿ ದಲಿತರಿಗೆ ಬಹಿಷ್ಕಾರ ವಿರೋಧಿ ಹೋರಾಟದ ಮುಂಚೂಣಿಯಲ್ಲಿ ಸ್ವತಃ ಅವಮಾನಿತರಾದ ಮಹಿಳೆಯರಿದ್ದುದು ಕೂಡ ಇಲ್ಲಿ ಗಮನಾರ್ಹ. ಸಾಮಾನ್ಯವಾಗಿ ದಲಿತ ಪರ ಸಂಘಟನೆಗಳು ಹಮ್ಮಿಕೊಳ್ಳುವ ಕಾರ್ಯಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಅನುಪಸ್ಥಿತಿ ಎದ್ದು ಕಾಣುತ್ತಿರುತ್ತದೆ.

ಸಿಗರನಹಳ್ಳಿಯ ದಲಿತ ಮಹಿಳೆ ತಾಯಮ್ಮ ಅವರಿಗೆ ಭದ್ರತೆ ಒದಗಿಸುವಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಗೃಹಸಚಿವ ಡಾ.ಪರಮೇಶ್ವರ್‌ಗೆ ಬರೆದಿರುವ ಪತ್ರ ಗಮನಿಸಿದರೆ, ಸಿಗರನಹಳ್ಳಿ ದಲಿತ ಮಹಿಳೆಯ ಹೋರಾಟದ ಹಿಂದಿರಬಹುದಾದ ನೋವುಗಳ ಕುರಿತು ಅರಿವಾಗಬಹುದು. ಪ್ರಕರಣ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುವವರೆಗೂ ದಲಿತರ ಅಳಲು ಆಲಿಸುವ ಮನಸ್ಸು ಮಾಡದ ದೇವೇಗೌಡರು, ಆನಂತರ ನಡೆದುಕೊಂಡ ರೀತಿಗೂ ಈ ಪತ್ರ ಕನ್ನಡಿ ಹಿಡಿಯುತ್ತದೆ.


ಮಹಾರಾಷ್ಟ್ರದ ಶನಿ ಶಿಂಗ್ನಾಪುರ ಮತ್ತು ಹಾಸನದ ಸಿಗರನಹಳ್ಳಿ ಘಟನೆಗಳು, ದೇವಾಲಯದಲ್ಲಿ ದೇವರೊಂದಿಗೆ ಅನುಸಂಧಾನ ನಡೆಸಲು ಬಯಸುವ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳು. ಇಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಇರುವ ಮತ್ತೊಂದು ಮಗ್ಗುಲು ಕೂಡ ಗಮನಾರ್ಹವಾದುದು.

ದೇವರನ್ನು ಪೂಜಿಸುವ ಮತ್ತು ದೇವಾಲಯ ಪ್ರವೇಶಿಸುವ ಸಮಾನ ಹಕ್ಕನ್ನು ಮಹಿಳೆಯರಿಗೆ ನೀಡಬೇಕಿರುವುದು ವ್ಯವಸ್ಥೆಯ ಹೊಣೆಗಾರಿಕೆ ಹೇಗೊ ಹಾಗೆಯೇ, ದೇವರ ಅಸ್ತಿತ್ವವನ್ನು ನಿರಾಕರಿಸುವ ಮೂಲಕ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅಸಮ್ಮತಿ ಸೂಚಿಸುವ ಮಹಿಳೆಯರ ಭಾವನೆಗಳನ್ನೂ ಗೌರವಿಸಬೇಕಾದ್ದು ಕೂಡ ವ್ಯವಸ್ಥೆಯ ಜವಾಬ್ದಾರಿಯೇ ಆಗಿದೆ. ಇದಕ್ಕೆ ಪೂರಕವಾಗಿ ಸ್ನೇಹಿತೆಯೊಂದಿಗೆ ನಡೆದ ಮಾತುಕತೆ ಇಲ್ಲಿ ಉಲ್ಲೇಖನಾರ್ಹವೆನಿಸುತ್ತದೆ.

ಹೀಗೆ ಒಮ್ಮೆ ಹಬ್ಬದ ದಿನದಂದು ಮನೆಗೆ ಬಂದವಳು, "ಏನಪ್ಪ ಪೂಜೆ ಗೀಜೆ ಎಲ್ಲ ಮುಗಿಯಿತಾ? ಹಬ್ಬ ಜೋರಾ?" ಅಂದಳು. "ನಾನೆಲ್ಲಿ ಪೂಜೆ ಮಾಡ್ತೀನಿ, ನಿಂಗೇ ಗೊತ್ತಲ್ಲಾ!? ಅದಿರ್ಲಿ ನೀನು ಪೂಜೆ ಮಾಡಾಯ್ತಾ?" ಅಂತ ಪ್ರಶ್ನಿಸಿದೆ.

"ಅಯ್ಯೋ ಪೂಜೆ ಮಾಡ್ಲಿಲ್ಲ ಅಂದ್ರೆ ನಮ್ಮತ್ತೆ ಸುಮ್ನೆ ಬಿಡ್ತಾರಾ? ಹುಡುಗ್ರು ಪೂಜೆ ಮಾಡ್ಲಿಲ್ಲ ಅಂದ್ರೆ, ಏನೋ ಹುಡುಗಾಟದ ಬುದ್ಧಿ ಅಂತ ಬೇಕಾದ್ರೆ ಸುಮ್ನಿರ್ತಾರೆ. ಆದ್ರೆ ಹೆಣ್ಣುಮಕ್ಕಳು ಪೂಜೆ ಮಾಡ್ಲಿಲ್ಲ ಅಂದ್ರೆ ಅದೇ ದೊಡ್ಡ ರಾದ್ಧಾಂತ ಆಗುತ್ತೆ ಕಣಪ್ಪ" ಅಂದಳು. ಅವಳು ಆಡಿದ ಮಾತು ಅಲ್ಲಗಳೆಯಲು ನನ್ನೆದುರು ಬರಲಾರಂಭಿಸಿದ ನಿದರ್ಶನಗಳು ಅನುವು ಮಾಡಿಕೊಡಲಿಲ್ಲ.

ದೇವರ ಮನೆಯನ್ನು ಆಗಾಗ ಶುಚಿಗೊಳಿಸಿ, ಪೂಜಾಕಾರ್ಯಗಳನ್ನು ಕೈಗೊಳ್ಳುವುದು ಸನ್ನಡತೆ ಹೊಂದಿದ ಹೆಣ್ಣಿನ ಗುಣಲಕ್ಷಣ ಎಂದೇ ಭಾವಿಸಿರುವ ಸಮಾಜ ನಮ್ಮದಾಗಿರುವಾಗ, ಇಲ್ಲಿ ಪೂಜಿಸುವ ಹಕ್ಕಿಗಾಗಿ ಹೋರಾಡುವುದರೊಂದಿಗೆ ಪೂಜಿಸಲು ಬಯಸದೆ ನಾಸ್ತಿಕತೆಯೆಡೆಗೆ ಒಲವು ಬೆಳೆಸಿಕೊಳ್ಳುವ ಮಹಿಳೆಯರ ಆಯ್ಕೆ ಸ್ವಾತಂತ್ರ್ಯ ಗೌರವಿಸುವ ಮನಸ್ಥಿತಿ ರೂಪುಗೊಳ್ಳುವ ವಾತಾವರಣ ನಿರ್ಮಿಸಲೂ ಶ್ರಮಿಸಬೇಕಾದ ಅನಿವಾರ್ಯತೆ ಇದೆ. ಇದು ನಾಲ್ಕು ಗೋಡೆಗಳ ನಡುವಿನ ವಿದ್ಯಮಾನವೇ ಆಗಿದ್ದರೂ, ಅದರ ಹಿಂದಿರುವ ಪ್ರಭಾವಲಯ ಟಿ.ವಿ. ವಾಹಿನಿಗಳಲ್ಲಿ ದಿನನಿತ್ಯ ಪ್ರಸಾರವಾಗುವ ಜ್ಯೋತಿಷ್ಯ ಕಾರ್ಯಕ್ರಮಗಳವರೆಗೂ ಚಾಚಿಕೊಂಡಿರುವುದನ್ನು ಅಲ್ಲಗಳೆಯಲಾಗದು. ತಾವು ಎಲ್ಲರ ಭವಿಷ್ಯ ಬಲ್ಲವರೆಂದು ನಂಬಿಸುವ ಭರದಲ್ಲಿ ಕೆಲ ಜ್ಯೋತಿಷಿಗಳು, ದಿನನಿತ್ಯ ಪೂಜೆ ಸಲ್ಲಿಸುವ ಮೂಲಕ ದೇವರೆಡೆಗಿನ ತಮ್ಮ ಭಕ್ತಿ ಪ್ರದರ್ಶಿಸದಿರುವ ಮಹಿಳೆಯರ ಕುರಿತು ಹಗುರವಾಗಿ ಮಾತನಾಡುವುದನ್ನು ಗಮನಿಸಬಹುದು.



H.D. DEVE GOWDA

ಸಿಗರನಹಳ್ಳಿಯ ದಲಿತ ಮಹಿಳೆ ತಾಯಮ್ಮ ಅವರಿಗೆ ಭದ್ರತೆ ಒದಗಿಸುವಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಗೃಹಸಚಿವ ಡಾ.ಪರಮೇಶ್ವರ್‌ಗೆ ಬರೆದಿರುವ ಪತ್ರ

ಮಹಿಳೆಯರ ಅಸ್ಮಿತೆಗೆ ಸಂಬಂಧಿಸಿದ ವಿಚಾರಗಳಿಗೆ ಸ್ಪಂದಿಸುವಾಗ ಸಮಾಜ ತೋರುವ ಈ 'ಆಯ್ಕೆ'ಯಲ್ಲಿನ ಜಾಣಕುರುಡುತನಕ್ಕೆ, ಯಾರನ್ನು, ಯಾವುದನ್ನು ಹೊಣೆಯಾಗಿಸುವುದು? 'ಭೂಮಾತಾ ಬ್ರಿಗೇಡ್'ಗೆ ದೊರೆಯುವ ನೈತಿಕ ಬೆಂಬಲ ಸಿಗರನಹಳ್ಳಿಯ ದಲಿತ ಮಹಿಳೆಯರ ಹೋರಾಟಕ್ಕೆ ಏಕೆ ದೊರೆಯುವುದಿಲ್ಲ? ಪೂಜಿಸುವ ಸ್ವಾತಂತ್ರ್ಯಕ್ಕೆ ಸಿಗಬೇಕಾದಷ್ಟೇ ಆದ್ಯತೆ, ಪೂಜಿಸದಿರಲು ಬಯಸುವವರ ಆಯ್ಕೆಯನ್ನು ಗೌರವಿಸುವ ವ್ಯವಧಾನ ಬೆಳೆಸಿಕೊಳ್ಳದವರ ಸಂಕುಚಿತತೆಯನ್ನು ಖಂಡಿಸಲೂ ದೊರೆಯಬೇಕಿದೆ ಅಲ್ಲವೇ?

- ಎಚ್.ಕೆ.ಶರತ್, ಹಾಸನ

ಚಾಮ್ಸ್ಕಿ ಭವಿಷ್ಯವಾಣಿಯೂ ಬೂಸಿ ಬಸ್ಯರ ಉದಯವೂ




ಕೆಲವು ದಿನಗಳ ಹಿಂದೆ ಒಂದು ಕುತೂಹಲಕಾರಿ ಘಟನೆ ನಡೆಯಿತು. ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಬೆಂಬಲಾರ್ಥವಾಗಿ ದಿಲ್ಲಿಯಲ್ಲಿ ಒಂದು ಪ್ರಾರ್ಥನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದನ್ನು ಆಯೋಜಿಸಿದವರು ಹಿಂದೂ ಸೇನಾ ಎಂಬ ಸಂಘ ಪರಿವಾರದ ಸಂಘಟನೆ! ಆ ಸಂದರ್ಭದಲ್ಲಿ ಮಾತನಾಡಿದ ಹಿಂದೂ ಸೇನಾದ ಅಧ್ಯಕ್ಷರು "ಡೊನಾಲ್ಡ್ ಟ್ರಂಪ್ ಗೆದ್ದರೆ ಅದು ಅಮೆರಿಕ, ಭಾರತ ಹಾಗೂ ಸಕಲ ಮಾನವಕುಲಕ್ಕೇ ಒಳ್ಳೆಯದು" ಎಂದು ಸಾರಿದ್ದಾರೆ. ಸನ್ಮಾನ್ಯರ ಪ್ರಕಾರ ಟ್ರಂಪ್ ಅಧ್ಯಕ್ಷರಾದರೆ ಆತ ಇಸ್ಲಾಮಿಕ್ ಉಗ್ರವಾದವನ್ನು ನಾಶಪಡಿಸಲಿರುವುದರಿಂದ ಆತನ ಗೆಲುವಿಗಾಗಿ ಸಾಧ್ಯವಿರುವಷ್ಟೂ ಪ್ರಯತ್ನಗಳನ್ನು ಮಾಡಲಾಗುವುದಂತೆ. ಇದನ್ನು ಕೇಳಿ ಆಶ್ಚರ್ಯವೂ ಆಗಲಿಲ್ಲ, ಆಘಾತವೂ ಆಗಲಿಲ್ಲ. ಏಕೆಂದರೆ ಒಂದು ಬಗೆಯ ಮೂಲಭೂತವಾದಿಗಳಿಗೆ ಇನ್ನೊಂದು ಬಗೆಯ ಮೂಲಭೂತವಾದಿಗಳನ್ನು ಕಂಡರೆ ಇಷ್ಟವಾಗುವುದು, ಪರಸ್ಪರರನ್ನು ಸಂಪರ್ಕಿಸುವುದು, ಸಂಬಂಧ ಬೆಳೆಸುವುದು ಇತ್ಯಾದಿಗಳೆಲ್ಲ ಅಸಹಜ ಪ್ರಕ್ರಿಯೆಗಳೇನೂ ಅಲ್ಲ. ಉದಾಹರಣೆಗೆ ಸಂಘ ಪರಿವಾರದ ಮಂದಿ ಈ ಹಿಂದೆಯೂ ನಾರ್ವೆ, ಇಸ್ರೇಲ್‌ನ ಮೂಲಭೂತವಾದಿಗಳ ಜೊತೆ ನಿಕಟಸಂಪರ್ಕ ಸಾಧಿಸಿದವರೇ. ಈಗ ಇವರಿಗೆ ಟ್ರಂಪ್ ಆಪ್ಯಾಯಮಾನವಾಗಿ ಕಾಣಿಸುತ್ತಿರುವುದೇಕೆಂದರೆ ಆತ ಹೋದಲ್ಲಿಬಂದಲ್ಲಿ ಮುಸ್ಲಿಂ ಸಮುದಾಯದ ವಿರುದ್ಧ ಕಿಡಿಕಾರುತ್ತಿದ್ದಾನೆ. ಆತನ ಬೆಂಕಿಯುಗುಳುವ ಮಾತುಗಳು ಇವರ ಕಿವಿಗೆ ಇಂಪಾದ ಸಂಗೀತದಂತೆ ಕೇಳಿಸುತ್ತಿದೆ.

ಅಮೆರಿಕದ ಪ್ರಸಕ್ತ ರಾಜಕಾರಣದಲ್ಲಿ ಡೊನಾಲ್ಡ್ ಟ್ರಂಪ್‌ನಂತಹ ವ್ಯಕ್ತಿಗಳು ಮುನ್ನೆಲೆಗೆ ಬರಲಿದ್ದಾರೆಂದು ಖ್ಯಾತಚಿಂತಕ ನೋಮ್ ಚಾಮ್ಸ್ಕಿ ಆರು ವರ್ಷಗಳ ಹಿಂದೆಯೆ ಭವಿಷ್ಯ ನುಡಿದಿದ್ದರು. ಪ್ರಸ್ತುತ ಸ್ಥಿತಿಯನ್ನು ಆಳವಾಗಿ ಅಭ್ಯಸಿಸಿದ ಬಳಿಕ 2010ರಲ್ಲಿ ಸಂದರ್ಶನವೊಂದರ ವೇಳೆ ಆಡಿದ ಮಾತುಗಳವು. ಅದನ್ನು ಓದುತ್ತಾ ಓದುತ್ತಾ ಮನಸ್ಸಿನಲ್ಲಿ ಮೆಲುಕುಹಾಕುತ್ತಿದ್ದಂತೆ ತಟಕ್ಕನೆ ಅನಿಸಿದುದೇನೆಂದರೆ ಅಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳು ಹೆಚ್ಚುಕಡಿಮೆ ಸಂಪೂರ್ಣವಾಗಿ ಭಾರತಕ್ಕೂ ಅನ್ವಯಿಸುತ್ತವಲ್ಲವೆ ಎಂದು! ಕೇವಲ ಹೆಸರು ಮತ್ತು ಸನ್ನಿವೇಶಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡರೆ ಸಾಕು, ಭಾರತದ ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಕುರಿತ ವ್ಯಾಖ್ಯಾನ ಸಿದ್ಧ! ನೋಮ್ ಚಾಮ್ಸ್ಕಿ ಮಾಡಿದ್ದ ಆ ಪ್ರತಿಭಾಪೂರ್ಣ ವಿಶ್ಲೇಷಣೆಯ ಕೆಲವೊಂದು ಮುಖ್ಯಾಂಶಗಳು ಹೀಗಿವೆ:

"ನನ್ನ ಜೀವಮಾನದಲ್ಲಿ ಯಾವತ್ತೂ ಕಂಡರಿಯದಂತಹ ಬೆಳವಣಿಗೆಗಳು ಅಮೆರಿಕದ ಸಮಾಜದಲ್ಲಿ ನಡೆದಿವೆ..... ವೈಮಾರ್ ಜರ್ಮನಿ (1919ರಿಂದ 1933ರ ತನಕ ಇದ್ದಂತಹ ಅರೆ ಅಧ್ಯಕ್ಷೀಯ, ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ) ಅದರ ಕೊನೆಯ ವರ್ಷಗಳಲ್ಲಿ ಹೇಗಿತ್ತೊ (30ರ ದಶಕದ ಜಾಗತಿಕ ಆರ್ಥಿಕ ಹಾಗೂ ಕೈಗಾರಿಕಾ ಕುಸಿತದಿಂದಾದ ಪರಿಣಾಮಗಳು, ಮಿತಿಮೀರಿದ ನಿರುದ್ಯೋಗ, ಭಾರಿ ಹಣದುಬ್ಬರ ಇತ್ಯಾದಿ) ಹಾಗಿದೆ ಇಂದಿನ ಅಮೆರಿಕದ ಪರಿಸ್ಥಿತಿ. ಅವೆರಡರ ನಡುವಿನ ಸಮಾನತೆಗಳು ಗಮನ ಸೆಳೆಯುವಂತಿವೆ. ಸಂಸದೀಯ ವ್ಯವಸ್ಥೆ ಬಗ್ಗೆ ಮೂಡಿರುವ ಅತೀವ ಭ್ರಮನಿರಸನದ ಭಾವನೆ ಅವುಗಳಲ್ಲೊಂದು. ಅಂದು ನಾಜಿಗಳು ಜರ್ಮನಿಯ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಪಕ್ಷಗಳನ್ನು ನಾಮಾವಶೇಷ ಮಾಡುವಲ್ಲಿ ಸಫಲರಾದರು. ಇತರ ಬಂಡವಾಳವಾದಿ ಪಕ್ಷಗಳ ವಿರುದ್ಧವೂ ದ್ವೇಷ ಇದ್ದುದರಿಂದ ಅವು ಕೂಡ ಕಣ್ಮರೆಯಾದವು. ಹೀಗೆ ಒಂದು ನಿರ್ವಾತ ಸ್ಥಿತಿಯನ್ನು ನಿರ್ಮಾಣ ಮಾಡಿದ ಬಳಿಕ ಬಹಳ ಚತುರತೆ ಮತ್ತು ಬುದ್ಧಿವಂತಿಕೆಯಿಂದ ಇಡೀ ದೇಶದ ಮೇಲೆ ಅಧಿಕಾರ ಸ್ಥಾಪಿಸಲಾಯಿತು (1933ರ ಜನವರಿಯಲ್ಲಿ ಹಿಟ್ಲರ್‌ನ ಅಧ್ಯಕ್ಷತೆಯಲ್ಲಿ ಒಂದು ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದಿತ್ತು. ಇದಾದ ಕೆಲವೇ ವಾರಗಳಲ್ಲಿ ನಾಜಿಗಳ ದುರಾಡಳಿತ, ದಬ್ಬಾಳಿಕೆ, ವಿರೋಧ ಪಕ್ಷಗಳ ಹತ್ತಿಕ್ಕುವಿಕೆ, ರಾಜಕೀಯ ಸಭೆಗಳಿಗೆ ನಿಷೇಧ, ಮಾನವ ಹಕ್ಕುಗಳ ದಮನ, ಅಕ್ರಮ ಬಂಧನಗಳು, ಹತ್ಯೆಗಳು ಮುಂತಾದ ವಿದ್ಯಮಾನಗಳು ಪ್ರಾರಂಭವಾದವು. ಇದರಲ್ಲೆಲ್ಲ ನಾಜಿ ಕಾಲಾಳುಪಡೆಗಳದೆ ಪ್ರಮುಖ ಪಾತ್ರ. ಫೆಬ್ರವರಿಯಲ್ಲಿ ಅನುಮಾನಾಸ್ಪದವಾಗಿ ಪಾರ್ಲಿಮೆಂಟ್ ಅಗ್ನಿ ದುರಂತ ಸಂಭವಿಸಿತು. ಇದನ್ನೆ ನೆಪವಾಗಿಟ್ಟುಕೊಂಡ ಹಿಟ್ಲರ್, ಪಾರ್ಲಿಮೆಂಟ್ ಅಗ್ನಿ ಹುಕುಂಅನ್ನು ಮತ್ತು ರಾಷ್ಟ್ರಾಧ್ಯಕ್ಷನಿಗೆ ಸಂಸತ್ತನ್ನು ಬೈಪಾಸ್ ಮಾಡುವ ಅಧಿಕಾರವನ್ನೊದಗಿಸುವ ಕಾಯ್ದೆಯನ್ನು ಜಾರಿಗೊಳಿಸಿದ. ಹೀಗೆ ಅಧಿಕಾರವೆಲ್ಲ ನಾಜಿ ಪಕ್ಷದಲ್ಲಿ ಕೇಂದ್ರೀಕೃತಗೊಂಡಿತು. ಹಿಟ್ಲರ್ ಜರ್ಮನಿಯ ಸರ್ವಾಧಿಕಾರಿಯಾದ)".

ಅಮೆರಿಕದ ಡೆಮೊಕ್ರಾಟಿಕ್ ಪಕ್ಷ ಕೇವಲ ಚುನಾವಣೆಗಳನ್ನಷ್ಟೆ ದೃಷ್ಟಿಯಲ್ಲಿಟ್ಟುಕೊಂಡು ಬಲಪಂಥೀಯ ರಾಜಕಾರಣದತ್ತ ವಾಲುತ್ತಿರುವ ಬಗ್ಗೆ ಜನಪರ ಉದಾರವಾದಿ ನೀತಿಗಳನ್ನು ಕೈಬಿಡುತ್ತಿರುವ ಬಗ್ಗೆ ತಾನು ದಶಕಗಳಿಂದಲೂ




ಎಚ್ಚರಿಸುತ್ತ ಬಂದಿರುವೆ ಎನ್ನುವ ಚಾಮ್ಸ್ಕಿ ಇಂದಿನ ಬೆಳವಣಿಗೆಗಳಿಗೆ ರಾಜಕಾರಣಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡುತ್ತಾರೆ: ".... ಆದಾಗ್ಯೂ ಜನಹಿತವನ್ನು ಕಡೆಗಣಿಸಿದ ರಾಜಕಾರಣಿಗಳಿಗೆಲ್ಲ ಟ್ರಂಪ್ ಆಗಮನದಿಂದ ದಿಗ್ಭ್ರಾಂತಿಯಾಗಿದೆ... ಇದು ಅನಿವಾರ್ಯವಾಗಿತ್ತು; ಇಂತಹದೊಂದು ವಿದ್ಯಮಾನ ಘಟಿಸುವಂತಹ ಪರಿಸ್ಥಿತಿಗಳನ್ನು ನಿರ್ಮಾಣ ಮಾಡಲಾಗಿತ್ತು, ಏನಾಗಿತ್ತೆಂದರೆ ಡೆಮೊಕ್ರಾಟಿಕ್ ಪಕ್ಷ ಕಾರ್ಮಿಕರನ್ನು, ಜನಸಾಮಾನ್ಯರನ್ನು ಕೈಬಿಟ್ಟು ಕಾರ್ಪೊರೇಟ್ ಧಣಿಗಳು ಮತ್ತು ಹಣವಂತರ ಕೈಹಿಡಿಯಿತು. ಇವರೆಲ್ಲ ನಿಧಾನಕ್ಕೆ ಒಬ್ಬೊಬ್ಬರಾಗಿ ಸರಕಾರದ ಕೀಲಕ ಸ್ಥಾನಗಳಲ್ಲಿ ಸೇರಿಕೊಂಡರು. ನವಉದಾರವಾದವನ್ನು ಪಕ್ಷ ತನ್ನ ಮೂಲತತ್ವವಾಗಿ ಅಳವಡಿಸಿಕೊಂಡಿತು. ನವಉದಾರವಾದ ಎಂಬುದು ಕಾರ್ಮಿಕ ಸಂಘಟನೆಗಳು ಮತ್ತು ಸಾರ್ವಜನಿಕ ವಲಯಗಳ ಕುರಿತು ಒಲವಿರದ, ಸೈನ್ಯ ಮತ್ತು ಬೃಹತ್ ವಾಣಿಜ್ಯೋದ್ಯಮಗಳಿಗೆ ವಿರೋಧವಿರದ ಸಿದ್ಧಾಂತ. ಹೀಗಾಗಿ ಡೆಮೊಕ್ರಾಟಿಕ್ ಪಕ್ಷದ ನೀತಿಗಳೆಲ್ಲವೂ ಸೈನ್ಯ ಮತ್ತು ಬೃಹತ್ ವಾಣಿಜ್ಯೋದ್ಯಮಗಳ ಪರ ಹಾಗೂ ಪರಿಸರ ವಿರೋಧಿಯಾಗಿ ಪರಿಣಮಿಸಿದವು. ಪಕ್ಷದ ಗೆಲುವಿಗೆ ಧನಿಕ ಬೆಂಬಲಿಗರೇ ಬೇಕು ಎಂಬ ನೆಪವೊಡ್ಡಿ ಜನಸಾಮಾನ್ಯರ ಬವಣೆಗಳನ್ನು ಪೂರ್ತಿ ನಿರ್ಲಕ್ಷಿಸಲಾಯಿತು.

ಅತ್ತ ಡೆಮೊಕ್ರಾಟಿಕ್ ಪಕ್ಷದ ಸ್ಥಿತಿ ಹೀಗಿದ್ದರೆ ಇತ್ತ ರಿಪಬ್ಲಿಕನ್ ಪಕ್ಷ ಶ್ರೀಮಂತರ ಮುಂದೆ ನಡುಬಗ್ಗಿಸಿ ಅವರ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದೆ. ಯುದ್ಧಕ್ಕಾಗಿ ಹಾತೊರೆಯುವವರೂ ಪರಿಸರ ವಿಜ್ಞಾನವನ್ನು ತಿರಸ್ಕರಿಸುವವರೂ ಆಗಿರುವ ಇವರು ಮಾನವಕುಲಕ್ಕೇ ಅಪಾಯಕಾರಿ. ಹೀಗಾಗಿ ಈಗ ಅಮೆರಿಕದ ರಾಜಕೀಯ ವ್ಯವಸ್ಥೆ ಬಹುಮಟ್ಟಿಗೆ ಸುಸಂಘಟಿತ ಐಶ್ವರ್ಯವಂತರ ಅವಶ್ಯಕತೆಗಳಿಗಾಗಿ ತನ್ನನ್ನು ತಾನು ಸಮರ್ಪಿಸಿಕೊಂಡಿದೆ. ಇದರಿಂದಾಗಿ ಜನಸಾಮಾನ್ಯರಲ್ಲಿ ಅತೃಪ್ತಿ ಉಂಟಾಗಿದ್ದು ಅವರ ಮಧ್ಯೆ ಒಂದು ನಿರ್ವಾತ ಪರಿಸ್ಥಿತಿ ನಿರ್ಮಾಣವಾಗಿದೆ. ಟ್ರಂಪ್‌ನಂತಹ ದೊಡ್ಡ ಗಂಟಲಿನ, ಜನಸಮೂಹವನ್ನು ಪ್ರಭಾವಿಸುವ ಪುಢಾರಿಗಳು ಉದ್ಭವಿಸುವುದೇ ಇಂತಹ ವಾತಾವರಣದಲ್ಲಿ.

ಪುಣ್ಯಕ್ಕೆ ಜನಸಮೂಹವನ್ನು ಪ್ರಭಾವಿಸುವುದರ ಜೊತೆ ಪ್ರಾಮಾಣಿಕನೂ ಆಗಿರುವ ವ್ಯಕ್ತಿ ಇದುವರೆಗೂ ಕಾಣಿಸಿಕೊಂಡಿಲ್ಲ. ಜನಸಮೂಹವನ್ನು ಪ್ರಭಾವಿಸುವ ವ್ಯಕ್ತಿ ಮೋಸಗಾರನಾಗಿರುತ್ತಾನೆಂಬುದು ಸುವ್ಯಕ್ತ. ಆದುದರಿಂದ ಆತ ಮೆಕಾರ್ತಿ, ನಿಕ್ಸನ್ ಅಥವಾ ಇವ್ಯಾಂಜೆಲಿಕಲ್ ಪಂಥದ ಬೋಧಕರಂತೆ ಆತ್ಮವಿನಾಶ ಮಾಡಿಕೊಳ್ಳುತ್ತಾನೆ. ಜನರಲ್ಲಿ ಆಶಾಭಂಗ, ಭ್ರಮನಿರಸನ ಮತ್ತು ಸಿಟ್ಟಿನ ಭಾವನೆಗಳು ತುಂಬಿರುವಂತಹ ಪರಿಸ್ಥಿತಿಯಲ್ಲಿ, ಸರಕಾರದ ಕಡೆಯಿಂದ ಸಮಂಜಸ ಪ್ರತಿಕ್ರಿಯೆಯೂ ಇಲ್ಲದಂತಹ ಪರಿಸ್ಥಿತಿಯಲ್ಲಿ ಜನಸಮೂಹವನ್ನು ಪ್ರಭಾವಿಸುವುದರೊಂದಿಗೆ ಪ್ರಾಮಾಣಿಕನೂ ಆಗಿರುವ ವ್ಯಕ್ತಿ ಬಂದರೆ ನಿಜಕ್ಕೂ ದೊಡ್ಡ ಕ್ಷೋಭೆ ಉಂಟಾಗಲಿದೆ.

ಈಗ ಬಂದಿರುವ ಟ್ರಂಪ್ ಮಹಾಶಯ ಪ್ರಾಮಾಣಿಕನಲ್ಲ, ಆದರೆ ಬೆಂಬಲಿಗರ ಪ್ರಕಾರ ಆತ ಇದ್ದುದನ್ನು ಇದ್ದ ಹಾಗೆ ಹೇಳುವವನು; ಆತನದು ನೇರನುಡಿ, ರಾಜಕೀಯವಾಗಿ ನಿರ್ದಿಷ್ಟ ಮಾತು. ಇಷ್ಟೇ ಅಲ್ಲ, ಆತ ಭ್ರಷ್ಟಾಚಾರಿಯಲ್ಲ, ತನ್ನ ಸ್ವಂತದ ದುಡ್ಡು ಖರ್ಚು ಮಾಡುತ್ತಾನೆ, ತಾವು ಯಾರನ್ನು ತಮ್ಮ ನೈಜಶತ್ರುಗಳೆಂದು ಭಾವಿಸಿರುವೆವೊ ಅಂಥವರ ಬಗ್ಗೆ ಸತ್ಯವನ್ನೆ ನುಡಿಯುತ್ತಾನೆ ಎಂದೂ ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಟ್ರಂಪ್ ಬಲಿಯಾಧಿಪತಿಗಳ ಬಗ್ಗೆ ಮಾತಾಡುವುದಿಲ್ಲ. ಆತನ ವಾಗ್ದಾಳಿಗಳೆಲ್ಲ ಕಾನೂನುಬಾಹಿರ ವಲಸಿಗರು ಮತ್ತು ಮುಸ್ಲಿಮರ ಮೇಲೆ ಕೇಂದ್ರೀಕೃತವಾಗಿವೆ. ಅಂತಿಮವಾಗಿ ಟ್ರಂಪ್ ಮಾಡಿರುವುದೇನೆಂದರೆ ಜನಸಾಮಾನ್ಯರ ಭಯ ಮತ್ತು ದ್ವೇಷಗಳನ್ನು ತನಗೆ ಅನುಕೂಲಕರವಾಗುವಂತೆ ತಿರುಗಿಸಿರುವುದು. ಅಂದು ಜರ್ಮನಿಯಲ್ಲಿ ಯಹೂದ್ಯರನ್ನು ಶತ್ರುಗಳಾಗಿ ಬಿಂಬಿಸಲಾಗಿದ್ದರೆ ಇಂದು ಅಮೆರಿಕದಲ್ಲಿ ಕಾನೂನುಬಾಹಿರ ವಲಸಿಗರು ಮತ್ತು ಕರಿಯರು ಅದೇ ಸ್ಥಿತಿ ಎದುರಿಸುತ್ತಿದ್ದಾರೆ. ಶ್ವೇತವರ್ಣೀಯ ಪುರುಷರನ್ನು ಕಿರುಕುಳಕ್ಕೊಳಗಾಗಿರುವ ಅಲ್ಪಸಂಖ್ಯಾತರೆಂದು ಬಿಂಬಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ 'ನಾವು ನಮ್ಮ ರಕ್ಷಣೆ ಮಾಡಿಕೊಳ್ಳಬೇಕಾಗುತ್ತದೆ, ದೇಶದ ಗೌರವವನ್ನು ಕಾಪಾಡಿಕೊಳ್ಳಬೇಕಾಗುತ್ತದೆ' ಎಂದು ಹೇಳಲಾಗುವುದು. ಸೇನಾಶಕ್ತಿಯನ್ನು ಸ್ತುತಿಸಲಾಗುವುದು. ಜನರ ಮೇಲೆ ಹಲ್ಲೆಗಳಾಗಲಿವೆ. ಅಂತಿಮವಾಗಿ ಇದೆಲ್ಲ ಎದುರಾಳಿಗಳನ್ನು, ವಿರೋಧಿಗಳನ್ನು ಸದೆಬಡಿದು ಅವರ ಬಾಯಿಮುಚ್ಚಿಸುವ ಶಕ್ತಿಯಾಗಿ ಪರಿಣಮಿಸಬಹುದು.

ಜನಸಾಮಾನ್ಯರ ಅವಶ್ಯಕತೆಗಳನ್ನು ಕಡೆಗಣಿಸಿ ಅವರಿಗೆ



ಬರೀ ಭರವಸೆಗಳನ್ನೊಡ್ಡಿ ಉನ್ನತ ಸ್ಥಾನಕ್ಕೇರ
ರಾಜಕಾರಣಿಗಳಿಗೆ ಟ್ರಂಪ್ ಕಂಡು ದಿಗ್ಭ್ರಮೆಯಾಗಿದೆ. ಅ
ಅವರು ಸೃಷ್ಟಿಸಿದ ಸನ್ನಿವೇಶಗಳಿಂದಾಗಿ ಆತನ ಆಗ
ಅನಿವಾರ್ಯವಾಗಿತ್ತು... ದೇಶದ ಮನಃಸ್ಥಿತಿ ನೋಡಿದ
ಭಯವಾಗುತ್ತಿದೆ. ಜನರ ಕ್ರೋಧವನ್ನು, ನಿರಾಶೆಯ
ಸಂಸ್ಥೆಗಳ ಮೇಲಿರುವ ದ್ವೇಷದ ಮಟ್ಟವನ್ನು ರಚನಾತ್ಮಕ
ಸಂಘಟಿಸಲಾಗಿಲ್ಲ. ದೇಶ ಆತ್ಮವಿನಾಶಕಾರಿ ಭ್ರಮಾಲೋಕ
ಚಲಿಸುತ್ತಿದೆ. ಆ ಭ್ರಮಾಲೋಕದ ಸಾಕಾರರೂಪವೆ ಟ್ರಂ
ಆತ ಕ್ರೋಧದ ಮೂರ್ತ ಸ್ವರೂಪ; ಸುತ್ತಿಗೆ.
ಸುತ್ತಿಗೆಯಿಂದ ಸಂಸ್ಥೆಗಳನ್ನು ಪುಡಿಗುಟ್ಟಿ ಅಮೆರಿಕ
ಸುಖ, ಸಮೃದ್ಧಿಯಿಂದ ಕೂಡಿದ್ದೆನ್ನಲಾದ ಗತಕಾಲಕ್ಕೆ ಒಯ
ಅಭಿಲಾಷೆ ಆತನ ಬೆಂಬಲಿಗರದು.... ಅಮೆರಿ
ರಾಜಕೀಯ ವರ್ಗ ಟ್ರಂಪ್ ವಿದ್ಯಮಾನದ ಭಾರ ತಾಳಲಾ
ಮುಗ್ಗರಿಸಿದೆ. ವಾಸ್ತವವಾಗಿ ಅದರ ವೈಫಲ್ಯಗಳೆ ಟ್ರಂ
ಸೃಷ್ಟಿಗೆ ಕಾರಣವಾಗಿವೆ. ಸದ್ಯ ವ್ಯವಸ್ಥೆಯ ಮುಂದಿ
ಆಯ್ಕೆ ಏನೆಂದರೆ ಒಂದೊ ಟ್ರಂಪ್‌ನ ನಕಲಿ ಜನ
ಸಿದ್ಧಾಂತಕ್ಕೆ ಮರುಳಾದವರ ನೈಜ ಆತಂಕಗಳ
ನಿವಾರಿಸಬೇಕು ಅಥವಾ ರಿಪಬ್ಲಿಕನ್ ಪಕ್ಷ ಹ
ದಶಕಗಳಿಂದ ಸಂಕೇತಭಾಷೆಯಲ್ಲಿ ಹೇಳುತ್ತಿದ್ದುದನ್ನು ಟ್ರ
ಇಂದು ಬಹಿರಂಗವಾಗಿ ಹೇಳುತ್ತಿರುವುದರಿಂದ ಅದ
ತಾನು ಡೊನಾಲ್ಡ್ ಟ್ರಂಪ್‌ನ ಪಕ್ಷ ಎಂಬುದನ್ನು ಒಪ್ಪಿಕೊ
ಸುಮ್ಮನಿರಬೇಕು."

ಟ್ರಂಪ್ ಆಡಳಿತ ಹೇಗಿರಬಹುದು ಎಂಬ ಪ್ರ
ಚಾಮ್ಸ್ಕಿ ಉತ್ತರ ಮಾರ್ಮಿಕವಾಗಿದೆ: "ಜಗತ
ಸರ್ವನಾಶಪಡಿಸಬಲ್ಲ ಗುಂಡಿಯ ಮೇಲೆ ಬೆರಳಿಟ್ಟ
ಅಥವಾ ಅಪಾರ ಪ್ರಭಾವ ಬೀರುವಂತಹ ನಿರ್ಧಾರಗ
ತೆಗೆದುಕೊಳ್ಳಬಲ್ಲ ಒಂದು ವಿಧದ ಸ್ವಚ್ಛಂದವೃತ
ವ್ಯಕ್ತಿಯನ್ನು ಹೊಂದುವ ಆ ದೃಶ್ಯವನ್ನು ಊಹಿಸಿಕೊಂ
ತುಂಬಾ ಗಾಬರಿಯಾಗುತ್ತದೆ."


ಇತ್ತೀಚಿನ ವರ್ಷಗಳಲ್ಲಿ ಭಾರತದ ರಾಜಕೀಯ ರಂಗ
ಆಗಿರುವ ಮಹತ್ತರ ಸ್ಥಿತ್ಯಂತರಗಳು ಚಾಮ್ಸ್ಕಿ
ಭವಿಷ್ಯವಾಣಿಯ ಯಥಾರ್ಥತೆಯನ್ನು ಮತ್ತು ಅ
ಸಾರ್ವಲೌಕಿಕತೆಯನ್ನು ಸಾಬೀತುಪಡಿಸುವಂತಿವೆ.

(ಆಧಾರ: ಮೇ 5, 2016ರ Comm
Dreams ನಲ್ಲಿ ಜೇಕ್ ಜಾನ್ಸನ್ ಲೇ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ನರಕದ ಬಗೆಗಳು ಭಾಗ:02



ಸರಮೇಯದಾನ (ಸರಮಾ ಮಕ್ಕಳ ನರಕ)

ಸಂಪತ್ತಿಗಾಗಿ ಮನೆಗಳನ್ನು ಸುಟ್ಟವರು, ವಿಷವಿಟ್ಟವರು, ರಾಜರು ಅಥವಾ ಇತರ ಅಧಿಕಾರಿಗಳು ವ್ಯಾಪಾರಿಗಳ ಹಣವನ್ನು ಸುಲಿಗೆ ಮಾಡುವವರು, ಸಾಮೂಹಿಕ ಹತ್ಯಾಕಾಂಡಗಳನ್ನು ಮಾಡುವವರು ಅಥವಾ ನಾಡಿನ ದುರ್ಗತಿಗೆ ಕಾರಣರಾದವರು ಈ ನರಕಕ್ಕೆ ತಳ್ಳಲ್ಪಡುತ್ತಾರೆ. ಚೂಪಾದ ಕತ್ತಿಯ ಅಲಗುಗಳಂತಿರುವ ಹಲ್ಲುಗಳನ್ನು ಹೊಂದಿರುವ ಏಳುನೂರ ಇಪ್ಪತ್ತು ಭಯಾನಕ ಮತ್ತು ಕ್ರೂರನಾಯಿಗಳು ಅಲ್ಲಿರುತ್ತವೆ. ಇವೇ ಸರಮಾ ಮಕ್ಕಳು. ಅವುಗಳಿಗೆ ಪಾಪಿಗಳು ಆಹಾರವಾಗುವಂತೆ ಯಮದೂತರು ಎಸೆಯುತ್ತಾರೆ. ಅವುಗಳು ಪಾಪಿಗಳನ್ನು ಬೇಟೆಯಾಡುತ್ತವೆ. ಪಾಪಿರಲಿ, ಅಲ್ಲಿ ಎಂತಹುದೇ ದಾಳಿ, ಹಲ್ಲೆ ಮತ್ತು ಶಿಕ್ಷೆಗೆ ಒಳಗಾದರೂ ಸಾವಿರುವುದಿಲ್ಲ, ಸಾಯುವಷ್ಟು ನೋವಿರುತ್ತದೆ.

ಅವಿಚಿ ಅಥವಾ ಅವಿಚಿಮತ್ (ನೀರಿಲ್ಲದ ಅಥವಾ ಅಲೆಗಳಿಲ್ಲದ)

ಯಾರು ತನ್ನ ವ್ಯಾಪಾರ ವ್ಯವಹಾರದಲ್ಲಿ ತನ್ನ ವ್ಯಾಪಾರ ಮತ್ತು ವ್ಯವಹಾರ ಬದ್ಧತೆಗೆ ಅಪ್ರಮಾಣಿಕನಾಗಿರುತ್ತಾನೋ, ಮಾಡಿಕೊಂಡಿರುವ ನಿಬಂಧನೆಗಳಿಗೆ ತಪ್ಪಿ ಸುಳ್ಳು ಹೇಳುತ್ತಾನೋ ನೂರು ಯೋಜನ ವಿಸ್ತಾರದ ಕಲ್ಲುಗಳ ಅಲೆಗಳ ಪ್ರದೇಶಕ್ಕೆ ಎಸೆಯಲ್ಪಡುತ್ತಾನೆ. ಅಲ್ಲಿ ನೀರಿರುವುದಿಲ್ಲ, ಬರಿಯ ಕಲ್ಲುಗಳ ಅಲೆ. ಈ ಕಲ್ಲುಗಳ ಅಲೆಗೆ ಅವನ ದೇಹವು ಜರ್ಜರಿತವಾಗುತ್ತದೆ. ಆದರೆ, ನರಕದ ಸಾಮಾನ್ಯ ಸೂತ್ರದಂತೆ ಇಲ್ಲಿ ಸಾವಂತೂ ಇಲ್ಲ.

ಅಯಹ್‌ಪಾನ (ಕಬ್ಬಿಣವನ್ನು ಕುಡಿಯುವುದು)

ಯಾವ ಬ್ರಾಹ್ಮಣ ಅಥವಾ ಇನ್ಯಾರಾದರೂ ಕುಡಿಯುವುದಿಲ್ಲ ಎಂದು ಸಂಕಲ್ಪ ಮಾಡಿ ಕುಡಿಯುತ್ತಾನೋ ಅವನನ್ನು ಇಲ್ಲಿ ಶಿಕ್ಷಿಸಲಾಗುತ್ತದೆ. ಯಮದೂತರು ಅವರ ಎದೆಯ ಮೇಲೆ ನಿಂತು ಕರಗಿರುವ ಬಿಸಿ ಬಿಸಿ ಕಬ್ಬಿಣವನ್ನು ಕುಡಿಯುವಂತೆ ಬಲಾತ್ಕರಿಸುತ್ತಾರೆ.

ಕ್ಷಾರಕರ್ದಾಮ

ಯಾರು ಹುಸಿ ಪ್ರತಿಷ್ಠೆಯಿಂದ ದಬ್ಬಾಳಿಕೆ ಮಾಡುತ್ತಾನೋ. ಜನ್ಮದಿಂದ, ಪಾವಿತ್ರ್ಯತೆಯಿಂದ, ಜ್ಞಾನ ಮತ್ತು ಪಾಂಡಿತ್ಯದಿಂದ, ವರ್ತನೆಯಿಂದ, ಜಾತಿ ಅಥವಾ ಆಧ್ಯಾತ್ಮಿಕ ಸ್ಥಿತಿಯಿಂದ ಹಿರಿಗಿಲಾಗಿರುವವನನ್ನು, ತನಗಿಂತ ಹಿರಿಗಿಲಾಗಿರುವವನನ್ನು ಆದರಿಸುವುದಿಲ್ಲವೋ ಅಥವಾ ತೊಂದರೆ ಕೊಡುತ್ತಾನೋ ಅವನನ್ನು ಈ ನರಕದಲ್ಲಿ ಶಿಕ್ಷೆಗೆ ಒಳಪಡಿಸಲಾಗುತ್ತದೆ. ಅವನ ತಲೆಯನ್ನು ಕ್ಷಾರ, ಲವಣ, ಕೊಳಕು ಮಣ್ಣು ಮತ್ತು ಇತರ ಕಲೀಜುಗಳಿರುವುದರಲ್ಲಿ ಮುಳುಗಿಸಲಾಗುತ್ತದೆ.

ರಾಕ್ಷೋಗಣ ಭೋಜನ

ನರಬಲಿಯನ್ನು ಕೊಡುವವರು, ನರಮಾಂಸ ಭಕ್ಷಕರು ಈ ನರಕಕ್ಕೆ ಬರುತ್ತಾರೆ. ಈ ನರಕದಲ್ಲಿರುವ ರಾಕ್ಷಸರು ಪಾಪಿಗಳನ್ನು ಚಾಕು ಮತ್ತು ಚೂರಿಗಳಿಂದ ಕತ್ತರಿಸುತ್ತಾರೆ. ಅಲ್ಲದೇ ಅವರ ರಕ್ತವನ್ನು ಕುಡಿಯುತ್ತಾ, ಹಾಡುತ್ತಾ, ಕುಣಿಯುತ್ತಾ ಪಾಪಿಗಳು ತಾವು ಹೇಗೆ ತಮಗೆ ಬಲಿಪಶುಗಳಾದವರನ್ನು ಕೊಂದು ತಿಂದರೋ ಅಂತೆಯೇ ಇಲ್ಲಿಯೂ ಆಗುತ್ತದೆ.

ಶೂಲಪ್ರೋತ

ಕೆಲವು ಜನರು ಪ್ರಾಣಿ ಮತ್ತು ಪಕ್ಷಿಗಳನ್ನು ರಕ್ಷಿಸುವಂತೆ ಅವುಗಳನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುತ್ತಾರೆ. ಆದರೆ ದಾರ ಮತ್ತು ಸೂಜಿಗಳಿಂದ ಚುಚ್ಚುವುದು, ಕಟ್ಟುವುದು ಇತ್ಯಾದಿಗಳನ್ನು ಮಾಡುತ್ತಾ ಅವುಗಳನ್ನು ನಿರ್ಜೀವ ಗೊಂಬೆಗಳಂತೆ ಬಳಸುತ್ತಾ ಹಿಂಸೆ ಕೊಡುತ್ತಾರೆ. ಅದೇರೀತಿ ಕೆಲವರು ಮನುಷ್ಯರ ಜೊತೆಗೂ ಹಾಗೆಯೇ ವರ್ತಿಸುತ್ತಾರೆ. ಮನುಷ್ಯರ ವಿಶ್ವಾಸವನ್ನು ಗೆದ್ದನಂತರ ಅವರನ್ನು ಹಿಂಸೆಗೆ ಗುರಿ ಮಾಡುತ್ತಾರೆ ಮತ್ತು ಕೊಲ್ಲುತ್ತಾರೆ. ಅಂತಹ ಜನರನ್ನು ಈ ನರಕಕ್ಕೆ ತರಲಾಗುತ್ತದೆ. ಇಲ್ಲಿ ಅವರು ಹಸಿವು ಮತ್ತು ದಾಹದಿಂದ ನರಳುತ್ತಿರುವಾಗ ಮೊನಚಾಗಿರುವ ಈಟಿ, ಶೂಲ ಇತ್ಯಾದಿಗಳಿಂದ ತಿವಿಯುತ್ತಿರುತ್ತಾರೆ. ಭಯಾನಕ ಮತ್ತು ಕ್ರೂರ ಮಾಂಸಾಹಾರಿ ಪಕ್ಷಿಗಳಾದ ಹದ್ದು, ರಣಹದ್ದುಗಳು ಇವರನ್ನು ಕುಕ್ಕಿ, ಕುಕ್ಕಿ, ಹರಿಯುತ್ತವೆ.

ದಂಡಸೂಕ (ಸರ್ಪಗಳು)


ಹೊಟ್ಟೆಕಿಚ್ಚು, ಅಸೂಯೆ ಇತ್ಯಾದಿಗಳಿಂದ ಕೂಡಿರುವ ಜನರು ಇತರರನ್ನು ಸರ್ಪದಂತೆ ಕಾಡುತ್ತಿರುತ್ತಾರೆ. ಅವರ ಹಣೆಬರಹ ಇಲ್ಲಿಗೆ ಬರುವುದು. ಇಲ್ಲಿ ಐದು, ಏಳು ಮತ್ತು ವಿವಿಧ ಸಂಖ್ಯೆಗಳ ತಲೆಗಳುಳ್ಳ ಸರ್ಪಗಳು ಅವರನ್ನು ಕಚ್ಚುವವು, ನುಂಗುವವು; ಇತರೇ ರೀತಿಗಳಲ್ಲಿ ಬಾಧೆಗೊಳಮಾಡುವವು.


ಅವತ ನಿರೋಧನ

ಯಾರು ಇತರರನ್ನು ಕತ್ತಲೆಯ ಬಾವಿಗಳಲ್ಲಿ, ಬಂದಿಖಾನೆಗಳಲ್ಲಿ, ಸುರಂಗಗಳಲ್ಲಿ, ಬೆಟ್ಟಗಳ ಗವಿಗಳಲ್ಲಿ ಬಂಧಿಸುತ್ತಾರೋ ಅವರನ್ನು ಈ ನರಕಕ್ಕೆ ತಳ್ಳಲಾಗುತ್ತದೆ. ಈ ನರಕದಲ್ಲಿ ವಿಷಕಾರಿ ಜ್ವಾಲೆಗಳು, ಹೊಗೆ ಉಸಿರುಗಟ್ಟಿಸುತ್ತಿರುತ್ತವೆ.

ಪರ್ಯಾವರ್ತನ

ಮನೆಗೆ ಬಂದ ಅತಿಥಿಯ ಕಡೆಗೆ ಅನಾದರದ ಮತ್ತು ಕ್ರೂರವಾದ ದೃಷ್ಟಿಯನ್ನು ಬೀರುತ್ತಾನೋ, ಬಂದವರನ್ನು ಅಪಮಾನಿಸುತ್ತಾನೋ ಅವನು ಈ ನರಕಕ್ಕೆ ಹೋಗಬೇಕಾಗುತ್ತದೆ. ಕ್ರೂರ ಕಣ್ಣುಗಳ ರಣಹದ್ದುಗಳು, ಹದ್ದುಗಳು, ಕಾಗೆಗಳು, ಅಂತಹವೇ ಇತರ ಕ್ರೂರಪಕ್ಷಿಗಳು





ಇವನನ್ನೂ ಕೆಕ್ಕರಿಸಿಕೊಂಡು ನೋಡುತ್ತಿರುತ್ತವೆ. ಇದ್ದಕ್ಕಿದ್ದಂತೆ ಹಾರಿ ಬಂದು ಪಟಕ್ಕನೆ ಕಣ್ಣುಗಳನ್ನು ಕಿತ್ತುಕೊಂಡು ಹೋಗುತ್ತವೆ.

ಸೂಚಿಮುಖ

ಕೆಲವರು ಯಾವಾಗಲೂ ಆಸೆಬುರುಕತನದಿಂದ ಅನುಮಾನಾಸ್ಪದವಾಗಿ ಇತರ ಜನರ ಸಂಪತ್ತನ್ನು ಕಸಿದುಕೊಳ್ಳಲು ನೋಡುತ್ತಿರುತ್ತಾರೆ. ಜೊತೆಗೆ ತನ್ನದೇ ಸಂಪತ್ತಿನ ಬಗ್ಗೆ ದುರಹಂಕಾರವಾಗಿರುತ್ತಾನೆ. ಗಳಿಸಿಕೊಂಡ ಸಂಪತ್ತನ್ನು ತನ್ನೊಬ್ಬನಿಗೇ ಇಟ್ಟುಕೊಂಡಿರುತ್ತಾನೆ. ಅವನನ್ನು ಯಮದೂತರು ಈ ವಿಭಾಗದಲ್ಲಿ ಮೈಯೆಲ್ಲಾ ಹರಿದು ಹೊಲಿಯುತ್ತಿರುತ್ತಾರೆ.

ವಿಷ್ಣುಪುರಾಣದಲ್ಲಿ ಇಪ್ಪತ್ತೆಂಟು ಪುರಾಣಗಳ ಬಗ್ಗೆ ಹೇಳಿದ್ದರೂ ಇಪ್ಪತ್ತೊಂದು ನರಕಗಳ ಬಗ್ಗೆ ಅಷ್ಟೊಂದು ವಿವರಗಳನ್ನು ಕೊಡುವುದಿಲ್ಲ. ಭಾಗವತ ಪುರಾಣ ಮತ್ತು ದೇವಿ ಭಾಗವತ ಪುರಾಣಗಳಲ್ಲಿ ಉಲ್ಲೇಖವಾಗದಿರುವ ನರಕಗಳಿವು.

ರೋಧ: ಗರ್ಭಪಾತ ಮಾಡಿಸುವವನು, ಹಸುವನ್ನು ಕೊಲ್ಲುವವನು ಈ ನರಕಕ್ಕೆ ಬರಬೇಕಾಗುತ್ತದೆ.

ಸೂಕರ: ಬ್ರಾಹ್ಮಣನನ್ನು ಕೊಂದವನು. ಚಿನ್ನಾಭರಣಗಳನ್ನು ಕದ್ದವನು, ಕುಡುಕ (ಮದ್ಯವ್ಯಸನಿ) ಈ ನರಕಕ್ಕೆ.

ತಾಲ: ಕ್ಷತ್ರಿಯ ಮತ್ತು ವೈಶ್ಯರನ್ನು ಕೊಲ್ಲುವವನು. ಗುರುಪತ್ನಿ ಅಥವಾ ಧಾರ್ಮಿಕ ವ್ಯಕ್ತಿಯ (ನಾಯಕನ) ಹೆಂಡತಿಯೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿರುವವನು ಈ ನರಕಕ್ಕೆ.

ತಪ್ತಕುಂಭ (ಬಿಸಿ ಮಡಿಕೆಗಳು): ಸೋದರಿಯೊಂದಿಗೆ ಅಕ್ರಮವಾಗಿ ಸೇರುವವನು ಮತ್ತು ರಾಯಭಾರಿಯನ್ನು ಕೊಲ್ಲುವವನನ್ನು ಇಲ್ಲಿ ಶಿಕ್ಷಿಸಲಾಗುತ್ತದೆ.

ತಪ್ತಲೋಹ: ಹೆಂಡತಿಯನ್ನು ಮಾರುವವನು, ಬಂದಿಖಾನೆಯ ಅಧಿಕಾರಿ, ತನ್ನವರನ್ನು ತ್ಯಜಿಸುವವನು ಇಲ್ಲಿ ಶಿಕ್ಷೆಗೊಳಗಾಗುತ್ತಾನೆ.

ಮಹಾಜ್ವಾಲಾ: ಮಗಳು ಅಥವಾ ಸೊಸೆಯೊಡನೆ ಅಕ್ರಮ ಸಂಬಂಧವಿರಿಸಿಕೊಳ್ಳುವವನು ಇಲ್ಲಿಗೆ.

ಲವಣ: ತನಗಿಂತ ವೇದಗಳಲ್ಲಿ ಪಾರಂಗತನಾಗಿರುವಂತಹ ಗುರುವನ್ನು ಅಪಮಾನಿಸುತ್ತಾನೋ ಅಥವಾ ಇತರ ವಿದ್ವಜ್ಜನರನ್ನು ತೊಂದರೆಗೊಳಗಾಗುವಂತೆ ಮುಖಭಂಗ ಮಾಡುತ್ತಾನೋ ಅವನು ಈ ನರಕಕ್ಕೆ ಬರಬೇಕು.

ವಿಮೋಹನ: ಕಳ್ಳ ಅಥವಾ ಇತರರಿಗಾಗಿ ಮೀಸಲಿಟ್ಟಿರುವುದನ್ನು ತಾನು ಕದ್ದು ಭೋಗಿಸುವನೋ ಅವನು ಇಲ್ಲಿಗೆ ಬರುತ್ತಾನೆ.

ಕ್ರಿಮಿಶ: ಮಾಂತ್ರಿಕ ಶಕ್ತಿ ಅಥವಾ ಇಂದ್ರಜಾಲವನ್ನು ಕಲಿತು ಇತರರಿಗೆ ತೊಂದರೆಯನ್ನು ಉಂಟುಮಾಡುತ್ತಾನೋ ಅವನು ಈ ಕ್ರಿಮಿಗಳ ನರಕದಲ್ಲಿ ಶಿಕ್ಷೆ ಅನುಭವಿಸಬೇಕು.

ವೇಧಕ: ಬಾಣಗಳನ್ನು ಮಾಡುವವನು ಈ ನರಕಕ್ಕೆ ಬರುತ್ತಾನೆ.

ಅಧೋಮುಖ: ಲಂಚ ತೆಗೆದುಕೊಳ್ಳುವವನು, ಅನರ್ಹವಸ್ತುಗಳನ್ನು ಪೂಜಿಸುವ ಜ್ಯೋತಿಷಿಗಳು ಈ ನರಕಕ್ಕೆ ಬರುತ್ತಾರೆ.

ಪೂಯವಾಹ: ಮಾಂಸ, ಮದ್ಯ, ಉಪ್ಪು ಮಾರುವ ಬ್ರಾಹ್ಮಣ, ಹಿಂಸೆ ಕೊಡುವವನು, ಸಿಹಿ ತಿಂಡಿಗಳನ್ನು ಹಂಚಿಕೊಳ್ಳದೇ ತಿನ್ನುವವನು ಈ ನರಕಕ್ಕೆ ಬರುತ್ತಾನೆ.

ರುಧಿರಾಂಧ: ಮನರಂಜನೆಯ ಹೆಸರಿನಲ್ಲಿ ಹಿಂಸೆಯನ್ನು ಮಾಡುವಂತಹ ಜಟ್ಟಿಗಳು, ಮಲ್ಲಯುದ್ಧ ಪಟುಗಳು, ಮೀನು ಹಿಡಿಯುವವರು, ದಿಕ್ಕು ದೆಸೆಯಿಲ್ಲದವರನ್ನು ಅನುಸರಿಸುವವರು, ಮನೆಮುರುಕರು, ವಿಷಯವನ್ನು ಒಬ್ಬರಿಂದೊಬ್ಬರಿಗೆ ನಕಾರಾತ್ಮಕವಾಗಿ ಹೇಳುತ್ತಾ ಜಗಳ ತಂದಿಡುವವರು, ಕಳ್ಳರು, ಮೋಸಗಾರರು, ವಿಶ್ವಾಸದ್ರೋಹಿಗಳು, ಭವಿಷ್ಯ ಹೇಳುವವರು, ತಮ್ಮ ಹೆಂಡತಿಯನ್ನು ಬಿಟ್ಟು ವೇಶ್ಯಾಗೃಹದಲ್ಲಿ ಜೀವಿಸುವವರು; ಇವರಿಗೆಲ್ಲರಿಗೂ ಈ ನರಕವೇ ಗತಿ.



ಕೃಷ್ಣ: ಮೋಸಗಾರರು, ಅತಿಕ್ರಮಣ ಮಾಡುವವರು, ಇತರರನ್ನು ನಿರ್ವೀರ್ಯರನ್ನಾಗಿ ಮಾಡುವವರು ಈ ನರಕಕ್ಕೆ.

ವಹ್ನಿಜ್ವಾಲ: ಮಡಿಕೆ ಮಾಡುವವರನ್ನು, ಬೇಟೆಗಾರರನ್ನು, ಕುರಿಕಾಯುವವರ ತಪ್ಪಿನ ಶಿಕ್ಷೆಗಳಿಗೆ ಈ ನರಕ.

ಶ್ವಭೋಜನ: ಧಾರ್ಮಿಕ ವಿದ್ಯಾರ್ಥಿ ಹಗಲೆಲ್ಲಾ ನಿದ್ರೆ ಮಾಡಿದರೆ, ಆಧ್ಯಾತ್ಮಿಕ ಜ್ಞಾನವಿಲ್ಲದೇ ಅದನ್ನು ಸರಿಯಾದವರಿಂದಲ್ಲದೇ ಮಕ್ಕಳಿಂದ ಕಲಿಯುವಂತವನು ಈ ನರಕಕ್ಕೆ ಬರುತ್ತಾನೆ.

ನರಕಗಳು ನಿಜವಲ್ಲ, ಆದರೆ, ಈ ನರಕಗಳು ಎಷ್ಟು ಸುಳ್ಳು, ಎಂತಹ ಕಪೋಲಕಲ್ಪಿತವಾದವು ಎಂದು ಹೇಳುವುದಕ್ಕಿಂತ ಮುಖ್ಯವಾಗಿ ಒಂದು ವಿಷಯ ಗಮನಕ್ಕೆ ಬರುತ್ತದೆ. ಆಗಿನ ಸಾಮಾಜಿಕ ಪರಿಸ್ಥಿತಿಗಳು ಹೇಗಿದ್ದವು. ಜನರು ಎಂತೆಂತಹ ಸಮಸ್ಯೆಗಳಿಂದ, ದಬ್ಬಾಳಿಕೆಗಳಿಂದ, ಅಪರಾಧಗಳಿಂದ ನರಳುತ್ತಿದ್ದರು ಎಂದರ್ಥವಾಗುತ್ತದೆ. ಇನ್ನೂ ಮುಖ್ಯವಾಗಿ ಈ ನರಕದ ಪರಿಕಲ್ಪನೆಯೇ ನೊಂದವರ್ಯಾರೋ ಅಥವಾ ತಾವಿರುವ ಸಮಾಜದಲ್ಲಿ ಆಗುತ್ತಿರುವಂತಹ ವಿದ್ಯಮಾನಗಳನ್ನು ನೋಡಿ ಸಂಕಟಪಡುತ್ತಿದ್ದವರ ಹತಾಶ ಅಭಿವ್ಯಕ್ತಿ ಎಂದೆನಿಸುತ್ತದೆ. ಆಗಿನ ಪ್ರಭುತ್ವವೂ ಇಂತಹ ಅಪರಾಧಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿತ್ತು ಎಂದು ತೋರುತ್ತದೆ. ಜೊತೆಗೆ ಪ್ರಭುತ್ವದಲ್ಲಿರುವ ಅಧಿಕಾರಿಗಳೇ, ಅಧಿಕಾರವನ್ನು ದುರುಪಯೋಗಿಸಿಕೊಂಡು ಜನರನ್ನು ಶೋಷಿಸುತ್ತಿದ್ದರು ಮತ್ತು ಹಿಂಸಿಸುತ್ತಿದ್ದರು ಎಂದೂ ಸ್ಪಷ್ಟವಾಗುತ್ತದೆ ಮತ್ತೂ ಕೆಲವು ವ್ಯಕ್ತಿಗತ ಅಥವಾ ವೈಯಕ್ತಿಕ ಅಪರಾಧಗಳು ಕಾನೂನಿನ ಮತ್ತು ಪ್ರಭುತ್ವದ ವಿಚಾರಣೆ ಮತ್ತು ಶಿಕ್ಷೆಗಳನ್ನು ಮೀರಿ ವಿಜೃಂಭಿಸುತ್ತಿದ್ದುದರಿಂದ ಇಂತಹ ನರಕದ ಕಲ್ಪನೆಗಳು ಸೃಷ್ಟಿಯಾಗಿವೆ. ಹೆದರಿಸಿಯಾದರೂ ವ್ಯಕ್ತಿಗಳನ್ನು ನೈತಿಕವಾಗಿ ಹದ್ದುಬಸ್ತಿನಲ್ಲಿಡುವ ಪ್ರಯತ್ನ ಇವಾಗಿದ್ದವು.

ಯಾವ ಯಾವ ತಪ್ಪುಗಳಿಗೆ, ಪಾಪಗಳಿಗೆ ನರಕಗಳು ಎಂಬುದನ್ನು ನೋಡಿದರೆ, ಆ ಅಪರಾಧಗಳು, ಆ ಬಗೆಯ ವಿದ್ಯಮಾನಗಳು ಆಗ ಪ್ರಚಲಿತದಲ್ಲಿದ್ದು ಅವುಗಳನ್ನು ವ್ಯವಸ್ಥೆಯ ಮೂಲಕವಾಗಲಿ, ಇನ್ನಾವುದೇ ಸಾಂಸ್ಥಿಕ ಶಕ್ತಿಯ ಮೂಲಕವಾಗಲಿ ಪರಿಹರಿಸಲು ಸಾಧ್ಯವಿಲ್ಲದೇ ಹೋಗಿರುವಾಗ ಹತಾಶ ಮನಸ್ಥಿತಿಗಳು ರೂಪಿಸಿಕೊಂಡಿರುವ ನರಕಗಳು ಕೊಂಚ ಕೆಲಸ ಮಾಡಿರಲೂಬಹುದು.

ಆಗ ಕಾಲ ಚೆನ್ನಾಗಿತ್ತು, ಈಗ ಕಾಲ ಕೆಟ್ಟುಹೋಗಿದೆ ಎಂದು ಹೇಳುವ ಜನರು ಇದನ್ನು ಗಮನಿಸಬೇಕು. ಯಾವ ಕಾಲದಲ್ಲೂ ಅಕ್ರಮ ಸಂಬಂಧಗಳು, ಮೋಸಗಳು, ಭ್ರಷ್ಟಾಚಾರಗಳು, ಹಿಂಸೆ ಅನ್ಯಾಯಗಳು ನಡೆಯುತ್ತಲೇ ಇವೆ. ಅವುಗಳ ಪ್ರಮಾಣವು ಜನಸಂಖ್ಯಾಧಾರಿತವಾಗಿ ಹೆಚ್ಚೂ ಕಡಿಮೆಗಳಾಗಿರುತ್ತವೆಯೇ ಹೊರತು ಆಗಿಲ್ಲದ್ದು ಈಗ ಯಾವುದೂ ಹೊಸದಾಗಿ ಹುಟ್ಟಿಲ್ಲ, ಜನರು ಕೆಟ್ಟು ಹೋಗಿದ್ದಾರೆಂದೇನಿಲ್ಲ.


ವಿಜಯನಗರದಲ್ಲಿ ಮುತ್ತು ರತ್ನಗಳನ್ನು ಸಂತೆಗಳಲ್ಲಿ ಸೇರುಗಳಲ್ಲಿ ಅಳೆಯುವಂತೆ ರಾಶಿ ಹಾಕಿಕೊಂಡು ಮಾರುವಷ್ಟು ಸುಭಿಕ್ಷವಾಗಿತ್ತು ಎನ್ನುವಾಗ ಅಲ್ಲಿ ಕಳ್ಳರನ್ನು ಬಂಧಿಸಿಡಲು ಬಂದೀಖಾನೆಗಳೇಕಿವೆ ಎಂದು ಕೇಳಬೇಕಾಗುತ್ತದೆ. ಅದರಂತೆ ಆಗಿನ ಕಾಲದವರು ಒಳ್ಳೆಯವರು, ಈಗಿನ ಜನರು ಅಕ್ರಮ ಸಂಬಂಧಗಳಿಗೆ ಹೋಗುವವರು, ಅನ್ಯಾಯ, ಭ್ರಷ್ಟಾಚಾರಗಳನ್ನು, ಕೊಲೆ, ಸುಲಿಗೆಗಳನ್ನು ಮಾಡುವವರು ಎಂದಾದರೆ ಈ ನರಕದ ಪರಿಕಲ್ಪನೆಗಳೇಕೆ ಸೃಷ್ಟಿಯಾದವು?

ವಿವಿಧ ಶಿಕ್ಷೆಗಳಿಗೆ ಒಳಗಾಗುವ ಕಾರಣಗಳನ್ನು ಗಮನಿಸಿದರೆ, ಆ ಸಮಯಗಳಲ್ಲಿ ನಡೆಯುತ್ತಿದ್ದ ಅನ್ಯಾಯ ಅಕ್ರಮಗಳು ಸ್ಪಷ್ಟವಾಗಿ ತಿಳಿಯುತ್ತವೆ. ಎಂತೆಂತಹ ಜನರಿದ್ದರು ಎಂದು ತಿಳಿಯುತ್ತದೆ. ಎಂತೆಂತಹ ಅನ್ಯಾಯಗಳಿಗೆ ಒಳಗಾಗುತ್ತಿದ್ದರು ಎಂದೂ ತಿಳಿಯುತ್ತದೆ. ಅಂತೆಯೇ ಅವರಿಗೆ ಸೂಕ್ತ ರಕ್ಷಣೆ ಇಲ್ಲದೇ ಇದ್ದದ್ದೂ ಸ್ವಯಂ ಪ್ರಭುತ್ವದ ಅಧಿಕಾರಿಗಳು ಮತ್ತು ಇತರ ಆಯಕಟ್ಟಿನಲ್ಲಿರುವವರು ಕೂಡ ಜನರನ್ನು ಹಿಂಸೆ ಮಾಡುತ್ತಿದ್ದರು, ದಬ್ಬಾಳಿಕೆ ಮಾಡುತ್ತಿದ್ದರು ಎಂದೂ ತಿಳಿಯುತ್ತದೆ.

ಅಸಹಾಯಕತೆ ಮತ್ತು ಹತಾಶೆಯ ಸಂಕಟದ ಮತ್ತೊಂದು ಮುಖವೇ ನರಕದ ಕಲ್ಪನೆ.

ಮನುಷ್ಯನ ದೇಹವು ಇಲ್ಲಿ ಮಣ್ಣಾದ ಮೇಲೆ ಅಥವಾ ಸುಟ್ಟು ಬೂದಿಯಾದ ಮೇಲೆ ನರಕದಲ್ಲಿ ಯಾವ ಶರೀರವಿರುತ್ತದೆ ಶಿಕ್ಷೆಗೊಳಗಾಗಲು? ಸೂಕ್ಷ್ಮ ಶರೀರದ ಬಗ್ಗೆ ಯಾರಾದರೂ ಉಲ್ಲೇಖಿಸಿ ಇದನ್ನು ಸಮರ್ಥಿಸಿಕೊಳ್ಳಲು ಬಂದರೆ, ಸೂಕ್ಷ್ಮ ಶರೀರಕ್ಕೆ ರಕ್ತಮಾಂಸವೆಲ್ಲಿರುತ್ತದೆ. ನಾವು ಪಟ್ಟ ಸಂಕಟಗಳು, ನಮ್ಮವರು ಅನುಭವಿಸಿದ ನೋವುಗಳು ನಮಗೆ ತೊಂದರೆ ಕೊಟ್ಟವರಿಗೂ ಆಗಲಿ ಎಂಬ ಶಾಪವೇ. ಹೊಟ್ಟೆಯ ಉರಿಯ ಅಭಿವ್ಯಕ್ತಿಯೇ ನರಕ. ನರಕಗಳು ನಿಜವಲ್ಲ, ನಿಜ. ಆದರೆ ಅಂತಹ ಮಾನಸಿಕ ಯಾತನೆಗಳು ಸುಳ್ಳಲ್ಲ.


ಬಾಳಿಗಾ ಪ್ರಕರಣ ನಾಚಿಕೆಗೇಡಿನ ಬೆಳವಣಿಗೆಗಳು



ಇತ್ತೀಚೆಗೆ ಘಟಿಸಿದ ಮಾಹಿತಿ ಹಕ್ಕು ಕಾರ್ಯಕರ್ತ ವಿನಾಯಕ ಬಾಳಿಗಾರ ಹತ್ಯೆ ಪ್ರಕರಣ ಇದೀಗ ಮುಖ್ಯ ವಿಚಾರವನ್ನು ಬಿಟ್ಟು ಯಾವುಯಾವುದೋ ಹೊಸ ತಿರುವುಗಳನ್ನು ಪಡೆದುಕೊಳ್ಳತೊಡಗಿದೆ. ನ್ಯಾಯಕ್ಕಾಗಿ ಹೋರಾಡಿ ಹತ್ಯೆಗೊಳಗಾದ ವ್ಯಕ್ತಿಯ ಅನಾಥ ಕುಟುಂಬದ ಕುರಿತಾಗಿ ಹೆಚ್ಚು ಯೋಚಿಸುವ ಬದಲು ಅಡಗಿ ಕುಳಿತ ಕೊಲೆಗಾರನ ಅಜ್ಞಾತಸ್ಥಿತಿಯೇ ಕೆಲವರಿಗೆ ಕರುಣಾಜನಕವಾಗಿ ತೋರುತ್ತಿದೆಯಂತೆ. ಅಂದರೆ, ವೃದ್ಧ ತಂದೆತಾಯಿಯರು ಹಾಗು ಅವಿವಾಹಿತ ಸಹೋದರಿಯರ ಕುಟುಂಬದ ಏಕೈಕ ಅಗತ್ಯ ಆಧಾರ ಸ್ತಂಭವಾಗಿದ್ದ ವಿನಾಯಕ ಬಾಳಿಗಾರ ಕುಟುಂಬಕ್ಕಿಂತ ಕುತಂತ್ರಿ ಹಂತಕ ಪಡೆಯ ಯಜಮಾನನ ರಕ್ಷಣೆಯೇ ತಮ್ಮ ಧ್ಯೇಯ ಎಂಬಂತೆ ಕೆಲ "ಹಿತರಕ್ಷಕ"ರು ಫೀಲ್ಡಿಗಿಳಿಯುತ್ತಿರುವುದು ತೀರಾ ನಾಚಿಕೆಗೇಡಿನ ಸಂಗತಿ ಎಂದು ಕರಾವಳಿಯ ಜನರೇ ಈಗ ಆಡಿಕೊಳ್ಳುವಂತಾಗಿದೆ. ತಮ್ಮದೇ ಸಮುದಾಯದ ನತದೃಷ್ಟ ವಿನಾಯಕ ಬಾಳಿಗಾರ ಪರನಿಂತು ಬದುಕಿನ ಮುಸ್ಸಂಜೆಯಲ್ಲಿರುವ ಬಾಳಿಗಾರವರ ಹೆತ್ತವರಿಗೆ ನ್ಯಾಯ ಒದಗಿಸುವ ಬದಲು ತಿಂಗಳುಗಳ ಕಾಲ ಎಲ್ಲೋ ಅಡಗಿ ಕುಳಿತಿರುವ ಕರಾವಳಿಯ ಕ್ರಿಮಿನಲ್ ಮೈಂಡ್ ನರೇಶ್ ಶೆಣೈ ಎನ್ನುವವನ ಪರ ಕೆಲವರು ವಕಾಲತ್ತಿಗಿಳಿದಿರುವುದಲ್ಲದೇ ಈ ಬಗೆಗೆ ಬೇರೆಬೇರೆ ರೀತಿಯ ಪತ್ರಿಕಾ ಪ್ರಕಟಣೆಗಳೂ ಕೂಡ ಹೊರಬರುತ್ತಿವೆ.

ವಿನಾಯಕ ಬಾಳಿಗಾ ಮೂಲತಃ ಧೈರ್ಯದ ಆಸಾಮಿ. ಇಲ್ಲವಾದಲ್ಲಿ ಅವರು ಮಂಗಳೂರಿನ ಬಲಾಢ್ಯ ಕುಳಗಳ ಬುಡಕ್ಕೆ ಕೈಹಾಕುವಂತಹ ದುಸ್ಸಾಹಸಕ್ಕೆ ಖಂಡಿತ ಹೋಗುತ್ತಿರಲಿಲ್ಲ. ಆದರೆ ತಯಾರಿಲ್ಲದ ಅಥವ ನಿರಾಯುಧನಾದ ಸ್ಥಿತಿಯಲ್ಲಿ ನಡೆಯುವ ದಾಳಿಗೂ ಧೈರ್ಯಕ್ಕೂ ತಾಕತ್ತಿಗೂ ಯಾವ ಸಂಬಂಧವೂ ಇರುವುದಿಲ್ಲ ತಾನೇ (ಅಂಥಾ ಬಲಾಢ್ಯ ಹೌದಿನಿ ಎಸ್ಕೇಪ್ ಖ್ಯಾತಿಯ ಹ್ಯಾರಿ ಹೌದಿನಿಯ ಸಾವಿಗೆ ಕಾರಣನಾದಂತವನು ಚಿಕ್ಕ ಹುಡುಗ). ಬೆಳ್ಳಂಬೆಳಗ್ಗೆ ಯಾವ ಅಪಾಯದ ಮುನ್ಸೂಚನೆಯೂ ಇಲ್ಲದೇ ಒಂಟಿಯಾಗಿ ಹೊರಟ ಬಾಳಿಗಾರರನ್ನು ದುಷ್ಕರ್ಮಿಗಳು ಅನಾಯಾಸವಾಗಿ ಅವತ್ತು ಕೊಂದಿದ್ದರು. ಬಾಳಿಗಾರ ಹತ್ಯೆಗೆ ಕಾರಣ ಯಾರೆಂಬುದು ಮಂಗಳೂರಿನ ಮಂದಿಗೆ ಗೊತ್ತಿದ್ದ ವಿಚಾರವೇ. ಇದನ್ನು ದಿಕ್ಕು ತಪ್ಪಿಸುವಂತಹ ಕೆಲಸವೂ ನಂತರ ವ್ಯವಸ್ಥಿತವಾಗಿ ನಡೆಯಿತು. ಸಾಮಾಜಿಕ ಜಾಲತಾಣಗಳಲ್ಲಿ ಶೆಣೈನ ಚೇಲಾಗಳು ಇದಕ್ಕಾಗಿ ಸಾಕಷ್ಟು ಪ್ರಯತ್ನ ಪಟ್ಟವು. ಬಾಳಿಗಾರ ವೃದ್ಧ ತಂದೆಯೆದುರು ಬಂದಂತಹ ಐವತ್ತು ಲಕ್ಷದ ಆಮಿಷವನ್ನು ತನ್ನ ಮಗನ ಸ್ವಾಭಿಮಾನದ ಗೌರವಕ್ಕಾಗಿ ಆ ಹಿರಿಯರು ಉಗಿದು ತಿರಸ್ಕರಿಸಿದ್ದರು. ವಿನಾಯಕ ಬಾಳಿಗಾರ ಆರ್‌ಟಿಐ ಹೆಸರಲ್ಲಿ ರೋಲ್‌ಕಾಲ್ ಮಾಡುತ್ತಿದ್ದ ಎಂದೂ ಸುದ್ದಿ ಹಬ್ಬಿಸಲಾಯಿತಾದರೂ ಇದು ನಿಜಕ್ಕೂ ಸತ್ಯವೇ ಆಗಿದ್ದಲ್ಲಿ ಬಾಳಿಗಾ ಕುಟುಂಬ ಕೋಟಿಕೋಟಿಯಲ್ಲಿ ತೂಗಿರುತ್ತಿತ್ತೇ ವಿನಃ ಅನಾಥರಂತೆ ಬದುಕು ನಡೆಸುತ್ತಿದ್ದಿರಲಿಲ್ಲ ಎಂಬ ಹಕೀಕತ್ತು ಮಂಗಳೂರಿಗರಿಗೆ ಗೊತ್ತಿದ್ದ ಕಾರಣ ಕುತಂತ್ರಿಗಳು ನಡೆಸಿದ ಆ ಅಪಪ್ರಚಾರವೂ ನಡೆಯಲಿಲ್ಲ.

ಈ ವಿಚಾರದಲ್ಲಿ ಸ್ವತಃ ಜಿಎಸ್‌ಬಿ ಸಮುದಾಯದವರೇ ಆದ ವಿಚಾರವಾದಿ ನರೇಂದ್ರ ನಾಯಕ್ ಅವರು ಆರಂಭದಿಂದಲೂ ಹಂತಕರ ವಿರುದ್ಧ ಧ್ವನಿ ಎತ್ತಿರುವುದು ಅನೇಕರ ಕಣ್ಣನ್ನು ಕೆಂಪಾಗಿಸಿತ್ತು, ಅನೇಕರು ಬೇರೆಬೇರೆ ರೀತಿಯ ಬೆದರಿಕೆಗಳನ್ನು ಒಡ್ಡುತ್ತಿದ್ದರೂ ಜೀವಮಾನವಿಡೀ



ಇಂತವನ್ನು ಬಹಳಷ್ಟು ನೋಡಿದ್ದ ನರೇಂದ್ರ ನಾಯಕರು ಅವುಗಳಿಂದ ವಿಚಲಿತರಾಗದೇ ಇನ್ನೂ ಕೂಡ ಮುನ್ನಡೆಯುತ್ತಿದ್ದಾರೆ. ಆದರೂ ಇತ್ತೀಚೆಗೆ ಜಿಎಸ್‌ಬಿ ಸಮುದಾಯದವನೇ ಆದ ಶಶಾಂಕ್ ಶೆಣೈ ಎಂಬಾತ ಫೇಸ್‌ಬುಕ್ ಮೂಲಕ ಈ ಹಿರಿಯ ಹೋರಾಟಗಾರನಿಗೆ ಜೀವ ಬೆದರಿಕೆಯನ್ನು ಒಡ್ಡಿದ್ದಾನೆ. ಇವನ್ನೆಲ್ಲ ಕಡೆಗಣಿಸುವಂತೆ ಖಂಡಿತ ಇಲ್ಲ ಯಾಕೆಂದರೆ, ಕಲ್ಬುರ್ಗಿ-ಧಾಬೋಲ್ಕರ್ ಅವರನ್ನು ಹತ್ಯೆ ಮಾಡಿದಂತಹ "ಪಳಗಿದ" ಸನಾತನ ಸಂಸ್ಥೆಯಂತವುಗಳ ಸ್ಥಳೀಯ ಪೋಷಕರು ಇದೇ ಜಿಎಸ್ಬಿಗಳೇ ಎನ್ನುವುದು ಗಮನಾರ್ಹವಾದಂತಹ ವಿಚಾರ.

ಕಳೆದ ತಿಂಗಳು ಕೆಲ ಕಾರ್ಯಕ್ರಮಗಳನ್ನು ಉದ್ಘಾಟಿಸಲು ಕರಾವಳಿಗೆ ಬಂದಂತಹ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮಂಗಳೂರಿನಲ್ಲಿ ಕೊಂಕಣಿ ಮ್ಯೂಸಿಯಮ್ ಒಂದನ್ನು ಉದ್ಘಾಟಿಸಿ ಕೊಂಕಣಿಗರ ಸೇವೆಯನ್ನು ಸಾಂದರ್ಭಿಕವಾಗಿ ಹೊಗಳಿದ್ದರು. ಆದರೆ ಇತ್ತೀಚೆಗೆ ಸೇವಾ ಮನೋಭಾವದ ಕೊಂಕಣಿಗರಿಗಿಂತ ಇಂತಹ ನಮೋ ಹಿಂಬಾಲಕ ನರೇಶ್ ಶೆಣೈನಂತಹ ಪಠಾರಿ ವ್ಯಕ್ತಿಗಳೇ ಹೆಚ್ಚು ಸುದ್ದಿಯಾಗುತ್ತಿರುವುದು ಖೇದಕರ. ಗೋವಾದ ಕರಾವಳಿಯಲ್ಲಿ ನೂರಾರು ವರ್ಷಗಳಿಂದ ನೆಲೆನಿಂತ ಕನ್ನಡಿಗರನ್ನು ಅಮಾನುಷವಾಗಿ ಹೆಂಗಸರು ಮಕ್ಕಳೆನ್ನದೇ ಪ್ರತಿವರ್ಷ ಒಕ್ಕಲೆಬ್ಬಿಸಿ ಓಡಿಸುತ್ತಿರುವಾಗ ಇಲ್ಲಿ ಮಾತ್ರ ನಾವು ಕೊಂಕಣಿ ಅಕಾಡೆಮಿ, ಕೊಂಕಣಿ ಪಕ್ಷಕ್ಕೆ ಪ್ರಾತಿನಿಧ್ಯ, ಕೊಂಕಣಿ ಭವನ, ಬಜೆಟ್‌ನಲ್ಲಿ ಎರಡುವರೆ ಕೋಟಿ ಅನುದಾನ, ಅದು ಇದು ಅಂತ ಉಪಚಾರದಲ್ಲೇ ತೊಡಗಿದ್ದೇವೆ. ಹೋಗಲಿ ಕೊನೇಪಕ್ಷ ಹಿತರಕ್ಷಣಾ ವೇದಿಕೆಯೋ ಇನ್ನ್ಯಾವುದೋ ಸಂಘಟನೆಯೋ ಕಾಟಾಚಾರಕ್ಕಾದರೂ ಪ್ರತಿವರ್ಷ ಗೋವಾದ ಕನ್ನಡಿಗರ ಮೇಲಾಗುತ್ತಿರುವ ಅನ್ಯಾಯದ ವಿರುದ್ಧ ಖಂಡನೆಯನ್ನಾದರೂ ಮಾಡಿದೆಯಾ? ಇಷ್ಟು ಸಮಯದಿಂದ ರಾಜ್ಯ ರೈತರು ಗೋವಾ ಸರಕಾರದ ವಿರುದ್ಧ ನಡೆಸುತ್ತಿರುವ ಮಹದಾಯಿ ಕಳಸಾಬಂಡೂರಿ ಹೋರಾಟದ ಬಗ್ಗೆ ಅನ್ನದ ಋಣವಿರುವ ಈ ರಾಜ್ಯದ ಪರ ಚಕಾರವನ್ನಾದರೂ ಎತ್ತಿದೆಯಾ? ಯಾವುದೂ ಇಲ್ಲ. ಆದರೆ ಇವನ್ನೆಲ್ಲ ಮರೆತು ಕನ್ನಡಿಗರು ನೀಡುತ್ತಿರುವ ಇಂತಹ ಅತಿಯಾದ ಪ್ರೋತ್ಸಾಹಕ ವಾತಾವರಣಗಳು ನಮೋ ನರೇಶ್‌ನಂತಹ ಕ್ರಿಮಿನಲ್‌ಗಳನ್ನೇ ಹೆಚ್ಚುಹೆಚ್ಚು ಬೆಳೆಸುತ್ತಿವೆಯೆನ್ನುವುದು ಮಾತ್ರ ತುಂಬಾ ನೋವಿನ ಸಂಗತಿಯಲ್ಲದೇ ಮತ್ತಿನ್ನೇನು?

- ಓದುಗ, ಮಂಗಳೂರು


ಬ್ರಾಗಳ ಬಾಡು ಮತ್ತು ಯೋನಿಪೂಜೆ

ಮತ್ತೂರಿನ ಬ್ರಾಗಳು ಬಾಡು ತಿಂದಿರುವುದು ಸತ್ಯವೇ ಸುಳ್ಳೇ ಎಂಬ ವಿವಾದ ನಡೆದಿರುವಾಗ, ಪುರಾಣಕಾಲದಿಂದಲೂ ಬ್ರಾಗಳು ಬಾಡು ತಿನ್ನುತ್ತಿರುವ ಬಗ್ಗೆ ಐತಿಹಾಸಿಕ ದಾಖಲೆಗಳು ಹೊರಬರುತ್ತಿವೆ. ಬೃಹದಾರಣ್ಯಕ-ಉಪನಿಷತ್ ಎಂಬ ಪುರಾತನ ಗ್ರಂಥದಲ್ಲಿಯ ರಂತಿದೇವ ಎಂಬ ರಾಜನ ಕಥೆಯೇ ಇದಕ್ಕೆ ಸಾಕ್ಷಿ. ರಂತಿದೇವ ತನ್ನ ವ್ರತದ ಸಮಯದಲ್ಲಿ ದಿನಾಲೂ ನೂರಾರು ಗೋವು ಹಾಗೂ ಆಡುಗಳನ್ನು ಕಡಿದು ಅವುಗಳ ಮಾಂಸ ಬೇಯಿಸಿ ಕೇವಲ ಬ್ರಾಹ್ಮಣರಿಗೆ ಉಣಬಡಿಸುತ್ತಿದ್ದನು ಎಂದು ಈ ಗ್ರಂಥದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಇದನ್ನು ಈವರೆಗೆ ಯಾವುದೇ ವಿದ್ವಾಂಸ ನಿರಾಕರಿಸಿಲ್ಲ.



ಅದರಂತೆ ಪುತಿಯೊಂದು ವೈದಿಕ ದೇವಸ್ಥಾನದಲ್ಲಿ... ಇರುವ 'ಬಲಿಪೀಠ' ಎಂಬ ಹೆಸರಿನ ಸ್ಥಳ ಸಹ ವೈ... ದೇವಸ್ಥಾನಗಳಲ್ಲಿ ಪ್ರಾಣಿಬಲಿ ನಡೆಯುತ್ತಿತ್ತು ಎಂಬುದ... ಸೂಚಿಸುತ್ತದೆ. ದೇವರ ಎದುರಿಗೆ ಈ ಪೀಠದ ಮೇ... ಪ್ರಾಣಿಗಳ ಬಲಿ ನಡೆಯುತ್ತಿತ್ತು. ಕೆಲವರು ಪುನಃ ಶಬ್ದ... ಜಾಲ ಹೆಣೆದು ಬಲಿಪೀಠವೆಂದರೆ ಬಳಸಿಹೋಗುವ ಅಡ... ಸುತ್ತು ಹಾಕುವ ಸ್ಥಳವೆಂಬ ಅರ್ಥ ಸಂಸ್ಕೃತದಲ್ಲಿ ... ಎಂದು ಹೇಳಿ ಶೂದ್ರರ ದಾರಿ ತಪ್ಪಿಸಬಹು... ತೆಂಗಿನಕಾಯಿಯ ಜುಟ್ಟಿನ ಕೆಳಗೆ ಎರಡು ಕಣ್ಣು ಹಾ... ಒಂದು ಬಾಯಿಯ ಆಕಾರದ ಮೂರು ತೂತು ಇರು... ಹಾಗಾಗಿ ತೆಂಗಿನಕಾಯಿ ಪ್ರಾಣಿಗಳ ಕಣ್ಣು-ಬಾಯಿ-ತಲೆ... ಪ್ರತೀಕ ಎಂದು ಪರಿಗಣಿಸಿ ಪ್ರಾಣಿಬಲಿ ನಿಂತಮೇ... ಪ್ರಾಣಿಗಳ ಅಥವಾ ಮನುಷ್ಯನ ತಲೆಯ ಆಕಾರದಲ್ಲಿ... ತೆಂಗಿನಕಾಯಿಯನ್ನು ಒಡೆದು ಪ್ರಾಣಿಬಲಿಯ ... ತೀರಿಸುವ ಪದ್ಧತಿ ಶುರುವಾಯಿತಂತೆ. ಹಿಂದಿನಕಾಲ... ಕೆಲವು ಕಟ್ಟರ್ ಪಂಥಿಗಳಲ್ಲಿ ಸ್ವ-ಬಲಿ ಅರ್ಥಾತ್ ದೇವ... ಸ್ವಂತ ಪ್ರಾಣಾರ್ಪಣೆ ಮಾಡಿಕೊಳ್ಳುವ ಪ್ರಥೆಯೂ ... ಇಂತಹವರು ದೇವರಿಗೆ ಸರಿಯಾಗಿ ಎದುರು ... ಈ ಬಲಿಪೀಠದ ಮೇಲೆ ಕುಳಿತು ತಮ್ಮನ್ನು ತಾ... ಕಡಿದುಕೊಂಡು ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು... ಇವೆಲ್ಲದರ ಸಂಕೇತವಾಗಿ ಈಗ ಹೊಸದಾಗಿ ಕ...

'ಸೋಮೈಸೂರುರತ್ನ' ಮೋದಿಗೆ ಡಾಕ್ಟರೇಟ್ ಕೊಡಬೇಕು



ಕೇರಳದಲ್ಲಿಯ ತಮ್ಮ ಚುನಾವಣಾ ಭಾಷಣದಲ್ಲಿ ಪ್ರಧಾನಿ ಮೋದಿ ಒಂದು ದೊಡ್ಡ ಪ್ರಮಾದ ಮಾಡಿದ್ದಾರೆ. ಅವರು ತಮ್ಮ ಹಿಂದೂತ್ವಪರ ಭಾಷಣದಲ್ಲಿ ಕೇರಳದ ಕ್ರಾಂತಿಕಾರಿ ಸಂತ ನಾರಾಯಣ ಗುರುಗಳನ್ನು ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸಿದ ಮಹಾನ್ ಸಂತ ಎಂದು ಹೇಳಿದ್ದಾರೆ. ನಿಜವಾಗಿ ನಾರಾಯಣ ಗುರುಗಳು ವೈದಿಕ ಧರ್ಮದ ವಿರುದ್ಧ ಬಂಡಾಯವೆದ್ದು ವೈದಿಕ ವಿಧಿಗಳನ್ನೆಲ್ಲಾ ಬಹಿಷ್ಕರಿಸಿ, ಈಳವ-ಬಿಲ್ಲವರದೇ ಸ್ವಂತ ದೇವಾಲಯ ಸ್ಥಾಪಿಸಿ, ಅದರಲ್ಲಿ 'ಅವೈದಿಕ' ಪೂಜಾವಿಧಿ ಅನುಸರಿಸಿ ಕೇರಳದ ಹಿಂದುಳಿದ ಈಳವ ಮತ್ತು ನಮ್ಮ ಕರಾವಳಿಯ ಬಿಲ್ಲವರಲ್ಲಿ ಮೊಟ್ಟ ಮೊದಲ ಬಾರಿಗೆ ಆತ್ಮಾಭಿಮಾನ ತುಂಬಿದ ಮಹಾತ್ಮ ಅವರು. ವೈದಿಕ ಧರ್ಮದ ವಿರುದ್ಧ ಬಂಡಾಯವೆದ್ದವರನ್ನೇ ವೈದಿಕ ಧರ್ಮದ ಕಟ್ಟಾ ಅನುಯಾಯಿ ಎಂದು ಮೋದಿ ಕರೆಯುವುದು ನಾರಾಯಣ ಗುರುಗಳಿಗೆ ಅವಮಾನವಲ್ಲದೇ ಇನ್ನೇನು? ನಮ್ಮ ಕರಾವಳಿಯ ಬಿಲ್ಲವರು ನಾರಾಯಣ ಗುರುಗಳನ್ನು ಇವತ್ತಿಗೂ ಅರ್ಥಮಾಡಿಕೊಳ್ಳದಿದ್ದರೂ ಕೇರಳದ ಈಳವರು ಗುರುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಹಾಗಾಗಿ ಈ ಚುನಾವಣೆಯಲ್ಲಿ ತಮ್ಮ ಗುರುಗಳಿಗಾದ ಅವಮಾನಕ್ಕೆ ಕೇರಳದ ಈಳವರು ಸೇಡು ತೀರಿಸಿಕೊಳ್ಳಬಹುದು.

ಪ್ರಧಾನಿ ಮೋದಿ ಕೇರಳವನ್ನು ಆಫ್ರಿಕಾದ ಅತ್ಯಂತ ಅರಾಜಕ ಹಾಗೂ ಅತ್ಯಂತ ಬಡ ಅನಕ್ಷರಸ್ಥ ದೇಶವಾದ ಸೊಮಾಲಿಯಾಕ್ಕೆ ಹೋಲಿಸಿ ಮಲೆಯಾಳಿಗಳನ್ನು ಅವಮಾನಿಸಿದ್ದು ಕೇರಳಾದ್ಯಂತ ಆಕ್ರೋಶ ಹುಟ್ಟಿಸಿದೆ. ಜಗತ್ತಿನಾದ್ಯಂತ ಹರಡಿರುವ ಕೆರಳೀಯರ ಆಕ್ರೋಶ ನೋವು ಬೇಸರಗಳೆಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ವ್ಯಂಗ್ಯವಾಗಿ ಹೊರಬರುತ್ತಿವೆ. ಜನರ ಸ್ವಾರಸ್ಯಕರವಾದ ಕಾಮೆಂಟುಗಳ ಕೆಲವು ಸ್ಯಾಂಪಲ್ಲುಗಳೆಂದರೆ- ಕೇರಳ ದೇವರ ಸ್ವಂತ ನಾಡು, ಮೋದಿ ದೇವರ ಸ್ವಂತ ಪ್ರಮಾದ; ಅಮಿತ್ ಶಾನನ್ನು ಸೃಷ್ಟಿಸಿದ್ದು ಜೈನ ದೇವರ ಸ್ವಂತ ಅಪರಾಧ; ಕೇರಳ ಸೊಮಾಲಿಯಾವಾದರೆ ಗುಜರಾತ್ ಇತಿಯೋಪಿಯ; ನೆರೆಯ ಕನ್ನಡಿಗರು ಸೊಮಾಲಿಯಾಕ್ಕೆ ವೀಸಾ ಪಾಸ್ಪೋರ್ಟ್ ಇಲ್ಲದೆಯೇ ದಿನಾಲೂ ಹೋಗಿ ಬರಬಹುದು; ಸೊಮಾಲಿಯಾದಲ್ಲಿರುವ ನಮ್ಮ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಕನ್ನಡಿಗರು ಹೋರಾಡಬೇಕು; ಮೋದಿ ಎಂ.ಎ. ಪದವಿ ಪಡೆದದ್ದು ಎಂಟಾಯರ್ ಪಾಲಿಟಿಕಲ್ ಸಾಯನ್ಸ್ ಎಂಬ ಜಗತ್ತಿನಲ್ಲೆಲ್ಲೂ ಇಲ್ಲದ ವಿಷಯದಲ್ಲಿ, ಆದರೆ ಅವರು ಮೆಟ್ರಿಕ್‌ನಲ್ಲಿ ಭೂಗೋಳದಲ್ಲಿ ಫೇಲ್ ಆಗಿದ್ದರಂತೆ ಹಾಗಾಗಿ ಅವರ ಎಂಟೈರ್ ಭೂಗೋಳ ಜ್ಞಾನ ಬಹಳ ವೀಕ್; ಮೋದಿಯ ಮುಂದಿನ ವಿದೇಶಿ ಟೂರ್ ಸೊಮಾಲಿಯಾಕ್ಕೆ.


ಬೆಂಗಳೂರು ಮುಂಬೈಯಲ್ಲಿ ಮಲೆಯಾಳಿಗಳಿಗೆ ತಮಾಷೆಯಾಗಿ 'ಮಲ್ಲು' ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ಆದರೆ ಈಗ ಪ್ರಧಾನಿ ಮೋದಿ ಕೇರಳಕ್ಕೆ ಸೋಮಾಲಿ... ಎಂದು ಕರೆದಿದ್ದರಿಂದ ಇನ್ನು ಮುಂದೆ ಮಲೆಯಾಳಿಗಳಿಗೆ ಮಲ್ಲು ಬದಲು 'ಸೋಮ... ಎಂಬ ಅಡ್ಡ ಹೆಸರಿನಿಂದ ಕರೆಯಬೇಕಾಗುತ್ತದೆ, ಮಲೆಯಾಳಿ ಭಾಷೆಗೆ 'ಸೋಮಲೆ... ಭಾಷೆ ಎನ್ನಬೇಕಾಗುತ್ತದೆ. ಇಲ್ಲಿಯವರೆಗೆ ಕೇರಳದ ಸುಂದರ ಹೆಣ್ಣುಗಳು ಕನ್ನಡ ಸಿನಿ... ಲಗ್ಗೆ ಹಾಕುತ್ತಿದ್ದರು, ಇನ್ನು ಮುಂದೆ ಸೊಮಾಲಿಯಾದ ಸುಂದರ ಹೆಣ್ಣುಗಳು ಸ್ಯಾಂಡಲ್‌ವು... ದಾಳಿ ಮಾಡಲಿದ್ದಾರೆ. ಮೋದಿಯ ಕೃಪೆಯಿಂದ ಇನ್ನು ಕೇರಳೀಯರು "ಸೋಮಾಲಿ... ಮಾತಾಕಿ ಜೈ" ಎಂದು ಕೂಗಿದರೆ ಕೇಸರಿಪಡೆಗಳು ಅವರನ್ನು ಚಚ್ಚುವುದಿಲ್ಲ... ಮೇಲಿನ ಕಾಮೆಂಟುಗಳೆಲ್ಲಾ ಮೋದಿಯ 56 ಇಂಚು ಉದ್ದದ ನಾಲಿಗೆಯ ಪರಿಣಾ...

ಕೇರಳವನ್ನು ಸೊಮಾಲಿಯಾ ಎಂದು ಕರೆದಿದ್ದಕ್ಕೆ ಭಾರತದ ಮತ್ತು ವಿದೇ... ಕೇರಳೀಯರೆಲ್ಲಾ ಒಕ್ಕೊರಲಿನಿಂದ ಪೊ-ಮೊನೆ-ಮೋದಿ ಹಾಗೂ ಪೋ-ಮೊನೆ-ನ... ಎಂದು ಕೂಗಿದರು. ಎಷ್ಟಾದರೂ ಮಲೆಯಾಳಿಗಳು ಸ್ವಾಭಿಮಾನಕ್ಕೆ ಹೆಸರಾದ... ಆದರೆ ಒಂದು ವೇಳೆ ಮೋದಿ ಕರ್ನಾಟಕವನ್ನು ಸೊಮಾಲಿಯಾ ಎಂದು ಕರೆ... ಕನ್ನಡಿಗರ ಪ್ರತಿಕ್ರಿಯೆ ಏನಾಗಿರುತ್ತಿತ್ತು? ವಿದ್ಯಾವಂತ ಕನ್ನಡಿಗರು ಹೀಗೆ ಒಕ್ಕೊರಲಿ... ಪ್ರತಿಭಟಿಸುತ್ತಿದ್ದರೆ? ಕನ್ನಡಿಗರೆಂದೂ ಕೆರಳೀಯರಂತೆ ಇಷ್ಟು ಸ್ವಾಭಿಮಾನ ತೋ... ಕೆರಳಲು ಸಾಧ್ಯವೇ ಇರಲಿಲ್ಲ, ಮೇಲ್ಜಾತಿ ಕನ್ನಡಿಗರೆಲ್ಲಾ ಮೋದಿಯನ್ನೇ ಬೆಂಬಲಿಸುತ್ತಿ... ಸಿದ್ದರಾಮಯ್ಯ ಹಾಗೂ ದೇವೇಗೌಡರಿಂದಾಗಿ ಕರ್ನಾಟಕಕ್ಕೆ ಸೊಮಾಲಿಯ-ಭಾಗ್ಯ ಬ... ಎಂದು ಕೇಕೆ ಹಾಕುತ್ತಿದ್ದರು. ಕರ್ನಾಟಕದ ಅಲ್ಪಸಂಖ್ಯಾತರೆಲ್ಲಾ ಸೊಮಾಲಿಯಾದ ಕಡಲ... ಸಮಾನ ಎಂದು ನಮ್ಮ ಸುನ್ನತ್-ಪ್ರಿಯ ಕಲ್ಲಡ್ಕ ಭಟ್ಟ ಹೋಲಿಕೆ ಮಾಡುತ್ತಿ... ಕನ್ನಡಿಗ ದಲಿತರೆಲ್ಲಾ ನಿಜವಾಗಿ ಆಫ್ರಿಕಾದಿಂದ ವಲಸೆ ಬಂದವರು ಮತ್ತು ತುಳುನಾ... ಭೂತ-ದೈವಗಳೆಲ್ಲಾ ಆಫ್ರಿಕಾದಿಂದ ವಲಸೆ ಬಂದ ಕ್ಷುದ್ರ ಶಕ್ತಿಗಳು, ಆದರೆ ವೈ... ಮಾತ್ರ ಇಲ್ಲಿಯ ಮೂಲನಿವಾಸಿಗಳು ಎಂದು ಸಂಘಿ ವಿಜ್ಞಾನಿಗಳು (ಕು)ಸಂಶೋಧನೆಯನ್ನು ಕೇಸರಿ ಪತ್ರಿಕೆಗಳಾದ ಉದಯವಾಣಿ- ವಿಜಯವಾಣಿ-... ಬರೆದು ಪ್ರಶಸ್ತಿ ಗಳಿಸುತ್ತಿದ್ದರು.

ಭಾರತ ವಿಶ್ವಗುರು ಆಗುತ್ತಿದೆ ಹಾಗೂ ಇಡೀ ಜಗತ್ತೇ ಭಾರತದತ್ತ ... ಕಣ್ಣಿಂದ ನೋಡುತ್ತಿದೆ ಎಂದು ಪೆದ್ದುಪೆದ್ದಾಗಿ ಹೋದಲ್ಲೆಲ್ಲಾ ಬಡಾಯಿ ಕೊಚ್ಚು... ಕಾವಿಸ್ವಾಮೀಜಿ ವೇಷದ ವಿಹಿಂಪ ಸದಸ್ಯರೆಲ್ಲಾ ಕರ್ನಾಟಕ ರಾಜ್ಯ ವಿಶ್ವಗುರು... ಅಂಗವಾಗಿರಲು ಅರ್ಹವಾಗಿಲ್ಲ ಎಂದು ಪ್ರವಚನ ಮಾಡುತ್ತಿದ್ದರು. ಮೋದಿ ಕರ್ನಾಟ... ಸೊಮಾಲಿಯಾ ಎಂದು ಕರೆದಿದ್ದಕ್ಕಾಗಿ ಕರ್ನಾಟಕದ ಹಿಂದೂತ್ವ ನೇತಾರರು ಮೋ... ಮೈಸೂರು ಪೇಟಾ ತೊಡಿಸಿ 'ಸೋಮೈಸೂರು-ರತ್ನ' ಎಂಬ ಪ್ರಶಸ್ತಿ ಕೊಡುತ್ತಿ... ಪೂರಾ ಕೇಸರಿಮಯವಾಗಿರುವ ಮಂಗಳೂರು ವಿಶ್ವವಿದ್ಯಾಲಯದಿಂದ ಮೋದಿಗೆ ... ಡಾಕ್ಟರೇಟ್ ಕೊಡಿಸಿ ಡಾ.ನರೇಂದ್ರ ಮೋದಿ ಎಂದು ಕರೆದು ಅವರನ್ನು ನಕಲಿ ... ಅಪವಾದದಿಂದ ಹಾಗೂ ಕೇಜ್ರಿವಾಲರ ಕುಣಿಕೆಯಿಂದ ಪಾರು ಮಾಡುತ್ತಿದ್ದರು. ಹೈ... ಸಹ ಪಾಸಾಗಿರದ ಮಂಗಳೂರಿನ ಒಬ್ಬ ಮಾಜಿ ಶರಾಬು ದೊರೆ ಶೆಟ್ಟಿಗೆ ಮಂಗ... ವಿಶ್ವವಿದ್ಯಾಲಯವು ಕಳೆದ ತಿಂಗಳು ಡಾಕ್ಟರೇಟ್ ಪದವಿ ಕೊಟ್ಟಿರುವಾಗ ಎ... ಪ್ರಯತ್ನದಲ್ಲಿ ನಿಜವಾಗಿಯೂ ಮೆಟ್ರಿಕ್ ಪಾಸಾಗಿರುವ ಮೋದಿಗೆ ಡಾಕ್ಟರೇಟ್ ... ಕೊಡಬಾರದು!

- ಹರೀಶ್ ಎಮ್.ಆರ್. ...





ದೇವಸ್ಥಾನಗಳಲ್ಲೂ ಗರ್ಭಗುಡಿಯ ಸರಿಯಾಗಿ ಎದುರಿಗೇ ಬಲಿಪೀಠ ತಪ್ಪದೇ ಕಟ್ಟಲಾಗುತ್ತದೆ, ಆದರೆ ಅಲ್ಲಿ ಯಾವುದೇ ಬಲಿ ನಡೆಯುವುದಿಲ್ಲ ನಿಜ. ವಿಚಿತ್ರವೆಂದರೆ ಈಗೀಗ ಕ್ರೈಸ್ತರ ಚರ್ಚುಗಳಲ್ಲೂ ಬಲಿಪೂಜೆ ಎಂಬ ಒಂದು ಪ್ರತ್ಯೇಕ ಪೂಜೆ ನಡೆಯುತ್ತದೆ. ಇದು ಕ್ರೈಸ್ತ ಧರ್ಮದ ಮೇಲೆ ವೈದಿಕ ಧರ್ಮದ ಪ್ರಭಾವದ ಸಂಕೇತ ಇರಬಹುದೇ?

ಇನ್ನು ಯೋನಿ ಪೂಜೆಯ ಬಗ್ಗೆ ಹೇಳಬೇಕೆಂದರೆ- ದೇವರ ಮೂರ್ತಿ ಅಥವಾ ಲಿಂಗ ಇರುವ ಸ್ಥಳಕ್ಕೆ ಗರ್ಭಗುಡಿ ಅಥವಾ ಗರ್ಭಗೃಹ ಎನ್ನುವ ಹೆಸರು ಬೀಳಲು ಕಾರಣವೇ ಸ್ತ್ರೀಯ ಅಂಗ. ಸ್ತ್ರೀಯ ಗರ್ಭ ಹಾಗೂ ಯೋನಿ ನೇರ ಸಂಬಂಧವಿರುವ ದೇಹದ ಭಾಗಗಳು ತಾನೇ. ಕಳೆದ ವಾರದ ಸಂಚಿಕೆಯಲ್ಲಿ ಗಿರೀಶ್ ಶೆಟ್ಟಿ ಮೂಲ್ಕಿ ಇವರು ಬರೆದಿದ್ದಂತೆ ಕೇವಲ ಹಿಂದಿನ ಕಾಲದಲ್ಲಿ ಮಾತ್ರ ಯೋನಿ ಪೂಜೆ ನಡೆಯುತ್ತಿರಲಿಲ್ಲ, ಅದು ಈಗಲೂ ನಡೆಯುತ್ತಿದೆ. ಆಗಮ ಶಾಸ್ತ್ರದ ಪ್ರಕಾರ ವಿವಿಧ ತರಹದ ಪೂಜೆಗಳಿವೆ. ಅವುಗಳಲ್ಲಿ ಕೇವಲ ತಂತ್ರಾಗಮ ಪದ್ಧತಿಯ ಪೂಜೆ ಮಾಡುವ ಪುರೋಹಿತರು ಇವತ್ತಿಗೂ ಮನೆಯಲ್ಲಿ ಜೀವಂತ ಸ್ತ್ರೀಯ ಯೋನಿಪೂಜೆ ಮಾಡುತ್ತಾರೆ. ತಾಂತ್ರಿಕ ಸಿದ್ಧಿ ಪಡೆಯಬೇಕಾದರೆ 'ತಂತ್ರಿಗಳು' ಎಂದು ಕರೆಯಲಾಗುವ ಪುರೋಹಿತರಿಗೆ ಜೀವಂತ ಮಹಿಳೆಯ ಯೋನಿಪೂಜೆ ಕಡ್ಡಾಯ. ಇಂತಹ ಸಿದ್ಧಿ ಇದ್ದವರು ಮಾತ್ರ ದೇವಸ್ಥಾನಗಳಲ್ಲಿ ನಡೆಯುವ ದೇವರ ಪ್ರಾಣಪ್ರತಿಷ್ಠೆ ಮಾಡಲು ಅರ್ಹರು. ಕರಾವಳಿಯ ಕಡೆ ಆಗಾಗ ನಡೆಯುವ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಪುನರ್‌ಪ್ರತಿಷ್ಠೆಯಲ್ಲಿ ದೇವರಮೂರ್ತಿ ಅಥವಾ ಲಿಂಗಗಳಿಗೆ ಪುನಃ ಪ್ರಾಣಪ್ರತಿಷ್ಠೆ ಮಾಡುವ ಸಿದ್ಧಿಶಕ್ತಿ ಇರುವವರು ಕೇವಲ ಇಂತಹ ಯೋನಿಪೂಜೆಯ ಸಾಧನೆ ಮಾಡಿ ಸಿದ್ಧಿ ಪಡೆದಿರುವ ತಂತ್ರಿಗಳು ಮಾತ್ರ. ಕೇರಳದ ನಂಬೂದ್ರಿ ಬ್ರಾಹ್ಮಣರು ಮತ್ತು ಅಷ್ಟಮಂಗಲ ಪ್ರಶ್ನೆ-ತಾಂಬೂಲ ಪ್ರಶ್ನೆ ಇಡುವ ಇತರ ಜಾತಿಯ ಮಲೆಯಾಳಿ ತಾಂತ್ರಿಕ ಸಾಧಕರೂ ದೇವರ ಪ್ರಾಣಪ್ರತಿಷ್ಠೆಗೆ, ಕೃತ್ರಿಮಕ್ಕೆ ಹಾಗೂ ಮಂತ್ರಮಾಟ ತೆಗೆಯುವುದಕ್ಕೆ ಅನುಸರಿಸುವ ವಿಧಿವಿಧಾನಗಳು ಎಲ್ಲವೂ ಹೆಚ್ಚು ಕಡಿಮೆ ಒಂದೇ ರೀತಿಯಿರುವುದರಿಂದ ಅವರೂ ಸ್ತ್ರೀಯ ಗುಪ್ತಾಂಗ ಪೂಜೆ ಮಾಡಲೇಬೇಕಾಗುತ್ತದೆಯಂತೆ. ಚಿಕ್ಕಂದಿನಿಂದಲೂ ಉಡುಪಿಯ ಬ್ರಾಹ್ಮಣ ತಂತ್ರಿ ಕುಟುಂಬದೊಟ್ಟಿಗೇ ಇದ್ದು ಬೆಳೆದ ನನ್ನ ಒಬ್ಬ ಶೂದ್ರ ಮಿತ್ರರು ಈ ಸ್ತ್ರೀ ಗುಪ್ತಾಂಗ ಪೂಜೆಯನ್ನು ಚಿಕ್ಕಂದಿನಲ್ಲಿ ತಾನು ಕಣ್ಣಾರೆ ನೋಡಿರುವುದಾಗಿ ನನಗೆ ಇತ್ತೀಚೆಗೆ ಹೇಳಿದರು (ಇವರು ವೈದ್ಯರು ಹಾಗೂ ಹಿರಿಯ ನಾಗರಿಕರು. ಹಾಗಾಗಿ ಏನನ್ನೂ ಉತ್ಪ್ರೇಕ್ಷೆ ಮಾಡಿ ಹೇಳುವುದಿಲ್ಲ). ಈ ತಂತ್ರಾಗಮ ಪದ್ಧತಿ ಯಾವುದೋ ಕಾಲಘಟ್ಟದಲ್ಲಿ ಬೌದ್ಧ ಧರ್ಮದೊಳಗೂ ಹೊಕ್ಕಿದ್ದು ಅದು ಚೀನಾ-ಟಿಬೇಟ್-ಥೈಲ್ಯಾಂಡ್ ಸಹಿತ ಎಲ್ಲಾ ಬೌದ್ಧ ದೇಶಗಳಲ್ಲಿ ಇಂದಿಗೂ ಅನುಸರಿಸಲಾಗುತ್ತಿದ್ದು ಅಲ್ಲಿ ಈಗ ಈ ತಾಂತ್ರಿಕ ವಿಧಿಗೆ "ತಾವೋಯಿಜಂ" ಎಂಬ ಹೆಸರಿನಿಂದ ಕರೆಯಲಾಗುತ್ತದಂತೆ. ಮೂಲತಃ ಇದೊಂದು ಯಾವುದೇ ವಿಕಾರ ಕಾಮನೆಗಳಿಲ್ಲದ ಶುದ್ಧ ಚಿತ್ತದ ನಿರ್ಭಾವುಕ ಪೂಜೆಯಾಗಿದ್ದರೂ ಗೋಸ್ವಾಮಿ-ನಿತ್ಯಾನಂದ-ಅಸಾರಾಮಬಾಪು ರಂತಹವರು ಈ ತಾಂತ್ರಿಕರ ಪೂಜೆಯನ್ನೇ ದುರುಪಯೋಗಪಡಿಸಿಕೊಂಡು ಮಹಿಳೆಯರನ್ನು ವಂಚಿಸಿ ತಮ್ಮ ತೀಟೆ ತೀರಿಸಿಕೊಂಡಿದ್ದು.

- ರಾಮಕೃಷ್ಣ ಕುಲಾಲ್, ಬೆಂಗಳೂರು


ದಕ ಜಿಲ್ಲೆ ಸೋಮಾಲಿಯಾವೇ ಸರಿ

ಕೇರಳಕ್ಕೆ ಮೋದಿ ಸೊಮಾಲಿಯಾ ಎಂದಿರುವುದು ಸರಿಯೋ ತಪ್ಪೋ ಆದರೆ ನಮ್ಮ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಗೆ ಸೊಮಾಲಿಯ ಎಂದು ಕರೆಯಲೇ ಬೇಕು ಎಂದು ನಮ್ಮ ಕರಾವಳಿಯ ಸಂಘ ಪರಿವಾರದವರು ಮೋದಿಯನ್ನು ಒತ್ತಾಯಿಸಿದ್ದಾರಂತೆ. ಯಾಕೆಂದರೆ ಸಂಘಿಗಳ ಪ್ರಚಂಡ ಸಂಶೋಧನೆಯ ಪ್ರಕಾರ ಸೊಮಾಲಿಯಾಕ್ಕೆ ಈ ಹೆಸರು ಬರಲು ನಮ್ಮ ಭಾರತದ ವೈದಿಕರೇ ಕಾರಣ. ಆಫ್ರಿಕಾದ ಒಂದು ಪ್ರದೇಶಕ್ಕೆ ಸೋಮಾರಿ ವೈದಿಕರು ಹೋಗಿ ಅಲ್ಲಿ ಸೋಮವಾರದ ದಿನ ಸೋಮಯಾಜಿಗಳು ಸೋಮರಸ ಕುಡಿದು ಸೋಮಯಾಗ ಮಾಡಿ ಸೋಮನಾಥ ದೇವರನ್ನು ಒಲಿಸಿಕೊಂಡು ಅಲ್ಲಿಯ ಕರಿಕಪ್ಪು ನೀಗ್ರೋ ರಾಕ್ಷಸರನ್ನು ಸೋಮಾಸ್ತ್ರದಿಂದ ಸಂಹರಿಸಿ ಸೋಮಾರಿ ಆರ್ಯರನ್ನು ರಕ್ಷಿಸಿ ನಂತರ ಸೋಮನಾಥ ದೇವಾಲಯ ಕಟ್ಟಿಸಿದರು. ಸೋಮನಾಥ ದೇವಾಲಯದಿಂದಾಗಿ ಆ ಪ್ರದೇಶಕ್ಕೆ ಸೋಮನಾಥಾಲಯ ಎಂಬ ಹೆಸರು ಬಂದಿತು (ಮೇಘಾಲಯಕ್ಕೆ ಮೇಘನಾಥನಿಂದ ಹೆಸರು ಬಂದಂತೆ). ಆ ಸೋಮನಾಥಾಲಯವೇ ನಂತರ ಸೋಮಾಲಯವಾಗಿ ಕೊನೆಗೆ ಸೋಮಾಲಿಯ ಎಂದು ಜನರ ಬಾಯಲ್ಲಿ ಬದಲಾಯಿತು ಅಷ್ಟೇ ಎನ್ನುತ್ತಾರೆ ಸಂಘಿಗಳು.


ಹೇಗೂ ನಮ್ಮ ದೇಶದಲ್ಲಿ ಗುಜರಾತಿನ ನಂತರ ಅತೀಹೆಚ್ಚು ಸೋಮನಾಥ ದೇವಾಲಯಗಳು ಇರುವುದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಎಂಬುದು ನಿಜ. ಸೋಮನಾಥನ ಭಕ್ತರಾದ ಗುಜರಾತಿಗಳು ಸಮುದ್ರ ಮಾರ್ಗವಾಗಿ ನಮ್ಮ ಕರಾವಳಿಗೆ ಕರಿಮೆಣಸಿನ ವ್ಯಾಪಾರಕ್ಕೆ ಹಿಂದಿನ ಕಾಲದಲ್ಲಿ ಬರುತ್ತಿದ್ದಾಗ ಅವರೊಂದಿಗೆ ಸ್ಥಳೀಯ ತುಳುವ ಬಂಟರು ಮತ್ತು ಜೈನ ಹೆಣ್ಣುಗಳು ತಾತ್ಕಾಲಿಕ ವೈವಾಹಿಕ ಸಂಬಂಧ ಬೆಳೆಸಿದ್ದರಿಂದಾಗಿ ಹುಟ್ಟಿದ ಮಕ್ಕಳಿಗೆ - ಭಂಡಾರಿ, ಕೊಟ್ಯಾರಿ, ಪೂಂಜಾ, ಬಂಗ, ಮೇಂಡ, ಶೇಕಾ, ಕಾವಾ, ಗಂಭೀರಾ, ವಾಲ್ಯಾ, ಕೋಟಿಯಾ, ಸಾಲಿಯಾ, ಅಮಿನ್ ಮುಂತಾದ ಅಚ್ಚ ಗುಜರಾತಿ ಕುಲನಾಮಗಳು ತುಳು ಜೈನ ಮತ್ತು ಬಂಟರಿಗೆ ಈಗಲೂ ಬರುವಂತಾಗಿದ್ದು, ಹಾಗೆಯೇ ಆ ಗುಜರಾತಿ ಕರಿಮೆಣಸಿನ ವ್ಯಾಪಾರಿಗಳ ಮುಖಾಂತರವೇ ಸೋಮನಾಥ ದೇವರ ಆರಾಧನೆ ಸಹ ಗುಜರಾತಿನಿಂದ ತುಳುನಾಡಿಗೂ ಪಸರಿಸಿರುವುದು. ಹಾಗಾಗಿ ನಮ್ಮ ತುಳುವರ ಸೋಮನಾಥನಿಗೂ ಗುಜರಾತಿಗಳ ಸೋಮನಾಥೇಶ್ವರನಿಗೂ ಮತ್ತು ಆಫ್ರಿಕಾದ ಸೋಮನಾಥಾಲಯಕ್ಕೂ ತ್ರಿಕೋನ ಸಂಬಂಧ ಇರುವುದರಿಂದ ನಮ್ಮ ದಕ್ಷಿಣ ಕರಾವಳಿಗೆ ಅರ್ಥಾತ್ ತುಳುನಾಡಿಗೆ 'ಸೋಮಾಲಯ' ಎಂಬ ಹೆಸರೇ ಉಚಿತ ಎಂದು ಕರಾವಳಿಯ ಕೇಸರಿ ಪೀಡೆಗಳು ಹೇಳುತ್ತಿವೆ.

ಮೋದಿಯವರ ಕೃಪೆಯಿಂದ ಇನ್ನು ಮುಂದೆ ಕೇರಳೀಯರು "ಸೋಮಾಲಿಯಾ ಮಾತಾಕಿ ಜೈ" ಎಂದು ಕೂಗಿದರೆ ಕೇಸರಿ ಪಡೆಗಳು ಅವರನ್ನು ಚಚ್ಚುವುದಿಲ್ಲವಂತೆ. ನಮ್ಮ ಕರಾವಳಿಯವರೂ ಇನ್ನು ಮುಂದೆ ಜೈಸೋಮಾಲಯ ಮಾತಾ ಎಂದು ಕೂಗಬಹುದು ಬಿಡಿ.

- ಆರ್.ಬಿ.ಶೇಣವ, ಮಂಗಳೂರು



ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಗೆಲ್ಲುವ ವಿಶ್ವಾಸ ನನಗಿರಲಿಲ್ಲ

ಝೀ ವಾಹಿನಿಯ ಪ್ರತಿಷ್ಠಿತ ಶೋ ಸರಿಗಮಪ ಸೀಸನ್- 11ರ ವಿನ್ನರ್ ಆಗಿ ಹಳ್ಳಿಗಾಡಿನ ಪ್ರತಿಭೆ ಚನ್ನಪ್ಪ ಹುದ್ದಾರ ಹೊರಹೊಮ್ಮಿದ್ದಾನೆ. ಬಡತನದಲ್ಲಿ ಬೆಳೆದ ಚನ್ನಪ್ಪನ ಬದುಕಿನ ಹಿಂದೆ ಇಂಟ್ರೆಸ್ಟಿಂಗ್ ಕಹಾನಿ ಇದೆ. ಆ ಕುರಿತು ಅವರು ಮನಬಿಚ್ಚಿ ಮಾತಾಡಿದ್ದಾರೆ.

ಈತ ಅಕಾಡೆಮಿಕ್ ಆಗಿ ಸಂಗೀತ ಕಲಿತಿಲ್ಲ, ಆದರೂ ಸಲೀಸಾಗಿ ಹಾಡುವ ಶಕ್ತಿ ಇವನಲ್ಲಿದೆ. ಗುರುವಿಲ್ಲದೇ ಸಂಗೀತ ಕಲಿತ ಆಧುನಿಕ ಏಕಲವ್ಯ ಚನ್ನಪ್ಪ ಹುದ್ದಾರ, ಝೀ ವಾಹಿನಿಯ ಸರಿಗಮಪ ಸೀಸನ್ 11ರ ರಿಯಾಲಿಟಿ ಶೋನಲ್ಲಿ ರನ್ನರ್ ಆಗಿದ್ದಾರೆ. ಅಪಾರ ಅಭಿಮಾನಿ ಬಳಗ ಹೊಂದಿರುವ ಇವರ ಬದುಕೇ ಒಂದು ರೋಚಕ.

** ಚನ್ನಪ್ಪನ ಬದುಕಿನ ಹಿನ್ನೆಲೆಯೇ ಈ ಶೋ ಗೆಲ್ಲುವಂತೆ ಮಾಡಿದೆಯಾ?*

ನನ್ನ ಬದುಕು ಅಷ್ಟೊಂದು ರೋಚಕವೇನೂ ಇಲ್ಲ, ನನ್ನದು ಮಹಾಲಿಂಗಪುರದ ಪಿಡಿಬುದ್ನಿ ಗ್ರಾಮ. ತೋಟದಲ್ಲಿ ಪುಟ್ಟದೊಂದು ಮನೆಯಿದೆ. ಅಪ್ಪ ಆಟೋ ಡ್ರೈವರ್. ಅಮ್ಮ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಬಡತನವಿದ್ದಲ್ಲಿ ಸಾಲವೂ ಇದ್ದೇ ಇರುತ್ತದೆ. ಓದಿದ್ದು ಪಾಲಿಟೆಕ್ನಿಕ್‌ನಲ್ಲಿ ಇಲೆಕ್ಟ್ರಿಕಲ್ ಎಂಜಿನಿಯರಿಂಗ್. ಸದ್ಯ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದೇನೆ.

** ಸಂಗೀತ ನಿಮಗೆ ಒಲಿದುಬಂದಿದ್ದು ಹೇಗೆ?*

ಬಾಲ್ಯವನ್ನು ನಾನು ತಾಯಿಯ ತವರೂರಾದ ಕಾಲತಿಪ್ಪಿಯಲ್ಲಿ ಕಳೆದು, ನನ್ನ ತಾಯಿಯ ಸಹೋದರರು ಸಂಗೀತ ಮತ್ತು ನಾಟಕ ಕಲಾವಿದರಾಗಿದ್ದರು. ಅಲ್ಲದೇ ಪ್ರಭುಲಿಂಗೇಶ್ವರ ನಾಟಕ ಕಂಪನಿಯಲ್ಲಿ ಅವರು ನಟಿಸುತ್ತಲೇ ತಬಲಾ ಮತ್ತು ಹಾರ್ಮೋನಿಯಂ ನುಡಿಸುತ್ತಿದ್ದರು. ಹೀಗಾಗಿ ನನಗೆ ಸಂಗೀತವು ಹವ್ಯಾಸವಾಯಿತು. ನಾನು 4ನೇ ತರಗತಿಯಲ್ಲಿರುವಾಗಲೇ ಸಂಗೀತದ ರಿದಂ ಹಿಡಿದುಕೊಂಡು ಪಾರಿಜಾತ ಆಟದಲ್ಲಿ ನಾರದಮುನಿ ಪಾತ್ರ ನಿರ್ವಹಿಸಿದೆ. ಅಲ್ಲದೇ ಭಜನಾ ಮಂಡಳಿಯಲ್ಲೂ ಹಾಡುತ್ತಿದ್ದೆ. ಇದೇ ನನಗೆ ಪ್ರೇರಣೆ ಆಗಿರಬಹುದು.

** ಶಾಸ್ತ್ರೀಯವಾಗಿ ಸಂಗೀತ ಕಲಿಯೋಕೆ ಅವಕಾಶವೇ ಸಿಗಲಿಲ್ಲವಾ?*


ನಮ್ಮದು ಬಡತನದ ಫ್ಯಾಮಿಲಿ. ಹೀಗಾಗಿ ಬೇಗ ಕೆಲಸ ಸಿಗುವಂತಹ ಕೋರ್ಸ್ ಮಾಡಬೇಕು ಅಂತ ನಿರ್ಧಾರ ಮಾಡಿದೆ. ಐಟಿಐ ಮಾಡಿದೆ. ಹಾಗೆಯೇ ಡಿಪ್ಲೊಮಾ ಕೂಡ ಮಾಡಬೇಕಾಯಿತು. ಕಾಲೇಜ್‌ಗೆ ಫೀಸ್ ಕಟ್ಟಲು ನನ್ನ ಹತ್ತಿರ ದುಡ್ಡು ಇರಲಿಲ್ಲ, ನಾನೂ ಕೂಡ ಆಟೋ ಓಡಿಸಿ, ಡಿಪ್ಲೊಮಾ ಮುಗಿಸಿದೆ. ಈ ಹೋರಾಟದಲ್ಲಿ ಸಂಗೀತ ಕಲಿಯುವುದಕ್ಕೆ ಹೇಗೆ ಸಾಧ್ಯ?

** ಸಂಗೀತ ಸ್ಪರ್ಧೆಯಲ್ಲಿ ನೀವು ಇದೇ ಮೊದಲ ಬಾರಿಗೆ ಗೆದ್ದಿದ್ದಾ?*

ಶೋ ಅಂತ ಗೆದ್ದಿದ್ದು ಇದೇ ಮೊದಲ ಬಾರಿಗೆ. ಆದರೆ, ಸಣ್ಣಪುಟ್ಟ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೇನೆ. ಪಾಲಿಟೆಕ್ನಿಕ್‌ನಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹಾಡಿದ್ದೇನೆ. ಮೈಸೂರಿನಲ್ಲಿ ನಡೆದ ವಿಶ್ವಮಾನವ ಯುವ ವೇದಿಕೆಯ ಸಾಂಸ್ಕೃತಿಕ ಹಬ್ಬ, ರಾಜ್ಯ ಮಟ್ಟದ ಅಂತರ್‌ಕಾಲೇಜು ಸಾಂಸ್ಕೃತಿಕ ಮೇಳದಲ್ಲಿ ಭಾಗವಹಿಸಿದ್ದೇನೆ.

** ಪ್ರತಿಷ್ಠಿತ ಶೋ ಗೆದ್ದನಂತರ ಸಂಗೀತ ಕಲಿಯಬೇಕು ಅನ್ನುವ ಆಸಕ್ತಿ ಮೂಡಿದ್ಯಾ?*

ಖಂಡಿತಾ ಮೂಡಿದೆ. ನನ್ನೊಟ್ಟಿಗೆ ಹಾಡಿದ ಬಹುತೇಕ ಸ್ಪರ್ಧಾಳುಗಳು ಸಂಗೀತ ಕಲಿತವರು. ಅವರು ಹಾಡುವುದನ್ನು ಕೇಳಿಯೇ ನನಗೆ ಕಲಿಯುವ ಆಸಕ್ತಿ ಮೂಡಿತ್ತು. ಅಲ್ಲದೇ ನಾನು ಹಾಡಲಿಕ್ಕೆ ಕಷ್ಟಪಡುತ್ತಿದ್ದ ದಿನಗಳನ್ನು ನೋಡಿದ ನನ್ನ ಪ್ರತಿಸ್ಪರ್ಧಿ ಐಶ್ವರ್ಯ ರಂಗರಾಜನ್ ನನ್ನನ್ನು ತಮ್ಮ ಸಂಗೀತ ಗುರುಗಳಾದ ಸುಚೇತನ ರಂಗಸ್ವಾಮಿ ಅವರಿಗೆ ಪರಿಚಯಿಸಿದ್ದಾರೆ. ಅವರೇ ನನಗೆ ಕ್ಲಾಸಿಕಲ್ ಸಂಗೀತ ಕಲಿಸಿ ಕೊಡುತ್ತಿದ್ದಾರೆ. ಈ ಕಲಿಕೆಯನ್ನು ನಾನು ಬಿಡುವುದಿಲ್ಲ.



** ಯಾಕೆ ರಾಜ್‌ಕುಮಾರ್ ಗೀತೆಗಳನ್ನೇ ನೀವು ಆಯ್ಕೆ ಮಾಡಿಕೊಂಡಿರಿ?*

ನನ್ನ ಅಚ್ಚುಮೆಚ್ಚಿನ ನಟ ಅವರು. ನಟರಾಗಿದ್ದರೂ, ಅದ್ಭುತವಾಗಿ ಡಾ.ರಾಜ್‌ಕುಮಾರ್ ಹಾಡುತ್ತಿದ್ದರು. ಅವರು ಓದಿದ್ದೂ ಕಡಿಮೆ. ಆದರೆ ಪ್ರತಿಭೆ ಅಪಾರ. ಅವರೇ ನನಗೆ ಸ್ಫೂರ್ತಿ ಆಗಿದ್ದರಿಂದ, ಅಣ್ಣಾವ್ರು ಹಾಡಿದ ಹಾಡನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಅವರ ಹಾಡೇ ಹಾಡಿ ಬಹುಮಾನ ಗೆದ್ದೆ.

** ಸಂಗೀತದಲ್ಲಿ ಮುಂದುವರೆಯುತ್ತೀರಾ? ಅಥವಾ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಇರುತ್ತೀರಾ?*

ನನಗೆ ನಟನಾಗಬೇಕು ಅನ್ನುವ ಆಸೆ ಇದೆ. ಹೀಗಾಗಿ ಸಂಗೀತದ ಜತೆಗೆ ಸಿನಿಮಾ ರಂಗದಲ್ಲಿ ಉಳಿದುಕೊಳ್ಳುವ ಆಸೆ. ಈ ಕ್ಷೇತ್ರ ನನ್ನನ್ನು ಸಲುಹುತ್ತದೆ ಅನ್ನುವ ನಂಬಿಕೆ ಇದೆ.

** ಈ ಸೀಸನ್‌ಲ್ಲಿ ಯಾರು ಗೆಲ್ಲುತ್ತಾರೆ ಅನ್ನುವ ವಿಶ್ವಾಸ ನಿಮಗಿತ್ತು?*

ಐಶ್ವರ್ಯ ರಂಗರಾಜನ್ ವಿನ್ನರ್ ಆಗುತ್ತಾರೆ ಅನಿಸಿತ್ತು, ಅಲ್ಲದೇ ಶ್ರೀರಾಮ್ ಕೂಡ ಗೆಲ್ಲುತ್ತಾರೆ ಅನ್ನುವ ವಿಶ್ವಾಸವಿತ್ತು, ನನ್ನ ಗೆಲುವು ನನಗೆ ಅನಿರೀಕ್ಷಿತ. ಈ ಗೆಲುವಿಗೆ ಕನ್ನಡದ ಪ್ರೇಕ್ಷಕರೇ ಕಾರಣ.

** ಕನ್ನಡ ಸಿನಿಮಾರಂಗದಿಂದ ಅವಕಾಶ ಏನಾದರೂ ಸಿಕ್ಕಿವೆಯಾ?*

ಸದ್ಯಕ್ಕೆ ಇಲ್ಲ, ಮುಂದೆ ಸಿಗಬಹುದು. ನಿರ್ದೇಶಕರಾಗಿದ್ದ ಅರ್ಜುನ್ ಜನ್ಯ ಅವರು ಅವಕಾಶ ಕೊಡಿಸುತ್ತೇನೆ ಅಂತ ಹೇಳಿದ್ದಾರೆ. ಹಂಸಲೇಖ ಕೂಡ ತಮ್ಮ ಕಾಲೇಜ್‌ನಲ್ಲಿ ಕೆಲಸವೊಂದನ್ನು ಕೊಡುವ ಭರವಸೆ ನೀಡಿದ್ದಾರೆ.

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 01-06-2016 RNI No. KARKAN2

ಮಾಲಾಶ್ರೀ ಅತ್ಯುತ್ತಮ ನಟಿ

'ಗಂಗಾ' ಚಿತ್ರಕ್ಕಾಗಿ ಮಾಲಾಶ್ರೀಗೆ 2015ನೇ ಸಾಲಿನ ಅತ್ಯುತ್ತಮ ನಟಿ ರಾಜ್ಯ ಪ್ರಶಸ್ತಿ ನೀಡಲಾಗಿದೆ. ಇದು ಸದ್ಯ ಅಸಮಾಧಾನಕ್ಕೆ ಕಾರಣವಾಗಿದೆ. ಮಾಲಾಶ್ರೀ ಅತ್ಯುತ್ತಮ ನಟಿ ಅನ್ನುವುದರಲ್ಲಿ ಎರಡು ಮಾತಿಲ್ಲ. ಎರಡು ದಶಕಗಳ ಹಿಂದೆ ಸ್ಯಾಂಡಲ್‌ವುಡ್‌ನ್ನೇ ಆಳಿದ ನಟಿ ಇವರು. ಆದರೆ 'ಗಂಗಾ' ಚಿತ್ರಕ್ಕಾಗಿ ಪ್ರಶಸ್ತಿ ನೀಡಿದ್ದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

'ಗಂಗಾ' ಸಿನಿಮಾದಲ್ಲಿ ಮಾಲಾಶ್ರೀ ಎರಡು ಶೇಡ್‌ನ ಪಾತ್ರ ನಿರ್ವಹಿಸಿದ್ದಾರೆ. ಆಟೋ ಚಾಲಕಿಯಾಗಿಯೂ ಕಾಣಿಸಿಕೊಂಡಿದ್ದಾರೆ. ಆದರೆ, ಪ್ರಶಸ್ತಿ ಕೊಡುವ ಮಟ್ಟಕ್ಕೆ ಪಾತ್ರವಿಲ್ಲವಂತೆ. ಹೀಗಾಗಿ ಚರ್ಚೆಗೂ ಈ ವಿಷಯ ಕಾರಣವಾಗಿದೆ. ಈ ಪ್ರಶಸ್ತಿಯ ಹಿಂದೆ ಸಾಕಷ್ಟು ಲಾಬಿ ಇದೆ ಅನ್ನುವ ಮಾತೂ ಕೇಳಿಬಂದಿದೆ. ಮಾಲಾಶ್ರೀ ಪತಿ ರಾಮು ಚಲನಚಿತ್ರ ಪ್ರಶಸ್ತಿ ಆಯ್ಕೆಯ ಕಮಿಟಿ ಮೇಲೆ ಒತ್ತಡ ತಂದಿದ್ದರು ಅನ್ನುವ ಮಾತೂ ಕೇಳಿಬರುತ್ತಿದೆ.



ಮುತ್ತಿನ ನಗರಿಯಲ್ಲಿ ಯಶ್ ಮತ್ತು ರಾಧಿಕಾ

ಯಶ್ ಮತ್ತು ರಾಧಿಕಾ ಪಂಡಿತ್ ಈಗ ಮುತ್ತಿನನಗರಿ ಹೈದರಾಬಾದ್‌ನಲ್ಲಿ ಬೀಡುಬಿಟ್ಟಿದ್ದಾರೆ. 'ಸಂತು' ಸಿನಿಮಾದ ಶೂಟಿಂಗ್‌ಗಾಗಿ ಅವರು ಅಲ್ಲಿಗೆ ಹಾರಿದ್ದಾರೆ. ಮಹೇಶ್ ರಾವ್ ನಿರ್ದೇಶನದ 'ಸಂತು' ಚಿತ್ರ ಸದ್ದಿಲ್ಲದೇ ಶೂಟಿಂಗ್ ಆರಂಭಿಸಿದೆ. ಬೆಂಗಳೂರಿನಲ್ಲೇ ಒಂದು ಹಂತದ ಶೂಟಿಂಗ್ ಕೂಡ ಮುಗಿದಿದೆ. ಎರಡನೇ ಹಂತದ ಶೂಟಿಂಗ್‌ಗಾಗಿ ಇಡೀ ಚಿತ್ರತಂಡ ಹೈದರಾಬಾದ್‌ನಲ್ಲಿದೆ.



ಇದೇ ಮೊದಲ ಬಾರಿಗೆ ಯಶ್ ಸಿನಿಮಾ ಬಿಡುವಿಲ್ಲದ ಚಿತ್ರೀಕರಣದಲ್ಲಿದೆ. ಕಾರಣ, ಈ ಚಿತ್ರದ ಶೂಟಿಂಗ್ ಮುಗಿಯುತ್ತಿದ್ದಂತೆಯೇ ಅವರು 'ಕೆಜಿಎಫ್' ಚಿತ್ರಕ್ಕಾಗಿ ತಯಾರಿ ಮಾಡಿಕೊಳ್ಳಬೇಕಿದೆ. ಅದು ಬಹುಕೋಟಿ ಬಜೆಟ್ ಚಿತ್ರವಾಗಿದ್ದರಿಂದ ಯಶ್ ಕೂಡ ದೇಹ ದಂಡಿಸಬೇಕು. ಹೀಗಾಗಿ ಬೇಗಬೇಗ 'ಸಂತು' ಶೂಟಿಂಗ್ ಮುಗಿಸಲು ನಿರ್ಧರಿಸಲಾಗಿದೆ. ಹೈದರಾಬಾದ್‌ನಿಂದ ಬಂದ ತಕ್ಷಣವೇ ಹಾಡುಗಳ ಶೂಟಿಂಗ್‌ಗೆ ಪ್ಲಾನ್ ಮಾಡಲಾಗಿದೆ. ಅಂದುಕೊಂಡಂತೆ ನಡೆದರೆ, ಆಗಸ್ಟ್ ವೇಳೆಗೆ 'ಸಂತು' ತೆರೆಯ ಮೇಲೆ ಬರಲಿದ್ದಾನಂತೆ.

ಗಣೇಶ್‌ಗೆ ಕೈಕೊಟ್ಟ 'ಸ್ಟೈಲ್‌ಕಿಂಗ್'

'ಸ್ಟೈಲ್‌ಕಿಂಗ್' ಸಿನಿಮಾದ ಬಗ್ಗೆ ಗಣೇಶ್ ತುಂಬಾನೇ ನಿರೀಕ್ಷೆ ಇಟ್ಟುಕೊಂಡಿದ್ದರು. ಇದೇ ಮೊದಲ ಬಾರಿಗೆ ಅವರು ಡಬಲ್‌ರೋಲ್ ಮಾಡಿದ್ದರು. ಅಲ್ಲದೇ ತಾವೊಬ್ಬ ಸ್ಟಾರ್ ಅನ್ನುವುದನ್ನು ಬಿಟ್ಟು ನೆಗೆಟಿವ್ ಶೇಡ್ ಕ್ಯಾರೆಕ್ಟರ್ ನಿರ್ವಹಿಸಿದ್ದರು. ಆದರೆ, ಪ್ರೇಕ್ಷಕರು ಮಾತ್ರ ಈ ಚಿತ್ರಕ್ಕೆ ದಯ ತೋರಿಲ್ಲ. ಬಿಡುಗಡೆಯಾದ ಬಹುತೇಕ ಥಿಯೇಟರ್ ಖಾಲಿ ಹೊಡೆಯುತ್ತಿವೆ. ಹೀಗಾಗಿ ಸಹಜವಾಗಿಯೇ ಗಣೇಶ್‌ಗೆ ಆತಂಕವಾಗಿದೆ.



ಸಿನಿಮಾಗೆ ವಿಮರ್ಶಕರಿಂದ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ಅದರಲ್ಲೂ ಗಣೇಶ್ ನಟನೆಯ ಬಗ್ಗೆ ಹಾಡಿಹೊಗಳಿದ್ದಾರೆ. ಆದರೂ ಪ್ರೇಕ್ಷಕರು ಥಿಯೇಟರ್‌ಗೆ ಬಾರದೇ ಇರುವುದು ನಿರ್ದೇಶಕರಿಗೂ ನಿದ್ದೆಗೆಡಿಸಿದೆ.

ಗಾಂಧಿನಗರದ ಪಂಡಿತರ ಪ್ರಕಾರ, ಈ ಸಿನಿಮಾಗೆ ಜನರು ಬಾರದೇ ಇರುವುದಕ್ಕೆ ಕಾರಣ ನೆಗೆಟಿವ್ ಪಬ್ಲಿಸಿಟಿಯಂತೆ. ಸಿನಿಮಾ ರಿಲೀಸ್‌ಗಿಂತ ಮುಂಚೆ ಶೇಖರ್ ಮತ್ತು ಗಣೇಶ್ ಮಧ್ಯೆ ಜಗಳವಾಯಿತು. ಗಣೇಶ್ ಅಭಿಮಾನಿಗಳಿಗೆ ಶೇಖರ್ ಬೈದರು ಅನ್ನುವುದು ಸುದ್ದಿ ಆಯಿತು. ಇವೆಲ್ಲವೂ ಸಿನಿಮಾದ ಮೇಲೆ ಪರಿಣಾಮ ಬೀರಿವೆ ಎನ್ನಲಾಗುತ್ತಿದೆ.



ಹೆಸರು ಬದಲಿಸಿಕೊಂಡ ಗ

ಸೋಲಿನ ಸುಳಿಯಲ್ಲಿ ಒದ್ದಾಡುತ್ತಿರುವ ರಾಗಿಣಿ ಅದರಿಂದ ಪಾ ಜ್ಯೋತಿಷಿಗಳ ಮೊರೆ ಹೋಗಿದ್ದಾರೆ. ಅವರ ಜ್ಯೋತಿಷಿಗಳ ಮಾರ್ಗದ ತಮ್ಮ ಹೆಸರಿನಲ್ಲಿ ಕೊಂಚ ಬದಲಾವಣೆ ಮಾಡಿಕೊಂಡಿದ್ದಾರೆ. ಇ ಅವರು ತಮ್ಮ ಹೆಸರನ್ನು RAGINI ಎಂದು ಬರೆಯುತ್ತಿದ್ದರು. ಆದ ಮುಂದೆ ಅದನ್ನು RAAGINI ಎಂದು ಬದಲಾಯಿಸಿಕೊಳ್ಳುತ್ತಾರಂತೆ. ರಾಗಿಣಿ ನಟನೆಯ ಬಹುತೇಕ ಚಿತ್ರಗಳು ನೆಲಕಚ್ಚಿವೆ. ಆದ್ದರಿಂದ ಸ್ಪೆಷಲ್ ಸಾಂಗ್‌ಗೆ ಮಾತ್ರ ಸೀಮಿತವಾದರು. ಹೀಗಾಗಿ ಹೆಸರಿನಲ್ಲಿ ಬ ಮಾಡುವುದು ಅನಿವಾರ್ಯವಾಯಿತಂತೆ. ಬ್ರೇಕ್‌ಗಾಗಿ ರಾಗಿಣಿ ಸಾಕ ಪಡುತ್ತಿದ್ದಾರೆ. ಅಚ್ಚರಿ ಎನ್ನುವಂತೆ ತೂಕ ಕಡಿಮೆ ಮಾಡಿಕೊಂಡಿದ್ದಾರೆ. ನಿಂತಿರುವ ಇವರ ಚಿತ್ರಗಳ ಬಗ್ಗೆ ಸ್ವತಃ ರಾಗಿಣಿಯೇ ಒಲವು ಶೂಟಿಂಗ್ ಮಾಡುವಂತೆ ಕೇಳಿಕೊಳ್ಳುತ್ತಿದ್ದಾರೆ. ಇವೆಲ್ಲವೂ ತಮ ಹಿಡಿಯಬಲ್ಲವು ಅನ್ನುವ ನಿರೀಕ್ಷೆ ಅವರದ್ದು.

ಜಾನಿ ಜನಾರ್ದನರ ಮಧ್ಯೆ ಮು

ಗುರು ದೇಶಪಾಂಡೆ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಜಾ ಜನಾರ್ದನ್' ಚಿತ್ರದಲ್ಲಿ ಅಜಯ್ ರಾವ್, ಲೂಸ್ ಮಾದ ಮತ್ತು ಕೃಷ್ಣ ನಟಿಸುತ್ತಿರುವ ವಿಷಯ ಗೊತ್ತೇ ಇದೆ. ಲೇಟೆಸ್ಟ್ ಸುದ್ದಿಯಂ ಟೀಮ್‌ನಲ್ಲಿ ಮುನಿಸು ಬಿರುಕು ಕಾಣಿಸಿಕೊಂಡಿದೆ. ಈ ಮುನಿಸಿಗೆ ಫೋಟೋ ಶೂಟ್. ಸಿನಿಮಾದ ಪ್ರಮೋಷನ್‌ಗಾಗಿ ಸ್ಪೆಷಲ್ ಫ ಶೂಟ್ ಮಾಡಿದ್ದಾರೆ ನಿರ್ದೇಶಕರು. ಅದಕ್ಕಾಗಿ ಮೂರು ಕಲಾ ಮೇಕ್ ಓವರ್ ಮಾಡಿಸಿದ್ದಾರೆ. ಓಡೋ ಕುದುರೆ ಅಜಯ್ ರಾ ಟೈಮ್‌ನಲ್ಲಿ ಹೆಚ್ಚು ಮಹತ್ವ ಕೊಡಲಾಗಿದೆ ಅನ್ನುವ ಕಾರಣಕ್ಕೆ ನಿರ್ದೇಶಕರ ಮೇಲೆ ಕೋಪ ಮಾಡಿಕೊಂಡಿದ್ದಾರಂತೆ. ಶೂಟಿ ಮುಂಚೆಯೇ ಹರಿಹಾಯ್ದಿದ್ದಾರಂತೆ. ಹೀರೋಗಳು ಗುರುವಿನ ಜತೆ ಮುನಿಸಿಕೊಳ್ಳುವುದು ಹೊಸದೇನೂ ಅಲ್ಲ. ಯಶ್ ಕೂಡ ಮಾಡಿಕೊಂಡಿದ್ದರು. ಕಳೆದ ತಿಂಗಳಷ್ಟೇ ನೀನಾಸಂ ಸತೀಶ್ ಕೂಡ ಇ ಗಲಾಟೆ ಮಾಡಿಕೊಂಡು ಸಿನಿಮಾದಿಂದಾನೇ ಹೊರ ನಡೆದಿದ್ದರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536. E-mail :lankesh70@rediffmail.com